ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು

(ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಅನ್ನಪೂರ್ಣ ಗುಡುದೂರು

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರವಾಚಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು

(ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಅನ್ನಪೂರ್ಣ ಗುಡುದೂರು

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ
ಪ್ರವಾಚಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮

ದೃಢೀಕರಣ ಪತ್ರ

ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು (ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕುಮಾರಿ. ಅನ್ನಪೂರ್ಣ ಗುಡುದೂರು ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೮.೨.೨೦೦೯
ಸ್ಥಳ : ವಿದ್ಯಾರಣ್ಯ

(ಡಾ. ಪಿ. ಮಹಾದೇವಯ್ಯ)
ಮಾರ್ಗದರ್ಶಕರು
ಕನ್ನಡ ಭಾಷಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು (ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೮ ೦೨.೦೮
ಸ್ಥಳ : ವಿದ್ಯಾರಣ್ಯ

(ಅನ್ನಪೂರ್ಣ ಗುಡುದೂರು)
ಸಂಶೋಧಕರು
ಕನ್ನಡ ಭಾಷಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

"**ಕ**ನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು" (ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತಿದೆ. ನಾನು ಕಟ್ಟಿಕೊಂಡಿದ್ದ ಸಂಶೋಧನೆಯ ಕನಸು ನನಸಾದದ್ದು ಪ್ರಸ್ತುತ ಮಹಾಪ್ರಬಂಧದ ಮೂಲಕ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಸ್ಮರಿಸುವುದು ನನ್ನ ಆದ್ಯ ಕರ್ತವ್ಯ ಹಾಗೂ ಸಂತೋಷದ ಸಂಗತಿ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರಿಗೆ, ಈಗಿನ ಕುಲಪತಿಗಳಾದಂತಹ ಪ್ರೊ. ಎ. ಮುರಿಗೆಪ್ಪ ಅವರಿಗೆ ಹಾಗೂ ಕುಲಸಚಿವರಾದ ಎಸ್.ಎಸ್. ಪೂಜಾರ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಡಿ. ಪಾಂಡುರಂಗಬಾಬು ಅವರಿಗೆ

ನನ್ನ ಅಧ್ಯಯನದ ಬಗ್ಗೆ ವಿಚಾರಿಸಿ ಸೂಕ್ತ ಸಲಹೆಗಳನ್ನು ನೀಡಿ ಓದಲು ಪ್ರೇರೇಪಿಸಿದ ಪೂಜ್ಯಗುರುಗಳಾದ ನಮ್ಮ ವಿಶ್ವವಿದ್ಯಾಲಯದಲ್ಲಿ ಕುಲಸಚಿವರು, ಪ್ರಭಾರಿ ಕುಲಪತಿಗಳೂ ಆಗಿದ್ದ ಪ್ರೊ. ಕೆ.ವಿ. ನಾರಾಯಣ ಅವರಿಗೆ

ನನ್ನ ಸಂಶೋಧನೆಗೆ ಸೂಕ್ತ ವಿಷಯವನ್ನು ನೀಡಿ ಅದಕ್ಕೆ ಪೂರಕವಾಗುವಂತೆ ಚರ್ಚಿಸುತ್ತಾ ಅಕ್ಷರ ಅಕ್ಷರವನ್ನೂ ಬಿಡದೆ ಪರಿಶೀಲಿಸಿ ಬರವಣಿಗೆಯ ಓರೆ ಕೋರೆಗಳನ್ನು ತಾಳ್ಮೆಯಿಂದ ತಿದ್ದಿ ತೀಡಿ ಆತ್ಮೀಯತೆ ಯಿಂದ ಸಹಕರಿಸಿದ ವಿದ್ಯಾಗುರುಗಳು ಹಾಗೂ ಮಾರ್ಗದರ್ಶಕರೂ ಆದ ಡಾ. ಪಿ. ಮಹಾದೇವಯ್ಯ ಅವರಿಗೆ

ಶಿಸ್ತು ಹಾಗೂ ಶ್ರಮ ಸಂಸ್ಕೃತಿಯ ಪ್ರತೀಕವಾಗಿರುವ ಹಾಗೂ ಅದನ್ನು ವಿದ್ಯಾರ್ಥಿಗಳಿಗೂ ಕಲಿಸುವ ವಿಭಾಗದ ಅಧ್ಯಾಪಕರುಗಳಾದ ಡಾ. ಸಾಂಬಮೂರ್ತಿ, ಡಾ. ಅಶೋಕ ಕುಮಾರ ರಂಜೇರೆ ಹಾಗೂ ಮಹಿಳಾ ಅಧ್ಯಯನ ವಿಭಾಗದ ಪ್ರವಾಚಕರಾದ ಡಾ. ಶಿವಾನಂದ ಎಸ್. ವಿರಕ್ತಮಠ ಅವರಿಗೆ

ನನ್ನ ಶೈಕ್ಷಣಿಕ ಅಭಿವೃದ್ಧಿಗೆ ಬೆಂಬಲಿಗರು, ಶ್ರೇಯೋಭಿಲಾಷಿಗಳೂ ಆದ ಶ್ರೀ ಮಲ್ಲಿಕಾರ್ಜುನ ಗೌಡ ಹಾಗೂ ಶ್ರೀಮತಿ ಎರ್ರೆಮ್ಮ ಅವರಿಗೂ ನನ್ನ ಓದಿಗೆ ಮೂಲ ಕಾರಣರದ ಅವ್ವ ಗೌರಮ್ಮ ಹಾಗೂ ನನ್ನ ಅಧ್ಯಯನದ ಎಲ್ಲ ಸಾಧ್ಯತೆಗಳನ್ನು ಪ್ರೋತ್ಸಾಹಿಸುತ್ತಾ ನನ್ನ ಏಳ್ಗೆಯನ್ನು ಸಂತೋಷಿಸುವ ಅಪ್ಪ ಉಮಾಕಾಂತಸ್ವಾಮಿ ಹಾಗೂ ಅಮ್ಮ ಮನೋಹರಮ್ಮ ಅವರಿಗೆ

ಯಾವಾಗಲೂ ನನಗೆ ಒಳ್ಳೆಯದನ್ನೇ ಬಯಸುವ ಅಕ್ಕಂದಿರೂ ಮಾವಂದಿರಿಗೆ ಪುಟಾಣಿಗಳಾದ ಗೀತಾ, ಗುರುಗೆ ಹಾಗೂ ನನ್ನ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿ ನನ್ನ ಏಳಿಗೆಯನ್ನು ತಮ್ಮದೆಂದೆ ತಿಳಿಯುವ ತಮ್ಮ ಮಲ್ಲಿಕಾರ್ಜುನ ಹಾಗೂ ಸ್ನೇಹಿತರಾದ ಶಬೀನಾ, ಹುಲುಗಪ್ಪ ನಾಯಕ, ನಿರಂಜನ ರಾ.ನ. ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಕನ್ನಡ ಭಾಷಾ ಅಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರಿಗೂ, ಮತ್ತೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಧ್ಯಯನಕ್ಕೆ ನೆರವಾದ ವಿದ್ವಾಂಸರಿಗೂ ಮತ್ತು ನನ್ನ ಮಿತ್ರರಿಗೂ, ಸದಾ ಅಭಿಮಾನದಿಂದ ಕಾಣುವ ನನ್ನೂರಿನ ಸಮಸ್ತ ಬಾಂಧವರಿಗೂ ಹಾಗೂ ಆತ್ಮೀಯತೆಯಿಂದ ಮಹಾಪ್ರಬಂಧವನ್ನು ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಶ್ರೀನಿವಾಸ ಕೆ. ಭಾವನಾ ಗ್ರಾಫಿಕ್ಸ್, ಕಮಲಾಪುರ ಇವರಿಗೂ ನಾನು ಆಭಾರಿಯಾಗಿದ್ದೇನೆ.

ಅನ್ನಪೂರ್ಣ ಗುಡುದೂರು

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರವೇಶ

೧.೨. ಅಧ್ಯಯನದ ಉದ್ದೇಶ ಹಾಗೂ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪ್ರವೇಶ

ಭಾಷೆ ಎನ್ನುವುದೊಂದು ಅತ್ಯುತ್ತಮ ಅಭಿವ್ಯಕ್ತಿ ಮಾಧ್ಯಮ. ನಮ್ಮ ಮನದ ಅಭಿಪ್ರಾಯ, ಅನಿಸಿಕೆ, ಭಾವ-ಭಾವನೆ, ಆಲೋಚನೆ, ಸುಖ-ದುಃಖ, ನೋವು-ನಲಿವು ಇತ್ಯಾದಿ ಸಂಗತಿಗಳನ್ನು ಇತರರ ಮುಂದೆ ಅಭಿವ್ಯಕ್ತಿಪಡಿಸಲು ಭಾಷೆಯಷ್ಟು ಸಹಕಾರಿಯಾದ ಮಾಧ್ಯಮ ಇನ್ನೊಂದಿಲ್ಲ. ಮಾನವನು ಕಂಡುಕೊಂಡ ಅಭಿವ್ಯಕ್ತಿ ಮಾಧ್ಯಮಗಳಲ್ಲೆಲ್ಲ ಭಾಷೆಯೇ ಅತ್ಯಂತ ಪ್ರಭಾವಶಾಲಿಯಾದುದು ಹಾಗೂ ಇತರ ಎಲ್ಲಾ ಪ್ರಾಣಿಗಳಿಂದ ಬೇರ್ಪಡಿಸಲು ಮೂಲ ಕಾರಣವಾದುದು. ಮನುಷ್ಯನು ತನ್ನ ನೆರೆಹೊರೆಯವರೊಂದಿಗೆ ಬೆರೆಯಲು ಭಾಷೆ ಒಂದು ಅತ್ಯವಶ್ಯಕವಾದ ಸಾಧನವಾಗಿದೆ. ಇದಕ್ಕೆ ಪೂರಕವಾಗಿ "ಎದೆಯ ಭಾವ ಹೊರ ಹೊಮ್ಮುವುದಕ್ಕೆ ಭಾಷೆ ಒಂದು ಸಾಧನ" ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತುಗಳನ್ನು ಇಲ್ಲಿ ಸ್ಮರಿಸಬಹುದು.

'ಭಾಷೆ' ಭಾವನೆಗಳ ಅಭಿವ್ಯಕ್ತಿ ಮಾಧ್ಯಮವೇ ಆದರೂ ಅಭಿವ್ಯಕ್ತಿಗೊಳಿಸುವ ಭಾಷೆಯಲ್ಲಿ ವೈವಿಧ್ಯತೆಯಿದೆ. ಅಂದರೆ, ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಒಂದೇ ಭಾಷೆಯನ್ನು ಬಳಸಿದರೂ ಬಳಕೆಯ ಸಂದರ್ಭದಲ್ಲಿ ಹಲವು ವ್ಯತ್ಯಾಸಗಳು ಕಂಡುಬರುತ್ತವೆ. ಹೀಗೆ ವ್ಯತ್ಯಾಸಗಳಿದ್ದಾಗ್ಯೂ ಆ ಭಾಷೆಯನ್ನಾಡುವವರು ಪರಸ್ಪರ ಅರ್ಥಮಾಡಿಕೊಳ್ಳಬಲ್ಲ ವಿಶಿಷ್ಟ ಪ್ರಾವೀಣ್ಯತೆಯೂ ಭಾಷೆಗಿದೆ. ಒಟ್ಟಾರೆ ವ್ಯಕ್ತಿಯೊಬ್ಬನು ಬಳಸುವ ಭಾಷೆಯು ಅವನ ಪ್ರದೇಶ, ಪರಿಸರ, ಸಮಾಜ, ಸಂಸ್ಕೃತಿ, ಅನ್ಯಭಾಷಾ ಪ್ರಭಾವ ಮುಂತಾದ ಅಂಶಗಳಿಗೆ ಅನುಗುಣವಾಗಿರುತ್ತದೆ. ಅಲ್ಲದೆ ಇಂತಹ ವ್ಯತ್ಯಾಸಗಳಿಗೆ ಭೌಗೋಳಿಕ, ಸಾಮಾಜಿಕ, ರಾಜಕೀಯ,

ಸ್ಥಿತ್ಯಂತರಗಳೂ ಕಾರಣವಾಗಿರಬಹುದು. ಒಬ್ಬನೇ ವ್ಯಕ್ತಿ ವಿವಿಧ ಸಂದರ್ಭಗಳಲ್ಲಿ ಒಂದು ಭಾಷೆಯನ್ನು ವ್ಯತ್ಯಾಸಗಳೊಂದಿಗೆ ಬಳಸಬಹುದು. ಉದಾಹರಣೆಗೆ ಮನೆಯಲ್ಲಿ ಕುಟುಂಬದವರೊಡನೆ, ಹೊರಗೆ ಗೆಳೆಯರೊಡನೆ, ಇತರರೊಡನೆ, ವೇದಿಕೆಯ ಮೇಲೆ ಭಾಷಣ ಮಾಡುವಲ್ಲಿ, ವ್ಯವಹಾರಿಕ ವಿಷಯಗಳಲ್ಲಿ, ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ವ್ಯತ್ಯಾಸಗಳೊಂದಿಗೆ ಬಳಸಬಹುದು. ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಬಳಸುವ ಭಾಷೆಯನ್ನು 'ವ್ಯಕ್ತಿ ಭಾಷೆ' ಎಂದು ಕರೆಯಲಾಗುತ್ತದೆ. ಇಂತಹ ಹಲವಾರು ವ್ಯಕ್ತಿಗಳು ತಮ್ಮದೇ ಆದ ಕೆಲವು ಸಾಮಾನ್ಯ ವಿಶಿಷ್ಟತೆಗಳೊಂದಿಗೆ ವ್ಯಾಪಕವಾಗಿ ಒಂದುಗೂಡಿ, ಸಾಮಾಜಿಕವಾಗಿ ಇಲ್ಲವೇ ಪ್ರಾದೇಶಿಕವಾಗಿ ಎದ್ದು ಕಾಣುವ ವಿಶಿಷ್ಟ ಭಾಷಾ ಅಂಶಗಳನ್ನು ಹೊಂದಿ ಪರಸ್ಪರ ಅರ್ಥ ಗ್ರಾಹ್ಯತೆಗೆ ಬಾಧೆ ಬಾರದಂತೆ ಬಳಕೆಕೊಂಡರೆ ಅವುಗಳನ್ನು 'ಪ್ರಭೇದಗಳು' ಎಂದು ಕರೆಯಲಾಗುತ್ತದೆ.

ಪ್ರಪಂಚದಲ್ಲಿರುವ ಎಲ್ಲ ಭಾಷೆಗಳಿಗೂ ಅದರದೇ ಆದ ಉಪಭಾಷೆಗಳಿವೆ. ಇದನ್ನು ಕನ್ನಡದ ಸಂದರ್ಭದಲ್ಲಿ ನೋಡುವುದಾದರೆ, ಕನ್ನಡದ ಮೊಟ್ಟಮೊದಲ ಉಪಲಬ್ಧ ಕೃತಿಯೆಂದು ಹೇಳಲಾಗುವ 'ಕವಿರಾಜಮಾರ್ಗ'ದಲ್ಲಿ ಕವಿರಾಜ ಮಾರ್ಗಕಾರನು 'ಕನ್ನಡಂಗಳ್' ಎಂಬ ಪದವನ್ನು ಬಳಸಿ 'ದಕ್ಷಿಣೋತ್ತರ' ಮಾರ್ಗಗಳನ್ನು ಹೇಳಿದ್ದಾನೆ. ಅಂದರೆ ಆ ಹೊತ್ತಿಗಾಗಲೇ ಕನ್ನಡಗಳು ಹಲವಿದ್ದವು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂದು ಕನ್ನಡ ಭಾಷೆ ಎರಡು ವಿಧದ ಉಪಭಾಷೆಗಳನ್ನು ಹೊಂದಿದೆ. ಒಂದು ಪ್ರಾದೇಶಿಕ ಉಪಭಾಷೆ, ಎರಡನೆಯದಾಗಿ ಸಾಮಾಜಿಕ ಉಪಭಾಷೆ.

ಪ್ರಾದೇಶಿಕ ಪ್ರಭೇದಗಳು ಹುಟ್ಟಲು ಹಲವು ಕಾರಣಗಳಿವೆ. ಕಾಲ, ಪ್ರದೇಶ, ಭಾಷಿಕ ಪರಿಸರ, ನದಿ, ಬೆಟ್ಟ, ಪರ್ವತ, ಭೌಗೋಳಿಕತೆ ಮುಂತಾದ ಭಾಷಿಕೇತರ ಅಂಶಗಳ ಪ್ರಭಾವದಿಂದ ಭಾಷಿಕ ವ್ಯತ್ಯಯಗಳು ಕಂಡುಬರುತ್ತವೆ. ಇವಲ್ಲದೆ ಮತ್ತೆರಡು ಅಂಶಗಳು ಪ್ರಾದೇಶಿಕ ಪ್ರಭೇದದ ನಿರ್ಮಾಣಕ್ಕೆ ಕಾರಣವಾಗುತ್ತವೆ ಎಂದು ಭಾಷಾಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ೧. ಪ್ರಾದೇಶಿಕ ದೂರ ೨. ಪ್ರಾದೇಶಿಕ ಪ್ರತಿಬಂಧಕಗಳು. ಭಾಷಿಕರ ನಡುವೆ ಪ್ರಾದೇಶಿಕ ದೂರ ಹೆಚ್ಚಾದಂತೆ ಸಂವಹನಕ್ಕೆ ಅಡ್ಡಿವುಂಟಾಗಿ ಭಾಷಿಕ ವ್ಯತ್ಯಯ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಪ್ರಾದೇಶಿಕ ಪ್ರತಿಬಂಧಕಗಳೆಂದರೆ ದಿನನಿತ್ಯ ವ್ಯವಹಾರಕ್ಕೆ ಕಂದಕಗಳಾಗಿ ಪರಿಣಮಿಸುತ್ತಿರುವ ನದಿ, ಪರ್ವತ, ಗುಡ್ಡ, ಕಾಡು, ಸಮುದ್ರ ಇವುಗಳ ಅಡೆತಡೆಯಿಂದಾಗಿ ಪ್ರಾದೇಶಿಕ ಪ್ರಭೇದ ವಿಶಿಷ್ಟವಾಗಿ ಕಂಡುಬರುತ್ತದೆ.

ಕರ್ನಾಟಕ ಪ್ರದೇಶದಲ್ಲಿ ಅನೇಕ ಉಪಭಾಷೆಗಳು ಕಂಡುಬರುತ್ತವೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಧಾರವಾಡ ಪ್ರದೇಶದ ಕನ್ನಡ ಹಾಗೂ ಕಲಬುರ್ಗಿ ಪ್ರದೇಶದ ಕನ್ನಡ ಭಾಷೆಗಳಲ್ಲಿ ಅನೇಕ ವಿಶಿಷ್ಟ ಅಂಶಗಳಿವೆ. ಹಾಗೆಯೇ ಅನೇಕ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಪರಿಣಾಮವಾಗಿ ಕಲಬುರ್ಗಿ ಕನ್ನಡ, ಧಾರವಾಡ ಕನ್ನಡ ಎಂಬ ಪ್ರಾದೇಶಿಕ ಉಪಭಾಷೆಗಳಾಗಿವೆ. ಹಾಗೆಯೇ ದಕ್ಷಿಣ ಕರ್ನಾಟಕದಲ್ಲಿ ಮಂಗಳೂರು ಪ್ರದೇಶದ ಕನ್ನಡ ಹಾಗೂ ಮೈಸೂರು ಪ್ರದೇಶದ ಕನ್ನಡ ಭಾಷೆಗಳಲ್ಲಿ ವಿಶಿಷ್ಟ ಅಂಶಗಳಿವೆ. ಅನೇಕ

ವ್ಯತ್ಯಾಸಗಳೂ ಇವೆ. ಮೈಸೂರು ಕನ್ನಡ, ಮಂಗಳೂರು ಕನ್ನಡ ಎಂಬ ಎರಡು ಪ್ರಾದೇಶಿಕ ಪ್ರಭೇದಗಳುಂಟಾಗಿವೆ. ಇಂತಹ ಪ್ರಾದೇಶಿಕ ವ್ಯತ್ಯಾಸಗಳನ್ನು ಮುಖ್ಯವಾಗಿ ಧ್ವನಿ, ಪದ, ವಾಕ್ಯ ಹಾಗೂ ವಿಶಿಷ್ಟ ಪದ ಪ್ರಯೋಗದ ಹಂತದಲ್ಲಿ ಎಂದು ವರ್ಗೀಕರಿಸಿ ಅಧ್ಯಯನ ಮಾಡಬಹುದು.

ಪ್ರಾದೇಶಿಕ ಅಂಶಗಳಂತೆ ಸಾಮಾಜಿಕ ಅಂಶಗಳೂ ಭಾಷಾ ಪ್ರಭೇದಗಳ ಹುಟ್ಟಿನಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಸಾಮಾಜಿಕ ಭಾಷಾ ಪ್ರಭೇದದಲ್ಲಿ ಸಮಾಜ ಮತ್ತು ಭಾಷೆ ಇವರೆಡರ ನಡುವಿನ ಸಂಬಂಧ ವಿಶಿಷ್ಟವಾದುದು. ಸಾಮಾಜಿಕ ಭಾಷಾ ವಿಜ್ಞಾನದ ಅಧ್ಯಯನ ಸಾಮಾಜಿಕ ಅಧ್ಯಯನಕ್ಕೆ ಪೂರಕ ಹಾಗೂ ಸಹಾಯಕವಾಗುವುದು. ಅಂದರೆ ಉಚ್ಚಾರಣಾತ್ಮಕ ಧ್ವನಿ ಮತ್ತು ಸಾಮಾಜಿಕ ಭಿನ್ನಾಂಶಗಳೆರಡರ ತೌಲನಿಕ ಅಧ್ಯಯನದ ಮೂಲಕ ಸಾಮಾಜಿಕ ಪ್ರಭೇದಗಳನ್ನು ನಿರ್ಧರಿಸಲು ಸಹಾಯಕವಾಗುವುದು.

ಸಾಮಾಜಿಕ ಭಾಷಾ ವಿಜ್ಞಾನಿಗಳು, ಸಾಮಾಜಿಕ ಉಪಭಾಷೆಗಳು ಎರಡು ಕಾರಣಗಳಿಂದ ನಿರ್ಮಾಣವಾಗುತ್ತವೆ ಎಂದಿದ್ದಾರೆ. ಒಂದು ಸಾಮಾಜಿಕ ದೂರ, ಎರಡು ಸಾಮಾಜಿಕ ಪ್ರತಿಬಂಧಕಗಳು. ಒಂದು ಜಾತಿಯಿಂದ ಮತ್ತೊಂದು ಜಾತಿಗೆ ಇರುವ ದೂರ ಸಾಮಾಜಿಕ ಪ್ರಭೇದಕ್ಕೆ ಕಾರಣವಾದರೆ. ಸಾಮಾಜಿಕ ಪ್ರತಿಬಂಧಕಗಳಾದ ವರ್ಗ, ಲಿಂಗ, ಅಧಿಕಾರ, ಶಿಕ್ಷಣ, ವಯಸ್ಸು ಮುಂತಾದ ಸಾಮಾಜಿಕ ಭಿನ್ನಾಂಶಗಳು ಸಾಮಾಜಿಕ ಪ್ರಭೇದದ ನಿರ್ಮಾಣಕ್ಕೆ ಕಾರಣವಾಗಿವೆ. ಹೀಗೆ ನಿರ್ಮಾಣಗೊಂಡ ಸಾಮಾಜಿಕ ಉಪಭಾಷೆಗಳನ್ನು ಸಾಮಾಜಿಕ ಭಿನ್ನಾಂಶಗಳಿಂದ ಅಧ್ಯಯನ ಮಾಡಬಹುದು.

ಹೀಗೆ ಪ್ರಾದೇಶಿಕ ಮತ್ತು ಸಾಮಾಜಿಕವಾಗಿ ಭಿನ್ನವಾಗಿರುವ ಭಾಷೆಗಳನ್ನು ಯಾರೇ ಬಳಸುತ್ತಿರಲಿ, ಅವರ ಭಾಷೆಯನ್ನು ಗಮನಿಸಿ ಕೆಲವು ಚಹರೆಗಳನ್ನು ಗುರುತಿಸಲು ಸಾಧ್ಯ. ವ್ಯಕ್ತಿಯು ಗಂಡೋ ಹೆಣ್ಣೋ ಯಾವ ಭೌಗೋಳಿಕ ಪ್ರದೇಶಕ್ಕೆ ಸೇರಿದವರು, ಸಾಮಾಜಿಕವಾಗಿ ಅವರ ಹಿನ್ನೆಲೆ ಏನು? ಈಗ ಮಾತಾಡುತ್ತಿರುವ ಸಂದರ್ಭದ ಸ್ವರೂಪವೇನು? ಇವೇ ಮುಂತಾದ ಅಂಶಗಳು ನಮಗೆ ಅವರ ಮಾತನ್ನು ಕೇಳುವುದರಿಂದಲೇ ಬಹುಮಟ್ಟಿಗೆ ತಿಳಿಯುತ್ತವೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟವಾದ ಅನ್ಯರಲ್ಲಿ ಇಲ್ಲದ ಕೆಲವು ಭಾಷಾ ಲಕ್ಷಣಗಳು ಅವರ ಭಾಷಾ ಬಳಕೆಯಲ್ಲಿ ಕಂಡುಬರುತ್ತವೆ. ಆ ಲಕ್ಷಣಗಳನ್ನು ಗುರುತಿಸಿ ಮಾತನಾಡುವ ವ್ಯಕ್ತಿ ಇಂಥವರೇ ಎಂದು ಸಾಮಾನ್ಯವಾಗಿ ಗುರುತಿಸುತ್ತೇವೆ.

ವ್ಯಕ್ತಿಯ ವಿಶಿಷ್ಟ ಲಕ್ಷಣಗಳು ಆಡು ಮಾತಿನಲ್ಲಿ ಇರುವಂತೆ ಬರಹದಲ್ಲೂ ಇರುತ್ತವೆ. ಬರವಣಿಗೆಯಲ್ಲಿ ಈ ವಿಶಿಷ್ಟ ಚಹರೆ ಎರಡು ರೀತಿಯಲ್ಲಿ ಮೈದಳೆಯುತ್ತದೆ. ಒಂದು; ಭಾಷಾ ರಚನೆಯಲ್ಲಿನ ವಿಶಿಷ್ಟ ಲಕ್ಷಣ. ಎರಡು; ಕೈಬರಹದ ವಿಶಿಷ್ಟ ಲಕ್ಷಣ. ನಮ್ಮ ದಿನನಿತ್ಯದ ವ್ಯವಹಾರವು ಭಾಷೆಯ ಮೂಲಕವೇ ನಡೆಯುತ್ತದೆಯಾದರೂ ಇಲ್ಲಿ ಭಾಷೆಯನ್ನು ಬಳಸುವವರು ಹೊಸದಾಗಿ ಏನನ್ನೂ ಸೃಷ್ಟಿಸುವುದಿಲ್ಲ. ಈಗಾಗಲೇ ಸಿದ್ಧವಾಗಿರುವ ಹಾಗೂ ಪ್ರಚಲಿತವಾಗಿರುವ ಭಾಷಾ ಸಾಮಗ್ರಿಯನ್ನು ಬಳಸಿಕೊಂಡು ತನ್ನ ಅನಿಸಿಕೆ ಆಲೋಚನೆಗಳನ್ನು ಇತರರಿಗೆ ತಿಳಿಯಪಡಿಸಲು ಭಾಷೆಯನ್ನು ಕೇವಲ ಒಂದು ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಾರೆ.

ವ್ಯವಹಾರದಲ್ಲಿ ಹೇಗೋ ಸಾಹಿತ್ಯ ನಿರ್ಮಿತಿಯಲ್ಲೂ ಕೂಡ ಲೇಖಕನಿಗೆ ಇದೇ ಭಾಷೆ ಒಂದು ಸಾಮಗ್ರಿಯಂತೆ ಬಳಕೆಯಾದರೂ, ಅದೇ ಭಾಷೆಯನ್ನು ಲೇಖಕರು ನೇರವಾಗಿ ಬಳಸಿಕೊಳ್ಳದೆ ಒಂದು ರೀತಿಯ ಮುರಿದು ಕಟ್ಟುವ ಮೂಲಕ ಅದನ್ನೊಂದು ವಿಶಿಷ್ಟ ಉದ್ದೇಶಕ್ಕೆ ಮಾಧ್ಯಮವನ್ನಾಗಿ ರೂಪಿಸಿಕೊಳ್ಳುತ್ತಾರೆ. ಲೇಖಕರಿಗೆ ಒಂದು ಭಾಷೆಯಂತೆ ಭಾಷೆಯ ಸ್ವರೂಪವೂ ಅಷ್ಟೇ ಮುಖ್ಯವಾಗುತ್ತದೆ. ಒಂದು ಭಾಷೆಯಲ್ಲಿನ ಪದಗಳು, ಪದಪುಂಜಗಳು, ಯಾವ ಯಾವ ಅರ್ಥವಂತಿಕೆಯನ್ನು ಒಳಗೊಳ್ಳಬಲ್ಲವು ಭಾಷೆಯನ್ನು ಯಾವ ವಿನ್ಯಾಸಕ್ಕೆ ಒಳಪಡಿಸಿದರೆ ಏನೇನು ಪರಿಣಾಮ ಬೀರಬಲ್ಲವು ಎಂಬುದನ್ನು ಬಲ್ಲವರಾಗಿರುತ್ತಾರೆ. ಇಂತಹ ಭಾಷೆ, ವ್ಯಾವಹಾರಿಕ ಭಾಷೆಗಿಂತ ಭಿನ್ನವಾಗಿ, ಅತಿಶಯತೆಗೆ ಏರುವುದಲ್ಲದೆ, ತನ್ನ ಅನುಭವ ತೀವ್ರತೆಯನ್ನು ಓದುಗರಿಗೆ ಸಂವಹನಗೊಳಿಸುವ ಮತ್ತು ತನ್ಮೂಲಕ ಅವರಲ್ಲಿ ಸಮಾನ ಭಾವನೆಯನ್ನು ನಿರ್ಮಿಸುವಲ್ಲಿ ಸಹಾಯಕವಾಗಿದೆ. ಹೀಗೆ ಒಬ್ಬ ಸೃಜನಶೀಲ ಲೇಖಕರು ತಮ್ಮ ಅನುಭವಕ್ಕೆ ಭಾಷೆಯ ಮೂಲಕ ಆಕಾರವನ್ನು ನೀಡುವ ಅಥವಾ ಅಭಿವ್ಯಕ್ತಿಸುವ ಕ್ರಿಯೆಯ ಸ್ವರೂಪವೇ ಶೈಲಿ.

ಈಗಾಗಲೇ ವಿಮರ್ಶಾ ಪರಂಪರೆಯಲ್ಲಿ ಲೇಖಕರ ಕೃತಿಗಳನ್ನು ಚರ್ಚಿಸುವಾಗ ಆಯಾ ಲೇಖಕರ ಭಾಷಾವೈಶಿಷ್ಟ್ಯಗಳನ್ನು ಆಯಾ ಲೇಖಕರ ಶೈಲಿ ಎಂದು ವಿವರಿಸುವುದು ವಾಡಿಕೆಯಲ್ಲಿದೆ. ಅಂದರೆ ಶೈಲಿಯ ಅಧ್ಯಯನ ಈ ಹೊತ್ತಿಗೆ ಸಾಕಷ್ಟು ಬೆಳೆದಿದೆ. ಬಹುಮಟ್ಟಿನ ಸಾಹಿತ್ಯ ವಿಮರ್ಶಾ ಪ್ರಸ್ಥಾನಗಳು ಶೈಲಿಯ ಚರ್ಚೆಯನ್ನು ಆನುಷಂಗಿಕ ಹಾಗೂ ಪೂರಕ ಎಂದು ತಿಳಿಯುತ್ತವೆ. ಆದರೆ ಶೈಲಿಯ ಅಧ್ಯಯನವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡ ಅಧ್ಯಯನ ಶಿಸ್ತೊಂದು ಕಳೆದ ನಾಲ್ಕು ದಶಕಗಳಿಂದಷ್ಟೇ ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿಯೇ ಪ್ರಸ್ತುತ ಮಹಾಪ್ರಬಂಧದಲ್ಲಿ ಕಾದಂಬರಿಗಳನ್ನು ಭಾಷಿಕ ಶೈಲಿಯ ಹಿನ್ನೆಲೆಯಲ್ಲಿ ನೋಡಲಾಗಿದೆ.

೧.೨ ಅಧ್ಯಯನದ ಉದ್ದೇಶ ಹಾಗೂ ಮಹತ್ವ

ಆಧುನಿಕ ಭಾಷಾವಿಜ್ಞಾನಿ ಫರ್ಡಿನಾಂಡ್ ಡಿ ಸಸ್ಸೂರ್‌ನ ಆಲೋಚನಕ್ರಮವನ್ನು ಇಲ್ಲಿ ಅನ್ವಯಿಸಲಾಗಿದೆ. ಅವರ ಪ್ರಕಾರ ಉಕ್ತಿ(Parole), ಭಾಷೆ(Language)ಗಳ ನಡುವೆ ವ್ಯತ್ಯಾಸ ಗುರುತಿಸಿ ಒಂದು ಭಾಷೆ ಅದರ ಪ್ರಭೇದಗಳನ್ನು ಕಾದಂಬರಿಗಳಲ್ಲಿ ಗುರುತಿಸಲಾಗಿದೆ. ಇಲ್ಲಿ ಉಕ್ತಿ ಎಂದರೆ ಆಡುಮಾತು, ವ್ಯಕ್ತಿಮಾತು ಅಥವಾ ಯಾವುದೇ ಸಂದರ್ಭದಲ್ಲಿ ಬಳಸುವ ಮಾತು. ಇದು ಒಂದು ವ್ಯವಸ್ಥೆಯಾದರೆ ಇಂತಹ ಎಲ್ಲ ಮಾತುಗಳನ್ನು ಒಳಗೊಳ್ಳುವ ಭಾಷೆ ಒಂದು ರಚನೆಯಾಗುತ್ತೆ. ಇಂತಹ ವ್ಯವಸ್ಥೆ ಮತ್ತು ರಚನೆಗಳು ಕಾದಂಬರಿಯ ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಗಳನ್ನು ಪ್ರತಿನಿಧೀಕರಿಸುತ್ತವೆ. ಅರ್ಥ ಹುಟ್ಟಿಕೊಳ್ಳುವುದು ವ್ಯವಸ್ಥೆ ಮತ್ತು ರಚನೆಗಳ ಆಧಾರದ ಮೇಲೆ ಅರ್ಥ ಯಾದೃಚ್ಛಿಕವಾದರೂ ಕಾದಂಬರಿಗಳಲ್ಲಿ ಸಮಾಜ, ಸಂಸ್ಕೃತಿ, ಜನಾಂಗ ಮತ್ತು ರಾಜಕೀಯ, ಆರ್ಥಿಕ ಮುಂತಾದ ಅಂಶಗಳನ್ನು ಪ್ರತಿನಿಧೀಕರಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾಷೆ, ಪರಿಭಾಷೆ, ಪ್ರಭೇದಗಳ ಸ್ವರೂಪವನ್ನು ವಿಶ್ಲೇಷಣೆ ಮಾಡುವುದರ ಮೂಲಕ ಕಾದಂಬರಿಯ ಪರಿಭಾಷೆಯನ್ನು ಗುರುತಿಸಲಾಗಿದೆ. ಜೊತೆಗೆ ಒಂದು ಸಮಾಜೋಧಾರ್ಮಿಕ ಅಥವಾ ಸಾಂಸ್ಕೃತಿಕ

ಪ್ರಾಬಲ್ಯ ಮತ್ತು ಯಾಜಮಾನ್ಯ(Hegemenes) ಪ್ರಭಾವಗಳನ್ನು ಭಾಷಿಕ ವಿಶ್ಲೇಷಣೆಯ ಮೂಲಕ ಹಿಂದು- 'ಸಾಮಾಜಿಕ ಕಥನ' ಅಥವಾ ಮಾನವ ಚರಿತ್ರೆಗಳನ್ನು ಸ್ಪಷ್ಟವಾಗಿ ಗ್ರಹಿಸುವ ಉದ್ದೇಶವನ್ನು ಹೊಂದಿದೆ. ಅವುಗಳನ್ನು ಈ ಕೆಳಗಿನ ಅಂಶಗಳಿಂದ ಗ್ರಹಿಸಬಹುದು.

೧. ಕಾದಂಬರಿಗಳಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳ ಅನನ್ಯತೆಯನ್ನು ಶೈಲಿಯ ಹಿನ್ನೆಲೆಯಲ್ಲಿ ಗುರುತಿಸುವುದು.

೨. ಜನ ಭಾಷೆ ಮತ್ತು ಪ್ರಭುತ್ವ ಭಾಷೆಗಳ ನಡುವಿನ ಸಂಘರ್ಷದ ನೆಲೆಗಳನ್ನು ಶೋಧಿಸುವುದು.

೩. ಭಾಷಿಕ ಎಲ್ಲ ಹಂತಗಳು ಸಾಮಾಜಿಕ ಸೂಚಕವಾಗಿವೆಯೇ ಎಂಬುದನ್ನು ನಿರ್ಧರಿಸುವುದು.

೪. ವ್ಯಕ್ತಿ ಶೈಲಿಯನ್ನು ಗುರುತಿಸುವುದು.

೫. ಸಾಮಾಜಿಕ ಚಹರೆಯಾಗಿ ಭಾಷೆ ಹೇಗೆ ನಿರೂಪಿತವಾಗಿದೆ ಎಂಬುದನ್ನು ಪತ್ತೆ ಹಚ್ಚುವುದು.

೬. ಯಾವ ಸಾಮಾಜಿಕ ವರ್ಗ ಜನ ಭಾಷೆಯನ್ನು ಉಳಿಸಿಕೊಂಡಿದೆ. ಯಾವ ಸಾಮಾಜಿಕ ವರ್ಗ ಪ್ರಭುತ್ವದ ಭಾಷೆಗೆ ಒಳಗಾಗಿದೆ ಎಂಬುದನ್ನು ಗುರುತಿಸುವುದು.

೭. ನುಡಿಬೆರಕೆ ಮತ್ತು ನುಡಿಪಲ್ಲಟ ಪ್ರಕ್ರಿಯೆಗಳು ಯಾವ ಪ್ರದೇಶ ಮತ್ತು ಯಾವ ಸಾಮಾಜಿಕ ವರ್ಗದಲ್ಲಿ ಹೆಚ್ಚು ಬಳಕೆಯಲ್ಲಿದೆ ಎಂಬುದನ್ನು ಕಂಡುಹಿಡಿಯುವುದು.

೮. ಲೇಖಕ ತನ್ನ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳನ್ನು ಎಷ್ಟರ ಮಟ್ಟಿಗೆ ಸಮರ್ಥವಾಗಿ ಬಳಕೆ ಮಾಡಿದ್ದಾನೆ ಎಂಬುದನ್ನು ಗುರುತಿಸುವುದು.

೯. ಸಾಮಾಜಿಕವಾಗಿ ಸಂವಹನಗೊಳ್ಳುವಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳು ಅಡ್ಡಿಪಡಿಸು ತ್ತಿವೆಯೇ ಎಂಬುದನ್ನು ನಿರ್ಧರಿಸುವುದು.

೧೦. ಇತ್ತೀಚಿಗೆ ದೇಶಿ ಸೊಗಡಿನ ಪದ ಸಂಪತ್ತು ಜನರಿಂದ ದೂರವಾಗುತ್ತಿದೆ ಎಂಬ ಕೂಗು ಕೇಳಿ ಬರುತ್ತಿದೆ. ಇದು ಸೃಜನಶೀಲ ಕ್ಷೇತ್ರದಲ್ಲೂ ನಿಜವೆ ಎಂಬುದನ್ನು ಶೋಧಿಸುವುದು, ಕಾರಣಗಳನ್ನು ಹುಡುಕುವುದು, ಪರಿಹಾರಗಳನ್ನು ಸೂಚಿಸುವುದು. - ಹೀಗೆ ಪ್ರಸ್ತುತ ಅಧ್ಯಯನ ತನ್ನದೇ ಆದ ಉದ್ದೇಶವನ್ನು ಹೊಂದಿದೆ.

೧.೩ ಅಧ್ಯಯನದ ವ್ಯಾಪ್ತಿ

ಪ್ರದೇಶವಾರು ಭಿನ್ನವಾಗಿರುವ ಭಾಷೆಗಳನ್ನು ಶೈಲಿ ಅಧ್ಯಯನಕ್ಕೆ ಒಳಪಡಿಸುವ ಹಿನ್ನೆಲೆಯಲ್ಲಿ ಪ್ರದೇಶ ವಾರು ಭಿನ್ನವಾಗಿರುವ ಏಳು ಕಾದಂಬರಿಗಳಿಗೆ ಮಾತ್ರ ಪ್ರಸ್ತುತ ಅಧ್ಯಯನವನ್ನು ಸೀಮಿತಗೊಳಿಸಿ ಕೊಳ್ಳಲಾಗಿದೆ. ಅವು ಹೀಗಿವೆ. ಬಳ್ಳಾರಿ ಪ್ರದೇಶವನ್ನು ಪ್ರತಿನಿಧಿಸುವ ಕುಂ. ವೀರಭದ್ರಪ್ಪನವರ ಅರಮನೆ; ಬೆಳಗಾವಿ

ಪ್ರದೇಶವನ್ನು ಪ್ರತಿನಿಧಿಸುವ ಮಿರ್ಜಿ ಅಣ್ಣಾರಾಯರ ನಿಸರ್ಗ; ನಂಜನಗೂಡು ಪ್ರದೇಶವನ್ನು ಪ್ರತಿನಿಧಿಸುವ ದೇವನೂರು ಮಹಾದೇವರ ಕುಸುಮಬಾಲೆ; ಬಿಜಾಪುರ ಪ್ರದೇಶವನ್ನು ಪ್ರತಿನಿಧಿಸುವ ರಾವ್‌ಬಹದ್ದೂರರ ಗ್ರಾಮಾಯಣ; ಮೈಸೂರು ಪ್ರದೇಶವನ್ನು ಪ್ರತಿನಿಧಿಸುವ ಚದುರಂಗರವರ ವೈಶಾಖ; ಗುಲಬರ್ಗಾ ಪ್ರದೇಶವನ್ನು ಪ್ರತಿನಿಧಿಸುವ ಗೀತಾನಾಗಭೂಷಣರ ಬದುಕು; ದಕ್ಷಿಣ ಕನ್ನಡ ಪ್ರದೇಶವನ್ನು ಪ್ರತಿನಿಧಿಸುವ ವೈದೇಹಿಯವರ ಅಸ್ಪೃಶ್ಯರು ಕಾದಂಬರಿಗಳನ್ನು ಅನುಲಕ್ಷಿಸಲಾಗಿದೆ. ಇದು ಪ್ರಸ್ತುತ ಮಹಾಪ್ರಬಂಧದ ವ್ಯಾಪ್ತಿಯೂ ಹೌದು, ಮಿತಿಯೂ ಹೌದು.

೧.೪ ಅಧ್ಯಾಯನದ ವಿಧಾನ

ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು ಎಂಬ ಶೀರ್ಷಿಕೆಯುಳ್ಳ ಪ್ರಸ್ತುತ ಮಹಾಪ್ರಬಂಧವು ಪ್ರಮುಖವಾಗಿ ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ವಸ್ತುನಿಷ್ಠ ವಿವರಣಾತ್ಮಕ ಅಧ್ಯಾಯನವಾಗಿದೆ. ಈ ಅಧ್ಯಾಯನಕ್ಕೆ ಪ್ರದೇಶವಾರು ಭಿನ್ನವಾಗಿರುವ ಏಳು ಕಾದಂಬರಿಗಳೇ ಪ್ರಮುಖ ಆಕರಗಳಾಗಿದ್ದು, ಸೃಜನಶೀಲ ಲೇಖಕರು ತಮ್ಮ ಅನುಭವಗಳನ್ನು ಪಾತ್ರಗಳ ಮೂಲಕ ಆಯಾ ಪ್ರಾದೇಶಿಕ ಭಾಷೆಯನ್ನು ನಿರೂಪಿಸುವಲ್ಲಿ ಹೇಗೆ ಯಶಸ್ವಿಯಾಗಿದ್ದಾರೆ ಎಂಬುದನ್ನು ವಿಶ್ಲೇಷಿಸುತ್ತ. ಸೃಜನಶೀಲ ಲೇಖಕರಲ್ಲಿ ಇರುವ ವ್ಯಕ್ತಿಗತವಾದ ವಿಶಿಷ್ಟತೆಯನ್ನು ಕಾದಂಬರಿಗಳ ಪಾತ್ರಗಳಲ್ಲಿ ಬಂದಿರುವ ಸಾಮಾಜಿಕ ಹಾಗೂ ಪ್ರಾದೇಶಿಕ ವಿಶಿಷ್ಟತೆಯನ್ನು ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ ಭಿನ್ನ ಮಾದರಿಯಿಂದ ಚರ್ಚಿಸಲು ಪ್ರಯತ್ನಿಸಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪ ಇಂತಿದೆ

ಅಧ್ಯಾಯ ೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಮುಖ್ಯ ಉದ್ದೇಶ ಹಾಗೂ ವ್ಯಾಪ್ತಿಗೆ ಸಂಬಂಧಿಸಿದಂತೆ ತಾತ್ವಿಕ ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ಪೀಠಿಕಾ ಭಾಗದ ಅಧ್ಯಯದಲ್ಲಿ ಚರ್ಚಿತವಾಗುವ ವಿಚಾರಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಜೊತೆಗೆ ಅಧ್ಯಯನದ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಾದ ಅಧ್ಯಯನದ ವೈಧಾನಿಕತೆಯನ್ನು ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ೨. ಶೈಲಿಶಾಸ್ತ್ರದ ಅಧ್ಯಯನ ಪರಂಪರೆ

ಈ ಅಧ್ಯಾಯದಲ್ಲಿ ಶೈಲಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಪಾಶ್ಚಾತ್ಯ ಮತ್ತು ಭಾರತೀಯ ಸಂದರ್ಭದಲ್ಲಿ ಶೈಲಿಯು ಮೊದಲು ಹೊಂದಿದ್ದ ಸ್ವರೂಪ ಯಾವುದು. ನಂತರ ಅದು ಶೈಲಿಯಾಗಿ ಹೇಗೆ ರೂಪು ತಳೆಯಿತು ಎಂಬುದನ್ನು ವಿಶ್ಲೇಷಿಸುತ್ತಾ, ಶೈಲಿಯ ಬಗ್ಗೆ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ನೀಡಿರುವ ವ್ಯಾಖ್ಯಾನಗಳು ಮತ್ತು ಅಧ್ಯಯನಗಳ ಸ್ವರೂಪವನ್ನು ಕುರಿತು ಹೇಳಲಾಗಿದೆ.

ಅಧ್ಯಾಯ ೩. ಕಾದಂಬರಿಗಳ ವಸ್ತು, ಭಾಷೆ ಮತ್ತು ತಂತ್ರಗಳ ಹಿನ್ನೆಲೆಯಲ್ಲಿ ಭಾಷಾ ಬಳಕೆಯಲ್ಲಿನ ಸಾದೃಶ್ಯತೆ ಮತ್ತು ವೈದೃಶ್ಯತೆ

ಈ ಅಧ್ಯಾಯದಲ್ಲಿ ಆಯ್ದ ಕಾದಂಬರಿಗಳ ಸೃಜನಶೀಲ ಲೇಖಕರು ಕಾದಂಬರಿಯ ಅಭಿವ್ಯಕ್ತಿಗಾಗಿ ಬಳಸಿಕೊಂಡಿರುವ ಭಾಷೆಯ ಸ್ವರೂಪ ಕುರಿತು ಚರ್ಚಿಸಲಾಗಿದೆ. ದಲಿತ ಬಂಡಾಯ ಆಶಯಕ್ಕನುಗುಣವಾಗಿ ಕಾದಂಬರಿಗಳಲ್ಲಿ ಬಳಕೆಗೊಂಡಿರುವ ವಸ್ತು. ಈ ವಸ್ತುವಿನ ಅಭಿವ್ಯಕ್ತಿಗಾಗಿ ಬಳಸಿಕೊಂಡಿರುವ ಭಾಷೆ ಹಾಗೂ ಅಭಿವ್ಯಕ್ತಿಯಲ್ಲಿನ ವಿಶಿಷ್ಟತೆಗಳನ್ನು ತಂತ್ರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಕಾದಂಬರಿ ಗಳಲ್ಲಿ ಮೂಡಿಬಂದಿರುವ ಸಾದೃಶ್ಯತೆ ಮತ್ತು ವೈದೃಶ್ಯತೆಯ ಅಂಶಗಳನ್ನು ಊಳಿಗಮಾನ್ಯ, ಜೀತಪದ್ಧತಿ ಮತ್ತು ಜಮೀನ್ದಾರಿ ಪದ್ಧತಿಯ ಕ್ರೌರ್ಯ, ಜಾನಪದೀಯ ಅಂಶಗಳು, ಲೈಂಗಿಕತೆ, ಅನೈತಿಕ ಸಂಬಂಧಗಳು, ಗ್ರಾಮೀಣ ನ್ಯಾಯ ವ್ಯವಸ್ಥೆ ಎಂಬ ಉಪಶೀರ್ಷಿಕೆಗಳಡಿಯಲ್ಲಿ ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೪. ಸಾಮಾಜಿಕ ವರ್ಗಗಳು ಮತ್ತು ಭಾಷೆ

ಈ ಅಧ್ಯಾಯದಲ್ಲಿ ಒಂದು ಸಮುದಾಯದಲ್ಲಿ ಒಂದೇ ಭಾಷೆಯನ್ನಾಡುವ ಜನರಿದ್ದರೂ ಎಲ್ಲಾ ವ್ಯಕ್ತಿಗಳು ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಅಂದರೆ ಸಮಾಜದಲ್ಲಿ ಸಮುದಾಯಗಳು ಭಿನ್ನ ವಾದಂತೆಲ್ಲ ಅವು ಬಳಸುವ ಭಾಷೆಯೂ ಭಿನ್ನವಾಗುತ್ತಾ ಹೋಗುತ್ತವೆ. ಕ್ರಮೇಣ ಈ ಭಿನ್ನತೆಯೇ ಆಯಾ ಸಮಾಜದ ಭಾಷಿಕ ಚಹರೆಯಾಗಿ ರೂಪುಗೊಳ್ಳುತ್ತವೆ ಎಂಬುದನ್ನು ಜಾತಿ, ಲಿಂಗ, ಅಧಿಕಾರ, ಶಿಕ್ಷಣ, ವ್ಯಕ್ತಿನಾಮ, ಸಂಬೋಧನಾ ವಾಚಿಗಳು ಗಾದೆಗಳು, ಬೈಗುಳಗಳಂತಹ ಸಾಮಾಜಿಕ ಭಿನ್ನಾಂಶಗಳಲ್ಲಿ ಚರ್ಚಿಸುತ್ತಾ, ವಿಶ್ಲೇಷಣೆ ಮತ್ತು ನಿದರ್ಶನಕ್ಕಾಗಿ ಆಯ್ದ ಕಾದಂಬರಿಗಳಿಂದ ಉದಾಹರಣೆಗಳನ್ನು ನೀಡಲಾಗಿದೆ.

ಅಧ್ಯಾಯ ೫. ಕಾದಂಬರಿಗಳಲ್ಲಿ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟ

ಈ ಅಧ್ಯಾಯದಲ್ಲಿ ಭಾಷಾ ಮಿಶ್ರಣದ ಬಗ್ಗೆ ವಿಶ್ಲೇಷಿಸುತ್ತಾ, ಯಾವ ಕಾದಂಬರಿಯಲ್ಲಿ ಹೆಚ್ಚಾಗಿ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟದಂತಹ ಪ್ರಕ್ರಿಯೆಗಳು ನಡೆದಿವೆ. ಅದರಲ್ಲೂ ಯಾವ ಸಾಮಾಜಿಕ ವರ್ಗ ಭಾಷಾ ಮಿಶ್ರಣಕ್ಕೆ ತೆರೆದುಕೊಂಡಿದೆ. ಹಾಗೂ ಇಂತಹ ಮಿಶ್ರಣಗಳ ಶೈಲಿಯ ಬಳಕೆಯಿಂದ ಕಾದಂಬರಿ ಹೆಚ್ಚು ಸಾಮಾಜಿಕ ಸಂವಹನ ಆಗುತ್ತದೆಯೇ ಎಂಬುದನ್ನು ಚರ್ಚಿಸುತ್ತಾ ಭಾಷಾ ಮಿಶ್ರಣದ ಹಲವು ಆಯಾಮಗಳಾದ ಸ್ವೀಕರಣ, ನುಡಿಬೆರಕೆ, ನುಡಿಪಲ್ಲಟಗಳೆಂದರೇನು? ಪರಸ್ಪರ ಇವುಗಳೊಳಗಿನ ವ್ಯತ್ಯಾಸ ಗಳೇನು? ಮತ್ತು ಭಾಷಾ ಮಿಶ್ರಣದ ವಿವಿಧ ಆಯಾಮಗಳು ಆಯ್ದ ಕಾದಂಬರಿಗಳಲ್ಲಿ ಹೇಗೆ ಮೂಡಿಬಂದಿವೆ ಎಂಬುದನ್ನು ಕುರಿತು ನಿದರ್ಶನಗಳ ಸಹಿತ ವಿಶ್ಲೇಷಿಸಲಾಗಿದೆ.

ಅಧ್ಯಾಯ ೬. ಕನ್ನಡ ಪ್ರಭೇದಗಳ ಗುರುತುಗಳು

ಈ ಅಧ್ಯಾಯದಲ್ಲಿ ವಿವಿಧ ವಲಯಗಳಲ್ಲಿ ಬಳಕೆಯಲ್ಲಿರುವ ಸಾವಿರಾರು ಪದಗಳು ಆಧುನೀಕರಣದ ಪ್ರಭಾವದಿಂದಾಗಿ ಬಳಕೆಯಿಂದ ದೂರವಾಗುತ್ತಿವೆ. ಇಂತಹದರಲ್ಲಿ ಇವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಸೃಜನಶೀಲ ಲೇಖಕರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎಂಬುದನ್ನು ವಿಶ್ಲೇಷಿಸುತ್ತಾ

ಪ್ರಾದೇಶಿಕ ಭಾಷೆಯ ಕೃತಿಯನ್ನು ರಚಿಸುವ ಲೇಖಕರು ಆಯಾ ಪ್ರದೇಶಗಳಿಗೆ ವಿಶಿಷ್ಟವಾಗಿರುವ ಭಾಷೆಯಲ್ಲಿ ಧ್ವನಿ, ಪದ, ವಾಕ್ಯಗಳನ್ನು ವಿಶಿಷ್ಟ ಪದಗಳನ್ನು ಯಥಾವತ್ತಾಗಿ ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಧ್ವನಿಶೈಲಿ, ಪದಶೈಲಿ, ವಾಕ್ಯಶೈಲಿ ಹಾಗೂ ವಿಶಿಷ್ಟ ಪದಕೋಶ ಶೈಲಿಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೭. ಸಮಾರೋಪ

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದಿಂದ ಕಂಡುಕೊಂಡ ಫಲಿತಗಳನ್ನು ಸಂಕ್ಷಿಪ್ತವಾಗಿ ಮಂಡಿಸಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಬಳಸಿಕೊಂಡಿರುವ ಕೃತಿಗಳನ್ನು ಕೊಡಲಾಗಿದೆ ಹಾಗೂ ಪ್ರಾದೇಶಿಕ ವಿಶಿಷ್ಟ ಪದಗಳ ಸಂಗ್ರಹವನ್ನು ಕೊಡಲಾಗಿದೆ.

ಅಧ್ಯಾಯ ಎರಡು

ಶೈಲಿಶಾಸ್ತ್ರದ ಅಧ್ಯಯನ ಪರಂಪರೆ

೨.೧. ಶೈಲಿಯ ಹುಟ್ಟು ಮತ್ತು ಬೆಳವಣಿಗೆ

೨.೨. ಶೈಲಿಯ ಬಗೆಗಿನ ವ್ಯಾಖ್ಯಾನಗಳು ಮತ್ತು ಗ್ರಂಥಗಳು

೨.೨.೧. ಪಾಶ್ಚಾತ್ಯ ವಿದ್ವಾಂಸರು

೨.೨.೨. ಭಾರತೀಯ ವಿದ್ವಾಂಸರು

ಅಧ್ಯಾಯ ೨

ಶೈಲಿಶಾಸ್ತ್ರದ ಅಧ್ಯಯನ ಪರಂಪರೆ

ಲೇಖಕರು ತಮ್ಮ ಅನುಭವಗಳನ್ನು ಅಭಿವ್ಯಕ್ತಿಸುವಾಗ ಭಾಷೆ ಬೇಕೆ ಬೇಕು. ಭಾಷೆಯ ಆಳ, ಅಗಲಗಳನ್ನು ಅದರ ಎಲ್ಲ ಸಾಧ್ಯತೆಗಳೊಂದಿಗೆ ಅರ್ಥಪೂರ್ಣವಾಗಿ ದುಡಿಸಿಕೊಳ್ಳುವ ಸಾಮರ್ಥ್ಯವೇ ಶೈಲಿ.

೨.೧ ಶೈಲಿ ಪದದ ಹುಟ್ಟು ಮತ್ತು ಬೆಳವಣಿಗೆ

ಶೈಲಿ (ಇಂಗ್ಲೀಷ್‌ನ ಸ್ಟೈಲ್) ಎಂಬುದು ಲ್ಯಾಟಿನ್ ಭಾಷೆಯ ಸ್ಟೈಲಸ್ ಎಂಬ ಪದದಿಂದ ಬಂದಿದೆ. ಪ್ರಾಚೀನ ರೋಮನ್ನರು ಜೇನು ಮೇಣದ ಹಲಗೆಗಳ ಮೇಲೆ ಬರೆಯುವುದಕ್ಕೆ ಉಪಯೋಗಿಸುತ್ತಿದ್ದ ಉಪಕರಣಕ್ಕೆ 'ಸ್ಟೈಲಸ್' ಎಂದು ಕರೆಯುತ್ತಿದ್ದರು. ಲೋಹದಿಂದಲೋ, ಮೂಳೆಯಿಂದಲೋ ತಯಾರಿಸಲ್ಪಟ್ಟ ಇದು ಒಂದು ಕಡೆ ಮೊನೆಯಾಗಿಯೂ ಮತ್ತೊಂದು ಕಡೆ ಚಪ್ಪಟ್ಟೆಯಾಗಿಯೂ ಲೇಖನಿಯ ಮಾದರಿಯಲ್ಲಿ ರುತ್ತಿತ್ತು. ಮೊನಚಾದ ಕಡೆ ಲಿಖಿಸುವುದಕ್ಕೂ ಚಪ್ಪಟೆಯಾದ ಕಡೆ ಒರಸುವುದಕ್ಕೂ ನೆರವಾಗುತ್ತಿತ್ತು. ಅನಂತರ ಅದನ್ನು ರೂಪಕದಂತೆ ಗಣಿಸಿ ಮುಖ್ಯವಾಗಿ ಭಾಷೆಯನ್ನು ಬಳಸುವ ಕಲೆಗೆ ಅನ್ವಯಿಸಲಾಯಿತು. ಕ್ರಮೇಣ ಈ ಶಬ್ದದ ಅರ್ಥ ವಿಸ್ತೃತವಾಗಿ ಒಬ್ಬನ ಬರವಣಿಗೆಯ ರೀತಿ ಎಂದೂ, ಅನಂತರ ಒಬ್ಬರು ತಮ್ಮನ್ನು ತಾವು ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸಿಕೊಳ್ಳುವ ಕ್ರಮ ಎಂದೂ ಅನ್ವಯವಾಗುವಂತೆ ಬಳಸಿಕೊಳ್ಳಲಾಯಿತು.

೧೭-೧೮ನೆಯ ಶತಮಾನಗಳಲ್ಲಿ 'ಶೈಲಿ' ಎಂಬ ಶಬ್ದ ದೃಶ್ಯಕಲೆಗಳಿಗೂ ಅನ್ವಯವಾಗತೊಡಗಿತು. ಅನಂತರ ೧೮ನೆಯ ಶತಮಾನದಲ್ಲಿ ಜೆ.ಟಿ. ವಿಂಕಲ್ ಮ್ಯಾನ್ಸರವರ History of the ancient Art

(1764) ಮೂಲಕ ಶೈಲಿಯು ಕಲೆ ಎಂಬರ್ಥದಲ್ಲಿಯೂ ಅನ್ವಯವಾಗಲಾರಂಭವಾಯಿತು. ೧೯ನೆಯ ಶತಮಾನದ ಆರಂಭದಲ್ಲಿ ಜರ್ಮನರು Stylistick ಎಂಬ ಶಬ್ದವನ್ನು 'ಶೈಲಿಯ ಅಧ್ಯಯನ' ಎಂಬರ್ಥದಲ್ಲಿ ಬಳಕೆಗೆ ತಂದರು. ಈ ಶಬ್ದವು ಗ್ರೀಮ್ಸ್ ಮಹಾಶಯನ ಕೋಶದಲ್ಲಿ ಬಳಕೆಯಲ್ಲಿದೆ. ನಂತರ ಇಂಗ್ಲೀಷ್‌ರು ೧೯೪೬ರಲ್ಲಿ STYLISTICS ಎಂಬ ಶಬ್ದವನ್ನು 'ಶೈಲಿ ವಿಜ್ಞಾನ' ಎಂಬರ್ಥದಲ್ಲಿ ಬಳಸಿದರು. ಇಂಗ್ಲಿಷ್‌ನಲ್ಲಿ ಈ ಶಬ್ದ ೧೮೪೬ರಲ್ಲಿಯೇ ಬಳಕೆಯಾಗಿತ್ತಾದರೂ. ಅದು ೧೮೮೨ರಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು. ೧೮೭೨ರಲ್ಲಿ ಫ್ರೆಂಚರು Stylistique ಎಂಬ ಶಬ್ದವನ್ನು ಶೈಲಿಯ ಅಧ್ಯಯನ ಎಂಬರ್ಥದಲ್ಲಿ ಬಳಸಿದರು. ಇವರ ಪರಿಶ್ರಮದ ಫಲವಾಗಿ Stylistics ಎಂಬ ಶಬ್ದವು ಶೈಲಿಯ ವೈಜ್ಞಾನಿಕ ಅಧ್ಯಯನ ಎಂಬರ್ಥದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು. ಎ.ಎಲ್. ಕ್ರೋಬರ್ ಎಂಬ ಮಾನವಶಾಸ್ತ್ರಜ್ಞರು ಶೈಲಿ ಮತ್ತು ನಾಗರೀಕತೆಗಳಿರುವ ಸಂಬಂಧವನ್ನು ಕುರಿತು ೧೯೫೭ರಲ್ಲಿ 'Style and Civilization' ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದರು. ಎಫ್.ಡಬ್ಲ್ಯೂ. ಬೇಟ್ಸ್‌ಮನ್ ಎಂಬ ಪಾಶ್ಚಾತ್ಯ ವಿದ್ವಾಂಸರು, ಭಾಷಾ ವಿಜ್ಞಾನವು ಸಾಹಿತ್ಯದ ಅಧ್ಯಯನಕ್ಕೆ ನೀಡಿರುವ ಮಹತ್ವದ ಕೊಡುಗೆ ಎಂದರೆ 'ಶೈಲಿ ವಿಜ್ಞಾನ' ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೈಲಿ ವಿಜ್ಞಾನ ಎಂಬುದು ೨೦ನೆಯ ಶತಮಾನದಲ್ಲಿ ಹೆಚ್ಚು ಪ್ರಚಾರತೆ ಪಡೆದುಕೊಂಡಿತು. ಇದರ ಬಗ್ಗೆ ಐ.ಎ. ರಿಚರ್ಡ್ಸ್, ರೆನೆವೆಲಕ್ ಮುಂತಾದ ಸಾಹಿತ್ಯ ವಿಮರ್ಶಕರೂ, ಕ್ರೋಬರ್ ಮುಂತಾದ ಮಾನವಶಾಸ್ತ್ರಜ್ಞರೂ, ರಾಕೆಟ್ ರೋಮನ್ ಯಾಕುಬ್‌ಸಿನ್ ಟರ್ನರ್, ಪೌಲರ್ ಹ್ಯಾಲಿಡೆ, ಚಾರ್ಲ್ಸ್‌ಬೆಲ್ಲಿ, ಮಾರ್ಸೆಲ್ ಕ್ರೆಪೆಟ್ ಮುಂತಾದ ಭಾಷಾವಿಜ್ಞಾನಿಗಳು ಶೈಲಿಯನ್ನು ಕುರಿತು ಬಗೆ ಬಗೆಯಲ್ಲಿ ವಿವೇಚಿಸಿದ್ದಾರೆ.

೨.೨ ಶೈಲಿ ಬಗೆಗಿನ ವ್ಯಾಖ್ಯಾನಗಳು

ಶೈಲಿಯ ಬಗೆಗೆ ವಿದ್ವಾಂಸರು ವಿವಿಧ ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವು ಈ ರೀತಿಯಾಗಿವೆ.

೨.೨.೧ ಪಾಶ್ಚಾತ್ಯ ವಿದ್ವಾಂಸರು

೧. "ಶೈಲಿ ಎಂಬುದು ಇಷ್ಟು; ಒಂದು ಭಾವನೆ ಕೊಡಬಹುದಾದ ಪ್ರತಿಫಲವನ್ನು ಪರಿಪೂರ್ಣವಾಗಿ ಕೊಡುವುದಕ್ಕೆ ಅದಕ್ಕೆ ಅಗತ್ಯವಾದ ಎಲ್ಲ ಪರಿಕರಗಳನ್ನು ಕೂಡಿಸಿಕೊಡುವುದು. ಎಂದರೆ ಭಾವನೆ ಮನಸ್ಸಿನಲ್ಲಿ ಪ್ರತ್ಯೇಕವಾಗಿ ಇದೆ. ಅದರ ಪೂರ್ಣ ಪ್ರಸಾರಕ್ಕೆ ಅಗತ್ಯವಾದ ಅಂಶಗಳನ್ನು ಒದಗಿಸಿ ಕೊಡುವುದೇ ಶೈಲಿ". - ***ಸ್ಟೆಂಢಲ್***

೨. "ತಾನು ಹೇಳಬೇಕಾದುದನ್ನು ಕವಿ ಒಂದು ದೈವಿಕವಾದ ಉದ್ವೇಕಾವಸ್ಥೆಯಲ್ಲಿ ಮೇಲ್ಮೆಗೊಳಿಸಿ ರೂಪಾಂತರಪಡಿಸುತ್ತಾನೆ. ತನ್ಮೂಲಕ ಅದಕ್ಕೆ ಗಾಂಭಿರ್ಯವೂ ವೈಶಿಷ್ಟ್ಯವೂ ಕೂಡಿಕೊಳ್ಳುತ್ತದೆ. ಇದೇ ನನ್ನ ಅರ್ಥದಲ್ಲಿ ಶೈಲಿ" - ***ಮ್ಯಾಥ್ಯೂ ಆರ್ನಲ್ಡ್***

೩. "ಆಲೋಚನೆಯ ಉಡುಗೆ ಶೈಲಿ; ಅದು ಎಷ್ಟು ಸೂಕ್ತವಾದರೆ ಅಷ್ಟು ಸಭ್ಯತೆ, ಕ್ಷುದ್ರ ಕಲ್ಪನೆಯನ್ನು ಆಡಂಬರದ ಕಲ್ಪನೆಯಲ್ಲಿ ಪ್ರಕಟಿಸುವುದು. ಹಳ್ಳಿಯ ರೈತ ರಾಜನ ಕಿಂಕಾಫನ್ನು ಧರಿಸಿದಂತೆ ಬೇರೆ

ಬೇರೆ ವಿಷಯಗಳಿಗೆ, ಬೇರೆ ಬೇರೆ ಶೈಲಿಗಳು ಸಿದ್ಧವಾಗಿವೆ. ಹಳ್ಳಿ ಪಟ್ಟಣ ಅರಮನೆಗಳಿಗೆ ಬೇರೆ ಬೇರೆ ವಸನಗಳು ನೇಮಕವಾಗಿಲ್ಲವೇ". - *ಪೋಪ್*

೪. "ಆಲೋಚನೆಗೆ ಸಾಕಷ್ಟು ಸಮರ್ಪಕ ಭಾಷೆಯನ್ನು ತೊಡಗಿಸುವ ಸಮಾರಂಭವೇ ಶೈಲಿ". - *ಜೆ.ಎ. ಸಿಮನ್ಸ್*

೫. "ಶೈಲಿ ಲೇಖಕನ ಅಂಗಿಯಲ್ಲ ತೊಗಲು; ಅಂಗಿಯನ್ನು ಆಚೆಗೆ ತೆಗೆದಿಡಬಹುದು. ಶೈಲಿ ಹಾಗಲ್ಲ, ಚರ್ಮ ಹೇಗೆ ಜೀವಿಗೆ ಅವರ್ಜನೀಯವಾದ ಒಂದು ಭಾಗವೋ ಹಾಗೆ ಶೈಲಿ". - *ಫ್ರೂಡ್*

೬. "ಶೈಲಿ ಲೇಖಕನ ಅಂಗಿಯಲ್ಲ ತೊಗಲು". - *ಕಾರ್ಲೈಲ್*

೭. "ಸುಂದರ ಕಾವ್ಯದೇವಿಯ ಮುಖ ಬಣ್ಣದ ಹೊಳಪೇ ಶೈಲಿ; ಕವಿ ತನ್ನ ಸ್ವಂತ ಆಸ್ತಿಯಿಂದಲೋ ಇತರರಿಂದ ಎರವು ಪಡೆದೋ ಅದನ್ನು ಅವಳಿಗೆ ದಾನವೀಯುತ್ತಾನೆ". - *ಟಿ. ಹಾಬ್ಸ್*

೮. 'ಕವಿಯೇ ಶೈಲಿ' - *ಬಫನ್*

೯. "ಕವಿಯ ಶೈಲಿ ಅವನ ಚಿತ್ತವೃತ್ತಿಯ ಪ್ರತಿಬಿಂಬವಾಗಿರಬೇಕು". - *ಗಿಬ್ಬನ್*

೧೦. "ಮನುಜನನ್ನು ಬಹಳ ಚೆನ್ನಾಗಿ ತೆರೆದು ತೋರಿಸುವುದು ಅವನ ನುಡಿ. ನೀನು ಮಾತಾಡಿದರೆ ಸಾಕು. ನಿನ್ನನ್ನು ನಾನು ಅರಿಯಬಲ್ಲೆ. ಅವನ ಕನ್ನಡಿಯೂ ಮನುಷ್ಯನ ಸ್ವರೂಪವನ್ನು ಅವನ ಮಾತುಗಾರಿಕೆಯಂತೆ ಸ್ಪಷ್ಟಪಡಿಸಲಾರದು. ಅಷ್ಟೇಕೆ ಅದೇ ಅವನೆಂದು ಹೇಳುವವರಿದ್ದಾರೆ". -*ಬೆನ್‌ಜಾನ್ಸನ್*

೧೧. "ಕವಿಯ ಭಾಷೆ ಅವನ ತೀಕ್ಷ್ಣ ವ್ಯಕ್ತಿತ್ವದ ವಿಶ್ವಾಸರ್ಹ ಸೂಚನೆ. ಅವನೊಳಗಣ ಆಲೋಚನಾ ಪ್ರಪಂಚವನ್ನು ಕೇವಲ ನೆರಳಿನಂತೆ ಅದು ಅನುಸರಿಸಿಕೊಂಡಿದೆ. ಆದ್ದರಿಂದ ನೈಜಶೈಲಿಯನ್ನು ದಾನವಾಗಿ ಪಡೆದಿರುವ ಕವಿಯ ಶೈಲಿ ಅವನೊಬ್ಬನದೇ ಅಲ್ಲದೇ ಇತರರಿಗೂ ಸೇರಿದೆಯೆಂದು ಉಸಿರುವುದೂ ಒಂದೇ ಒಬ್ಬನ ಛಾಯೆ ಇನ್ನೊಬ್ಬನದೆಂದು ಹೇಳುವುದು ಒಂದೆ. ಕವಿಯನ್ನು ಛಾಯೆಯಂತೆ ಅವನ ಶೈಲಿ ಹಿಂಬಾಲಿಸುತ್ತದೆ. ಅವನ ಭಾವನೆಗಳು ಅವನ ಸೊತ್ತು ಅವನ ಶೈಲಿಯೂ ಅವನ ಸೊತ್ತು". - *ನ್ಯೂಮನ್*

೧೨ 'ಶೈಲಿ ಮಾನವನ ಆತ್ಮ' - *ರೋಲಾರ್. ಆರ್.*

೧೩. "ವಸ್ತುವಿನಿಂದ ಬೇರೆಯಾಗಿ ಶೈಲಿಯನ್ನು ಬಗೆಯಲಾಗುವುದಿಲ್ಲ. ಒಬ್ಬ ಕವಿ ಒಂದು ಅಭಿಪ್ರಾಯವನ್ನು ಕಲ್ಪಿಸಿಕೊಳ್ಳುವಾಗ ಪದಗಳ ರೂಪರೂಪದಲ್ಲಿಯೇ ಅದನ್ನು ಕಲ್ಪಿಸಿಕೊಳ್ಳುತ್ತಾನೆ. ಆ ಪದಗಳ ಸರಣಿಯೇ ಅವನ ಶೈಲಿ.... ಅವನ ಅಭಿಪ್ರಾಯ ಪದಗಳ ಮೂಲಕ ಮಾತ್ರ ವ್ಯಕ್ತವಾಗುತ್ತದೆ. ಒಂದು ಅಭಿಪ್ರಾಯಕ್ಕೆ ಒಂದು ರೀತಿಯ ವಾಕ್ಯ ಸರಿ. ಒಂದೇ ಅಭಿಪ್ರಾಯವನ್ನು ಪ್ರತ್ಯೇಕವಾದ ಎರಡು ವಿಧದಲ್ಲಿ ಹೇಳಲಾರಿರಿ. ಭಾಷೆಯನ್ನು ಕೊಂಚ ಬದಲಾಯಿಸಿದರೆ ಭಾವನೆಯೂ ಕೊಂಚ ಬದಲಾಯಿಸುತ್ತದೆ". - *ಆರ್ನಲ್ಡ್ ಬೆನೆಟ್*

೧೪. "ವಸ್ತು ರೀತಿಗಳು ಕಲೆಯಲ್ಲಿ ಹೊಂದಿಕೊಂಡಿವೆಯೆಂಬ ನುಡಿಗೆ ಅವೆರಡೂ ಒಂದೇ ಏಕರೂಪ ಎಂದು ಅರ್ಥವಲ್ಲ. ಅದರ ಅರ್ಥ ಇಷ್ಟೇ; ಅವರೆಡೂ ಬೇರೆ ಬೇರೆಯಾಗಿ ಕಣ್ಣಿಗೆ ಬೀಳುವುದಿಲ್ಲ. ಕಲೆ ರೀತಿಯುಕ್ತವಸ್ತು ಆದರೆ ಯಾವಾಗ ಆಲೋಚನೆ ಎದ್ದು ಬರುತ್ತದೆಯೋ ವಿಮರ್ಶೆ ಜಿಜ್ಞಾಸೆಗಳಲ್ಲಿ ಆಗ ಅವೆರಡನ್ನೂ ಬೇರೆ ಬೇರೆ ಭಾವಿಸುವುದು ನ್ಯಾಯ". - ***ಜಾನ್‌ಡ್ಯೂಇ***

೧೫. "ಎಲ್ಲ ಕವಿಗಳ ಸ್ವರ್ಗೀಯ ವಚನ ವೈಖರಿಗಳು ಒಬ್ಬ ಕವಿಯಲ್ಲಿ ಸೇರಿ ನಿಂತಿದ್ದರೂ ಅವನ ಮನಸ್ಸಿನಲ್ಲಿ ಮಾತಿನಿಂದ ನಿರೂಪಿಸಲಾಗದ ಒಂದು ಯೋಚನೆ ಒಂದು ಸೌಂದರ್ಯ ಒಂದು ಕೌತುಕ ಉಳಿದೇ ಉಳಿಯುತ್ತದೆ". - ***ಮಾರ್ಲ್ಲೊ***

೧೬. "ಸಮೃದ್ಧಿಯನ್ನು ಸೂಚಿಸಲೋಸುಗ ಉಪಯುಕ್ತವೂ ಮುಖ್ಯವೂ ಆದುದರ ಜೊತೆಗೆ ಅನಗತ್ಯ ವಾದುದನ್ನು ಸೇರಿಸುವುದು". - ***ಮಾಕ್ಸ್‌ನಾರ್ಡೊ***

೧೭. "ನಮಗೆ ತಿಳಿದ ಮಟ್ಟಿಗೆ ಪ್ರಕೃತಿ ಜೀವರಾಶಿಗೆ ಅನುಕೂಲವಾದ ಸನ್ನಿವೇಶ ಇರುವುದರಲ್ಲಿಯೂ ಸರಳವಾದದ್ದನ್ನು ಪ್ರದರ್ಶಿಸಿಲ್ಲ. ಆದ್ದರಿಂದ ಕಲೆ ಪ್ರಕೃತಿಗಿಂತಲೂ ಹೆಚ್ಚಿನ ಸರಳತೆಯನ್ನು ಆಶಿಸಲಾಗದು. ಆದರೂ ಅಂಥ ಇಂಥಾ ಸರಳ ಶೈಲಿ ಅಲ್ಲ ಎಂದಾಗ ಏನು ಅರ್ಥವೆಂಬುದನ್ನು ನಾವು ಬಲ್ಲೆವು. ನಾನು ಇಷ್ಟನ್ನು ಹೇಳುತ್ತೇನೆ. ನಿಜವಾಗಿ ಸರಳ ಶೈಲಿ ಇಲ್ಲದಿದ್ದರೂ ಕೆಲವು ಶೈಲಿಗಳು ಸರಳವೆಂದು ತೋರುತ್ತವೆ. ಅವುಗಳ ಸರಳತೆಯ ತೋರ್ಕೆಗೆ ವಿವಿಧ ಅಂಗೋಪಾಂಗಗಳ ದಾರಿದ್ರ್ಯ ಕಾರಣವಲ್ಲ. ಆ ಅಂಗೋಪಾಂಗಗಳು ಎಷ್ಟು ಸಂಪೂರ್ಣವಾಗಿ ಒಂದುಗೂಡಿವೆ ಎಂದರೆ ಅದನ್ನು ಬೇರೆ ಬೇರೆ ವಿಕ್ಷಿಸಲು ಸಾಧ್ಯವೇ ಇಲ್ಲ..... ಸರಳ ಶೈಲಿ ಬಿಳಿಯ ಬೆಳಕಿನ ಹಾಗೆ... ಅದು ನಿಜವಾಗಿ ಸಂಕೀರ್ಣ. ಆದರೆ ಹಾಗೆ ತೋರುವುದಿಲ್ಲ. ಎಂದರೆ ಯೋಗ್ಯವೂ ಅಪೇಕ್ಷಣೀಯವೂ ಆದ ಸರಳತೆ ಬಿಡಿ ಅಂಗಗಳನ್ನು ಬಹು ಲಕ್ಷಣವಾಗಿ ಯುಕ್ತ ಸಮಕಟ್ಟಿನಲ್ಲಿ ಯೋಜಿಸುವುದರ ಫಲ". - ***ಅನಟೋಲ್ ಫ್ರಾನ್ಸ್***

೧೮. "ರೂಢಿಯಿಂದ ಮಾರ್ಗಾಂತರ ಹೊಂದಿದ ವಸ್ತುಗಳನ್ನು ತಯಾರಿಸುವ ವಿಧಾನ ಅಥವಾ ಸುಸಂಬದ್ಧವಾದ ಮಾರ್ಗದ ಒಂದು ವ್ಯವಸ್ಥೆಯೇ ಶೈಲಿ" - ***ಡೆಲ್. ಹೆಚ್.ಹಿಮ್ಸ್***

೧೯. "ಶೈಲಿ ಎಂಬುದು ಸಂಸ್ಕೃತಿ ಅಥವಾ ನಾಗರೀಕತೆಯಲ್ಲಿನ ಒಂದು ವೇದ". - ***ಎ.ಎಲ್. ಕ್ರೋಬರ್***

೨೦. "ಶೈಲಿ ಎಂದರೆ ಯಾವ ವ್ಯಂಗ್ಯವನ್ನು ಒಳಗೊಳ್ಳದೆ ಇನ್ನೊಬ್ಬರನ್ನು ತಿವಿಯುವ ಆಯುಧ". - ***ಆಕ್ಸ್‌ಫರ್ಡ್ ನಿಘಂಟು***

೨೧. "ಶೈಲಿ : ಕಾವ್ಯ ಸಾಹಿತ್ಯ ಮತ್ತು ಕಥೆಗಳು" - ***ಮೋನಿಯರ್ ನಿಘಂಟು***

೨೨. "The word style means a good or distignguished manner with language". - ***Encyelopedia Britannica***

೨೩. "ಶೈಲಿ ಎಂಬುದಕ್ಕೆ ವ್ಯಾಕರಣ ಸೂತ್ರದ ಸಂಕ್ಷಿಪ್ತ ವಿವರಣೆ ಅಭಿವ್ಯಕ್ತಿಯ ಒಂದು ಸಾಧನ. ತಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರಿಗೆ ಉಪದೇಶಿಸುವ ಕ್ರಮ, ನಡವಳಿಕೆ, ಸ್ವಭಾವ ಕ್ರಮ, ಮುಂತಾದ ಅರ್ಥ". - *ಆಪ್ಟೆಯವರ ಸಂಸ್ಕೃತ ಇಂಗ್ಲಿಷ್ ನಿಘಂಟು*

೨೪. "ಕವಿಯೊಬ್ಬನು ಭಾಷೆಯನ್ನು ತನ್ನ ಭಾವಾಭಿವ್ಯಕ್ತಿಗೆ ಬಳಸುವ ಒಂದು ವಿಶಿಷ್ಟವಾದ ಕ್ರಮ. ಅತ್ಯುತ್ತಮವಾದ ಪದಗಳು ಅತ್ಯುತ್ತಮವಾದ ಕ್ರಮದಲ್ಲಿ ಜೋಡಿಸಿಕೊಳ್ಳುವುದೇ ನಿಜವಾದ ಶೈಲಿಯ ಲಕ್ಷಣ". - ***ಕೋಲ್‌ರಿಜ್***

೨೫. 'Proper words in proper places' - ***ಜೋನಾಥನ್ ಸ್ವಿಫ್ಟ್***

೨೬. "ಶೈಲಿ ಎಂಬುದು ಆಲೋಚನೆಯ ಉಡುಪು" - ***ಪೋಪ್***

೨೭. "ಆಲೋಚನೆಗೆ ಸಾಕಷ್ಟು ಸಮರ್ಪಕವಾದ ಭಾಷೆಯನ್ನು ತೊಡಿಸುವ ಸಮಾರಂಭವೇ ಶೈಲಿ" -***ಸಿಂಪ್ಸನ್***

೨೮. 'ವ್ಯಕ್ತಿಯೇ ಶೈಲಿ' (Style is the man himself) - ***ಬಫೂನ್***

೨೯. "ಮನಸ್ಸಿನ ಪ್ರತಿಬಿಂಬವೇ ಶೈಲಿ" (The physiognomy of the mind) - ***ಶೋಪೆನ್‌ಹಾವರ್***

೩೦. "ಬರೆಯುವ ವ್ಯಕ್ತಿಯ ಮಾನಸಿಕ ಚಿತ್ರವೇ ಶೈಲಿ" - ***Edmond Goss***

೩೧. "ಶೈಲಿ ಎಂಬುದು ಮಾತಿನ ಮತ್ತು ಬರಹದ ಶಾಶ್ವತವಾದ ಮತ್ತು ನಿರುತವಾದ ಪದಗುಚ್ಛ" - ***ವಿಲಿಯಂ ಪ್ಲಾಟೆಹ್ಂ***

೩೨. "ಕಾವ್ಯದಲ್ಲಿನ ಒಂದು ವರ್ಣ ಅದೇ ಸಂದರ್ಭದ ಬೇರೊಂದು ವರ್ಣದೊಂದಿಗೆ ಒಂದು ಒತ್ತು(Stress) ಅದೇ ಸಂದರ್ಭದ ಬೇರೊಂದು ಒತ್ತಿನೊಂದಿಗೆ ಒಂದು ದೀರ್ಘ ಅದೇ ಸಂದರ್ಭದ ಮತ್ತೊಂದು ದೀರ್ಘದೊಂದಿಗೆ. ಹಾಗೆಯೇ ಒಂದು ಹ್ರಸ್ವ ಅದೇ ಸಂದರ್ಭದ ಮತ್ತೊಂದು ಹ್ರಸ್ವದೊಂದಿಗೆ ಏಕರೂಪತೆಯನ್ನು ಪಡೆದುಕೊಳ್ಳುವುದೆ ಶೈಲಿ". - ***ರೋಮನ್ ಯಾಕುಬ್‌ಸನ್***

೩೩. "ಭಾಷೆಯ ಅಭಿವ್ಯಕ್ತಿ ಮಾಧ್ಯಮದ ವೈವಿಧ್ಯವೇ ಶೈಲಿ" - ***ಚಾಲ್ಸ್‌ಬೆಲ್ಲಿ***

೩೪. "ಅರ್ಥಾಭಿವ್ಯಕ್ತಿಗೆ ಸಾಧಕವಾಗಿರುವ ತತ್ವವೇ ಶೈಲಿ" - ***ಪ್ಲೇಟೊ***

೩೫. "ಶೈಲಿ ಲೇಖಕನನ್ನು ನೆರಳಿನಂತೆ ಹಿಂಬಾಲಿಸುತ್ತದೆ. ಅವನ ಆಲೋಚನೆ ಮತ್ತು ಭಾವ ವೈಯಕ್ತಿಕ ಹಾಗೆಯೇ ಭಾಷೆಯೂ ವೈಯಕ್ತಿಕ" - ***ನ್ಯೂಮನ್***

ಗ್ರಂಥಗಳು

೧. La style et ses techniquess, 1947, ಮಾರ್ಸೆಲ್ ಕ್ರೆಫೆಟ್ (ಭಾಷಿಕ ಸಾಹಿತ್ಯಕ ಶೈಲಿಗಳೆರಡನ್ನು ಕುರಿತು ವಿವೇಚಿಸಲಾಗಿದೆ.)

೨. Style in language, 1960, Sebeok T.A. (Ed)

೩. Essays on style and language, 1966, Fowler R.

೪. Linguistic and litarary style, 1970, Freeman D.

೫. Stylistics, 1973, ಜಿ.ಡಬ್ಲ್ಯೂ. ಟರ್ನರ್

೬. Chatman's (Ed), 1971, Literary Style, A Symposium OVP, London.

೭. Fowler R (Ed), Style and Structure in Literature, Essays in the New Stylistics, Black well.

೮. Hendricsk W.O., 1976, Grammars of Style and Styles of Grammar North Holland Amsterdam.

೯. Kachru B.B., and H.W. Stahlke (Ed), 1971, Current Trends in Stylistics, Campaign Lu.

೧೦. Kroeber K., 1971, Style in Fuctional Structure Princeon.

೧೧. Leech G.N., and Short M.H., 1981, Style in Fiction, Logamns London.

೧೨. Martin H.C. (Ed), 1959, Style in Prose Fiction Columbia University Press, New Delhi.

೧೩. Van Peer W., 1982, Stylistics and Psychology, The Theory of Foregrounding investigated Croom Heln, London.

೧೪. Birch D., (Ed), 1985, Style Structure and Criticism Papers in Literary and Linguistic Stylistics.

೧೫. Freeman D., (Ed), 1986, Essays in Modern Stylistics Methuen London.

೧೬. jacobson R., 1960, Linguistics and Poetics in Style in Language E.D.T.A Sebeok Cambridg.

೨.೨.೨. ಭಾರತೀಯ ವಿದ್ವಾಂಸರು

ಈ ಉಪಶೀರ್ಷಿಕೆಯಲ್ಲಿ ಭಾರತೀಯ ಎಂಬುದು ಹೆಚ್ಚಾಗಿ 'ಸಂಸ್ಕೃತ' ಎಂಬುದಕ್ಕೆ ಪರ್ಯಾಯವಾಗಿ ಬಳಸಲಾಗಿದೆ. ಸಂಸ್ಕೃತ ಸಾಹಿತ್ಯ ಮೀಮಾಂಸೆಯಲ್ಲಿ ಕಾವ್ಯದ ಭಾಷೆಯನ್ನು ಕುರಿತಂತೆ ಸಾಕಷ್ಟು ಚರ್ಚೆ ನಡೆದಿದ್ದು ಕಾವ್ಯದ ವೈಶಿಷ್ಟ್ಯವನ್ನು ಅಲಂಕಾರ ರೀತಿಗಳಿಂದಲೇ ವಿಶ್ಲೇಷಿಸಲಾಗಿದೆ.

ಅಲಂಕಾರ ಬಹುಮಟ್ಟಿಗೆ ವಾಕ್ಯಾಂತರ್ಗತ ಭಾಷೆಯನ್ನು ಅಲಂಕರಿಸುವುದು ಎಂದರೆ ಆಕರ್ಷಣೀಯವಾಗಿ ಮಾಡುವುದು ಎಂಬ ಅರ್ಥದ ಜೊತೆಗೆ ಸಮರ್ಥವನ್ನಾಗಿಸುವುದು ಎಂದೂ ಅರ್ಥವಿದೆ. ಕಾವ್ಯದ ಭಾಷೆಯು ನಿತ್ಯದ ಭಾಷೆಯಿಂದ ಹೇಗೆ ಬೇರೆಯಾಗಬಲ್ಲದೆಂದು ತಾಂತ್ರಿಕವಾಗಿ ವಿವರಿಸುವಲ್ಲಿ ಅಲಂಕಾರ ಪರಿಕಲ್ಪನೆ ನೆರವಾಗುತ್ತದೆಯೇ ಹೊರೆತು ಅನನ್ಯವಾದುದನ್ನು ಹೇಳಲು ಅಲ್ಲ.

ರೀತಿ ಕಾವ್ಯದ ತಿರುಳನ್ನು ಅರಿಯಲು ಪ್ರಯತ್ನಿಸುತ್ತದೆ. ಇದನ್ನು ಕುರಿತು ಹಳಗನ್ನಡ ಕಾಲದಿಂದ ಚರ್ಚೆಗಳು ನಡೆಯುತ್ತಿದ್ದು ವಿಶಿಷ್ಟ ಪದರಚನೆ ರಚನಾ ವಿನ್ಯಾಸಕ್ರಮ ಪದ ಸಂಘಟನೆ ಎಂದು ಹಲವು ಅಲಂಕಾರಿಕರು ವಿವರಿಸಿದ್ದಾರೆ.

ಭರತನ ನಾಟ್ಯಶಾಸ್ತ್ರದಲ್ಲಿ 'ವೈದರ್ಭೀ', 'ಗೌಡೀ' ಎಂಬೆರಡು ಮಾರ್ಗಗಳನ್ನು ವಿವೇಚಿಸಲಾಗಿದೆ. ಇವುಗಳನ್ನು ಸ್ವೀಕರಿಸಿ 'ವೈದರ್ಭೀ ಸಕಲ ಗುಣಗಳನ್ನು ಒಳಗೊಂಡಿದೆ. ಇದರಲ್ಲೆ ಕಾವ್ಯ ಬರೆಯಬೇಕು' ಎನ್ನುತ್ತಾನೆ. ಭಾಮಹ ಇವನ್ನು ಬುದ್ಧಿ ಇಲ್ಲದವರ ಕುತರ್ಕ ಎಂದು ತಿರಸ್ಕರಿಸುತ್ತಾನೆ. ಮುಂದೆ ಬಂದ ವಾಮನ ಈ ಮಾರ್ಗಗಳಿಗೆ ಹೊಸ ಹೆಸರು ಮತ್ತು ಮೆರುಗನ್ನು ಕೊಟ್ಟು ರೀತಿಯೇ ಕಾವ್ಯದ ಆತ್ಮ (ರೀತಿರಾತ್ಮ ಕಾವ್ಯಸ್ಯ) ಎಂದು ವಾದಿಸುತ್ತಾನೆ. ನಂತರ ಬಂದ ರುದ್ರಟ, ಭೋಜ, ಮಮ್ಮಟ ಮುಂತಾದವರು ಈ ಚರ್ಚೆಯನ್ನು ಬೆಳೆಸಿದರೂ ಸಹ, ರೀತಿಯ ಬೆಳವಣಿಗೆ ಮತ್ತು ಅದರ ಮೌಲ್ಯವನ್ನು ವಿವೇಚಿಸಿ ಪೂರ್ಣಗೊಳಿಸಿದ ಕೀರ್ತಿ ಆನಂದವರ್ಧನ ಮತ್ತು ಕುಂತಕರಿಗೆ ಸಲ್ಲುತ್ತದೆ. ವಾಮನ ಹೇಳಿದ ವೈದರ್ಭೀ - ಪಾಂಚಾಲಿ - ಗೌಡೀ ಎಂಬ ಮೂರು ರೀತಿಗಳಿಗೆ 'ಲಾಟೀಯಾ' ಎಂಬ ಹೊಸದೊಂದನ್ನು ಸೇರಿಸಿದ ರುದ್ರಟ ಇದನ್ನು 'ರೌದ್ರರಸ'ಕ್ಕೆ ಬಳಸಬಹುದೆನ್ನುತ್ತಾನೆ. ಈ ನಾಲ್ಕರ ಜೊತೆಗೆ ಭೋಜ 'ಆವಂತಿಕಾ', 'ಮಾಗಧಿ' ಎಂಬುವುಗನ್ನು ಸೇರಿಸಿದ್ದಾನೆ. ಈ ರೀತಿ 'ಮಾರ್ಗ'ದ ಚರ್ಚೆಯು ಮೊದಲು ಭೌಗೋಳಿಕ ಪರಧಿಯನ್ನು ಅವಲಂಬಿಸಿದ್ದು ನಂತರ ಆನಂದವರ್ಧನನ ಧ್ವನಿ ಸಿದ್ಧಾಂತದ ರೀತಿ ತತ್ವದ ವಿವೇಚನೆಯಲ್ಲಿ ವಿಶಿಷ್ಟ ಮಾರ್ಗವನ್ನು ಅವಲಂಬಿಸಿತು. ಇದರ ಪ್ರಕಾರ ರಸಧ್ವನಿಯೇ (ಕಾವ್ಯಸ್ಯಾತ್ಮ ಧ್ವನಿ) ಕಾವ್ಯದ ಆತ್ಮ ಸರ್ವಸ್ವ ಉಳಿದ ಕಾವ್ಯಾಂಶಗಳೆಲ್ಲ ಇದಕ್ಕೆ ಅಧೀನ ಎಂದು ಹೇಳಿದ್ದಾನೆ. ರೀತಿ ಗುಣಗಳನ್ನು ಈತ ವಾಚ್ಯವಾಚಕ ಚಾರುತ್ವಹೇತು ಎಂದಿದ್ದಾನೆ. ಗುಣಗಳು ಅಂಗಿಗೆ ಅಂದರೆ ರಸಕ್ಕೆ ಸಂಬಂಧಿಸಿದವು. ಅಲಂಕಾರಗಳು ಅಂಗಕ್ಕೆ ಸಂಬಂಧಿಸಿದವು. ಅಂಗಿಯಿಂದಲೇ ಅಂಗಕ್ಕೆ ಬೆಲೆ, ಹೆಣಕ್ಕೆ ಅಲಂಕಾರ ಶೋಭಿಸುವುದಿಲ್ಲ. ಮೊದಲು ಜೀವವಿದ್ದರೆ ನಂತರ ಅಲಂಕಾರದ ಮಾತು. ಆನಂದವರ್ಧನ ಓಜಸ್ಸು, ಪ್ರಸಾದ, ಮಾಧುರ್ಯ, ಈ ಮೂರು ಗುಣಗಳನ್ನು ಮಾತ್ರ ಒಪ್ಪಿಕೊಂಡಿದ್ದಾನೆ. ಹಿಂದಿನವರು ಹೇಳಿದ ೧೦ ಗುಣಗಳಲ್ಲಿ ಉಕ್ತವಾದ ಎಲ್ಲಾ ಅಂಶಗಳನ್ನು ಈ ಮೂರರಲ್ಲಿ ಅಡಕಗೊಳಿಸಬಹುದೆಂಬ ದೃಷ್ಟಿ ಈತನದು. ಗುಣಗಳಿಂದ ರೀತಿ ಸಿದ್ಧವಾಗುತ್ತದೆ. ಇದೇ ಕಾವ್ಯಾನುಭವಕ್ಕೆ ಕಾರಣ ಎಂದು ರೀತಿ ಸಿದ್ಧಾಂತ ಹೇಳಿದರೆ ಗುಣಗಳು ಮುಖ್ಯವಾಗಿ ರಸಕ್ಕೆ ಸಂಬಂಧಿಸಿದವು. ವಿಶಿಷ್ಟ ಪದ ರಚನೆಗೆ ಅವುಗಳ ಸಂಬಂಧ ಗೌಣವಾದದ್ದು. ಶಬ್ದ ರಚನೆ ಮುಖ್ಯವೇ ಆದರೂ ಅದೇ ಕೊನೆಯಲ್ಲ, ಕೊನೆಮುಟ್ಟಲು ಬೇಕಾದ ಒಂದು ಸಾಧನ ಎಂದು ಧ್ವನಿ

ಸಿದ್ಧಾಂತ ಹೇಳುತ್ತದೆ. ಆನಂದವರ್ಧನ ಇದನ್ನು 'ರೀತಿ' ಎನ್ನದೇ 'ಸಂಘಟನಾ' ಎಂದಿದ್ದಾನೆ. ರೀತಿ ಸಿದ್ಧಾಂತದ ಬೆಳವಣಿಗೆಯಲ್ಲಿ ಕುಂತಕನ ಕೊಡುಗೆ ವಿಶಿಷ್ಟವಾದುದು. 'ವಕ್ರೋಕ್ತಿ' ಎನ್ನುವ ಮಾತನ್ನು ಮುಖ್ಯವಾಗಿಟ್ಟುಕೊಂಡು ಧ್ವನಿ ರಸ ಸಿದ್ಧಾಂತಗಳ ಉತ್ತಮ ತತ್ವಗಳನ್ನು ಅಂಗೀಕರಿಸಿ ವಕ್ರೋಕ್ತಿ ತತ್ವದಲ್ಲಿ ಅಳವಡಿಸಿದ 'ಕರ್ವೇ, ಕರ್ಮ, ಕಾವ್ಯಂ' ಅಂದರೆ 'ಕಾವ್ಯ ಕವಿಕರ್ಮ' ಎಂಬುದು ಈತನ ಪ್ರಸಿದ್ಧ ಸೂತ್ರ. ಕವಿಯ ಕಾಲದಿಂದ, ಅವನ ಅನುಭವದಿಂದ, ಮನೋಧರ್ಮದಿಂದ ಕಾವ್ಯ ರೂಪುಗೊಳ್ಳುತ್ತದೆ. ಇದನ್ನೇ ಆತನು 'ವಕ್ರಕವಿ ವ್ಯಾಪಾರಶಾಲಿನಿ' ಎಂದು ಕರೆಯುತ್ತಾನೆ. ಅಂದರೆ ಕವಿಯ ಮನೋವಕ್ರತೆಯಿಂದ ಅಲಂಕಾರಗಳು ಹುಟ್ಟುತ್ತವೆ, ಎಂದ ಮೇಲೆ ರೀತಿಯೂ ಅಷ್ಟೇ. ಈತ ದಂಡಿಯಂತೆ 'ಮಾರ್ಗ' ಎಂದು ಕರೆಯುತ್ತಾನೆ. 'ರೀತಿ'ಯನ್ನು ದೇಶವಾಚಕವಾನುಸಾರಿಯಾಗಿ ಇವುಗಳ ಸಂಖ್ಯೆಯನ್ನು ಇಷ್ಟೇ ಎಂದು ನಿಗದಿ ಗೊಳಿಸುವುದಾಗಲಿ ಸಾಧ್ಯವಿಲ್ಲ. ಏಕೆಂದರೆ ಕಾವ್ಯಮಾರ್ಗ ಕವಿಸ್ವಭಾವಾನುಸಾರಿಯಾಗಿರುತ್ತದೆ. ಎಷ್ಟು ಜನ ಕವಿಗಳಿರುತ್ತಾರೊ ಅಷ್ಟೂ ಮಾರ್ಗಗಳಿರುತ್ತವೆ. ಆದರೆ ಅಧ್ಯಯನ ದೃಷ್ಟಿಯಿಂದ ಕೆಲವು ಕಾವ್ಯಮಾರ್ಗಗಳನ್ನು ಗುರುತಿಸಬಹುದು ಎನ್ನುತ್ತಾನೆ ಕುಂತಕ. ಅಲ್ಲದೇ ಮೂರು ಮಾರ್ಗಗಳನ್ನು ಹೇಳುತ್ತಾನೆ. ಅವೆಂದರೆ ೧.ಸುಕುಮಾರ ೨.ವಿಚಿತ್ರ ೩.ಮಾಧ್ಯಮ ಮಾರ್ಗ ಇವು ಕವಿ ಮನೋಧರ್ಮದಿಂದ ಸಿದ್ಧವಾಗವುವು. ಕವಿ ಗಳಲ್ಲಿ ಕೆಲವರು ಸುಕುಮಾರ ಮನೋಧರ್ಮದವರು, ಕೆಲವರು ವಿಚಿತ್ರ ಮತ್ತೆ ಕೆಲವರದು ಈ ಎರಡರ ಮಧ್ಯಮ. ಹೀಗೆ ಒಂದು ಸಾಮಾನ್ಯ ವಿಭಾಗ ಕ್ರಮವನ್ನು ಪ್ರಸಾದ, ಲಾವಣ್ಯ, ಅಭಿಜಾತ ಎಂಬುದಾಗಿ ತಿಳಿಸಿ ಇವು ಕೂಡ ಮಾರ್ಗವನ್ನು ಅನುಸರಿಸುತ್ತೇವೆ ಎಂದಿದ್ದಾನೆ. ಹೀಗೆ ಅತ್ಯಂತ ಕರಾರುವಕ್ಕಾದ ಸಿದ್ಧಾಂತದ ಮೂಲಕ ರೀತಿ ಮಾರ್ಗದ ವಿವೇಚನೆ ನಡೆಸುವ ಕುಂತಕ ದಶಾಚಾರಗಳನ್ನು ಗಮನಿಸಿ ಹೇಳುವ ರೀತಿಗಳು ಅಸಮಂಜಸ. ಕಾವ್ಯ ಕವಿಯ ಪ್ರತಿಭಾಜನ್ಯವಾದುದು, ಮನೋವ್ಯಾಪಾರದಿಂದ ಕೂಡಿದುದು ಎನ್ನುವ ಕುಂತಕನಲ್ಲಿ ಆಧುನಿಕ ಶೈಲಿಶಾಸ್ತ್ರದ ಸೂಕ್ಷ್ಮದೃಷ್ಟಿ ಕಂಡುಬರುತ್ತದೆ. ಕವಿಯ ಶೀಲದಂತೆ ಶೈಲಿ (ಶೀಲಸ್ಯಶೈಲಿ) ರೀತಿ ಕವಿಸ್ವಭಾವಾನು ಸಾರಿಯಾದುದು. 'ಕವಿಸ್ವಭಾವೇನ ಅನಂತಭೇದ ಭಿನ್ನಧ್ವನಿ ಅನಿವಾರ್ಯ' ಎನ್ನುವ ಮಾತುಗಳು ಇಂಗ್ಲೀಷ್‌ನ Style ಎಂಬುದಕ್ಕೆ ಸಂವಾದಿಯಾಗಿ ಪ್ರತಿಸ್ಪಂದಿಸುತ್ತವೆ.

ವಿದ್ವಾಂಸರ ಶೈಲಿಯ ಬಗೆಗಿನ ವ್ಯಾಖ್ಯಾನಗಳು

"ನಾನಾ ಕಾರಣಗಳು ಒಟ್ಟಿಗೆ ಸೇರಿ ಸಹಕರಿಸಿ ತಮ್ಮ ತಮ್ಮ ಪ್ರಮಾಣಗಳಲ್ಲಿ ಪ್ರಭಾವವನ್ನು ಬೀರುವುದರ ಫಲವಾಗಿ ಶೈಲಿ ಉದ್ಭವಿಸುತ್ತದೆ. ಅದನ್ನು ಹೀಗೆ ಸ್ಥೂಲವಾಗಿ ಮೂರು ಗುಂಪು ಮಾಡಬಹುದು. ಜನಾಂಗ, ತಲೆಮಾರು, ವ್ಯಕ್ತಿಬಲ, ಶೈಲಿಯನ್ನು ಸೃಷ್ಟಿಸಬಲ್ಲ ಎಲ್ಲ ದ್ರವ್ಯಗಳನ್ನು ಈ ಮೂರು ವಿಭಾಗಗಳಲ್ಲಿ ಅಡಕ ಮಾಡುವುದು ಕಷ್ಟವಲ್ಲ. ಕವಿಯಂತೆ ಶೈಲಿಯಿಂದ ಕವಿ.... ಕವಿಯೇ ಅವನ ಶೈಲಿಯ ರಹಸ್ಯ".
- *ಎಸ್.ವಿ. ರಂಗಣ್ಣ*

* "ಭಾಷಿಕನೊಬ್ಬ ಸಾಮುದಾಯಿಕವಾದ ಒತ್ತಡಗಳಿಲ್ಲದಿದ್ದರೂ ತನ್ನ ಭಾಷಾ ಬಳಕೆಯಲ್ಲಿ ಮಾಡಿಕೊಳ್ಳುವ ನಿರ್ದಿಷ್ಟವಾದ ನಿಯಮಿತವಾದ ಪಲ್ಲಟಗಳೇ ಶೈಲಿ" - *ಡಾ. ಕೆ.ವಿ. ನಾರಾಯಣ*

* "ಶೈಲಿಯೆಂದರೆ ಕೇವಲ ಶಬ್ದವಲ್ಲ. ಅಲಂಕಾರವಲ್ಲ, ಕವಿ ಸಮಯವಲ್ಲ, ಗುಣವಲ್ಲ, ರೀತಿಯಲ್ಲ ಬಿಡಿಯಲ್ಲಿ ಯಾವುದೂ ಅಲ್ಲ, ಹಿಡಿಯಲ್ಲಿ ಎಲ್ಲವೂ ಅಹುದು". - *ಡಾ. ಆರ್.ಸಿ. ಹಿರೇಮಠ*

ಗ್ರಂಥಗಳು

೧. **ಶೈಲಿಶಾಸ್ತ್ರ** - ಡಾ. ಕೆ.ವಿ. ನಾರಾಯಣ, ೧೯೯೦

೨. **ಗದ್ಯಶೈಲಿ** - ಡಾ. ದೇ.ಜೆ.ಗೌ., ೧೯೭೮

೩. **ಶೈಲಿ** ೧, ೨, ೩ - ಎಸ್.ವಿ. ರಂಗಣ್ಣ, ೧೯೫೮

ಶೈಲಿಶಾಸ್ತ್ರದ ಲೇಖನಗಳು

೧. ಕೃಷ್ಣ ಪರಮೇಶ್ವರಭಟ್ಟ, ೧೯೭೪, ಕಾವ್ಯ ಭಾಷೆ - ಭಾಷಾ ವೈಜ್ಞಾನಿಕ ವಿವೇಚನೆ ಸಾಧನೆ.

೨. ತಿರುಮಲೇಶ್ ಕೆ.ವಿ., ೧೯೮೬, ಸಾಹಿತ್ಯದಲ್ಲಿ ಶೈಲಿ : ದಶವಾರ್ಷಿಕ ಸಾಹಿತ್ಯ ವಿಮರ್ಶೆ (ಸಂ) ಎಲ್.ಎಸ್. ಶೇಷಗಿರಿರಾವ್ ಇತರರು, ಬೆಂಗಳೂರು.

೩. ಶಂಕರ ಡಿ.ಎ., ೧೯೮೦, ಸಾಹಿತ್ಯದಲ್ಲಿ ಶೈಲಿ : ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ ಸಂ. ವಿ.ಕೃ. ಗೋಕಾಕ್, ಐ.ಬಿ.ಎಚ್. ಬೆಂಗಳೂರು.

೪. ಶಿವರುದ್ರಪ್ಪ ಜಿ.ಎಸ್., ೧೯೮೩, ರೀತಿಯ ಸ್ವರೂಪ ಶೈಲಿಯ ಸಮಸ್ಯೆ; ಕಾವ್ಯಾರ್ಥ ಚಿಂತನ, ಶಾರದಾ ಪ್ರಕಾಶನ, ಬೆಂಗಳೂರು.

೫. ಕೆಂಪೇಗೌಡ ಕೆ., ೧೯೯೨, ಶೈಲಿ ವಿಜ್ಞಾನ : ಮಾನ : ಹಾ.ಮಾ.ನಾ. ಅಭಿನಂದನಾ ಗ್ರಂಥ (ಸಂ) ಎಸ್.ಎಲ್. ಭೈರಪ್ಪ ಇತರರು ಮೈಸೂರು.

೬. ತಿರುಮಲೇಶ್ ಕೆ.ವಿ., ೨೦೦೬, ಶೈಲಿಶಾಸ್ತ್ರದ ರೂಪುರೇಷಗಳು : ನಮ್ಮ ಕನ್ನಡ, ಅಭಿವನ ಪ್ರಕಾಶನ, ಬೆಂಗಳೂರು.

೭. ಕೃಷ್ಣ ಪರಮೇಶ್ವರಭಟ್ಟ, ೧೯೮೩, ಹರಿವ ನೀರಿದು : ಒಂದು ಭಾಷಿಕ ವಿವೇಚನೆ ಅಂಕಣ.

೮. ತಿರಮಲೇಶ ಕೆ.ವಿ., ೧೯೮೭, ಬೇಂದ್ರಯವರ ಕಾವ್ಯಶೈಲಿ, ಕ್ರೈಸ್ಟ್, ಕಾಲೇಜ್. ಕನ್ನಡ ಸಂಘ.

೯. ಎಸ್.ಎಸ್. ಅಂಗಡಿ, ೨೦೦೭, ಚಂಪಾ ನಾಟಕ ಭಾಷೆ : ಸಂವಹನ, ಮೈಸೂರು.

ಕನ್ನಡದ ಸಂದರ್ಭದಲ್ಲಿ ಶೈಲಿಯನ್ನು ಕುರಿತು ನಡೆದಿರುವ ಅಧ್ಯಯನಗಳು ಬಹಳ ವಿರಳ ಅದೂ ಕೂಡ ಆದುದರಲ್ಲಿ ಹಿಡಿಯಾಗಿ ಶೈಲಿಯ ಕುರಿತ ವಿವೇಚನೆಯ ಬದಲಿಗೆ ಬಿಡಿಯಾಗಿ ನಡೆದಿದೆ ಅಂತಹ ಗ್ರಂಥಗಳು.

೧. ಸಂಗೀತ ಶೈಲಿ ಶಾಸ್ತ್ರ : ಲಲಿತ ಕಲೆಗಳ ನಿಕಾಯದಲ್ಲಿನ ಡಿಲಿಟ್ ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ.

೨. ಕುಸುಮಾಕರ ದೇವರಗೆಣ್ಣೂರ ನಾಲ್ಕನೆಯ ಆಯಾಮ : ಒಂದು ಅಧ್ಯಾಯನ (ಹಂಪಿಯ ಕನ್ನಡ

ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ) ಸಂಶೋಧಕಿ ಅನುಪಮಾ ಎಸ್. ಉತ್ನಾಳ.

೩. ಭರತೇಶ ವೈಭವದ ಛಂದಸ್ಸು ಮತ್ತು ಶೈಲಿ (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ) ಸಂಶೋಧಕಿ ದೀಪಾ ಕೆ.ಎನ್.

೪. ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ ಒಂದು ಸಾಹಿತ್ಯಕ ಅಧ್ಯಯನ (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ರಾಯರ ಮೇಘಾ ಭೀಮರಾವ್.

೫. ಎಲ್. ಬಸವರಾಜು ಅವರು ಸಂಪಾದಿಸಿರುವ "ಶಿವದಾಸ ಗೀತಾಂಜಲಿ : ಒಂದು ಅಧ್ಯಯನ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸದಾರಪಡಿಸಿದ ಎಂಫಿಲ್ ಸಂಪ್ರಬಂಧ) ಸಂಶೋಧಕರು ಶರಣಬಸವ ಜಿ.ಎಂ.

೬. "ಮರಳಿ ಮಣ್ಣಿಗೆ ಸಾಂಸ್ಕೃತಿಕ ಅಧ್ಯಯನ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ಆರ್. ರಾಮಮೂರ್ತಿ.

೭. "ಕುವೆಂಪುರವರ ನಾಲ್ಕು ನಾಟಕಗಳಲ್ಲಿ ಭಾಷೆ ಮತ್ತು ಮಾನವೀಯ ಮೌಲ್ಯ ಚಿಂತನೆ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ಮಲ್ಲಿಕಾರ್ಜುನಯ್ಯ.

೮. "ಬೇಂದ್ರೆ ಅವರ ನಾಟಕಗಳ ಭಾಷೆ : ಒಂದು ಅಧ್ಯಯನ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕಿ ಲಲಿತಾಬಾಯಿ ಹೆಚ್.

೯. "ಮಾಸ್ತಿಯವರ ಕೆಲವು ಕಥೆಗಳಲ್ಲಿ ಭಾಷೆ ಮತ್ತು ಸಾಮಾಜಿಕ ಚಿತ್ರಣ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ಮಮತ ಎಲ್. ಆಲಮೇಲು.

೧೦. "ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಭಾಷೆ : ಒಂದು ಅಧ್ಯಯನ" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ಮಂಜುಳಾ ಎಂ.

೧೧. "ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳಲ್ಲಿ ಭಾಷೆ ಮತ್ತು ಸಾಂಸ್ಕೃತಿಕ ಒಳನೋಟಗಳು" (ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ), ಸಂಶೋಧಕರು ಅಂಬರೀಶ್.

ಅಧ್ಯಾಯ ಮೂರು

ಕಾದಂಬರಿಗಳ ವಸ್ತು, ಭಾಷೆ ಮತ್ತು ತಂತ್ರಗಳ ಹಿನ್ನೆಲೆಯಲ್ಲಿ ಭಾಷಾ ಬಳಕೆಯಲ್ಲಿನ ಸಾದೃಶ್ಯತೆ ಮತ್ತು ವೈದೃಶ್ಯತೆ

೩.೧. ವಸ್ತು

೩.೨. ಭಾಷೆ ಮತ್ತು ತಂತ್ರ

೩.೨.೧. ಉಂಬಳಿಗಮಾನ್ಯ ಜೀತಪದ್ಧತಿ ಮತ್ತು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ

೩.೨.೨. ಜಾನಪದೀಯ ಅಂಶಗಳು

೩.೨.೩. ಲೈಂಗಿಕ ಅಥವಾ ಅನೈತಿಕ ಸಂಬಂಧಗಳು

೩.೨.೪. ಗ್ರಾಮೀಣ ನ್ಯಾಯ ವ್ಯವಸ್ಥೆ

ಅಧ್ಯಾಯ ೩

ಕಾದಂಬರಿಗಳ ವಸ್ತು, ಭಾಷೆ ಮತ್ತು ತಂತ್ರಗಳ ಹಿನ್ನೆಲೆಯಲ್ಲಿ ಭಾಷಾ ಬಳಕೆಯಲ್ಲಿನ ಸಾದೃಶ್ಯತೆ ಮತ್ತು ವೈದೃಶ್ಯತೆ

ಮಾನವ ಸಂಘಜೀವಿ. ಸಂಘದ ಮೂಲಕ ತನ್ನ ಬಾಳಿನ ಸಮಗ್ರತೆ ಹಾಗೂ ವೈವಿಧ್ಯತೆಯನ್ನು ಪಡೆದುಕೊಳ್ಳುವನು. ಆತ ಎಂದಿಗೂ ಒಂಟಿಯಾಗಿ ಬಾಳಿ ಬದುಕಿ ಉಳಿಯಲಾರ. ತನ್ನ ಅನಿಸಿಕೆ, ಚಿಂತನೆ ಅಭಿಪ್ರಾಯ. ಅನುಭವ ಮತ್ತು ನೋವು-ನಲಿವುಗಳನ್ನು ಮಾತಿನ ಮೂಲಕ ಇತರರೊಡನೆ ಹಂಚಿಕೊಂಡು ಅವರೊಡನೆ ಸಂಬಂಧವನ್ನು ಬೆಳೆಸಿಕೊಳ್ಳುವನು. ಈ ಸಂವಹನದಲ್ಲಿ ವ್ಯಕ್ತಿಯ ಮತ್ತು ಸಂವಹನದ ಪಾತ್ರ ಅತಿಮುಖ್ಯ ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ಸಮಾಜ ನಿಯಂತ್ರಿಸುತ್ತಿರುತ್ತದೆ. ಇದಕ್ಕೆ ಅವನಾಡುವ ಭಾಷೆಯೂ ಹೊರತಲ್ಲ. ಆದ್ದರಿಂದಲೇ ವ್ಯಕ್ತಿ ತನ್ನ ಎಲ್ಲಾ ಕಾರ್ಯಗಳನ್ನು ಸಮಾಜದ ಚೌಕಟ್ಟಿನೊಳಗೆ ಇರುವಂತೆ ಜವಾಬ್ದಾರಿವಹಿಸುವನು. ಅಂದಮೇಲೆ ಸಮಾಜದ ಚೌಕಟ್ಟಿನಿಂದಲೇ ವ್ಯಕ್ತಿಯ ವ್ಯಕ್ತಿತ್ವ ರೂಪಿತವಾಗುವುದು ಎಂದ ಹಾಗಾಯಿತು. ಈ ಕಾರಣದಿಂದಲೇ ಆತನು ರೂಢಿಸಿಕೊಂಡಿರುವ ಪರಂಪರಾನುಗತ ಬದುಕಿನ ವಿನ್ಯಾಸ ಮತ್ತು ಆ ಸಂದರ್ಭದಲ್ಲಿ ಅವನ ಮನದಲ್ಲಾಗುವ ಚಿಂತನೆಯನ್ನು ಸಮಾಜದಿಂದ ಬೇರೆ ಮಾಡಿ ಸ್ವತಂತ್ರ ಅಸ್ತಿತ್ವವನ್ನು ಕಲ್ಪಿಸುವುದು ಅಸಾಧ್ಯ.

ಭಾಷೆ ಮಾನವನ ಸಾಧನಗಳಲ್ಲಿ ಅದ್ಭುತವಾದುದು. ಮನುಷ್ಯನ ಬೌದ್ಧಿಕ ವರ್ತನೆ ಹಾಗೂ ಮೂಲ ಭೂತಾಂಶಗಳಲ್ಲಿ ವಿಶಿಷ್ಟವಾದುದು. ಮನುಷ್ಯ ಇತರ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಕೂಡ ಈ ಹಿನ್ನೆಲೆಯಿಂದಲೇ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಭಾಷಾಸಮುದಾಯದಲ್ಲೇ ಹುಟ್ಟಿ ಜೀವನವಿಡೀ ಆ ಭಾಷೆಯನ್ನು ಬಳಸಿಕೊಳ್ಳುವನು. ಇದು ವ್ಯಕ್ತಿಯ ಅಭಿವ್ಯಕ್ತಿ ಮಾಧ್ಯಮವಷ್ಟೇ ಅಲ್ಲ. ಒಂದು

ಸಮಾಜದ ಸಂವಹನ ಸಾಧನ. ಈ ರೀತಿಯ ಹಲವು ವ್ಯಕ್ತಿಗಳ ಸಾಂಘಿಕ ರೂಪವೇ ಸಮಷ್ಟಿ: ಅದೇ ಸಮಾಜ. ಅದರಲ್ಲಿ ಪ್ರತಿಯೊಬ್ಬನು ಜವಾಬ್ದಾರಿಯುತ ಸದಸ್ಯ. ಆತ ವ್ಯವಹರಿಸುವ ಸ್ವಭಾಷಾ ಮೊತ್ತವೇ ಆ ಸಮುದಾಯದ ಸಂವಹನ ಸಾಧನ. ಅಂದರೆ ಆ ಸಮಾಜದ ಭಾಷೆ. ಇಲ್ಲಿಗೆ ಭಾಷೆ ಒಂದು ಸಮಾಜದ ಪ್ರತಿಬಿಂಬವಾಗಿಯೂ ಕಾರ್ಯನಿರ್ವಹಿಸುತ್ತದೆ ಎಂದಾಯಿತು. \ಸಮಾಜವೆಂದ ಮೇಲೆ ಹಲವು ಜಾತಿ, ಧರ್ಮ, ವರ್ಗ ಹಾಗೂ ಇವುಗಳೊಳಗೆ ಇರುವ ತಾರತಮ್ಯ ಸಹಜವಾದುದು. ಜನರ ಆಚಾರ-ಸಂಪ್ರದಾಯ ಸಂಸ್ಕೃತಿ, ನಡೆ-ನುಡಿಗಳಲ್ಲಿ ಭಿನ್ನತೆ ಇರುವಂತೆ ಇವರಾಡುವ ಭಾಷೆಯಲ್ಲಿಯೂ ವೈವಿಧ್ಯತೆ-ತಾರತಮ್ಯತೆಗಳು ಕಂಡುಬರುತ್ತವೆ. ಭಾಷೆಯ ತಾರತಮ್ಯವನ್ನು ಕುರಿತು ಹೇಳುವುದಾದರೆ: ಮೇಲ್ವರ್ಗದವರ ಭಾಷೆ; ಆಳ್ವಿಕೆಯ, ಪ್ರಭುತ್ವದ, ಯಾಜಮಾನ್ಯದ, ಹೊಟ್ಟೆ ತುಂಬಿದ ಭಾಷೆಯಿಂದ ಕೂಡಿದುದಾದರೆ, ಕೆಳವರ್ಗದವರ ಭಾಷೆಯ ಸ್ವರೂಪ ಇದಕ್ಕೆ ವಿರುದ್ಧ ನೆಲೆಯದು. ಅಂದರೆ ಕೆಳವರ್ಗದವರ ಭಾಷೆ ಹಸುವಿನ ಆಳಿಸಿಕೊಳ್ಳುವ, ದೌರ್ಜನ್ಯಕ್ಕೆ ಒಳಗಾಗುವ, ಪ್ರತಿರೋಧದ ನೆಲೆಯ ಬಂಡಾಯದ ನೆಲೆಯಿಂದ ಕೂಡಿರುತ್ತದೆ. ಹೀಗಿದ್ದಾಗ ಒಬ್ಬ ಸೃಜನಶೀಲ ಲೇಖಕರಿಗೆ ತಾವು ಸೃಷ್ಟಿಸುವ ಸಾಹಿತ್ಯವನ್ನು ಸಾಮಾಜಿಕರಣಗೊಳಿಸುವುದು ಹೇಗೆ? ಸಾಹಿತ್ಯ ಎಲ್ಲ ವರ್ಗದ ಸ್ವತ್ತಾಗಬೇಕಾದರೆ ಏನು ಮಾಡಬೇಕು? ಸಾಹಿತ್ಯಕ್ಕಾಗಿ ಸಾಮಾಜಿಕರಲ್ಲ, ಸಾಮಾಜಿಕರಿಗಾಗಿ ಸಾಹಿತ್ಯವಾಗಬೇಕು. ಹೀಗೆ ರಚನೆಯಾಗುವ ಸಾಹಿತ್ಯದ ಭಾಷೆ ಯಾವುದು ಮತ್ತು ಹೇಗಿರಬೇಕು? ಎಂಬಂತಹ ಹಲವು ಸಮಸ್ಯೆಗಳು ಎದುರಾಗುತ್ತವೆ. ಕೆಳವರ್ಗದ ಲೇಖಕರು ಮೇಲ್ವರ್ಗದವರ ಭಾಷೆಯನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿಸಿಕೊಂಡಾಗ ಎದುರಾಗುವ ಸಮಸ್ಯೆಯೆಂದರೆ, ಬಳಸಿಕೊಂಡಿರುವ ಭಾಷೆಯ ಜೊತೆಗೆ ಆ ಭಾಷೆಯ ಮೌಲ್ಯಗಳೂ-ನಂಬಿಕೆಗಳೂ ಬರುತ್ತವಲ್ಲದೆ ಇಡೀ ಸಂಸ್ಕೃತಿಯೇ ಆ ಭಾಷೆಯೊಳಗೆ ಬಂದುಬಿಡುತ್ತವೆ. ಅಲ್ಲದೆ ಇಂತಹ ಭಾಷೆಯಿಂದ ಕೆಳವರ್ಗದ ಸಂಸ್ಕೃತಿಯ ಮೌಲ್ಯಗಳನ್ನು ನಿರೀಕ್ಷಿಸುವುದು ಕಷ್ಟಸಾಧ್ಯ. ಆದ್ದರಿಂದ ಸೃಜನಶೀಲ ಬರಹಗಾರರು ತಾವು ವಾಸಿಸುವ ಸಾಮಾಜಿಕ ಪರಿಸರದ ಮಣ್ಣಿನ ವಾಸನೆಯುಳ್ಳ ಕನ್ನಡವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಳ್ಳುವುದು ಸೂಕ್ತ. ಹೀಗೆ ದೇಸಿ ಭಾಷೆಯನ್ನು ಬಳಸುವುದರಿಂದ ತಮ್ಮ ಜನರ ಸಾಮಾಜಿಕ ಮೌಲ್ಯಗಳನ್ನು-ಸಮಸ್ಯೆಗಳನ್ನು ತಮ್ಮದೇ ಆದ ಭಾಷೆಯಲ್ಲಿ ಅಭಿವ್ಯಕ್ತಿಸಲು ಸಾಧ್ಯ.

ಸೃಜನಶೀಲ ಲೇಖಕರು ಬರವಣಿಗೆಗೆ ಪ್ರಾದೇಶಿಕ ಭಾಷೆಯನ್ನು ಆಯ್ದುಕೊಂಡಾಗ ಕ್ಲಿಷ್ಟತೆಯಿಂದಾಗಿ ಎಲ್ಲರಿಗೂ ಅರ್ಥವಾಗದೇ ಇರಬಹುದು. ಮೊದಮೊದಲು ಇಂತಹ ಬರವಣಿಗೆಗಳಿಗೆ ತೀವ್ರವಾದ ವಿರೋಧಗಳು ತಿರಸ್ಕಾರಗಳು ಕಂಡುಬಂದದ್ದು ಕೂಡ, ಆದರೆ ಇತ್ತೀಚಿನ ದಿನಗಳಲ್ಲಿ ಸಂವಹನದ ತೀವ್ರತೆಯಿಂದ ಸರ್ವಜನಮಾನ್ಯತೆಯನ್ನು, ಪಡೆಯುತ್ತಿರುವುದು ಸ್ವಾಗತಾರ್ಹ ವಿಷಯವಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕಾದಂಬರಿಗಳಲ್ಲಿನ ವಸ್ತು, ಭಾಷೆ ಮತ್ತು ತಂತ್ರಗಳ ಜೊತೆಗೆ ಕಾದಂಬರಿಗಳಲ್ಲಿನ ಸಾದೃಶ್ಯತೆ ಮತ್ತು ವೈದೃಶ್ಯತೆಯ ಅಂಶಗಳನ್ನು ಕುರಿತು ಚರ್ಚಿಸಲಾಗುವುದು. ಇದಕ್ಕಾಗಿ ಕುಂ. ವೀರಭದ್ರಪ್ಪನವರ 'ಅರಮನೆ', ಮಿರ್ಜಿ ಅಣ್ಣಾರಾಯರ 'ನಿಸರ್ಗ', ದೇವನೂರು ಮಹಾದೇವರ 'ಕುಸುಮ

ಬಾಲೆ', ರಾವ್‌ಬಹದ್ದೂರರ 'ಗ್ರಾಮಾಯಣ', ಚದುರಂಗರ 'ವೈಶಾಖ', ಗೀತಾನಾಗಭೂಷಣರವರ 'ಬದುಕು', ವೈದೇಹಿಯವರ 'ಅಸ್ಪೃಶ್ಯರು' ಎಂಬ ಕಾದಂಬರಿಗಳನ್ನು ಅನುಲಕ್ಷಿಸಲಾಗಿದೆ.

ಈ ಎಲ್ಲಾ ಸೃಜನಶೀಲ ಲೇಖಕರು ದಲಿತ-ಬಂಡಾಯದ ಲೇಖಕರಾಗಿದ್ದು, ಕಾದಂಬರಿಗಳ ಅಭಿವ್ಯಕ್ತಿಗಾಗಿ ಅವರು ವಾಸಿಸುವ ಮತ್ತು ತಮ್ಮ ಸುತ್ತಮುತ್ತಲಿನ ಪ್ರಾದೇಶಿಕ ಭಾಷೆಯನ್ನೇ ಮಾಧ್ಯಮವಾಗಿಸಿಕೊಂಡಿದ್ದಾರೆ. ಹಾಗೆಯೇ ದಲಿತ-ಬಂಡಾಯದ ಆಶಯಕ್ಕನುಗುಣವಾಗಿ ಕಾದಂಬರಿಗಳಲ್ಲಿ ಬಳಕೆಯಾಗಿರುವ ವಸ್ತು ಮತ್ತು ಈ ವಸ್ತುವಿನ ಅಭಿವ್ಯಕ್ತಿಗಾಗಿ ಬಳಸಿಕೊಂಡಿರುವ ಭಾಷೆ ಹಾಗೂ ಅಭಿವ್ಯಕ್ತಿಯಲ್ಲಿನ ವಿಶಿಷ್ಟತೆಗಳನ್ನು ತಂತ್ರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೩.೧ ವಸ್ತು

ಇತಿಹಾಸದ ಪುಟಗಳನ್ನು ನೋಡಿದಾಗ, ಅನಾದಿ ಕಾಲದಿಂದಲೂ ಸಾಮಾಜಿಕ ಸಂರಚನೆ ತಾರತಮ್ಯದಿಂದ ಕೂಡಿರುವುದನ್ನು ನೋಡಬಹುದು. ಉಳ್ಳವರು-ಇಲ್ಲದವರನ್ನು, ಮೇಲ್ವರ್ಗದವರು-ಕೆಳವರ್ಗದವರನ್ನು, ಅಧಿಕಾರಿಗಳು-ಅಧಿಕಾರಹೀನರನ್ನು, ಪುರುಷರು-ಸ್ತ್ರೀಯರನ್ನು, ಶಿಕ್ಷಿತರು-ಅಶಿಕ್ಷಿತರನ್ನು, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತುಳಿಯುತ್ತ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡಿರುವುದಲ್ಲದೆ, ಅವರೂ ಮನುಷ್ಯರು ಎಂಬ ಮಾನವೀಯತೆಯನ್ನು ಮರೆತು ಅವರನ್ನು ಅಮಾನುಷವಾಗಿ ನಡೆಸಿಕೊಂಡಿರುವುದು ಗೋಚರಿಸುತ್ತದೆ. ಹೀಗೆ ಮೇಲ್ವರ್ಗದವರ ದೌರ್ಜನ್ಯ ಮತ್ತು ಕೆಳವರ್ಗದವರ ಅಸಹಾಯಕತೆ, ಸುಲಿಗೆಗೆ ಮತ್ತು ಶೋಷಣೆಗೆ ಕಾರಣವಾಯಿತು ಎಂಬುದನ್ನೇ ಮುಖ್ಯವಸ್ತುವನ್ನಾಗಿಸಿಕೊಂಡು ದಲಿತ-ಬಂಡಾಯ ಲೇಖಕರು ಆಕ್ರೋಶ, ಸಿಟ್ಟು, ಪ್ರತಿಭಟನೆಯ ನೆಲೆಯಲ್ಲಿ ತಮ್ಮ ಆಶಯಕ್ಕನುಗುಣವಾಗಿ ಸಾಹಿತ್ಯ ಕೃಷಿಗೈದಿದ್ದಾರೆ. ಇದಕ್ಕೆ ಮಹಾಪ್ರಬಂಧಕ್ಕೆ ಆಯ್ದುಕೊಂಡಿರುವ ಕಾದಂಬರಿಗಳು ಹೊರತಲ್ಲ.

ಈ ಕಾದಂಬರಿಕಾರರು ಗ್ರಾಮೀಣ ಪ್ರದೇಶದವರಾದ್ದರಿಂದ ಇವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ವಸ್ತುಗಳು, ನಗರ ಕೇಂದ್ರಿತವಾಗಿರದೆ, ಗ್ರಾಮೀಣ ಕೇಂದ್ರಿತವಾಗಿವೆ. ಗ್ರಾಮೀಣ ಪರಿಸರವನ್ನೇ ಮೂಲ ಕೇಂದ್ರವಾಗಿಸಿಕೊಂಡು ತಮಗಾದ ಅನುಭವಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರು ಹೀಗೆ ಗ್ರಾಮೀಣ ಪ್ರದೇಶವನ್ನೇ ಕೇಂದ್ರವಾಗಿರಿಸಿಕೊಂಡದ್ದಕ್ಕೆ ಕಾರಣ. ಇಲ್ಲಿ ಇನ್ನೂ ಜೀವಂತವಾಗಿಯೇ ಇರುವ ಊಳಿಗಮಾನ್ಯ ವ್ಯವಸ್ಥೆ ಮತ್ತು ಈ ವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದಿರುವ ಜಾತಿ, ಧರ್ಮದ ಸಂರಚನೆ, ಇವುಗಳಲ್ಲಿ ಒಂದನ್ನು ಮುಖ್ಯ ಘಟನೆಯನ್ನಾಗಿ ಅಥವಾ ಸಮಸ್ಯೆಯನ್ನಾಗಿ ಎತ್ತಿಕೊಂಡು ಅದಕ್ಕೆ ಪೂರಕವಾಗಿ ಹಲವು ಸಮಸ್ಯೆಗಳ ಸ್ವರೂಪವನ್ನು ಓದುಗರ ಮುಂದೆ ಬಿಚ್ಚಿಡುತ್ತಾರೆ. ಆದ್ದರಿಂದ ಈ ಕಾದಂಬರಿಗಳಲ್ಲಿ ಹಸಿವು, ಬಡತನ, ನಿರುದ್ಯೋಗ, ಜಾತೀಯ ಸಮಸ್ಯೆ, ಧರ್ಮದ ಸಮಸ್ಯೆ, ಆರ್ಥಿಕ ಸಮಸ್ಯೆ, ಉಳ್ಳವರ ದೌರ್ಜನ್ಯ, ಇಲ್ಲದವರ ಅಸಹಾಯಕತೆ ಮೊದಲಾದವುಗಳು ವಸ್ತುವಿನ ಪರಿಧಿಗೆ ಸೇರಿಕೊಳ್ಳುತ್ತವೆ.

ಒಬ್ಬ ಸೃಜನಶೀಲ ಬರಹಗಾರರು ಇಂತಹ ವಸ್ತುವನ್ನು ಒಳಗೊಂಡ ಕಥೆಯನ್ನು ಹೇಳುತ್ತಲೇ ಸಮಾಜದಲ್ಲಿರುವ ಸಮಸ್ಯೆ ಮತ್ತು ಆ ಸಮಸ್ಯೆಗಳ ಪರಿಹಾರಕ್ಕಾಗಿ ಕೆಳವರ್ಗಗಳ ಬದುಕನ್ನು ತೆರದ ಮನಸ್ಸಿನಿಂದ ಬಿಚ್ಚಿಡುವಲ್ಲಿ ಯಶಸ್ವಿಯಾಗುತ್ತಾರೆ ಎಂಬುದರ ಹಿನ್ನೆಲೆಯಲ್ಲಿ ಆಯ್ದ ಕಾದಂಬರಿಗಳಲ್ಲಿ ಪ್ರತಿನಿಧಿಗೊಂಡಿರುವ ವಸ್ತುವನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕುಂ.ವೀರಭದ್ರಪ್ಪನವರ 'ಅರಮನೆ' ಕಾದಂಬರಿಯು ಒಂದು ಕಾಲಘಟ್ಟದಲ್ಲಿದ್ದ ಗ್ರಾಮೀಣ ಭಾರತದ ಚಾರಿತ್ರಿಕ, ಧಾರ್ಮಿಕ-ಸಾಂಸ್ಕೃತಿಕ, ಸಾಹಿತ್ಯಕ ಆಯಾಮಗಳನ್ನು ವಸ್ತುನಿಷ್ಠವಾಗಿ ಕಟ್ಟಿಕೊಡುತ್ತದೆ. ಈ ಕಾದಂಬರಿಯಲ್ಲಿ ಕೇಂದ್ರಪಾತ್ರವೆಂದು ಗುರುತಿಸಬಹುದಾದ ಪಾತ್ರ, ಸರ್ ಥಾಮಸ್ ಮನ್ರೋರವರದು. ಮನ್ರೋ (೧೭೬೧-೧೮೨೭) ಐತಿಹಾಸಿಕ ವ್ಯಕ್ತಿ ಮತ್ತು ಅವರು ಮಂಗಳೂರು ಸೇರಿದಂತೆ ಕರ್ನಾಟಕದ ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಕಲೆಕ್ಟರಾಗಿ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದ ಬ್ರಿಟಿಶ್ ಅಧಿಕಾರಿ. ಅವನ ವ್ಯಕ್ತಿತ್ವವನ್ನು ಕೃತಿ ಪ್ರತಿಹಂತದಲ್ಲೂ ಬಹು ಆಪ್ತವಾಗಿ ಪರಿಚಯಿಸುತ್ತದೆ. ಬಿಡುವಿಲ್ಲದೆ ಸದಾ ಸಂಚರಿಸುತ್ತಿದ್ದ, ದುಡಿಯುತ್ತಿದ್ದ ಮನ್ರೋ, ಪ್ರತಿ ಸಣ್ಣ-ಪುಟ್ಟ ರಾಜ್ಯ ಪಾಳೆಯ ಪಟ್ಟುಗಳಲ್ಲೂ, ಆಯಾಯ ಪಾಳೆಯಗಾರರಿಂದ ಭೂಮಿಯನ್ನು ವಶಪಡಿಸಿಕೊಂಡು ಸ್ಥಳೀಯ ಭೂಹೀನರಿಗೆ ಹಂಚುತ್ತಿದ್ದನು. ತನ್ನ ಕೈಕೆಳಗಿನ ಬ್ರಿಟಿಶ್ ಅಧಿಕಾರಿಗಳಿಗೆ ಪ್ರಾಂತೀಯ ಭಾಷೆ-ಸಂಸ್ಕೃತಿಗಳನ್ನು ಕಲಿಯಬೇಕೆಂದು ನಿರ್ಬಂಧಿಸು ತ್ತಿದ್ದನು. ಪ್ರತಿ ಗ್ರಾಮದಲ್ಲೂ ಕನ್ನಡ ಅಥವಾ ತೆಲುಗು ಇತ್ಯಾದಿ ಸ್ಥಳೀಯ ಭಾಷೆಗಳ ಕಲಿಕೆಗೆ ಶಾಲೆಗಳನ್ನು ತೆರೆಯುತ್ತಿದ್ದನು. ಮನ್ರೋನ ಇವೆಲ್ಲಾ ಗುಣಗಳನ್ನು ಕೃತಿ ವಿವರವಾಗಿ ದಾಖಲಿಸುತ್ತದೆ. ಮನ್ರೋ ಸತ್ತಾಗ ಹಳ್ಳಿಯ ಮುದಿಕಿಯೊಬ್ಬಳು ಅವನ ಜೀವನ ಸಾಧನೆಗಳನ್ನು ಹೀಗೆ ಕೊಂಡಾಡಿ ಅಳುತ್ತಾಳೆ. "ಮುದ್ಯೋರಿಗೆ ಮಗನಾಗಿದ್ದನಲ್ಲಾ ದಿಕ್ಕುದೆಸೆಯಿಲ್ಲದೇವಕ್ಕೆ ತಂದೆಯಾಗಿದ್ದನಲ್ಲಾ, ವುಳುಮೆ ಮಾಡಲಕ ಭೂಮಿಕೊಟ್ಟ ಊರೂರಿಗೊಂದು ಬಾವಿ ತೋಡಿಸಿ ಕುಡಿಯೋದಕ್ಕೆ ಸೇದ್ಯವಿಗೆ ನೀರು ಕೊಟ್ಟ ಮರಗಿಡನೆಟ್ಟು ಕುಂಡರಲಕ್ಕ ನೆಳ್ಳುಕೊಟ್ಟ" (ಪುಟ ೫ ೩೫). ಈ ಕಾರಣದಿಂದಲೇ ಅವನು ಜನಸಾಮಾನ್ಯರ ಹೃದಯದಲ್ಲಿ ಮಂಥೋಳ ಸಾಹೇಬ, ಮಂಡ್ರಪ್ಪ ದೊರೆ, ಮಂಡ್ರಯ್ಯ ದೇವರು ಮುಂತಾದ ಹೆಸರುಗಳಿಂದ ಶಾಶ್ವತವಾಗಿ ನೆಲೆಸಿದ. ಈ ಮನ್ರೋನ ಅಧಿಕಾರಾವಧಿ ಕೃತಿಗೆ ಒಂದು ಬಗೆಯ ಸ್ಥೂಲ ಚೌಕಟ್ಟನ್ನು ಒದಗಿಸುತ್ತದೆ. ಎಂಬ ವಿವರಣೆಯು ಮನ್ರೋನ ವ್ಯಕ್ತಿತ್ವವನ್ನು ನಿದರ್ಶಿಸುತ್ತದೆ.

ಚಾರಿತ್ರಿಕವಾಗಿ ಗುರುತಿಸಬಹುದಾದ ಮತ್ತೊಂದು ಮುಖ್ಯ ಅಂಶವೆಂದರೆ ೧೮-೧೯ನೇಯ ಶತಮಾನ ಗಳಲ್ಲಿ ಹೇಗೆ ಮತ್ತು ಏಕೆ ವಸಾಹತುಶಾಹಿ ಇಡೀ ಭಾರತವನ್ನು ಸುಲಭವಾಗಿ ತನ್ನ ತೆಕ್ಕೆಯೊಳಗೆ ತೆಗೆದು ಕೊಳ್ಳಲು ಸಾಧ್ಯವಾಯಿತು ಎಂಬುದನ್ನೂ ಕೂಡ ಈ ಕೃತಿ ಅತ್ಯಂತ ನೈಜವಾಗಿ ಚಿತ್ರಿಸುತ್ತದೆ. ಕೃತಿಯಲ್ಲಿ ಗುರುತಿಸಬಹುದಾದ ಮತ್ತೊಂದು ಆಯಾಮ ಪರಂಪರಾಗತ ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಕುದುರೆಡವು ಪಟ್ಟಣದಲ್ಲಿ ಅರಮನೆಯಲ್ಲಿ ಪೀಕದಾನಿ ಹಿಡಿಯುವ ಮೂಳೆ ಓಬಯ್ಯ ಎಂಬುವನ ದೇಹವನ್ನು ದೇವಿ ಸಾಂಭವಿ ಪ್ರವೇಶಿಸಿ ಅದನ್ನು ತನ್ನ ವಸತಿಯನ್ನಾಗಿ ಮಾಡಿಕೊಳ್ಳುತ್ತಾಳೆ. ಕಥಾನಕವು ಈ ಪವಿತ್ರ

ವಸ್ತಿಯ ಮಹಾತ್ಮೆ, ದೇವಿ ಸಾಂಭವಿಯನ್ನು ಹೊಳೆಗೆ ಹೊಂಡಿಸುವ ಅದ್ದೂರಿಯ ಆಚರಣೆಗಳು ಅನಂತರ ಸಾಂಭವಿಗೆ ಮಕ್ಕಳನ್ನಾಡಿಸುವ ಆಸೆ ಮತ್ತು ಕೊನೆಗೆ ಓಬಯ್ಯನೇ ಮಗುವಾಗುವುದು. ಆ ಮಗುವಿನ ಅನ್ನಪ್ರಾಶನ-ನಾಮಕರಣ-ಅಕ್ಷರಾಭ್ಯಾಸ ಇತ್ಯಾದಿ ಸಂಸ್ಕಾರಗಳು ಇವೆಲ್ಲವುಗಳನ್ನು ಕೃತಿ ದೀರ್ಘವಾಗಿ ವಿವರವಾಗಿ ದಾಖಲಿಸುತ್ತದೆ.

ಕೃತಿಯ ಇನ್ನೊಂದು ಆಯಾಮ ಅರಮನೆಯ ಕಥೆ. ಅಂದಿನ ಕಾಲಘಟ್ಟದಲ್ಲಿ ಭಾರತದಲ್ಲಿದ್ದ ಸಾವಿರಾರು ಅರಮನೆಗಳ ರಾಜಮನೆತನಗಳ ಕಥೆ. ಯಾವುದೋ ಒಂದು ಸಂದರ್ಭದಲ್ಲಿ ಅಸಾಧಾರಣ ವ್ಯಕ್ತಿಯೊಬ್ಬನ ಧೈರ್ಯ-ಸಾಹಸಗಳಿಂದ ಅಸ್ತಿತ್ವಕ್ಕೆ ಬಂದ ಇಂತಹ ರಾಜ್ಯಗಳು ಹಾಗೂ ಅರಮನೆಗಳು ಕಾಲಾಂತರದಲ್ಲಿ ಆ ರಾಜವಂಶದವರ ಉತ್ತರಾಧಿಕಾರಿಗಳ ಸ್ವಾರ್ಥ-ಲಾಲಸೆ-ದೌರ್ಬಲ್ಯಗಳಿಂದಾಗಿ ತಮ್ಮ ಭವ್ಯತೆಯನ್ನು ಕಳೆದುಕೊಂಡು ನಿಧಾನವಾಗಿ ಹೀನಾಯ ಸ್ಥಿತಿಗೆ ಬಂದು ಕೊನೆಗೆ ಬ್ರಿಟಿಶ್ ಸಾಮ್ರಾಜ್ಯದ ಸಾಗರದಲ್ಲಿ ಬಿಂದುವಾಗಿ ಹೋದಕಥೆ.

ಕೃತಿಯಲ್ಲಿ ಬರುವ ಕುದುರೆಡವು ಗ್ರಾಮದಲ್ಲಿರುವ ಅರಮನೆಯ ಕಥೆಯೂ ಇದೆ. ಕೃತಿಯ ಪ್ರಾರಂಭದಲ್ಲಿ ಆ ರಾಜಮನೆತನ ದಯನೀಯ ಸ್ಥಿತಿಯಲ್ಲಿದ್ದು, ರಾಜಮಾತೆ ಭಯ್ರಮಾಂಬೆ ತನ್ನ ಸವತಿ ಮಗನಿಗೆ ಏನೂ ಆಸ್ತಿ ಸಿಗದಂತೆ ಮಾಡಲು ಅನೇಕ ಕುಯುಕ್ತಿಗಳನ್ನು ಯೋಚಿಸುತ್ತಿರುತ್ತಾಳೆ. ಕೃತಿ ಮುಂದುವರಿದಂತೆ ಒಂದು ಕಾಲದಲ್ಲಿ ಅರಮನೆಯಲ್ಲಿ ಪೀಕದಾನಿ ಹಿಡಿಯುತ್ತಿದ್ದ ಓಬಯ್ಯ ಸಾಂಬವಿಯ ವಸ್ತಿಯಾಗಿ, ಅನಂತರ ಅರಮನೆಯನ್ನೇ ಆಕ್ರಮಿಸಿಕೊಂಡು ಅಲ್ಲಿಯ ಸಿಂಹಾಸನದ ಮೇಲೆ ಕೂರುತ್ತಾನೆ. ಇಂತಹ "ಯೇಸೋ ಸಿಂಹಾಸನಗಳು ಪ್ರಜೆಗಳ ಕಾಲಿನಿಂದೊದೆಸಿಕೊಂಡು ಯಾವ ಮಾಮೂಲು ಅಂಡುಗಳಡಿ ತಳ್ಳಲ್ಪಟ್ಟಿದ್ದವು. ತರಕಾರಿ ಕಾಯಿಗೆಡ್ಡೆಗಿಂತ ಹೆಚ್ಚೋ ಸಲುವಾಗಿ ಹೆಣ್ಣುಮಕ್ಕಳೆಷ್ಟೋ ಮಂದಿ ಕತ್ತಿ ಕಠಾರಿಗಳನ್ನೆತ್ತುದ್ದಿಯ್ದರು.... ಸಿಕ್ಕವರಿಗೆ ಸಿವಲಿಂಗವೋ" (ಪುಟ. ೫೧೭) ಎಂಬ ಕಾದಂಬರಿಯಲ್ಲಿ ಬರುವ ಈ ವಿವರಣೆಯು ಸಾಮ್ರಾಜ್ಯಗಳು ನಶಿಸಿ ಹೋಗುತ್ತಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಒಟ್ಟಿನಲ್ಲಿ ಕೃತಿಯು ಮನ್ರೋ ಕಲೆಕ್ಟರಾಗಿ ನೇಮಕವಾದಾಗಿನಿಂದ ಹಿಡಿದು ಅವನ ಮರಣದೊಂದಿಗೆ ಮುಗಿಯುತ್ತದೆ. ಈ ಸ್ಥೂಲ ಚೌಕಟ್ಟಿನೊಳಗೆ ಬರುವ ಇತರ ಚಾರಿತ್ರಿಕ ವ್ಯಕ್ತಿ ಘಟನೆಗಳು, ಐತಿಹ್ಯಗಳು, ಸ್ಥಳಪುರಾಣಗಳು, ಸಾಮೂಹಿಕ ಆಚರಣೆಗಳು, ರೋಚಕ ಉಪಕಥೆಗಳು ಅವಾಸ್ತವ ಹಾಗೂ ವಾಸ್ತವಾತೀತ ಸಂಗತಿಗಳು ಇವೆಲ್ಲವೂ ಕಾದಂಬರಿಯ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ವಸ್ತುಗಳಾಗಿವೆ.

ಬೆಳಗಾವಿ ಜಿಲ್ಲೆಯ ಉತ್ತರ ತುದಿಯ ಹಳ್ಳಿಯಲ್ಲಿಯ ಜೈನ ಸಮಾಜದ ಜನಜೀವನವನ್ನು ಕಟ್ಟಿಕೊಡುವ ಕಾದಂಬರಿ ಮಿರ್ಜಿ ಅಣ್ಣಾರಾಯರ 'ನಿಸರ್ಗ'. ಈ ಕಾದಂಬರಿ ಪಾತ್ರ-ಪ್ರಧಾನವಾದ ದುರಂತ ಕಥೆ, ಅನಂತ ತಾರೆ ಈ ಕಾದಂಬರಿಯ ಕೇಂದ್ರವ್ಯಕ್ತಿಗಳು, ಇದರ ಜೊತೆಗೆ ಮೌಲ್ಯ ಕಳೆದುಕೊಳ್ಳುತ್ತಿರುವ ಜೈನ ಸಮುದಾಯವೂ ಕೂಡ ಪ್ರಮುಖ ವಸ್ತುವಾಗಿ ಚಿತ್ರಿತಗೊಂಡಿದೆ. ಶಾಂತಿನಾಥ ದೇಸಾಯಿಯವರು

ಗುರುತಿಸುವಂತೆ "ಅನಂತ-ತಾರೆಯರ ಕಥೆ ಒಂದು ಹಂದರ ಮಾತ್ರ. ಕಾದಂಬರಿಯ ಮೂಲ ಉದ್ದೇಶ ಒಂದು ಸಮಾಜ ಜೀವನದ ಬಹುಮುಖ ದರ್ಶನ. ಅನಂತ-ತಾರೆಯರ ಕಥೆ ಆ ಮೂಲ ಉದ್ದೇಶಕ್ಕೆ ಒಂದು ಸಾಧನ ಮಾತ್ರ. ಕಾದಂಬರಿಯ ಮುಖ್ಯ ವಸ್ತುವನ್ನು ಕಟ್ಟಿಹಾಕಿ ಅದಕ್ಕೆ ಒಂದು ಆಕೃತಿಯನ್ನು ಕೊಡುವ ಕೆಲಸವನ್ನು ಮಾತ್ರ ಅನಂತ-ತಾರೆಯರ ಕಥೆ ಮಾಡುತ್ತದೆ" (ಶಾಂತಿನಾಥ ದೇಸಾಯಿ,ಮಿರ್ಜಿ ಅಣ್ಣಾರಾಯರ ಸಾಹಿತ್ಯ, ಪು. ೧೨) ಎನ್ನುವಲ್ಲಿ ಕಥೆಯು ಅನಂತತಾರೆಯರದಷ್ಟೇ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಜೈನ ಸಮಾಜದ ಸಂಪ್ರಾದಯಗಳು ಮದುವೆಯ ಸಂಭ್ರಮ, ಗಂಡನ ಮನೆಗೆ ಕಳಿಸುವ ದೃಶ್ಯ. ಮೈನೆರದಾಗ ಮಾಡುವ ಕೂಡಿಸುವ ಕಾರ್ಯ. ಸೊಸೆಯನ್ನು ಮನೆತುಂಬಿಸಿಕೊಳ್ಳುವುದು, ದೇವತೆಗಳಿಗೆ ಮಾಡುವ ಹರಕೆ, ಹಬ್ಬ, ಪಂಡಿತನಲ್ಲಿ ಮೂಹೂರ್ತ ಕೇಳುವುದು, ಉಡುಕೆ ಮಾಡಿಕೊಳ್ಳುವುದು. ಜಾತ್ರೆಯ ಸಂಭ್ರಮ ಸಂಡಗರ, ಪೂಜಾರಿಯ ಮೈಮೇಲೆ ದೇವರು ಬರುವುದು. ಮೊದಲಾದ ಘಟನೆಗಳಿಂದ ಕೃತಿ ಅದ್ಭುತವಾಗಿ, ಅಷ್ಟೇ ನೈಜವಾಗಿ ಮೂಡಿಬಂದಿದೆ. ರಂ.ಶ್ರೀ. ಮುಗಳಿಯವರು ಹೇಳುವಂತೆ "ಬೆಳಗಾವಿ ಜಿಲ್ಲೆಯ ಉತ್ತರ ತುದಿಯ ಹಳ್ಳಿಗಳಲ್ಲಿಯ ಜನಜೀವನ ಅದರಲ್ಲೂ ಜೈನ ಸಮಾಜದ ಚಿತ್ರ ಈ ಕಾದಂಬರಿಯಲ್ಲಿ ಮೊದಲನೆಯ ಸಲ ಬಂದಿರುವುದು ಇದರ ಹೆಚ್ಚಿನ ವೈಶಿಷ್ಟ್ಯವಾಗಿದೆ" (ರಂ.ಶ್ರೀ. ಮುಗಳಿ, ನಿಸರ್ಗ ಮುನ್ನುಡಿ) ಎಂಬ ಮಾತು, ಜೈನ ಕುಟುಂಬ ಹಾಗೂ ಒಂದಿಷ್ಟು ಜೈನ ಸಮಾಜದ ಒಳಮುಖಗಳು ಕೃತಿಗೆ ವಸ್ತುವಾಗುವುದನ್ನು ನಿರೂಪಿಸುತ್ತದೆ.

ದೇವನೂರು ಮಹಾದೇವರವರ 'ಕುಸುಮಬಾಲೆ' ಕಾದಂಬರಿಯಲ್ಲಿ ಕುಸುಮಬಾಲೆ ಎಂಬ ಶೋಷಿತ ಹೆಣ್ಣಿನ ಪಾತ್ರ ಚಿತ್ರಣವಿದ್ದು, ಕುಸುಮಬಾಲೆಯೇ ಕಾದಂಬರಿಯ ಪ್ರಮುಖ ವಸ್ತುವಾಗಿದೆ. ಆದರೂ ಕಾದಂಬರಿಯಲ್ಲಿ ಈ ಪಾತ್ರ ಕಾಣಿಸಿಕೊಳ್ಳುವುದು ಎರಡು ಸಲ, ಮಾತನಾಡುವುದು ಕೇವಲ ಒಂದು ಸಲ. ಹೀಗಿದ್ದಾಗ ಕುಸುಮಾಳನ್ನು ಕೇಂದ್ರಪಾತ್ರವೆಂದು ಒಪ್ಪುವುದು ಕಷ್ಟಸಾಧ್ಯ. ಆದರೂ ಕುಸುಮಾಳ ಪಾತ್ರದ ಮೂಲಕ, ಅವಳಂತೆ ಸಮಾಜದಲ್ಲಿ ಅಕ್ಕಮಹಾದೇವಮ್ಮ ಈರಿ, ಕೆಂಪಿ, ತೂರಮ್ಮ, ಮಲ್ಲಾಜಮ್ಮರಂತಹ ನೊಂದ ಮಹಿಳೆಯರಿದ್ದಾರೆ. ಲೇಖಕರು ಈ ಎಲ್ಲಾ ಮಹಿಳೆಯರ ನೋವನ್ನು ಹೇಳುತ್ತಲೇ ಕುಸುಮಾಳ ಪಾತ್ರವನ್ನು ಸೃಷ್ಟೀಕರಿಸುತ್ತಾರೆ. ಈ ಕಥೆ ಪಡೆಯಬಹುದಾದ ಕಾಲಾಂತರದ, ದೇಶಾಂತರದ ಸ್ವರೂಪವೇ ಕಾದಂಬರಿಯ ಜೀವಾಳವಾಗಿದೆ. ಈ ಜೀವಾಳವು ಕಥೆಯನ್ನು ಪ್ರವೇಶಿಸಲು ಅನೇಕ ದಾರಿಗಳನ್ನು ತೋರಿಸುತ್ತದೆ. ಯಾವ ದಾರಿಯಿಂದ ಓದುಗರು ಕಥೆಯನ್ನು ಪ್ರವೇಶಿಸಿದರೂ ಕೊನೆಗೆ ಅನುಭವಿಸುವ ಜೀವಂತಿಕೆಯ ಮತ್ತು ವಿಷಾದದ ಭಾವ ಮಾತ್ರ ಬೇರೆಯಾಗುವುದಿಲ್ಲ.

ಅಕ್ಕಮಹಾದೇವಿಗೆ ಜೀತದಾಳಿನಿಂದ ಹುಟ್ಟಿದ ಮಗ ಯಾಡ. ನಂತರ ಅವನು ಬೆಳೆದು ಯಾಡೇಗೌಡ ನಾಗುವುದು. ಅವನ ಮಗ ಸೋಮಪ್ಪ ಊರಿಗೆ ದೊಡ್ಡವರು. ಇವರ ಮಗಳು ಕುಸುಮಾ, ಅವಳಿಗೆ ಹೊಲೆಯರ ಚೆನ್ನನೊಂದಿಗಿದ್ದ ರಹಸ್ಯ ಸಂಬಂಧ. ಕುಸುಮಾಳಿಗೆ ಹುಟ್ಟುವ ಮಗುವಿನಿಂದ ಬಯಲಾಗುವುದು.

ಇದರಿಂದ ಚೆನ್ನನ ಕೊಲೆ, ಚೆನ್ನ ಕೊಲೆಯಾದದುದನ್ನು ತಿಳಿಯದವರು ಅವನಿಗಾಗಿ ಕಾಯುವ ಪರಿ. ಕಳ್ಳತನದ ಅಪರಾಧಕ್ಕಾಗಿ ಹೊಡೆಸಿಕೊಳ್ಳುವ ಗಾರಸಿದ್ದ ಮಾವನ ಪ್ರಸಂಗ. ಜೀವಿಸಲು ಯಾವ ಕೆಲಸವನ್ನಾದರೂ ಕೊನೆಗೆ ಮುಟ್ಟಿನ ಸೀರೆಗಳನ್ನಾದರೂ ಸರಿ ಕದ್ದು ಮಾರಿ, ತನ್ನ ಜೀವನಕ್ಕೆ ಬೇಕಾದ ಹಣವನ್ನು ಸಂಗ್ರಹಿಸಲು ಸಿದ್ಧವಿರುವ ಅಮಾಸ, ನಾನು ಜಾತಿ-ಭೇದ ಮಾಡುವುದಿಲ್ಲ ಎಂದು ಹೇಳುತ್ತಲೇ ಅದನ್ನು ತಮ್ಮ ಮಾತಿನಲ್ಲೂ, ಕೃತಿಯಲ್ಲೂ ತೋರ್ಪಡಿಸುವ ಮಧ್ವಾಚಾರ್ಯರ ಪ್ರಸಂಗ. ಜೀತ ವಿಮೋಚನೆಗಾಗಿ ಹೋರಾಡುವ ದ.ಸಾ.ಸಂ. ಅಕ್ಕಮಹಾದೇವಮ್ಮ, ಮಲ್ಲಾಜಮ್ಮ, ಕೆಂಪಿ, ಈರಿ, ತೂರಮ್ಮ, ಕುಸುಮ ಮೊದಲಾದವರ ಅತೃಪ್ತ ಲೈಂಗಿಕತೆ, ಜೀವನ ಪ್ರೀತಿ ಹಾಗೂ ಅದಕ್ಕಾಗಿ ಮಾಡುವ ಹೋರಾಟ, ಮಂಚದ ಕತೆ, ಜೋತಮಂದಿರ ಪ್ರಸಂಗ ಇವೆಲ್ಲವೂ ಕಾದಂಬರಿಯ ವಸ್ತುವಾಗಿ ಮತ್ತು ವಸ್ತುವಿಗೆ ಪೂರಕವಾಗಿ ಕಾದಂಬರಿಯುದ್ದಕ್ಕೂ ಕೆಲಸ ಮಾಡಿವೆ.

ಅರವತ್ತು ವರ್ಷಗಳ ಹಿಂದಿನ ಯಥಾವತ್ತಾದ ಜೀವನವನ್ನು ಸೂಚಿಸುವ ಒಂದು ಜೀವನ ಕಥಾಮಾಲೆ ಎಂಬ ತಲೆಬರಹವೇ ಹೇಳುವಂತೆ ರಾವ್‌ಬಹದ್ದೂರರ 'ಗ್ರಾಮಾಯಣ' ಒಂದು ಸಾಮಾಜಿಕ ಕಾದಂಬರಿ. ಪಾದಳ್ಳಿಯ ಸಾಮಾಜಿಕ ಜೀವನವೇ ಇಲ್ಲಿಯ ಕಾರ್ಯರಂಗ ಸುಮಾರು ನಲವತ್ತು ನಲವತ್ತೈದು ವ್ಯಕ್ತಿಗಳು ವ್ಯವಹರಿಸುತ್ತವೆಯಾದರೂ ಒಂದಾದರೂ ವ್ಯಕ್ತಿಯ ಕೌಟುಂಬಿಕ ವಿವರ ದೊರೆಯಲಾರವು. ಬದಲಿಗೆ ಪಾದಳ್ಳಿಯ ಸಾರ್ವಜನಿಕ ಜೀವನವೇ ಕಾದಂಬರಿಯುದ್ದಕ್ಕೂ ಮನಮಿಡಿಯುತ್ತದೆ.

ಕೃಷ್ಣಾ ನದಿಯ ದಂಡೆಯ ಮೇಲೆ ಇರುವ ಪಾದಳ್ಳಿ ಪ್ರಾದೇಶಿಕವಾಗಿರದೆ ಈ ಕಾದಂಬರಿಯಲ್ಲಿಯ ಅನೇಕ ಸಂಗತಿಗಳಿಗೆ, ಸನ್ನಿವೇಶಗಳಿಗೆ ವ್ಯಕ್ತಿಗಳಿಗೆ ಕೇಂದ್ರಬಿಂದುವಾಗುವ ಮೂಲಕ ಕಾದಂಬರಿಯ ಕೇಂದ್ರ ವಸ್ತುವಾಗಿದೆ. ಅಂತಲೇ ನಡೆಯುವ ಘಟನೆಗಳು, ಅವುಗಳಲ್ಲಿ ಭಾಗವಹಿಸುವ ವ್ಯಕ್ತಿಗಳು ಪಾದಳ್ಳಿಯ ದೈವಕ್ಕೆ ಅಭಿವ್ಯಕ್ತಿಯನ್ನು ನೀಡುತ್ತವೆ. ಕಥೆ ಪಾದಳ್ಳಿಯನ್ನು ಬಿಟ್ಟು ಇನ್ನೊಂದು ಊರಿಗೆ ಹೋದರು ಬೇರೆ ಊರಿನಿಂದ ಪಾದಳ್ಳಿಗೆ ಬಂದರೂ ಪಾದಳ್ಳಿಯ ಜೀವನವೇ ಅಲ್ಲಿ ಪ್ರಕಾಶಿತವಾಗುತ್ತದೆ. ಪಾದಳ್ಳಿಯ ಸ್ಥಿತಿಗತಿ, ಅವನತಿಗಳೇ ಕಾದಂಬರಿಯ ಜೀವವಾಗಿ ಮಿಡಿಯುತ್ತದೆ.

ಹಬ್ಬ-ಹುಣ್ಣಿಮೆಗಳ, ಜಾತ್ರೆ-ಉತ್ಸವಗಳ, ಸಂತೋಷ-ಸಂಭ್ರಮ, ಕಾಲರಾ, ಪ್ಲೇಗು, ನೆರೆಹಾವಳಿ, ಬರಗಾಲ ಮೊದಲಾದವುಗಳಿಂದುಂಟಾಗುವ ದುಃಖದ ಧಾರುಣತೆ. ಕಳುವು, ಕೊಲೆ, ಸುಲಿಗೆಗಳ ಭೀತಿ, ಇನ್ನೊಬ್ಬರ ಆಸ್ತಿಯ ಮೇಲಿನ ಲೋಭ, ನೆಲದಲ್ಲಿಯೇ ಬೇರು ಬಿಟ್ಟಂತಿರುವ ಅಭಿಮಾನ ಮೊದಲಾದವುಗಳ ಭಾವ ಪ್ರಪಂಚ ಅದ್ಭುತವಾಗಿ ಚಿತ್ರಿತವಾಗಿದೆ. ಪಾದಳ್ಳಿಯ ಅವನತಿಯ ಇತಿಹಾಸ ಕೃತಿಯ ಆರಂಭದಿಂದಲೇ ಗೋಚರಿಸುತ್ತದೆ. ವಾಡೆಯಲ್ಲಿಯ ಅಂತಃಕಲಹ ಹೊರನುಗ್ಗಿ ಬಂದು ಹೆಣ್ಣಿನ ಮೋಹ ಯಾರದೋ ದುರ್ಮರಣಕ್ಕೆ ಕಾರಣವಾಗಿ ಅದರಿಂದ ಹುಟ್ಟಿದ ಸಮಸ್ಯೆಯನ್ನು ಬಿಡಿಸಲು ಹೋದಾಗ ಒಂದಿದ್ದ ಸಮಸ್ಯೆ ನೂರಾಗಿ ಹಬ್ಬಿ ಕಾಲರಾ ಪಿಡುಗಿನಲ್ಲಿ ಬರಗಾಲದಲ್ಲಿ ಘೋರವಾಗಿ, ಕೊನೆಗೆ ಸರ್ವನಾಶದಲ್ಲಿ

ಕೊನೆಗೊಳ್ಳುತ್ತದೆ. ಕಾಲರಾ, ನೆರೆಹಾವಳಿಯಂತಹ ಹೊರಗಿನ ಕಾರಣವಲ್ಲದೆ. ಪಾದಳ್ಳಿಯ ಆಂತರಿಕ ಜೀವನದಲ್ಲಿಯ ನೈತಿಕ ಅಂಧಃಪತನವೂ ಇದಕ್ಕೆ ಕಾರಣವಾಗುತ್ತದೆ.

ದ್ವೇಷ ಮೋಹ, ಅಭಿಮಾನ, ಸ್ವಾರ್ಥ ಸಾಧನೆ ಕಪಟ ಕಾರ್ಯಸ್ಥಾನಗಳ ಬಲೆಯಲ್ಲಿ ಸಿಕ್ಕು ಒದ್ದಾಡುವ ಒಂದು ಜೀವಂತ ಸಮಾಜವೇ ಈ ಕತೆಯ ನಾಯಕ ಪಾತ್ರವನ್ನುವಹಿಸಿದೆ. ಪಾತ್ರಗಳ ಜೀವಂತ ತನಕ್ಕಾಗಲೀ, ಮಾನವೀಯತೆಗಾಗಲೀ ಎಲ್ಲಿಯೂ ಚ್ಯುತಿ ಬಂದಿಲ್ಲ. ಶಂಕರಪ್ಪಗೌಡರ ತೀವ್ರ ಅಭಿಮಾನ ಹಾಗೂ ಉದಾತ್ತತೆ, ಬದುಕಿನ ಅವಿಶ್ರಾಂತ ಗಡಿಬಿಡಿಯಲ್ಲಿಯೂ ನಿಶ್ಚಲತೆಯನ್ನು ಕಾಯ್ದುಕೊಂಡ ಬಾಳಾಚಾರ್ಯರು, ಮಠದ ಸ್ವಾಮಿಯಾಗಿದ್ದರೂ ದುರಂತದಲ್ಲಿಯೇ ರುಚಿಯನ್ನು ಕಾಣುವ ಪಡದಯ್ಯನವರು, ತನ್ನ ಸ್ವಾರ್ಥಸಾಧನೆಗಾಗಿಯೇ ಕೊನೆಯವರೆಗೂ ಎಲ್ಲರೊಡನೆ ಒಂದಿಲ್ಲೊಂದು ರೀತಿಯಿಂದ ಆಟವಾಡುವ ಸಮಯ ಸಾಧಕ ಶೇಷಪ್ಪ. ನಿಗೂಢವಾಗಿ ಕೊಲೆಯಾಗಿ ಎಲ್ಲ ಕೃತ್ಯಗಳಿಗೂ ಮೂಲಕೇಂದ್ರವಾಗುವ ನಾನಾ, ಹುರುಲು ಹಾಕಿಕೊಂಡು ತನ್ನ ಜೀವನದ ರಹಸ್ಯವನ್ನೇ ಹಿಚುಕಿಕೊಂಡ ಪುತಳಾಬಾಯಿ, ನಿರುದ್ದೇಶವಾಗಿಯೇ ಕಥೆಯ ಪ್ರಳಯ ಕೇಂದ್ರವಾಗುವ ಚಿಮಣಾರ ಪಾತ್ರಗಳು ಅವಿಸ್ಮರಣೀಯವಾಗಿವೆ. ಯಶವಂತರಾಯ, ಬಾಪುಸಾಹೇಬ, ಪಾರ್ವತೆವ್ವ ಗೌಡತಿ, ಲಿಂಗಪ್ಪ, ಗಿಬ್ಸನ್ ಸಾಹೇಬರು, ಮಹಾರಾಜರು, ಕಮತಿಗರು, ಹೊತಿಯರು, ರೈತರು ವಾಲೀಕಾರ ಮಲ್ಲಪ್ಪ, ಜೈನರ ಜಿನ್ನಪ್ಪ, ಚಂದ್ರಿ, ಮಾದಾರ ಚೆನ್ನ ಮೊದಲಾದ ಉಪಪಾತ್ರಗಳೂ ಸಜೀವವಾಗಿ ಬಂದಿವೆ. ಇವರಷ್ಟೆ ಅಲ್ಲದೆ ತನ್ನ ಶಕ್ತಿ ಸಾಮರ್ಥ್ಯದಿಂದಲೋ, ಭಂಡತನದಿಂದಲೋ ಅನ್ಯಾಯವನ್ನು ಪ್ರತಿಭಟಿಸುತ್ತಾ ಕಾದಂಬರಿಯುದ್ದಕ್ಕೂ ಸಾಗಿಬರುವ ಪ್ರಮುಖ ಪಾತ್ರ ದಾದಾ ಹೆಸರಿನ ಭೀಮಾರಾಯ. ಈ ಎಲ್ಲಾ ಪಾತ್ರಗಳು ಕತೆಗೆ ಜೀವತುಂಬುವ ಮೂಲಕ ಕಾದಂಬರಿಯ ವಸ್ತುವನ್ನು ಮುನ್ನೆಡೆಸುವಲ್ಲಿ ಹಿಗ್ಗಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಕಾವೇರಿ-ಲಕ್ಷ್ಮಣತೀರ್ಥ ನದಿಗಳ ನಡುವಿನ ಜೀವನವನ್ನು ಆಧರಿಸಿ ರಚಿತವಾದುದು. ವೈಶಾಖ, ಬ್ರಾಹ್ಮಣ ಸಮಾಜದ ದುಷ್ಟ ಸಂಪ್ರದಾಯ ಹಾಗೂ ಜೀತಪದ್ಧತಿಯಿಂದ ತಮ್ಮೆಲ್ಲಾ ಸ್ವಾತಂತ್ರ್ಯವನ್ನು ಕಳೆದುಕೊಂಡು ಮತ್ತೊಬ್ಬರಿಗಾಗಿ ಹುಟ್ಟಿ-ಬದುಕಿ-ಸಾಯುವ ಶೋಷಿತ ವರ್ಗಕ್ಕೆ ಅನ್ವಯಿಸುವ ಕಥನವನ್ನು ಕೇಂದ್ರವಸ್ತುವನ್ನಾಗಿ ಹೊಂದಿದೆ.

ಕಾವೇರಿ ಲಕ್ಷ್ಮಣತೀರ್ಥಗಳ ನಡುವಿನ ಜನಜೀವನದ ಪ್ರಾದೇಶಿಕತೆಯ ಬಂಧನಗಳನ್ನು ಕಿತ್ತೆಸೆದು. ಭಾರತದಲ್ಲಿರುವ ಪ್ರತಿಯೊಬ್ಬ ದಲಿತರ ನೋವು ಎಂಬ ಸಾರ್ವತ್ರಿಕ ಭಾವನೆಯನ್ನು ಮೂಡಿಸುವುದು ಲಕ್ಕನ ಪಾತ್ರ. ಹೀಗಾಗಿ ಕಾದಂಬರಿಯಲ್ಲಿ ಬರುವ ನೋವು, ವಿಸ್ಮಯ, ಕ್ರೌರ್ಯ ಇವೆಲ್ಲ. ಭಾರತದ ಮೂಲ ನಾಡಿಯಲ್ಲಿ ತಲತಲಾಂತರದಿಂದ ಅಭೇದ್ಯವಾಗಿ ನುಸುಳಿರುವ ಅಂಶಗಳೆಂದು ಈ ಕಾದಂಬರಿ ಪ್ರತಿನಿಧಿಸುತ್ತದೆ. ಆದ್ದರಿಂದಲೇ "ಇಲ್ಲಿಯ ಹರಿಜನರ ಸಂಕಟ ಇಡೀ ಮಾನವ ಜನಾಂಗದಲ್ಲಿ ತುಳಿತಕ್ಕೆ ಸಿಕ್ಕ ಮೌನಿಗಳ ವ್ಯಸನವಾಗಿ ತೋರುವುದರಿಂದಲೇ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆಯಾಗಿದೆ" ಎಂಬುದಾಗಿ ಚದುರಂಗರು ಹೇಳಿಕೊಂಡಿದ್ದಾರೆ.

ಕೃಷ್ಣಾಶಾಸ್ತ್ರಿಗಳಿಂದ ವಂಚಿತಳಾದ ರುಕ್ಮಿಣಿ, ಜೀತದಾಳು ಲಕ್ಕನನ್ನು ಬಲಾತ್ಕರಿಸುವುದು. ಅದರಿಂದಾಗುವ ಗರ್ಭಧಾರಣೆ, ನಂತರದ ಪಂಚಾಯಿತಿ, ಪಂಚಾಯಿತಿ ತೀರ್ಮಾನದಿಂದಾಗುವ ಬಹಿಷ್ಕಾರ ಛಡಿಏಟು, ಜೀವಂತವಿರುವಾಗಲೇ ನಡೆಯುವ ಶ್ರಾದ್ಧಕರ್ಮ, ಘಟಸ್ಫೋಟಗಳು ಕತೆಯ ಮುಖ್ಯ ಹಂದರವನ್ನು ಪ್ರತಿನಿಧಿಸಿದರೆ, ಬ್ರಾಹ್ಮಣ ಸಮಾಜವನ್ನು ಪ್ರತಿನಿಧಿಸುವ ಕೃಷ್ಣಾಶಾಸ್ತ್ರೀ, ಸುಶೀಲಮ್ಮ, ರುಕ್ಮಿಣಿ, ಕೇಶವಯ್ಯ ಅಶ್ವಥ. ಸಾವಿತ್ರಿ ಮೊದಲಾದವರು. ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರತಿನಿಧಿಸುವ ಕೆಂಗಣ್ಣಪ್ಪ, ಗಂಗಪ್ಪ, ನಂಜೇಗೌಡ ಮೊದಲಾದವರು ಜೀತದಾಳಾಗಿ ಬಂದಿರುವ ಕಲ್ಯಾಣಿ ನಿಂಗ, ಗೆಜ್ಜಗ, ಲಕ್ಕ, ಚೆಲುವಿ, ಟಗರೂರ ಮೊದಲಾದವರು, ಬಡತನ, ಜೀತಪದ್ಧತಿ ಆಚರಣೆ, ಸಂಪ್ರದಾಯ ಮೂಢನಂಬಿಕೆ, ಪಂಚಾಯಿತಿ ತೀರ್ಮಾನಗಳು, ಅತೃಪ್ತಕಾಮನೆಗಳು, ವ್ಯಭಿಚಾರ ಇತ್ಯಾದಿಗಳೆಲ್ಲವೂ ಕಥಾವಸ್ತುವನ್ನು ಹಿಗ್ಗಿಸುಲ್ಲಿ ಪೂರಕ ಪಾತ್ರವಾಗಿ ಕೆಲಸ ಮಾಡಿವೆ.

ಗೀತಾ ನಾಗಭೂಷಣರ ಬದುಕು ಕಾದಂಬರಿ ಮಲ್ಲಪ್ಪ ಜಮಾದಾರನ ಮನೆಯ ಆಗುಹೋಗುಗಳ ಕತೆಯನ್ನೇ ಕೇಂದ್ರವಸ್ತುವನ್ನಾಗಿ ಹೊಂದಿದೆ. ಜಮಾದಾರ ಮಲ್ಲಪ್ಪನ ಮನೆಯಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಜೀವನ ಹಂದರ ಕತೆಗೆ ವಸ್ತುವಾಗುತ್ತಾ ಕಾದಂಬರಿ ಮುನ್ನೆಡೆಯುತ್ತದೆ.

ಕಾಶಮ್ಮ-ಲಿಂಗಪ್ಪಗೌಡನ ಪ್ರೇಮಪ್ರಕರಣ, ನಂತರ ಮನೆಯವರ ಮೋಸದಿಂದಾಗಿ ಬೇರೆ-ಬೇರೆ ಕಡೆ ನಡೆಯುವ ಅವರಿಬ್ಬರ ವಿವಾಹ, ಬೆಳ್ಳಿ, ಕಲ್ಯಾಣಿಯರ ವಿವಾಹ, ಗಂಡನನ್ನು ಬಿಟ್ಟು ಬಂದು ಕಾಶಮ್ಮ ಪುನಃ ಲಿಂಗಪ್ಪಗೌಡನನ್ನು ಕೂಡುವುದು. ಕಾಶಮ್ಮ ಮಾಡಿದ ಕೃತ್ಯಕ್ಕೆ ಹೇಸಿ ಅವಮಾನದಿಂದ ಹೊಳೆಗೆ ಹಾರಿ ಸಾಯುವ ಮಲ್ಲಪ್ಪ, ಮಲ್ಲಪ್ಪನ ಚಿಂತೆಯಲ್ಲಿಯೆ ಚಿತೆಯೇರುವ ಮಲ್ಲಮ್ಮ, ತನ್ನ ಅಕ್ಕ ಕಾಶಮ್ಮನ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಕ್ಕಾಗಿ ಬಡಿಸಿಕೊಂಡು ಆಕಸ್ಮಿಕವಾಗಿ ಸಾಯುವ ಮುಕುಡೆಪ್ಪನ ಸಲುವಾಗಿ ಜೈಲು ಸೇರುವ ಕಲ್ಯಾಣಿ. ಬೆಳ್ಳಿಯ ವನವಾಸ ಪುನಃ ಕಲ್ಯಾಣಿ ಜೈಲಿನಿಂದ ಬಿಡುಗಡೆ ಹೊಂದುವುದು. ಮಗಳು ಸುಖದೇವಿಗೆ ವಿವಾಹ ಮಾಡುವುದು. ನಂತರ ಮಂತ್ರಾಲಯಕ್ಕೆಂದು ಹೊರಟಾಗ-ಹೋಗುವ ದಾರಿಯಲ್ಲಿ ಬಸ್ ಕೊಳ್ಳಕ್ಕೆ ಬಿದ್ದು ಬೆಳ್ಳಿ ಮತ್ತು ಕಲ್ಯಾಣಿ ಇಬ್ಬರೂ ಸಾಯುವುದರೊಂದಿಗೆ ಕಾದಂಬರಿ ಮುಗಿಯುತ್ತದೆ.

ಹೀಗೆ ಮೇಲ್ನೋಟಕ್ಕೆ ಮಲ್ಲಪ್ಪ ಜಮಾದಾರನ ಮನೆಯ ಆಗುಹೋಗುಳಂತೆ ಕಂಡರೂ ಅದರ ಸುತ್ತ ಕೆಳವರ್ಗದ ದಲಿತರ ಬಡವರ ನಿರ್ಗತಿಕರ ಝೋಪಡಿಪಟ್ಟಿ ಮಂದಿಯ ಸುಖ-ದುಃಖ ಸಂಕಟ ಸಮಸ್ಯೆ, ರೀತಿ, ರಿವಾಜು, ರೂಢಿ, ನಂಬಿಕೆ, ಶಾಸ್ತ್ರ, ಸಂಪ್ರದಾಯ, ಜಾಜನೇಮ ಆಚರಣೆಗಳ ಚಿತ್ರಣವನ್ನು ಚಿತ್ರಿಸುವ ಒಂದು ಊರಿನ ಕೆಳಗೇರಿಯ ಕೆಳವರ್ಗದ ಮಂದಿಯ ಕತೆಯನ್ನೇ ವಸ್ತುವಾಗಿ ಹೊಂದಿದೆ.

ಕೆಳಜಾತಿಯ ಜನರ-ನಂಬಿಕೆಗಳು ಆಚರಣೆಗಳು, ಸಂಪ್ರದಾಯಗಳು ಜೀವನದ ರೀತಿ-ನೀತಿ ಮೂಢನಂಬಿಕೆಗಳನ್ನು ಹೇಳುತ್ತಲೇ ಅವುಗಳನ್ನು ಅಲ್ಲಲ್ಲೆ ವೈಚಾರಿಕ ನೆಲೆಯಲ್ಲಿ ಒರೆಗೆ ಹಚ್ಚುವ ಮೂಲಕ ಕ್ರೂರ ಪದ್ಧತಿಗಳನ್ನು ಬದಲಾಯಿಸುವ ಆಶಯವನ್ನು ಹೊಂದಿದೆ.

ಅಸ್ಪೃಶ್ಯರು ಕಾದಂಬರಿ ದಕ್ಷಿಣದ ಸಂಪ್ರದಾಯಸ್ಥ ಕೋಟಾ ಬ್ರಾಹ್ಮಣ ಕುಟುಂಬವೊಂದರ ಸುತ್ತ ಹೆಣೆದ ಕತೆಯಾಗಿದೆ. ಆದರೂ ಅದು ಕೇವಲ ಅಸ್ಪೃಶ್ಯತಾ ನಿವಾರಣೆಯ ಬಗ್ಗೆಯಾಗಲೀ ಅಸ್ಪೃಶ್ಯರ ಉದ್ಧಾರದ ಬಗ್ಗೆಯಾಗಲಿ ಘೋಷಣೆಯನ್ನು ಮಾಡುವುದಿಲ್ಲ. ಬದಲಿಗೆ ವಿಶಾಲವಾದ ಅರ್ಥದಲ್ಲಿ ಅಸ್ಪೃಶ್ಯತೆಯ ಎರಡು ನೆಲೆಗಳಾದ ಜಾತಿ ಆಧಾರಿತ ಹಾಗೂ ಲಿಂಗಾಧಾರಿತ ಅಸಮಾನತೆಯ ನೆಲೆಗಳನ್ನು ಕುರಿತು ಹೇಳುವಂತೆ ಕಂಡರೂ, ಅದಕ್ಕೂ ಮೀರಿ ಜಾತ್ಯಾತೀತವಾದ ಮಾನವೀಯ ಸಂಬಂಧದ ಬಗೆಗೆ ತಿಳಿಸುತ್ತದೆ.

ಮಗ ಭಾಸ್ಕರ ಓದಿಗೆಂದು ಊರುಬಿಟ್ಟು ಹೊರಟಾಗ, ವಾಸುದೇವರಾಯರ ಮನೆಯಲ್ಲಿ ಆಶ್ರಯ ಪಡೆದ ಪಾರ್ತಕ್ಕ ಆ ಕುಟುಂಬದ ಪ್ರಮುಖ ವ್ಯಕ್ತಿಯಾಗಿ ಉಳಿಯುತ್ತಾಳೆ. ಅಸ್ಪೃಶ್ಯರನ್ನು ಪ್ರೀತಿಯಿಂದ ಕಾಣುವ ಅವರ ಹಕ್ಕುಗಳಿಗಾಗಿ ಹೋರಾಡುವ ಮಗ ಭಾಸ್ಕರ ಕೊರವ ಜಾತಿಯ ಹೆಣ್ಣನ್ನು ಮದುವೆಯಾಗುವ ಮೂಲಕ ಪಾರ್ತಕ್ಕನ ಮನಸ್ಸನ್ನು ಒಡೆಯುತ್ತಾನಲ್ಲದೆ ತಾಯಿಯಿಂದ ಊರಿನಿಂದ ದೂರವಾಗುತ್ತಾನೆ.

ಕಾದಂಬರಿಯ ಕೊನೆಯಲ್ಲಿ ಭಾಸ್ಕರ ಕೊರವ ಕೂಸಾಳುಗಳ ಹಕ್ಕುಗಳಿಗಾಗಿ ಹೋರಾಟವನ್ನು ಎಬ್ಬಿಸಿದ ಸಂದರ್ಭದಲ್ಲಿ ಆತನಿಗಾಗದವರು ಕುತಂತ್ರದಿಂದ ಆತನನ್ನು ಜೈಲಿಗೆ ಹಾಕಿಸಿಬಿಡುತ್ತಾರೆ. ಸುದ್ದಿ ತಿಳಿದ ವಾಸುದೇವರಾಯರು ಗರ್ಭಿಣಿಯಾದ ಕುಮುದಿನಿಯನ್ನು ಒಂಟಿಯಾಗಿ ಬಿಡದೇ, ಬರಲು ಒಪ್ಪದಿದ್ದ ಆಕೆಗೆ ಸಮಾಧಾನ ಹೇಳಿ ಏನು ತೊಂದರೆಯಾಗದಂತೆ ನೋಡಿಕೊಳ್ಳುವ ಭರವಸೆ ಕೊಟ್ಟು ತಮ್ಮ ಮನೆಗೆ ಕರೆತರುವ ಮೂಲಕ ಮಾನವೀಯತೆಯನ್ನು ಮೆರೆಯುತ್ತಾರೆ.

ಹೀಗೆ ಜಾತಿ ಆಧಾರಿತ ಅಸ್ಪೃಶ್ಯತಾ ಸಮಸ್ಯೆಯನ್ನು ಎತ್ತುವ ವೈದೇಹಿಯವರು. ಜಾತಿ ಸಂಬಂಧಿಸಿದ ಅಸ್ಪೃಶ್ಯತಾ ನಿವಾರಣೆಯು ಅಸ್ಪೃಶ್ಯರೆನಿಸಿಕೊಂಡ ವರ್ಗಗಳು ಹಾಗೂ ಸವರ್ಣೀಯರು ಇಬ್ಬರಲ್ಲಿಯೂ ಆಗಬೇಕಾಗಿದೆ ಎಂಬುದನ್ನು ಕಾದಂಬರಿಯಲ್ಲಿ ಧ್ವನಿಸಿದ್ದಾರಲ್ಲದೆ, ಅಸ್ಪೃಶ್ಯರೆನಿಸಿಕೊಂಡವರ ಒಳಪಂಗಡಗಳಲ್ಲೇ ಇರುವ ತಾವು ಊಂಚ, (ಮೇಲು) ಎಂಬ ಭಾವನೆಗಳು ಹೋಗಬೇಕು. ಅಲ್ಲದೇ ತಮ್ಮ ಜನಾಂಗದ ಬಗ್ಗೆಯೇ ಇರುವ ಕೀಳು ಮನೋಭಾವನೆಗಳನ್ನು ತೆಗೆದುಹಾಕಬೇಕೆಂಬ ಆಶಯವನ್ನು ಕಾದಂಬರಿಯುದ್ದಕ್ಕೂ ವ್ಯಕ್ತಪಡಿಸಿದ್ದಾರೆ.

ಈ ಕಥಾನಕದ ಪ್ರಮುಖ ವಸ್ತುವಿಗೆ ಪೂರಕವಾಗಿ ಪಾರ್ತಕ್ಕ, ಗೌರಮ್ಮ, ರತ್ನ ಹಾಗೂ ಆಕೆಯ ಗಂಡ ಸಂಪ್ರದಾಯವನ್ನು ನಂಬಿ ಅದರಂತೆ ಜೀವನವನ್ನು ಸಾಗಿಸುವ ಪಾತ್ರಗಳಂತೆಯೂ ಸರೋಜ, ಶಿವ, ಶಾಮಿ, ಜಯ, ಪುಟ್ಟ, ತಾರ್ಕಿಕ ಪ್ರಶ್ನೆಗಳನ್ನು ಹಾಕುತ್ತಾ ಹೊಸ ವಿಚಾರಗಳಿಗೆ ಸ್ಪಂದಿಸುತ್ತಾ ಬೆಳೆಯುವ ಇವರು ಹೊಸ ತಲೆಮಾರಿನ ಸಂಕೇತವಾಗಿಯೂ ಚಿತ್ರಿತಗೊಂಡಿದ್ದಾರೆ. ಹಾಗೆಯೇ ಕಾದಂಬರಿಯಲ್ಲಿ ಚಿತ್ರಿತಗೊಂಡಿರುವ ಸೀತು, ರುಕ್ಕು, ಚಂದು, ನರಪಟೆ, ಹುಲ್ಲುಕೂಸ, ಮಂಜ, ಕಾದಂಬರಿಯಲ್ಲಿ ಬರುವ ಸಂಪ್ರದಾಯ ಆಚರಣೆಗಳು ಕಾದಂಬರಿಯ ವಸ್ತುವನ್ನು ಹಿಗ್ಗಿಸುವಲ್ಲಿ ಪ್ರಮುಖಪಾತ್ರವನ್ನು ವಹಿಸಿವೆ.

೩.೨ ಭಾಷೆ ಮತ್ತು ತಂತ್ರ

ಸೃಜನಶೀಲ ಲೇಖಕರಲ್ಲಿ ಅದರಲ್ಲೂ ದಲಿತ ಬಂಡಾಯ ಕಾದಂಬರಿಕಾರರ ಸಾಹಿತ್ಯಗಳಲ್ಲಿ ಆಕ್ರೋಶ, ಸಿಟ್ಟು, ಪ್ರತಿಭಟನೆಯ ಜೊತೆಗೆ ಪ್ರಾದೇಶಿಕ ಭಾಷೆಯನ್ನು ಕೂಡ ಪ್ರತಿರೋಧದ ಪ್ರತೀಕವಾಗಿಸಿಕೊಂಡು ಅಲ್ಲಿನ ಜೀವನವನ್ನು ನೈಜವಾಗಿ ಎಳೆಎಳೆಯಾಗಿ ದಟ್ಟ ವಿವರಗಳೊಂದಿಗೆ ರೂಪಿಸುವಂಥಹ ಸಾಹಿತ್ಯ ಹೊರಬರುತ್ತಿದೆ. ಲೇಖಕರು ತೀರಾ ಸ್ಥಳೀಯ ಹಾಗೂ ಜಾತೀಯವಾದ ಕನ್ನಡದ ಪ್ರಭೇದಗಳನ್ನು ಉಪಯೋಗಿಸಿ ಕೊಂಡಿದ್ದಾರೆ. ಹೀಗಾಗಿ ಇವರು ಬಳಸಿಕೊಂಡಿರುವ ಭಾಷೆ ಓದುಗರಿಗೆ ಸಂವಹನವಾಗದೇ ಇವುಗಳನ್ನು ಕನ್ನಡಕ್ಕೆ ಅನುವಾದಿಸಿ ಎಂಬಂಥ ವಿರೋಧಗಳು ಕೇಳಿಬಂದದ್ದು ಸಾಹಿತ್ಯ ವಿಮರ್ಶೆಯಲ್ಲಿ ಈಗಾಗಲೇ ಚರ್ಚಿತವಾದ ವಿಷಯವಾಗಿದೆ.

ಲೇಖಕರ ಇಂತಹ ವಿಶಿಷ್ಟ ಭಾಷೆಯನ್ನು ಕುರಿತು ಡಾ. ಸಿ.ಎನ್. ರಾಮಚಂದ್ರನ್‌ರವರು ಎರಡು ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. "ಒಂದು: ರಷ್ಯನ್ ಕಥನಶಾಸ್ತ್ರಜ್ಞರಾದ ವಿಕ್ಟರ್‌ಶ್ಲಾವಸ್ಕಿ ಯಾನ್ ಮೂಖಾಶೋವ್‌ಸ್ಕಿ ಮತ್ತಿತರು ವಾದಿಸುವಂತೆ ಸಾಮಾನ್ಯೀಕೃತ ಭಾಷೆ (Automalised language). ದೈನಿಕ ಸಂವಹನ ಸಂದರ್ಭಗಳಲ್ಲಿ ಬಳಕೆಯಾಗಿ ತನ್ನ ಧ್ವನಿಶಕ್ತಿಯನ್ನು ಕಳೆದುಕೊಂಡಿರುತ್ತದೆ. ಆದ್ದರಿಂದ ಸಾಹಿತಿ ತನ್ನ ಭಾಷೆಯನ್ನು ಧ್ವನಿಪೂರ್ಣವಾಗಿ ಮಾಡಲು ಅದನ್ನು ಉದ್ದೇಶ ಪೂರ್ವಕವಾಗಿ ಅಪರಿಚಿತೀಕರಣಕ್ಕೆ (defamiliazation) ಒಳಪಡಿಸಬೇಕಾಗುತ್ತದೆ. ಈ ಕಾರ್ಯ ಅಧಿಕೃತ ಭಾಷೆಯ ಬದಲು ಒಂದು ಭಾಷಾ ಪ್ರಭೇದದ ಮೂಲಕ ಸಾಧ್ಯವಾಗಿರುತ್ತದೆ. ಈ ಪ್ರಭೇದ ಪ್ರಾಂತೀಯವಾಗಿರಲೂಬಹುದು, (Regional dialect), ಜಾತೀಯವಾಗಿರಲೂಬಹುದು, (cast dialect) ವಿಷಯಾಧಾರಿತವಾಗಿರಬಹುದು (Register) ಅಪರಿಚಿತೀಕರಣಕ್ಕೆ ಮುಖ್ಯ ಉದ್ದೇಶವೆಂದರೆ ಓದುಗರು ಸಮಾಜವನ್ನು ವಿಶ್ವವನ್ನು ಒಂದು ಹೊಸ ಪರಿಪ್ರೇಕ್ಷದಿಂದ ನೋಡಲು, ಅರಿಯಲು ಸಾಧ್ಯವಾಗುವುದು.

ಮತ್ತೊಂದು ಅಂಶ ಒಂದು ಭಾಷಾ ಪ್ರಭೇದವು ಒಂದು ಬಗೆಯ ಮೌಲ್ಯವ್ಯವಸ್ಥೆಯನ್ನು ಸಂಕೇತಿಸುತ್ತಲೇ ಆ ನೆಲೆಯಲ್ಲಿ ಅಧಿಕೃತ ಭಾಷೆಯನ್ನು ತಿರಸ್ಕರಿಸುವುದೆಂದರೆ ಅಧಿಕೃತ ಭಾಷೆ ಸಂಕೇತಿಸುವ ಯಾಜಮಾನ ವರ್ಗದ ಮೌಲ್ಯಗಳನ್ನು ಮತ್ತು ಸಾಮಾಜಿಕ ನೈತಿಕ ನಿಲುವನ್ನು ತಿರಸ್ಕರಿಸುವುದಾಗುತ್ತದೆ" (ಡಾ.ಸಿ.ಎನ್. ರಾಮಚಂದ್ರನ್, ಯಾರಜಪ್ಪಿಗೂ ಸಿಗದ ನವಿಲುಗಳು, ಪು. ೭೫) ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಈ ವಿಶ್ಲೇಷಣೆಯನ್ನು ಆಯ್ದ ಕಾದಂಬರಿಗಳಿಗೆ ಅನ್ವಯಿಸಿ ಹೇಳುವುದಾದರೆ ವರ್ಣವ್ಯವಸ್ಥೆ ಆಧರಿಸಿರುವ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹುದುಗಿರುವ ಕ್ರೌರ್ಯ ಅನ್ಯಾಯ ಹಾಗೂ ಢಂಬಾಚಾರ ಇವುಗಳ ಅರಿವನ್ನು ನೇರ ಗ್ರಹಿಕೆಯನ್ನು ಓದುಗರಿಗೆ ಕೊಡಲು ಲೇಖಕರು ರೂಢಿಯಲ್ಲಿಲ್ಲದ ಎಂದರೆ ಓದುಗರಿಗೆ ಪರಿಚಿತವಲ್ಲದ ಒಂದು ಭಾಷಾ ಪ್ರಭೇದವನ್ನೂ, ಇಂತಹ ಭಾಷಾ ಪ್ರಭೇದವನ್ನು ಶಕ್ತಿಯುತವಾಗಿ ತರಲು ಸಶಕ್ತವಾದ ತಂತ್ರಗಾರಿಕೆಯನ್ನು ಬಳಸುವ ಮೂಲಕ ಯಜಮಾನವರ್ಗದ ಮೌಲ್ಯಗಳನ್ನು ತಿರಸ್ಕರಿಸಿ ದಲಿತ ಲೋಕದ ಮೌಲ್ಯಗಳನ್ನು ಪುರಸ್ಕರಿಸಲು ಕಂಡುಕೊಂಡ ಹೊಸದೊಂದು ಮಾರ್ಗವಾಗಿದೆ.

ಇನ್ನೂ ಮುಂದುವರೆದು ಹೇಳುವುದಾದರೆ ಔದ್ಯೋಗಿಕರಣ, ನಗರೀಕರಣ, ಅನುಭೋಗ ಸಂಸ್ಕೃತಿಗಳ ಕಾರಣದಿಂದಾಗಿ ಆಧುನಿಕ ಮಾನವನು ಚಿಂತಿಸುವ ಕ್ರಮವೇ ಸೀಮಿತವಾದುದಾಗಿದೆ. ಇಡೀ ಸೃಷ್ಟಿಯ ಶಕ್ತಿಯೆಲ್ಲವೂ ಮಾನವನ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಮಾತ್ರ ಇದೆ. ಎಂಬ ಚಿಂತನಾಕ್ರಮ ಇಂದು ಪ್ರಬಲವಾಗುತ್ತಿದೆ ಮತ್ತು ಇಂತಹ ಚಿಂತನಾ ಕ್ರಮಗಳೆಲ್ಲ ಪ್ರತಿನಿಧಿತಗೊಂಡಿರುವುದು ಸಾಧಾರಣವಾಗಿ ಶಿಷ್ಟಭಾಷೆಯಲ್ಲಿಯೇ ಅಲ್ಲದೆ ಆಧುನಿಕ ಶಿಷ್ಟ ಸಾಹಿತ್ಯ ಕೇವಲ ವ್ಯಕ್ತಿಕೇಂದ್ರಿತವಾದುದಾಗಿದೆ. ಇದಕ್ಕೆ ವಿರುದ್ಧವಾಗಿ ಇಂದು ವಿಶ್ವದೃಷ್ಟಿ ಮಾದರಿಯ ಜಾನಪದ ಸಾಹಿತ್ಯ (ವಸ್ತು ಭಾಷೆ ಮತ್ತು ತಂತ್ರ) ಕಾಣಿಸಿ ಕೊಳ್ಳುತ್ತದೆ.

ಪರಂಪರಾಗತ ಮೌಲ್ಯಗಳನ್ನು ತಿರಸ್ಕರಿಸಲು ಅಥವಾ ಕನ್ನಡ ಸಾಹಿತ್ಯದ ಸಿದ್ಧ ಮಾದರಿಯ ಚೌಕಟ್ಟನ್ನು, ಮೀರಲು ಈ ಪರ್ಯಾಯ ದೃಷ್ಟಿಕೋನವನ್ನು ಪರ್ಯಾಯ ಚಿಂತನಾಕ್ರಮವನ್ನು ಲೇಖಕರು ಅಳವಡಿಸಿ ಕೊಂಡಿರುವುದು ಸ್ವಾಗತಾರ್ಹ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಗಳಲ್ಲಿ ಬಳಕೆಯಾಗಿರುವ ಭಾಷೆ ಮತ್ತು ತಂತ್ರವನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅರಮನೆ ಕಾದಂಬರಿಯ ಲೇಖಕರಾದ ಕುಂ. ವೀರಭದ್ರಪ್ಪನವರು ಮೂಲತಃ ಕೊಟ್ಟೂರಿನವರು. ಕೊಟ್ಟೂರು ಕರ್ನಾಟಕ ಮತ್ತು ಆಂಧ್ರದ ಗಡಿಭಾಗದಲ್ಲಿರುವುದರಿಂದ ಇವರ ಭಾಷೆಯಲ್ಲಿ ತೆಲುಗು ಮಿಶ್ರಿತ ಕನ್ನಡ ಸಾಮಾನ್ಯವಾದುದಾಗಿದೆ. ಇದನ್ನು ಕಾದಂಬರಿಯಿಂದಲೇ ಉದಾಹರಿಸುವುದಾದರೆ "ಯಲ್ಲಾ ನೋಡೋದನು ನೋಡಿಯಾದ ಮ್ಯಾಲ, ಕೇಳೋದನು ಕೇಳಿಯಾದ ಮ್ಯಾಲ ಲೋಡಿಗಾತು ತಾಂಬೂಲ ಸಮಲುತ್ತಿರುವಾಗ ಮನೋ ಸಾಹೇಬನು ರೆಡ್ಡಿಗಾರು ಯಿಂಕೊಕ್ಕಟಿಯಿ ಯಾರತನು ಮಾಕುಚೂಪಿಂಚಲೇದು.. ಅದೇಮಿಟಂಟೆ ಯಿಕ್ಕಡೆಕ್ಕಡೋ ಮರಣದಂಡನ ವಿದಿಂಚೇ ವ್ಯವಸ್ಥೆ ವುಂದಂಟಿಗದಾ.. ಯೆಮಿ ಅನುಕೋಕ ಪೋತೆ ಮೀರು ಮೀ..." ಯಂದಷ್ಟೇ ನುಡಿದು ತನ್ನ ಕಪೋಲ ರೋಮಳನ್ನು ಬಲಗಯ್ಯ ತುದಿಬೆರಳುಗಳಿಂದ ನೀವಿಕೊಳ್ಳುತ್ತಿರುವಾಗ್ಗೆ (ಪುಟ ೪೦೬ ಅರಮನೆ).

"ಯಿಕ್ಕಡುಂದಿ ಕದಾ ರೆಡ್ಡಿಗಾರು, ಪ್ರಜಾಮೋದುಕಲಯ್ನು ಮೀರು ಚುಂಚಂಡರೇಮೋ?" (ಪುಟ ೪೧೪) ಎಂದು ಮಾತಿನಿಂದ ತಿವಿದೇ ಬಿಟ್ಟನು ಎಂಬಲ್ಲಿ ಥಾಮಸ್ ಮನ್ರೋ ಮತ್ತು ವುಯ್ಯಾಲವಾಡದ ನರಸಿಂಹಾರೆಡ್ಡಿ ಯವರ ನಡುವಿನ ಪಾತ್ರಗಳ ಸಂಭಾಷಣೆಯು ತೆಲುಗು ಭಾಷೆಯಿಂದ ಕೂಡಿದುದಾದರೆ,

ವದ್ದುದೊರಾ... ವದ್ದುದೊರಾ ಅನಕಂತಲೇ ಕೊಟ್ಟಿದ್ದನ ಹಿಸಗಂತು ಮಂದಿ ಕಡಪು ಕೇಳಬೇಕಲ್ಲಾ... ಬ್ರತುಕು ಕೇಳಬೇಕಲ್ಲಾ ಎಂಬಲ್ಲಿ ನಿರೂಪಕನ ಭಾಷೆಯೂ ತೆಲುಗು ಮಿಶ್ರಿತ ಕನ್ನಡವಾಗಿರುವುದನ್ನು ನೋಡಬಹುದು. ಇದು ಕಲೆಕ್ಟರ್ ಮನ್ರೋನ ಕಥೆಯಾದುದರಿಂದ ಸಂದರ್ಭೋಚಿತವಾಗಿ ಆಲ್‌ರೆಟ್ಟು, ಓ ಮೈಗಾಡ್‌ಗಳಂತಹ ಇಂಗ್ಲಿಶ್ ಶಬ್ದಗಳ ಪ್ರಯೋಗವೂ ಕಾದಂಬರಿಯಲ್ಲಿ ಮೂಡಿಬಂದಿದೆ.

ಅಲ್ಲದೆ ಲೇಖಕರು ಕೊಟ್ಟೂರು ಪ್ರದೇಶದವರಾದುದರಿಂದ ಕೊಟ್ಟೂರು ಸುತ್ತಮುತ್ತಲಿನ ಜನರಾಡುವ ಭಾಷೆಯನ್ನೇ ಯಥವತ್ತಾಗಿ ಕಾದಂಬರಿಯಲ್ಲಿ ಬಳಸಿಕೊಂಡಿದ್ದಾರೆ. ಉದಾರಹಣೆಗೆ, ವಳಗಡೀಕಿರೋ ತನ್ನ

ಗಂಡ ಹೊರೀಕೆ ಬರಲೀ ಅಂತ ವಂದು ನಿಡುಸುಯ್ದುಳು. ಕೆಮ್ಮಿ ಕ್ಯಾಕರಿಸಿದಳು. ಯೇನು ಮಾಡುತ್ತಿದ್ದಾನೀ ಮುದ್ಯೇತ.. ಯಂದ ಗೊಣಗಿದಳು.. ವಂದೊಂದೆ ಹೆಜ್ಜೆಯನಿಕ್ಕುತ ವಳಗಡೀಕೆ ಹೋಗಿ ನೋಡುತ್ತಾಳೆ.. ವಂದು ಪುರಷಾಕೃತಿಯ ಮುಂಡಕ್ಕೆ ವಂದು ದೋತರವನ್ನುಟ್ಟುಕೊಂಡು ತಲೆಮ್ಯಾಲ ಒಂದು ಮುಂಡಾಸು ಬಿಕ್ಕೊಂಡು, ಹಣೆಮ್ಯಾಲ ರೂಪಾಯಗಲದೋಟು ಕುಂಕುಮದ ಬೊಟ್ಟಿಟ್ಟುಕೊಂಡು ಬಾಯಿಂದ ಯೇನೋ ವಟಗುಟ್ಟುತ ಕರಿಕಂಬಳಿ ಗದ್ದುಗೆ ಮ್ಯಾಲ ವಳ್ಳೆ ಮದಲಿಂಗನಂಗ ಕೂಕಂಡಿರೋದು ಕಾಣಿಸಿತು. ಯಾರಿದ್ದಿತೀತ ಅಂತ ಸನೀಕ ಹೋಗಿ ನೋಡುತ್ತಾಳೆ. ತನ್ನ ಗಂಡ, ನಗು ಬಂತು ನಕ್ಕರೆಲ್ಲಿ ಅನ್ಯಾವಾಗುವುದೋ ಯಂದು ಹಿಂದೇಟು ಹಾಕುತ "ಯೋಯ್, ವಳ್ಳೆ ಮದ್ಲಿಂಗನಂಗ ಅಲಂಕಾರ ಮಾಡ್ಕೊಂಡು ಕೂಕಂಡಿದ್ದೀಯಲ್ಲಾ. ವಂದು ಗಾವಾದ ಪಿಳ್ಳೇನ ತಗದು ನಾನೇ ನಿಂತಿದ್ದು ಲಗ್ಗನ ಮಾಡಲೇನು?" ಯಂದು ಚಾಸ್ಟಿ ಮಾಡಿದಳು. ಅದಕ್ಕಾತನ ಬಾಯಿಂದ ದುಸುರಾ ಮಾತು ಹೊಂಡಲಿಲ್ಲ. ಬಗಬಗ್ಗಿ ನೋಡಿ "ಯಾಕ ಮಾರೀನ ವಂಥರಾ ದಿಮ್ಮಗ ಮಾಡಿಕೊಂಡಿಯಲ್ಲಾ?" ಅಂದಳು. ಅದಕೂ ಆತನ ಬಾಯಿಂದ ಮಾತು ವುದರಲಿಲ್ಲ. ಕುಂತ್ಗಾ.. ಯೇಟೊತ್ತು ಕುಂತಗಂಡಿರ್ತೀಯೋ ಕುಂತಗಂಡಿರು. ಕುಂಡಿಸುಟ್ಟ ಮ್ಯಾಲ ನೀನೇ ಯದ್ದೇಳತೀ ಯಂದು ತನ್ನ ಪಾಡಿಗೆ ತಾನು ಮನೆಯ ದಗದ ವದಕನಕ್ಕೆ ತೊಡಗಿದಳು. ವಟವಟ ಅನಕಂತ ಕಸಮುಸರಿ ಮಾಡಿದಳು. ಮುದ್ದೆ ತಿರುವಿಟ್ಟು ಯಿಂಡಿ ಅರೆದಿಟ್ಟು, "ಯ್ಯೋಯ್ ವುಣುವಂತಿ, ಕಯ್ಯಿಕಾಲು ಮಾರೀನ ತೊಳಕಂಡು ಬಾ" ಅಂದಳು. ಅದಕ್ಕೂ ಆ ಸರೀರ ಮಿಸುಕಾಡಲಿಲ್ಲ... ವಡಲು ಸುಟ್ಟುಮ್ಯಾಲ ನೀನೇ ವುಂಬುತಿಯಂದು ವಟಗುಟ್ಟುತ್ತ ತಾನೊಂದೆರಡು ತುತ್ತು ಗಂಟಲಿಗೆ ನೂಕಿ ವಂದೂವರೆ ತಂಬಿಗೆ ನೀರು ಸೊಂಡಿ "ಯಾಕಿಂಗ ಕುಂತಿರಚೌದೀತ?... ನಾನೋಗೋ ಹೊತ್ತಿನಾಗ ಬೇಷಿದ್ದ.... ಬರೋ ಹೊತ್ತಿಗೆ ಹಿಂಗಾಗಿ ಬಿಟ್ಟಿರುವನಲ್ಲಾ. ಯಾದಾರ ದೆವ್ವ-ಗಿವ್ವ ಬಡಕೊಂಡಿರ ಬೌದೋ ಹೆಂಗೆ ಅಂತ ಮಮ್ಮಲನೆ ಯೋಚಿಸಿದಳು. ಜಗಲೂರೆಜ್ಜನನ್ನು ಮನದಾಗೆ ಸ್ಮರಿಸಿದಳು. ರಾಜಮಾತೆ ಭಯ್ಯಮಾಂಬೆಯ ಮೆಳ್ಳಗಣ್ಣು ತಾಕಿರಬಹುದೆಂದು ಭಾವಿಸಿ ವುಪ್ಪು ಬೆಳ್ಳಗಡ್ಡೆ ಯಿಳೇ ತೆಗೆದು ಹಾಕಿ ನೋಡಿದಳು. ವಲೇಲಿ ಆಟೊಂದು ಘಾಟ ಆದರೂ ಆತನ ಮೂಗಿನಿಂದ ವಂದಾರ ಸೀನು ಬಾರಲಿಲ್ಲ. ಕಲ್ಲುಗುಂಡಿನಂಗ ಕೂಕಂಡಿದ್ದ. (ಪು. ೧೪ ಅರಮನೆ).

ಈ ದೀರ್ಘವಾದ ಕಥಾನಕದಲ್ಲಿ ಕೊಟ್ಟೂರು ಜನತೆಯ ಭಾಷೆಯ ಸೊಗಡಿನ ಜೊತೆಗೆ ಅವರ ಆಹಾರ, ನಂಬಿಕೆಗಳೂ ಕೂಡ ದೇಸಿಯವಾಗಿ ಮೂಡಿರುವುದನ್ನು ಗಮನಿಸಬಹುದು. ಅಲ್ಲದೆ ಅವರಾಡುವ ಭಾಷೆಯನ್ನು ಕಾದಂಬರಿಕಾರರು ಯಥವತ್ತಾಗಿಯೇ ತಮ್ಮ ಕಾದಂಬರಿಯಲ್ಲಿ ಬಳಸಿಕೊಂಡಿರುವುದನ್ನು ನೋಡಬಹುದು.

ಇನ್ನೂ ಕಾದಂಬರಿಯ ತಂತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅರಮನೆ ಕೃತಿಯ ಯಶಸ್ಸಗಿರುವುದೇ ಅದರ ಕಥನಶೈಲಿಯಲ್ಲಿ ಎಂದರೆ ತಪ್ಪಾಗಲಾರದು. ಸುಮಾರಾಗಿ ಗೊಂದಲಿಗರ ಕಥನ ಸಂಪ್ರದಾಯವನ್ನು ಆಧರಿಸಿರುವ ಅರಮನೆ ಕಥನ ಶೈಲಿಯ ಗಮನೀಯ ಅಂಶಗಳು ಎರಡು. ಮೊದಲನೆಯದಾಗಿ: ಅದು ಕಾಲ ದೇಶಗಳನ್ನು ನಿರ್ವಹಿಸುವ ರೀತಿ ಎರಡನೆಯದು. ರೂಪಕಾತ್ಮಕ ಭಾಷೆ, ಕಾಲ ದೇಶಗಳ ನಿರ್ವಹಣೆ

ಎಂದರೆ ಏಕಕಾಲದಲ್ಲಿ ನಡೆಯುವ ಹಲವು ಘಟನೆಗಳಲ್ಲಿ ಒಂದನ್ನು ಸ್ಥಿರವಾಗಿಟ್ಟುಕೊಂಡು ಉಳಿದ ಘಟನೆಗಳನ್ನು ದರ್ಶಿಸುವುದು. ಈ ಹೇಳಿಕೆಯ ನಿದರ್ಶನಕ್ಕಾಗಿ ಕೃತಿಯ ಮೊದಲನೆಯ ವಾಕ್ಯವನ್ನು ನೋಡಬಹುದು.

"ವಾರದ ಹಿಂದೆಯಷ್ಟೇ ಬೆಳಗುಪ್ಪದ ಜಮಿಂದಾರ್ರು ಚಿನ್ನೋಬುಳ ರೆಡ್ಡಿಯನ್ನೂ, ಮುಷ್ಮೂರು ಮಾದಿರೆಡ್ಡಿಯನ್ನೂ ಯೇಕಕಾಲಕ್ಕೆ ಮಣಿಸಿ, ಕಡುಪಾದ ವಸ್ತ್ರವಳಗ ತನ್ನ ಸರೀರದ ಮ್ಯಾಲಿದ್ದ ಪೋಷಾಕನ್ನು ಕಳಚಿ ಕಲೆಟ್ರು ಥಾಮಸು ಮನ್ರೋ ಸಾಹೇಬನು ಯದರಿದ್ದ ನಿಲುಗನ್ನಡಿಯಲ್ಲಿ ನೋಡಿಕೊಳ್ಳುತ ತನ್ನ ಪ್ರತಿಬಿಂಬವನ್ನು ತಾನು ಮೋಹಿಸಿಕೊಳ್ಳುತ್ತಿರುವಾಗ್ಗೆ, ಸಂಡೂರು ಗೆಡ್ಡೆಯ ಕಾರ್ತೀಕ ಸ್ವಾಮಿಯ ಕಾಡಡವಿಯಲ್ಲಿ ಕೂಡ್ಲಿಗಿಯ ಕುಂಪಣಿ ಅಧಿಕಾರಿ ಯಡ್ವರ್ಡ್ಸನು ಹುಲಿ ಚಿರತೆಗಳನ್ನು ಶಿಕಾರು ಮಾಡುತ್ತಿರುವಾಗ್ಗೆ, ಪದಭ್ರಷ್ಟಗೊಂಡಿದ್ದ ನಲ್ಲಚರುವಿನ ಗುರುವಪ್ಪನಾಯಕನು, ಹೆಬ್ಬೆಟದ ಪೆದತಿಮ್ಮಾರೆಡ್ಡಿಯು ಹರಿವಾಣದ ಹರಿಶ್ಚಂದ್ರ ರೆಡ್ಡಿಯು, ಬೆಳಗಲ್ಲಿನ ವೊಂಗಾರಪ್ಪನು ಪಟ್ಟಿಕೊಂಡ ಸಮೀಪದ ಕರಿಯೇಮಲ ದರಣ್ಯೇವ ಗುಪ್ತಜಾಗದಲ್ಲಿ ಕೂಕಂಡು ಕುಂಪಣಿ ಸರಕಾರದ ಕರಾಮತ್ತಿನ ಬಗ್ಗೆ ಚರ್ಚೆ ಮಾಡುತ್ತಿರುವಾಗ್ಗೆ... ಕೇಳಲೂ ಬಾರದ ಹೇಳಲೂ ಬಾರದ ಸಂಗತಿಗಳನು ತಮ ತಮ್ಮ ಕಾಲುಗಳಿಗೆ ಕಟ್ಟಿಕೊಂಡಿದ್ದ ಪಾರಿವಾಳಗಳು ಕುಂತಳ ಸೀಮೆಯ ವಳೀತದ ರಾಯದುರ್ಗದಿಂದ ಚಿತ್ರಕಲ್ಲು ದುರ್ಗದ ಕಡೆಗೂ ಜರುಮಲಿಯಿಂದ ಗುಡೇಕೋಟೆ ಕಡೆಗೂ, ಜಮ್ಮೋಬಲಳ್ಳಿಯಿಂದ ಸಿಡೇಗಲ್ಲಿನ ಕಡೆಗೂ ಹಾರುತ ಮುಗುಲ ಬಯಲಲ್ಲಿ ಅಂಡಾವರನವಾಗಿರುವಾಗ್ಗೆ, ಕೋನಾಪ್ರದ ಕೋನಪ್ಪನಾಯಕನಿಗೂ, ರಾಜಾಪ್ರದ ರಾಜಪ್ಪ ನಾಯಕನಿಗೂ ಬೊಮ್ಮಕ್ಕನ ರಣಬಯಲಲ್ಲಿ ನಡೆದ ಘನಘೋರ ಕಾಳಗದಲ್ಲಿ ಹತ್ತೋರಿಲ್ಲದೆ, ಯಿಳಿಯೋರಿಲ್ಲದೆ ತಮ ತಮ್ಮ ಬೆನ್ನು ಡುಬ್ಬಗಳನ್ನು ಹಗುರ ಮಾಡಿಕೊಂಡಿದ್ದ ನೂರಾರು ಕುದುರೆಗಳು ಯರಡು ಮೂರು ಹರದಾರಿ ದೂರವನ್ನು ಕುಂಟುತ್ತ, ತೆವಳುತ್ತ ಕ್ರಮಿಸಿ ದರವುಜಿ ಕೆರೆಯ ನೀರಿಗೆ ಬಾಯಿ ಅಂಟಿಸಿರುವಾಗ್ಗೆ... ತಮ್ಮ ರಾಜ ನೆಟಕಲ್ಲಪ್ಪ ನಾಯಕನ ವುಪಟಳಕ್ಕೆ ರೋಸಿ ನೂರಾರು ಮಂದಿ ಪ್ರಜೆಗಳು ಹೆಂಡಿರು ಮಕ್ಕಳನ್ನು ಕಟ್ಟಿಕೊಂಡು, ಸಾಮಾನು ಸರಂಜಾಮುಗಳನ್ನು, ಬಂಡಿಗಳಲ್ಲಿ ಹೇರಿಕೊಂಡು ಮದ್ದಿಕೆರೆ ಗ್ರಾಮದಿಂದ ಜೊನ್ನಗಿರಿ ಪ್ರಾಂತದ ಕಡೇಕ ಗುಳೇ ಹೊಂಟಿರುವಾಗ್ಗೆ-ಯಿತ್ತ ಕುದುರೆಡವು ಪಟ್ಟಣದ ಅರಮನೇಲಿ ರಾಜಮಾತೆ ಭಯ್ರಮಾಂಬೆಯು ತನ್ನ ಸವತಿ ಮಗ ಕಾಟಯ್ಯ ನಾಯಕನೊಂದಿಗೆ ವಂದು ಕಾಸಿನ ಸರದ ಯಿಷಯದಲ್ಲಿ ಜಗಳವಾಡುತ್ತಿದ್ದಳು. (ಪು.೦೧ ಅರಮನೆ)

ಇಪ್ಪತ್ತೆರಡು ಸಾಲುಗಳಷ್ಟು ಸುದೀರ್ಘವಾಗಿರುವ ಈ ವಿವರಣೆಯಲ್ಲಿ ಮೋಹಿಸಿಕೊಳ್ಳುತ್ತಿರುವಾಗ್ಗೆ, ಮಾಡುತ್ತಿರುವಾಗ್ಗೆ, ಅಂಡವರನವಾಗಿರವಾಗ್ಗೆ..... ಅಂಟಿಸಿಕೊಂಡಿರುವಾಗ್ಗೆ, ಹೊಂಟಿರುವಾಗ್ಗೆ ಎಂಬಂತಹ ಹಲವು ಕಾಲಸೂಚಕ ಕ್ರಿಯಾಪದಗಳನ್ನು ಈ ವಿವರಣೆ ಚಿತ್ರಿಸುತ್ತದೆ.

ಇನ್ನೂ ಕೆಲವು ಸಂದರ್ಭಗಳಲ್ಲಿ ವರ್ಣನೆಯನ್ನು ಅಪೂರ್ಣವಾಗಿಯೇ ನಿಲ್ಲಿಸಿ ಓದುಗರ ವಿವೇಚನೆಗೆ ಬಿಡುವ ಮೂಲಕ ಕಥನ ಕ್ರಿಯೆ ಮುಂದುವರೆಯುತ್ತದೆ. ಉದಾ: ಆಕಾಸ ರಾಮಣ್ಣನ ಶಿಷ್ಯರಲೊಬ್ಬನಾದ ಕೆಂಚೆಡೆಯನ ಬಗ್ಗೆ ವಿವರಿಸುವ ಸಂದರ್ಭ.

.... ಅರಮನೆಯೊಳಗೋ, ತಿರುಪಾಲಯ್ಯ ಸ್ರೆಷ್ಟಿ ಮನೆಯಾಳಗೋ ಯಿದೆ ಎನ್ನಲಾದ ನಿಧಿಯನ್ನು ದೋಚುವ ಕಾರಣಕ್ಕಾಗಿ ಪಟ್ಟಣದೊಳಗೆ ಬೀಡುಬಿಟ್ಟಿದ್ದರು. ಆ ಕಾರಣಕ್ಕಾಗಿ ಕೆಂಚೆಡೆಯನು ಜೋಗಿ ಜಂಗಮ ರೂಪದಲ್ಲಿ ತಿರುಗಾಡುತ ಆ ಯರಡು ಮನೆಗಳ ಲಯಂಗಿಕ ಅತ್ರುಪ್ತ ಹೆಂಗಸರ ಬಹುದೊಡ್ಡ ಯಾದಿಯನ್ನೇ ತಯಾರಿಸಿಕೊಂಡಿದ್ದನು. ಅವರ ಪಯ್ಕಿ ವಂದಿಬ್ಬರನ್ನು ತನ್ನ ಬಲೆಗೆ ಕೆಡವಿಕೊಂಡಿದ್ದನು.

ಆ ರಾತ್ರಿ ಕೂಡ ಅವರಿಬ್ಬರೂ... (ಪು. ೬೭ ಅರಮನೆ).

ಉದಾ: ಥಾಮಸು ಮನ್ರೋ ಸಾಹೇಬನ ಮಧ್ಯಸ್ಥಿಕೆಗೆ ಹಂಬಲಿಸಿದ ಘಟನೆಯಾವುದೆಂದರೆ!...

ಅದೆಯಾ... (ಪು. ೭೬ ಅರಮನೆ).

ಉದಾ: ಫಲಾನ ಗಳಿಗೆಯಂದು ಹೊಂಟ ಆ ದಿಬ್ಬಣವು ಫಲಾನ ಗಳಿಗೆಗೆ ಸರಿಯಾಗಿ....

ಸಿವಸಂಕರ ಮಾದೇವ... (ಪು. ೧೩೪, ಅರಮನೆ)

ಇಂತಹ ಕಥನತಂತ್ರ ಕಥಾನಕದ ಬಿಡಿಧಾರೆಗಳನ್ನು ಒಂದೆಡೆ ತರತ್ತದಲ್ಲದೆ ಪ್ರಸಕ್ತ ವಿಷಯದ ಅನೇಕ ಮಗ್ಗಲುಗಳನ್ನು ಒಟ್ಟಿಗೆ ನೋಡಲು ಅನುವು ಮಾಡಿಕೊಡುತ್ತದೆ. ಹಾಗೂ ವಿವರಣೆಯನ್ನು ಅರ್ಧಕ್ಕೆ ನಿಲ್ಲಿಸಿ ಓದುಗರ ವಿವೇಚನೆಗೆ ಬಿಡುವ ಕ್ರಿಯೆಯು ಓದುಗರು ಸದಾ ಕ್ರಿಯಾಶೀಲರಾಗಿರುವಂತೆ ಮಾಡುತ್ತದೆ.

ಎರಡನೆಯಾದಾಗಿ ವ್ಯಂಗ್ಯ ವಿಡಂಬನೆಗಳಿಂದ ಮುಕ್ತವಾದ ಸಮಾನ ಧೋರಣೆಯಿಂದ, ಗಂಭೀರ ಹಾಗೂ ಕ್ಷುಲ್ಲಕ ಸಂಗತಿಗಳನ್ನು ವರ್ಣಿಸುವಾಗ ಗಂಭೀರ-ಕ್ಷುಲ್ಲಕ ಅಥವಾ ಮುಖ್ಯ-ಅಮುಖ್ಯ ಎಂಬಂತಹ ದ್ವಿಮಾನ ಶ್ರೇಣೀಕರಣ ಅಳಿಸಿ ಹೋಗಿ, ಸಕಲ ಚರಾಚರ ವಸ್ತುಗಳನ್ನು, ಜೀವಿಗಳನ್ನು, ಘಟನೆಗಳನ್ನು ಸಮಾನವಾಗಿ ನೋಡಲು ಸಾಧ್ಯವಾಗಿರುವ ಭಾಷೆ ಸಹಜವಾಗಿ ರೂಪಕಾತ್ಮಕವಾಗಿದೆ.

ಉದಾ. ಸೂರನೆಂಬ ಕೋಣದ ಪ್ರಸಂಗ, ಧರ್ಮವ್ವ ಮತ್ತು ಚೆನ್ನವ್ವ ದೇವತೆಯರು ನಾಯಿಯ ರೂಪಧಾರಣ ಮಾಡಿದ ಪ್ರಸಂಗ. ಅಂಜನಿ ಎಂಬ ಕೋತಿಯ ಪ್ರಸಂಗ. ಹನುಮನೆಂಬ ಹುಂಜದ ಪ್ರಸಂಗ. ದೇವತೆಗಳು ಮತ್ತು ಸಾಮಾನ್ಯ ಜನತೆಯ ಪ್ರಸಂಗ. ಹೀಗೆ ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಪಾತ್ರಕ್ಕೂ ಅದರದೆಯಾದ ಸ್ಥಾನವನ್ನು ಕಲ್ಪಿಸುವ ಸಲುವಾಗಿ ಪಾತ್ರ, ಪ್ರಸಂಗಗಳಲ್ಲಿ ದ್ವಿಮಾನ ಶ್ರೇಣಿಕರಣವನ್ನು ಅಳಿಸಲು ಭಾಷೆಯನ್ನು ರೂಪಕಾತ್ಮಕವಾಗಿ ದುಡಿಸಿಕೊಂಡಿದ್ದಾರೆ.

ಇಷ್ಟೇ ಅಲ್ಲದೆ ಕಾದಂಬರಿಯಲ್ಲಿ ಅಲ್ಲಲ್ಲಿ...

"ಕವಿವರ್‍ಯಾ... ತಾವುದಾರು? ತಮ್ಮ ನಾಮಂಕಿತ ಯೇನು?" (ಪು ೪೧೭ ಅರಮನೆ).

ಅಲಲಲಯ್ ನಾನು ಥಮಸ್ ಮನ್ರೋ ಸಾಹೇಬ ಯಂದು

ತಿಳಿಯುವಂಥವನಾಗಲಯ್ ಸಾರಥಿ (ಪು ೪೬೫ ಅರಮನೆ).

ಎಂಬಲ್ಲಿ ಬಯಲಾಟದಲ್ಲಿ ಬಳಕೆಯಾಗುವಂತಹ ಮಾತುಗಾರಿಕೆ ಶೈಲಿ ಬಳಸಿಕೊಂಡಿದೆ.

ನಿಸರ್ಗ ಕಾದಂಬರಿಯ ಪ್ರಾದೇಶಿಕ ಚೌಕಟ್ಟು ಅಥಣಿ ತಾಲೂಕನ್ನು ಮೀರಿ ದಾಟುವುದಿಲ್ಲ. ಕಾದಂಬರಿಯ ಮುಖ್ಯ ಕಥಾನಕ ನಡೆಯುವುದು ಅಥಣಿ ತಾಲೂಕಿನ ಚಂದೂರಿನಲ್ಲಿ ನಂತರ ಹಾರೋಗೇರಿ. ಐನಾಪುರ, ತೇರದಾಳ, ಕುರುಂದವಾಡ, ಕಡಚಿ, ಮಂಗಸೂಳಿ, ಪರಮಾನಟ್ಟಿ, ತಾಲೂಕಿನ ಸುತ್ತವೇ ತೀರ ಸಣ್ಣ ವಿಸ್ತೀರ್ಣದಲ್ಲಿ ಕಾದಂಬರಿಯ ಘಟನೆಗಳು ನಡೆಯುತ್ತವೆ. ಈ ಪ್ರದೇಶಗಳು ಮಹಾರಾಷ್ಟ್ರಕ್ಕೆ ತೀರ ಸಮೀಪ ಇರುವುದರಿಂದ, ಅಲ್ಲಿನ ಜೈನರು ಮಾತನಾಡುವ ಮರಾಠಿ ಪ್ರತ್ಯಯಗಳನ್ನು ಹೊಂದಿರುವ ವ್ಯಂಜನಾಕ್ಷರಗಳನ್ನು ಎಳೆದು ಮಾತನಾಡುವ ಭಾಷೆಯನ್ನು ಲೇಖಕರು ಕಾದಂಬರಿಯಲ್ಲಿ ಬಳಸಿಕೊಂಡಿದ್ದಾರೆ. ಕಾದಂಬರಿಯಿಂದಲೆ ಇದಕ್ಕೆ ಉದಾಹರಣೆಯನ್ನು ಕೊಡುವುದಾದರೆ; ೧. "ಇಲ್ಲ; ಅವನ ಬೆನ್ನಮ್ಯಾಲ ಹೆಣ್ಣ ಒಂದ ಹಡದೀಳಲ್ಲ! ಅದರ ಸಯ್ತು. ಆ ಪೋರಿ ಬೆನ್ನಮ್ಯಾಲ ನಾಲ್ಕೈದು ವರ್ಷ ಆಯ್ತ ಯಾನ ಇಲ್ಲ". (ಪು. ೩೦ ನಿಸರ್ಗ).

"ಹೋಗಾಕೋ ಮಹಾರಾಯ, ಎಂಥಾ ಚಂದ ಮಕರಾ ಕಟ್ಟೇದಾರು. ಕೂಡೋಗಲ್ಲ ಒಂದ ತಾಸ..." (ಪು. ೨೨೫ ನಿಸರ್ಗ).

ಹಾಗೆಯೇ ಪಾತ್ರಗಳ ಸಂಭಾಷಣೆಯ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆ ಯಥವತ್ತಾಗಿ ಮೂಡಿಬಂದಿದೆ. ಜೀವನದ ಯಥಾ ಸ್ಥಿತಿಯನ್ನು ಪಾತ್ರಗಳ ಮಾತಿನಲ್ಲಿ ಹಿಡಿಯುವ ಅವರ ಕೌಶಲ ಅಗಾಧವಾದುದು. ಉದಾ. ಹೂವಣ್ಣ ಚಿಮ್ಮವ್ವರ ನಡುವೆ ನಡೆದ ಸಂಭಾಷಣೆ ಹೀಗಿದೆ.

ಹೂವಣ್ಣ ಮಲ್ಲಪ್ಪನ ಮನೆಗೆ ಹೋದಾಗ ತನ್ನ ಸೊಸೆ ತಾರಕ್ಕ ನೆರೆದ ವಿಷಯ ಅವನಿಗೆ ಗೋತ್ತಾಗುತ್ತದೆ ಮನೆಗೆ ಬಂದು ಈ ವಿಷಯವನ್ನು ಹುರುಪಿನಿಂದ ಹೆಂಡತಿ ಚಿಮ್ಮವ್ವನಿಗೆ ಹೇಳುತ್ತಾನೆ.

"ಪೋರಿ ನೆರೆದಂಗ ಕಾಣಸ್ತೇತಿ!" ಧ್ವನಿಯಲ್ಲಿ ಉತ್ಸಾಹವಿತ್ತು.

"ಯಾವಾಗ? ನಮಗ್ಯಾನ ಗೊತ್ತs ಇಲ್ಲಲ್ಲಾ...? ಗೊತ್ತಿದ್ದರ ನಾವ್ಯಾಕ ಕರೀಕ ಹೋಗುತಿದ್ದೆವು?...." ಎಂದಳು.

"ರತ್ನವ್ವ ಎಲ್ಲಾ ಹೊಲಕ ಹೋದ ಮ್ಯಾಲ ಈಗ ನೆರದಿರಬೇಕ.... ಮನ್ಯಾಗ ಅವರ ಯಾರ ಇಲ್ಲ... ಪೋರಿ ಒಂದ್ಸ ಮೂಲ್ಯಾಗ ಸಪ್ಪಗ ಮಾರಿಮಾಡಿಕೊಂಡ ಕೂತೇತಿ.... ಅದಕ್ಕ ಅಂದೀನು...."

"ಎಲ್ಲೇದ ಏಳ: ಇಲ್ಲದ ಒಂದು ಹೇಳತ ಬರತಿ..."

"ಇಲ್ಲs: ಅದರ ಚಿನ್ನ ಕಾಣಸುದುಲ್ಲ ಯಾನ ನನಗೆ....?"

"ಇದ್ದರ ಇದ್ದೋತ ಏಳ" ಎಂದು ಸ್ವಲ್ಪ ತಡೆದು "ಇದೊಂದು ಛಲೂನ ಆಯ್ತು: ಇನ್ನೊಂದು ನಾಲ್ಕು ದಿನ ಹೊಗಿರ ನಮ್ಮ ಮನ್ಯಾಗ ಬಂದ ನೆರೀತಿಳ... ಕೂಡಸೋದಾ ಬಿಡೋದಾ ಎಲ್ಲಾ ನಮ್ಮ ಸುತ್ತಹತ್ತತ್ತಿತ್ತ ... ಅಲ್ಲೇ ಆಯ್ತು ನೆಟ್ಟಗಾಯ್ತಿ" ಎಂದಳು.

"ಅವರರ ಯಾನ ಕೂಡಿಸತಾರು....? ಅವರದೂ ಎಲ್ಲಾ ಹರತಾಟ್ಸ ಆಗೀತಿ.... ಮದವಿ ಮಾಡಿಕೊಟ್ಟ ಇನ್ನೂ ಮೂರು ವರ್ಷ ತುಂಬಿಲ್ಲ" ಎಂದ ಹೂವಣ್ಣ ಆಕಳಿಸುತ್ತಾ.

"ಯಾನ ಆಯ್ತು ಹರತಾಟ, ಆದರ ಕೂಡಸ್ಯಾರಲ್ಲ.... ಯಾನ ಮ್ಯಾಲಿಂದ ಮ್ಯಾಲ ಆಗೋದ ಏತಿ....? ತಮ್ಮ ಮಗಳ ಐಸಿರಿ ಯಾವಾಗ ಆಗೋದ ಆಯ್ದು...? ಎಂದು ಹಟಾತ್ತಾಗಿ ಚಿಮ್ಮಮ್ಮ ಚುಚ್ಚಿ ನುಡಿದಳು.

"ನಿಮ್ಮ ಮಗನದೂ ಐಸಿರಿ ಇಲ್ಲ್ಯಾನ ಅನ್ನಾವರಲಾ ಅವರೂ!" ಸಹಜ ನುಡಿದ ಹೂವಣ್ಣ.

ಚಿಮ್ಮವ್ವ ಸಿಡುಕಿನಿಂದ ಹರಿದು ಬಿದ್ದು "ಹುಂ! ನೀನs ಅನ್ನ ಅವರ ಕಡೆ ಆಗಿ...! ಇಷ್ಟ ಅವರ ಮುಂದನ್ನ ಅಂದರ.... ಅವರ ಏರೇ ಕೂಡತಾರ...! ಎಂದಳು. ಸ್ವಲ್ಪ ತಡೆದು "ನಿನಗೂ ಚಂದ ಕಾಣೂಕ ಹತ್ತೇತೆ ಮನ್ಯಾಗ ಸೊಸೀನ ತಂದ ಕೂಡಸ.... ಮಕರಾ ಕಟ್ಟಿ ಬಾರಸಲಾಕ ಹಚ್ಚಿ, ಊರಿಗೆ ಊಟ ಹಾಕಲ್ಲ. ನಂದ್ಯಾನ ಹೋಗತೇತಿ..." ಕೊಂಕು ನುಡಿ ಆಡಿದಳು. ಅಣಕದ ಸ್ವರದಲ್ಲಿ ಗೋಣು ಹಾಕುತ್ತಾ.

"ಹಾಲಿಲ್ಲ ಬಟ್ಟಲ ಇಲ್ಲ... ಈಗs ಗುಟಕ್ ಅಂತ... ಆಕೆ ನೆರೀಲಕ ಕೂಡಸಲಾಕ ಬಂದೋತ. ಎಲ್ರೆ...? ನಮ್ಮ ಮನ್ಯಾಗರ ಈಗೆಲ್ಲಿ ಹತ್ತೆಂಟ ಕಾರಣ ಆಗಿದಾವು. ಬ್ಯಾಸರಲಾಕ...? ಬರೀ ಜನ್ಮದಾಗ ದುಡದ ದುಡದ ಬರೇ ದುಡ್ಡು ಗೋಳೇ ಮಾಡೋದ ಆಯ್ತಲ್ಲ. ಹೆಗ್ಗಣ ಮಣ್ಣ ಗೋಳೆ ಮಾಡಿದಂಗ, ಒಮ್ಮಿನಾಲ್ಕ ಮಂದಿ ಬಾಯಾಗ ಅನ್ನ ಹಾಕೂನು ಅಲ್ಲ ಯಾನ ಸತ್ತರ ಸಂಗಾಟ ಒಯ್ಯೋದೇತಿ... ಅಷ್ಟ ಬಡಕೋತಿ...?"

"ಹತ್ತತೊಲಿ ಬಂಗಾರ ಹಾಕತಾರ ಯಾನ ಕೇಳ್ರಿ. ಅಳ್ಯಾಗ.. ಕೂಡಸೂನು ನಮ್ಮದ್ಯಾನು ಹೋಗತೇತಿ...?" ತನ್ನ ಗುಣ ಬಿಡಲಿಲ್ಲ ಚಿಮ್ಮವ್ವ (ಪು.೫೬ ನಿಸರ್ಗ).

ಈ ಚಿಕ್ಕ ಸಂಭಾಷಣೆಯಲ್ಲಿ ಒಡಮೂಡಿದ ಸಂಘರ್ಷಗಳು, ನಿಲುವು ಒಲವುಗಳು ಮೌಲ್ಯಗಳು ಈ ಕಾದಂಬರಿಯ ಇಡಿಯ ವಸ್ತುವಿನಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ಇಂತಹ ಪಾತ್ರಗಳ ಸಂಭಾಷಣೆಯನ್ನು ಪ್ರಾದೇಶಿಕ ಭಾಷೆಯಲ್ಲಿಯೇ ತಂದುಕೊಡುವಲ್ಲಿ ಯಶಸ್ವಿಯಾಗಿರುವ ಅಣ್ಣಾರಾಯರು. ನಿರೂಪಣೆಯಲ್ಲಿ ಪ್ರಾದೇಶಿಕ ಭಾಷೆಯನ್ನು ತರುವಲ್ಲಿ ಸೋತಿದ್ದಾರೆ. ಬದಲಿಗೆ ಗ್ರಂಥಸ್ಥ ಭಾಷೆಯನ್ನು ಬಳಸಿಕೊಂಡಿದ್ದಾರೆ.

ಬಹುಶಃ ತಮ್ಮ ಬದುಕಿನ ಜೀವನಾನುಭವವನ್ನು ಕಾದಂಬರಿಯ ಪಾತ್ರಗಳ ಬಾಯಲ್ಲಿ ಮಾತನಾಡಿಸುವ ಅಣ್ಣಾರಾಯರಿಗೆ ನಿರೂಪಣೆಗೆ ಬೇಕಾಗುವ ಅನ್ಯಭಾಷೆಯ ಓದುವಿಕೆಯಿಲ್ಲದ್ದರಿಂದಲೇ ಹೀಗಾಗಿರಬಹುದೇನೋ, ಎದೇ "ವೈಚಾರಿಕತೆಯ ಅಭಾವದ ಮೂಲಕ ಪಾತ್ರಗಳ ಮಾನಸಿಕ ಅವಸ್ಥೆಗಳನ್ನಾಗಲಿ, ಸಾಮಾಜಿಕ ಸಂಘರ್ಷಗಳನ್ನಾಗಲಿ ಸೂಕ್ಷ್ಮವಾಗಿ ವಿಶ್ಲೇಷಿಸಿ ಒಂದು ಆಳವಾದ ಜೀವನದರ್ಶನ ನೀಡುವ ಕೆಲಸ ಮಿರ್ಜಿ ಯವರ ಪ್ರತಿಭೆಗೆ ನಿಲುಕದ ವಿಷಯ" (ಶಾಂತಿನಾಥ ದೇಸಾಯಿ ಮಿರ್ಜಿ ಅಣ್ಣಾರಾಯರ ಸಾಹಿತ್ಯ ಪು.೧೬) ಎನ್ನುತ್ತಾರೆ, ಶಾಂತಿನಾಥ ದೇಸಾಯಿಯವರು. ಕಾರಣ ಏನೇ ಇರಲಿ ಲೇಖಕರು, ಕಾದಂಬರಿಯ ನಿರೂಪಣೆಗೆ ಸಂದರ್ಭದಲ್ಲಿ ಒಮ್ಮೊಮ್ಮೆ ಗ್ರಾಂಥಿಕ ಭಾಷೆಯನ್ನು ಬಳಸಿ ತಮ್ಮ ನಿರೂಪಣೆಗೆ ಶಕ್ತಿ ತುಂಬುತ್ತಾರೆ.

ಉದಾ: ತಾರಾ ಅನಂತನಿಗೆ ಚಂದೂರಿನ ತಮ್ಮ ಮನೆಯಲ್ಲಿ ಊಟಕ್ಕೆ ಬಡಿಸುವಾಗ ಅನಂತ ತಾರಾಳ

ಕಣ್ಣುಗಳು ಕೂಡಿಕೊಳ್ಳುತ್ತವೆ. ಇಬ್ಬರ ಮೈ ಜುಮ್ಮೆನ್ನುತ್ತದೆ. ಈ ಪ್ರಸಂಗವನ್ನು ಅಣ್ಣಾರಾಯರು "ನಿಸರ್ಗದ ನಲ್ವೋಟದ ಮಲ್ಲಿಗೆಯ ಮುಗುಳದು" ಎಂದು ವರ್ಣಿಸುತ್ತಾರೆ. ಅಣ್ಣಾರಾಯರಿಗೆ ಇಂತಹ ವಿಲೋಮ ಪ್ರೇಮ ತಪ್ಪೆಂದು ಅನಿಸುವುದಿಲ್ಲ. ಬದಲಾಗಿ ಅದನ್ನು ನೈಸರ್ಗಿಕ ಕ್ರಿಯೆ ಎಂಬಂತೆ ವರ್ಣಿಸಿದ್ದಾರೆ.

ತಾರಾ ಮತ್ತು ಅನಂತ ನಿಸರ್ಗಸಹಜವಾಗಿ ಕೂಡಿಕೊಂಡಾಗ ಅದರ ವರ್ಣನೆ ಮಾಡಲು ಅಣ್ಣಾರಾಯರು ಪ್ರಾದೇಶಿಕವಾದ ಸಹಜ ಭಾಷೆಯನ್ನು ಬಿಟ್ಟು ತೀರ ಭಾರವಾದ ಗ್ರಾಂಥಿಕ ಭಾಷೆಗೆ ಇಳಿಯುತ್ತಾರೆ.

"ಪಡುವಣ ಬಾಂದಳದಲ್ಲಿ ಚಂದ್ರ ಇಳಿಯುತ್ತಿದ್ದ. ಅವನ ಮುಖ ಬೆಳ್ಳಗಾಗಿದ್ದಿತು. ಭೂವಧುವನ್ನು ಮುತ್ತಿಡುತ್ತಿರುವನೇನೋ ಆತ ಅನಂತ ಪ್ರೇಮದಿಂದ! ಎದುರುಗಿರುವ ಉಷೆಯ ಮುಖವೂ ಆರಕ್ತ ವಾಯಿತಿದನು ಕಂಡು. ಅವಳ ಮುಖದಲ್ಲಿ ಮೂಡಿದ ಮುಗುಳನಗೆಯೆಂಬಂತೆ ತಾರೆಯೊಂದು ಮಿನುಗುತ್ತಿತ್ತು. ಪೂರ್ವಭಾಗದಲ್ಲಿ ಇದೆಲ್ಲವನ್ನು ಕಂಡೂ ಕಾಣದವಳಂತೆ ಕೃಷ್ಣೆ ಬದಿಗಾಗಿ ಹರಿಯುತ್ತಿದ್ದಳು. ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳ ಹಾಡು ಹೊರಟಿತು (ಪು ೧೫೩ ನಿಸರ್ಗ).

ಹೀಗೆ ಇನ್ನು ಕೆಲವು ಕಡೆ ನೀತಿ, ನಿರೂಪಣೆಗಾಗಿ ಲೇಖಕರು ಗ್ರಂಥಸ್ಥ ಭಾಷೆಯನ್ನೇ ಆಯ್ದುಕೊಂಡಿದ್ದಾರೆ.

ಒಟ್ಟಿನಲ್ಲಿ ನಿಸರ್ಗ ಅಥಣಿ ತಾಲೂಕನ್ನು ಮೀರಿ ದಾಟುವುದಿಲ್ಲ. ಕಾದಂಬರಿಯ ಎಲ್ಲಾ ಘಟನೆಗಳು ನಡೆಯುವುದು ಜೈನಧರ್ಮವೇ ಪ್ರಧಾನವಾಗಿರುವ ಪ್ರದೇಶದಲ್ಲಿ, ಆ ಪ್ರದೇಶದ ಜೈನ ಸಮಾಜದ ಸಂಪ್ರದಾಯಗಳು, ಮದುವೆಯ ಸಂಭ್ರಮ, ಮಗಳನ್ನು ಗಂಡನ ಮನೆಗೆ ಕಳಿಸುವಾಗಿನ ದೃಶ್ಯ, ಸೊಸೆಯನ್ನು ಮನೆತುಂಬಿಸಿಕೊಳ್ಳುವ ಕಾರ್ಯ, ಶೋಭನ ಪ್ರಸ್ತ, ದೇವತೆಗಳಿಗೆ ಮಾಡುವ ಹಬ್ಬ-ಹರಕೆಗಳು, ಪಂಡಿತನಲ್ಲಿ ಮೂಹೂರ್ತ ಕೇಳುವುದು ಉಡಿಕೆ ಮಾಡಿಕೊಳ್ಳುವ ಪದ್ಧತಿ, ಜಾತ್ರೆ, ಪೂಜಾರಿ ಮೈಮೇಲೆ ದೇವರು ಬರುವುದು. ಊರ ಭವಿಷ್ಯ ಹೇಳುವುದು. ಇತ್ಯಾದಿ ಘಟನೆಗಳನ್ನು ನಿರೂಪಿಸುವಾಗ ಪ್ರಾದೇಶಿಕ ಭಾಷೆ ಯಾವ ಅಡತಡೆಯೂ ಇಲ್ಲದೆ ಸಶಕ್ತವಾಗಿ ಮೂಡಿಬಂದಿದೆ.

ದೇವನೂರು ಮಹಾದೇವರವರು 'ಕುಸುಮಬಾಲೆ' ಕಾದಂಬರಿಗೆ ಚಾಮರಾಜನಗರ ಮತ್ತು ಅದರ ಸುತ್ತಮುತ್ತಲಿನ ಭಾಷೆಯನ್ನು ಬಳಸಿದ್ದಾರೆ. ಆದರೂ ಭಾಷೆಯ ಶೈಲಿಯು ವೈವಿದ್ಯಮಯವಾಗಿ ಗ್ರಹಿಕೆಗೆ ಬರುತ್ತದೆ.

ಕೃತಿಯ ವಸ್ತು, ವಿಷಯ, ಆಶಯ ಪಾತ್ರಗಳ ನಿರ್ವಹಣೆ ಬೆಳವಣಿಗೆಯಲ್ಲಿ ಭಿನ್ನತೆಯನ್ನು ತೋರುತ್ತಾ ನಮ್ಮ ನಿರೀಕ್ಷೆಗಳನ್ನು ಹುಸಿಗೊಳಿಸುತ್ತಾ ಮುನ್ನಡೆಯುವ ಕಾದಂಬರಿಕಾರರು, ಕಾದಂಬರಿಯ ನಿರೂಪಣಾ ವಿಧಾನ ಹಾಗೂ ಭಾಷೆಯ ವಿಷಯದಲ್ಲಿಯೂ ಕೂಡ ಹೊಸತನವನ್ನು ಮೆರೆದಿದ್ದಾರೆ. ಡಾ. ಸಿ.ಎನ್. ರಾಮಚಂದ್ರನ್‌ರವರು ಗುರುತಿಸುವಂತೆ "ಕುಸುಮಬಾಲೆ ದೇವನೂರರ ಮುಂಚಿನ ಬರಹದ ಭಾಷೆಯಲ್ಲ. ಜಾತ್ಯಾಧರಿಸಿದ ಸ್ಥಳೀಯ ಕನ್ನಡ ಪ್ರಭೇದವೂ ಅಲ್ಲ. ಬದಲಿಗೆ ಕನ್ನಡ ಪ್ರಾದೇಶಿಕ ದಲಿತ ಕನ್ನಡ" (ಡಾ. ಸಿ.ಎನ್. ರಾಮಚಂದ್ರನ್, ಯಾರಜಪ್ಪಿಗೂ ಸಿಗದ ನವಿಲುಗಳು, ಪು. ೭೨) ಎಂಬ ಅವರ ಅಭಿಪ್ರಾಯವು ಉಲ್ಲೇಖನಿಯವಾದುದಾಗಿದೆ.

ಉದಾ. ಯಾಡ ಊರ ಜನರ ದನಗಳನ್ನು ಅಡವಿಯಲ್ಲಿ ಕಳೆದುದಕ್ಕೆ ಊರ ಜನರಿಗೆ ವಿವರಣೆ ಕೊಡುವ ಸಂದರ್ಭ ಹೀಗಿದೆ. "ನಂಗ ಹೊಟ್ಟಿಕಳ್ತ ಬಂತು. ಜೀತಗಾರ ಐಕಳ್ಗ ನೋಡ್ಕಳಿ ಅಂದಿ. ನಾನು ಹಳ್ಳಕ ವೋದಿ. ಅದ್ಯಾಕಕನಿ ಸುಸ್ತಾದಂಗಾಯ್ತು, ಬಂದವ ಮುತ್ತುಗದ ಮರ್ದ ನೆರಳಲಿ ಮಲಿಕಂದಿ. ಅದ್ಯಾಕಕನಿ ನಂಗಾ ಮಾಯ್ದ ನಿದ್ದಾವು ಬಂತು ಅಗುತಗತ್ತು. ನಿದ್ದ ತಿಳ್ದು ಕಣ್‌ಬುಟ್ಟೀ ನನ್ ಸುತ್ತಾ ಬಿಕೋ ಅಂತಿತ್ತು.... (ಪುಟ ೧೨೭-೧೨೮ ಕುಸುಮಬಾಲೆ).

ಅತ್ಯಂತ ಗ್ರಾಂಥಿಕ ಭಾಷೆ ಮುಖ್ಯವಾಗಿ ವಿಡಂಬನೆಯ ಸಂದರ್ಭದಲ್ಲಿ ಬಳಕೆಯಾಗಿದೆ. ತಮ್ಮ ತಮ್ಮನ ಆಸ್ತಿಯನ್ನು ತನ್ನದಾಗಿಸಿಕೊಂಡ ಬಸಪ್ಪಸೋಮಿಯ ಹತ್ತಿರ ಪಾಲಿಗಾಗಿ ಬರುವ ಅಕ್ಕಮಹಾದೇವಮ್ಮ ನೊಂದಿಗೆ ಅವನಾಡುವ ಮಾತುಗಳು ಗ್ರಾಂಥಿಕ ಕನ್ನಡದ್ದು ಹಾಗೂ ನಾಟಕೀಯವಾದುದು.

"ಯಾರಮ್ಮ ತಾಯಿ ನೀನೂ? ಅಪರಿಚಿತಳಾದ ನೀನು ಬರಲು ಕಾರಣವೇನು?"(ಪು.೧೧೦ ಕುಸುಮಬಾಲೆ)

ಹಾಗೆಯೇ ಚೆನ್ನನ ಮೇಷ್ಟ್ರಾದ ಮಧ್ವಾಚಾರ್ಯರು ಚೆನ್ನನೊಡನೆ ಸಂಭಾಷಿಸುವ ಮಾತುಗಳು.

ಉದಾ "ಶಿಷ್ಯನಾದ ಚೆನ್ನನು ಏನೋ ಅಚಾನಕ್ ತಮ್ಮನ್ನು ನೋಡದೆ ನಿಂತಿದ್ದಾನೆ ಅಷ್ಟೇ. ನೋಡಿದ್ದಲ್ಲಿ ಅವನೆಂದಾದರು ಹಾಗೆ ನಿಲ್ಲುತ್ತಿದ್ದನ್ಯೆ: ಅಂಥವನಲ್ಲಾ ಅವನು" (ಪು.೧೫೪ ಕುಸುಮಬಾಲೆ).

ಹೀಗೆ ಕಾದಂಬರಿಯಲ್ಲಿ ಅಲ್ಲಲ್ಲಿ ಬರುವ ಅಮಾನವೀಯತೆ (ಅಕ್ಕಮಹಾದೇವಮ್ಮನನ್ನು ಒಂದು ಹೆಣ್ಣೆಂದೂ ಸಹ ನೋಡದೆ ಗೋಮಾಳದಲ್ಲಿ ಬಿಸುಡುವುದು) ಹಾಗೂ ಪರಂಪರಾಗತ ಧಾಂಬಿಕ ಆಚರ (ನನಗಂತೂ ಜಾತಿಭೇದವು ಇಲ್ಲವಪ್ಪಾ)ಗಳ ನಿರೂಪಣೆಗೆ ಲೇಖಕರು ಗ್ರಾಂಥಿಕ ಭಾಷೆಯನ್ನು ಬಳಸಿಕೊಂಡಿದ್ದಾರೆ.

ಕಾದಂಬರಿಕಾರರು ಹಳೇಬಾಕಿಯ ಸಾಬರು ಬಳಸುವ ದಖನಿ ಉರ್ದು ಶೈಲಿಯ ಕನ್ನಡವನ್ನೂ ಸಮರ್ಥವಾಗಿ ನಿರೂಪಿಸಿದ್ದಾರೆ.

"ಅರೆರೆ ಅಮ್ಮಾಸ, ಎಲ್ಲಿ ಹೋಗಿದ್ದೂ ಮಾದರ್‌ಚೋತ್. ನಿನ್ದು ಮಾಲುಯಾಕ್ಲ ಈಗೀಗ ಕಾಣ್ತಿಲ್ಲಾ ಬೋಸುಡಿಕೆ. ಬ್ಯಾರೆಯವರ್ಗೆ ಬಿಕರಿ ಮಾಡ್ತ ನಮಾಕ್ ಹರಾಮ್‌ಗಿರಿ ಮಾಡ್ತಿದ್ದೀಯೆನ್ಲೆ ನಿನೌನ ಬೋಸುಡಿಕೆಯ. ನಮ್ದುಕೆ ಗೊತ್ತಾಗಲ್ಲ ಅಂದ್ಕಡಿದದೀಯೇನ್ಲೆ ನಿನಕ್ಕನ್? ಈಗ ಅಡ್ವಾನ್ಸ್ ದುಡ್ನುಮಡ್ನು ಬುಟ್ಟು ಮುಂದ್ಕ ಇಸ್ಪೆಫ್ ಇಡು" (ಪು. ೧೭೮ ಕುಸುಮಬಾಲೆ).

ಗೇಯತೆಯನ್ನೊಳಗೊಂಡ 'ಮಲೆಯ ಮಾದೇಶ್ವರ' ಜಾನಪದ ಕಾವ್ಯದ ಲಯಬದ್ಧ ಕನ್ನಡವನ್ನು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ (ಅಸ್ತಿತ್ವವನ್ನು ಕಳೆದುಕೊಳ್ಳುವ ಸಂದರ್ಭ), ಉಪಯೋಗಿಸುತ್ತಾರೆ. ಉದಾ. ಭಾವ ಮೈದುನರಿಂದ ಹೊರಹಾಕಲ್ಪಟ್ಟ ಅಕ್ಕಮಾಹಾದೇವಮ್ಮ ತನ್ನ ಮಗು ಯಾಡನಿಗೆ ಜೀವ ತುಂಬಲು ಪ್ರಯತ್ನಿಸುವ ಸಂದರ್ಭ.

ಯಾಡನ ತಲ್ಲ ಭೂಮಿ ಮ್ಯಾಲ ಇಟ್ಟವಳಾಗಿ

ಎದ್ದು ಅಕ್ಕಮಹಾದೇವಮ್ಮ ನಡೆದವಳಾಗಿ ಬಂದಳು

ಆ ಕಣ್ಣೀರು ತುಂಬಿದ್ದ ಕೆರೆಯ ಕರೆಗ. ಸರಣು

ಆ ಕೆರಗ ಮೂರು ಸಲ ಮಾಡಿದಳು, ಕಣ್ಣುಗ

ಆ ಕೆರೆಯ ನೀರ ಮೂರು ಸಲ ಒತ್ತಿಕೊಂಡಳು. ಪ್ರಾತಿಸುತ

ಆ ಮೂರು ಬೊಗಸೆ ನೀರ ಕುಡ್ದಾಳು. (ಪು.೧೨೧)

ಈರಿಯ ಮಗುವಿನ ಸಾವು-ಬದುಕಿನ ಸಂದರ್ಭ;

ಆ ಬಂದವರು ಯಾರ ಹೋದವರು ಯಾರ

ಯಾರೋ ಆ ಮೂಳ್ವ ಗೋರ್ಕಂಡರು.

ಕುಸುಮಾಳಿಗೆ ಮತಿಭ್ರಮಣೆಯಾದ ಸಂದರ್ಭ;

ಆಗ ಕುಸುಮಾಳ ಕಣ್ಣಳ ಜಲವು ನಿಂತೀತಲ್ಲಾ

ಆಗ ಆ ಕೆನ್ನೇಲಿದ್ದಾ ಜಲವು ಆ ಕೆನ್ನೇಲಿ ಹಿಂಗೀತಲ್ಲಾ

ಆಗ ಅರಗಣ್ಣು ಮಾಡ್ದ ಕುಸುಮಾಳು ವಾಲಾಡಿಯೇ ವಾಲಾಡ್ತಾ

ಹೀಗೆ ಪರಿಣಾಮಕಾರಿಯಾದ ಭಾಷೆಯನ್ನು ಲೇಖಕರು ನಿರೂಪಣೆಗಾಗಿ ಬಳಸಿಕೊಂಡಿದ್ದಾರೆ. ಅಲ್ಲದೆ ಭೂತ, ವರ್ತಮಾನ, ಭವಿಷ್ಯತ್ ಕಾಲಗಳಲ್ಲಿ ನಿರೂಪಿತಗೊಂಡಿರುವ ಕಥಾನಕವು ಒಂದು ಓದಿಗೆ ಗ್ರಹಿಕೆಗೆ ಬರದೆ ಭಾಷೆಯೂ ಕಷ್ಟವಾಗಿ ಓದುವುದೇ ದುಸ್ತರವಾಗಬಹುದು. ತಾಳ್ತಜೆ ವಸಂತಕುಮಾರರು 'ಸಂಕ್ರಮಣ'ದಲ್ಲಿ ಪ್ರಕಟಿಸಿದ ಲೇಖನ, ಅದು ಎಬ್ಬಿಸಿದ ಪ್ರತಿಕ್ರಿಯೆ. ಕುಸುಮಾಲೆಗೆ ಮುನ್ನುಡಿಯನ್ನು ಬರೆಯುತ್ತ, ಪಿ. ಲಂಕೇಶರವರು ಪಡುವ ಅಭಿಪ್ರಾಯ. 'ಇದು ಕನ್ನಡಕ್ಕೆ ಅನುವಾದವಾಗಲೇ ಬೇಕು' ಎಂಬ ಚಂಪಾರವರ ವಿರೋಧಗಳು 'ಕುಸುಮಬಾಲೆ' ಕೃತಿಯ ಭಾಷೆ ಮತ್ತು ನಿರೂಪಣೆಯ ಕ್ಲಿಷ್ಟತೆಯ ಬಗ್ಗೆ ಬೆಳಕು ಚೆಲ್ಲಿದಂತೆ 'ಕುಸುಮಬಾಲೆ' ಕಾದಂಬರಿಯನ್ನು ಇಂಗ್ಲಿಶ್‌ಗೆ ಅನುವಾದ ಮಾಡುವಾಗ ಮೂಲದ ಸೊಗಡು ಇದರಲ್ಲಿ ಬಾರದಲ್ಲ ಎಂದು ಮಮ್ಮಲನೆ ಮರುಗಿದ್ದೇನೆ. ಇನ್ನು ಇದನ್ನು ನೀರಸವಾದ ಸ್ಟ್ಯಾಂಡರ್ಡ್ ಕನ್ನಡಕ್ಕೆ ಅನುವಾದ ಮಾಡಿದರೆ ಇದನ್ನು ಕೊಂದಪಾಪ ಅಕ್ಷಮ್ಯವಾದುದು" ಎಂದು ಹೇಳುವ ಪೋಲಂಕಿ ರಾಮಮೂರ್ತಿ ಹಾಗೂ "ನಮ್ಮ ವಿಮರ್ಶೆಯ ಮಾನದಂಡಗಳನ್ನೇ ಬದಲಿಸಿಕೊಳ್ಳಬೇಕು" ಎಂದು ಹೇಳುವ ಜಿ.ಎಚ್. ನಾಯಕರ ಮಾತುಗಳು ಕುಸುಮಬಾಲೆ ಕೃತಿಯ ವೈಶಿಷ್ಟ್ಯವನ್ನು ತಿಳಿಸುತ್ತದೆ.

ಗ್ರಾಮಾಯಣದಲ್ಲಿ ಲೇಖಕರು ನಿರೂಪಣೆಗೆ ಸರಳತೆಯನ್ನೇ ಅವಲಂಬಿಸಿದ್ದಾರೆ ಕ್ಲಿಷ್ಟತೆಗಾಗಲಿ ಚಮತ್ಕಾರ ಕ್ಕಾಗಲಿ ಇಲ್ಲಿ ಆಸ್ಪದವಿಲ್ಲ. ಅಲ್ಲಲ್ಲಿ ಉಪಮೆ ರೂಪಕಗಳು ಜಾಣ್ನುಡಿಗಳು ಶೈಲಿಯ ಕಾಂತಿಯನ್ನು ಹೆಚ್ಚಿಸುತ್ತವೆ. ಆದರೆ ಪಾತ್ರಗಳ ಸಂಭಾಷಣೆಯ ಸಂದರ್ಭದ ಕೌಶಲ್ಯ ಅದ್ಭುತವಾದುದಾಗಿದೆ. ಸಂಭಾಷಣೆಗಳೆಲ್ಲ ಬಳಕೆ ಮಾತಿನಲ್ಲಿಯೇ ಬರೆಯಲ್ಪಟ್ಟಿವೆ. ಉದಾ:

"ನೋಡೋ ಮಲ್ಲಪ್ಪ ಕಾಕಾ, ಹಾದೀ ಹೆಣಾ ಆಗುವರ್‍ನ ಮನ್ಯಾಗ ಇಟಗೊಂಡರ, ಪುಣ್ಯೇ ಬರತೇತಿ ಅಂತ ನೀವೆಲ್ಲಾ ಹೇಳದಿರಿ. ಈಗ ಹವಾಲ್ದಾರ ಸಾಹೇಬ ಬೇಡಿ ಹಾಕತೀನಂತಾನ ನೋಡು" ಎಂದು ಚಂದ್ರವ್ವ ಕೂಡಿದ ಜನರಲ್ಲಿಯೇ ವಯೋವೃದ್ಧನಾಗಿದ್ದ ಮಲ್ಲಪ್ಪನನ್ನುದ್ದೇಶಿಸಿ ನುಡಿದಳು.

"ಇರ್ಲಿ ತಂಗೀ, ಅಮಲ ಯಾರ ಕೈಯಾಗ ಐತಿ? ಮನಸ ಬಂದರ ಬೇಡೀನೂ ಹಾಕಾರು. ಇಲ್ಲದಿರಕ ಕೂರಿಗಿ ಹೊಲಾನೂ ಹಚ್ಚಿಕೊಟ್ಟಾರು ಶಿವನ್ನ ನಂಬಿ ಮನಸ ನಿರಂಬಳಾಗಿಟುಗೊಂಡ ನಡದರಾತು ಸಹಜ ನಿರೂಪಣೆ ಇದೆ. (ಪು. ೧೭೧ ಗ್ರಾಮಾಯಣ).

ಕೆಲವೆಡೆ ನಾಟಕೀಯವಾದ ಸನ್ನಿವೇಶಗಳಲ್ಲಿ ಲೇಖಕರು ಆಯಾ ಪಾತ್ರಗಳಿಗನುಗುಣವಾಗಿ ವಿವಿಧ ಶೈಲಿಯನ್ನು ಉಪಯೋಗಿಸಿದ್ದಾರೆ.

ಉದಾ. ಮಾದಾರ ಚೆನ್ನನ ಮಾತುಗಳಿಗೆ ಬಯಲಾಟದ ಭಾಷೆಯಲಯವಿದೆ.

"ಯಪ್ಪಾ, ಕರೇ ಹೇಳಿದರೂ ಕೇಳತೀ, ಸುಳ್ಳು ಹೇಳಿದರೂ ಕೇಳತಿ. ದೇವರ ಮುಂದ ಸುಳ್ಳು ಹೇಳಲ್ಯಾ ಯಪ್ಪಾ? ಗುಳೇ ಹೋಗೂದು ಟರಾಯಸಿತರೀ. ಅದಕ ಕಾಳು ತಿರುಗಿ ಕೊಟ್ಟು ರಿಣಾ ಮುಟ್ಟಿಸಿದರ ಪಾಡ ಆಗಕಿಲ್ಲರೇ? ಗೌಡರು ನಮ್ಮಂತವರ್‍ನ ಕಟ್ಟಿ ಕೆಳಗ ನಿಲ್ಲಗೊಡುದಿಲ್ಲ ಇನ್ನ ಕಾಳ ಕ್ಕೊಟ್ಟಾರ್‍ರೇ? ಹಾಗಿದ್ದರೆ ನಿನ್ನ ಮಗಾ ಇಲ್ಲಿ ಬಂದು ಬೀಳತಿದ್ನs ಯಪ್ಪಾ? ಎಂದು ಸುಳ್ಳಿನ ಕಂತೆಯನ್ನು ಬಿಚ್ಚಿದ.

"ಗೌಡರು ಕೊಡಲಿಲ್ಲ ಅಂತ ಇಲ್ಲಿ ಬಂದಿದ್ದಿ ಹೌದಲ್ಲೊ ಮಗನ್s?" ಪಡದಯ್ಯ ಗುಡುಗಿದರು.

"ಯಪ್ಪಾ, ನೀ ತಂದಿ, ನಾ ಮಗಾ, ನೀ ಕೆಸರ ನಾ ನೀರ. ಕಳ್ಳುಹ್ಯಾಗ ಬಿಟ್ಟೀರತಯಪ್ಪಾ? ಇಂತಾ ಕೆಡಗಾಲದಾಗ ಅಪ್ಪನ ಪಾದಾ ಬಿಟ್ಟು ಅತ್ತಿತ್ತ ಹೋದನರೇ ಮಗಾ? ನೀ ಕೊಡಬೇಕು; ನಾ ಉಣಬೇಕು; ನೀ ಮುಂದ ಕರಿಬೇಕು; ನಾ ಬರಬೇಕು; ನೀ ಬಯ್ಯಬೇಕು, ನಾನಗ ಬೇಕು. ಚನ್ನನ ಮಾತಿನಲ್ಲಿ ಭಕ್ತಿಯ ಸಲಿಗೆ ಇತ್ತು". (ಪು. ೭೪ ಗ್ರಾಮಾಯಣ).

ಹಾಗೆಯೇ ಇಪ್ಪತ್ತುನಾಲ್ಕು ತಾಸು ಧ್ಯಾನದಲ್ಲಿ ಮಗ್ನನಾದ ಕೆಂಚ ಗಾಂಜಿಯ ಅಮಲಿನಲ್ಲಿ ಲೋಕೋತ್ತರವಾದ ಮಾತುಗಳನ್ನಾಡಬಲ್ಲ. ಅವನಿಗಿದ್ದ ಲೋಕಾನುಭವ ಬಾಳಾಚಾರ್ಯರಿಗೂ ಇರಲಿಲ್ಲ. ದಾದಾನ ಮೈಮೇಲೆ ಗಂಡಾಂತರ ಬಂದದ್ದನ್ನು ಕೇಳಿ ಅವನಿಗೂ ಸಂಕಟವಾಗಿತ್ತು.

"ಕರೇವಂದ್ರೂ ದಾದಾನ ಮ್ಯಾಗ ಖಟ್ಲೆ ಜಡೂತಾರೇನ್ರಿ ಬುದ್ಧೀ?" ಎಂದು ಕೇಳಿದ.

"ಸುಳ್ಳು ಹೇಳಾಕ ನಾ ಏನು ಸುಡುಗಾಡ ಸಿದ್ದ ಅಂತ ತಿಳದೀ ಏನಲೇ ಕೆಂಚಾ?" ಪಡದಯ್ಯನವರು ಚೇಷ್ಟೆಯ ದನಿಯಲ್ಲಿ ನುಡಿದರು.

"ಹಿಂಗ್ಯಾಕ ಅಂತೀರಿ ಬುದ್ಧೀ? ಅಬ್ಬರಲೆ ಬಂದದ್ದು ಮಳೀ ಅಲ್ಲಾ, ಗಬ್ಬ ಆಗದ್ದು ದನಾ ಅಲ್ಲ, ಒಬ್ಬರ ಮುಂದ ಗುಟ್ಟು ಹೇಳಾವಾ ಅಮಲ್ದಾರ ಅಲ್ಲಾ ಅಂತಾರು. ಆ ಮಾತ ನೆಪ್ಪಾತ ಯಪ್ಪಾ, ಕೈ

ಬೆಚ್ಚಗ ಆದರ ಬಾಯಿಗೆ ಕೀಲಿ ಬಿದ್ಹಾಂಗ ಈ ಅಪಗೋಳದು. ಮುಂಜಾನೆ ನೋಡಿದರಿಲ್ಲೋ, ಆ ಸಂಗ್ಯಾನ ಹಿಡಿದೇನ ಕುಂಡರಿಸಿದಾ; ದುಡ್ಡು ಕೈಗೆ ಬರಾಣಾ ಹ್ಯಾಗ ಹೇಳದ ಕೇಳದಾ ಬಿಟ್ಟಾ. ನಾಲ್ಕು ದುಡ್ಡು ಹಿರೀಲಾಕ ಬಾಯಿ ಸಡ್ಲ ಬಿಟ್ಟರಾಕಿಲ್ಲ ಬುದ್ಧೀ?" ಎಂದು ತನ್ನ ಅನುಭವವನ್ನೇ ವಾದಿಸುತ್ತಾನೆ (ಪು. ೧೦೦ ಗ್ರಾಮಾಯಣ). ಎಂಬಲ್ಲಿ ಕೆಂಚನ ಮಾತುಗಳು ಲೋಕತ್ತಾವಾಗಿ ಮೂಡಿಬಂದಿವೆ. ಕೆಂಚನ ಮತ್ತೊಂದು ಚಟ ಯಾವುದಾದರೂ ಪ್ರಸಂಗವನ್ನು ಕತೆಯಂತೆ ಸ್ವಾರಸ್ಯವಾಗಿ ಹೇಳುವುದು. ಕತೆಯನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿ ಜನರನ್ನು ಕಾತರರನ್ನಾಗಿಸಿ ಮುಂದುವರೆಸುವುದು. ಇಂತಹ ಅನೇಕ ಪ್ರಸಂಗಗಳಲ್ಲಿ ಇವನ ಭಾಷೆಯು ಕಥಾನಾತ್ಮಕವಾಗಿ ಲಯವಾಗಿ ಮೂಡಿಬಂದಿದೆ.

ಇನ್ನೂ ಮೊದಲನೆಯ ಮತ್ತು ಮೂರನೆಯ ಪ್ರಕರಣದಲ್ಲಿ ನದಿಯ ತೀರದಲ್ಲಿ ಹೆಂಗಳೆಯರಾಡುವ ಮಾತುಗಳು ತಾಯಿನೆಲದಿಂದಾಲೇ ಅರಳಿವೆ. ಇದಕ್ಕೆ ಕಾದಂಬರಿಯಲ್ಲಿ ಬರುವ ಪ್ರಸಂಗವನ್ನು ನಿದರ್ಶಿಸು ವುದಾದರೆ

"ಅಲ್ಲ ನಿಂಗವ್ವಾ, ಹತ್ತು ಮಕ್ಕಳು ಮನ್ಯಾಗ ಇದ್ದ ಉಪಾಸ ಬೀಳೂ ಹೊತ್ತು ನಮಗ ಬಂತು. ತಾಯೀ ಮಗಾ ಇಬ್ಬರ್‍ಯ ಅದೀರಿ; ಆದರೂ ಗೌಡರ ಹಗೇದಾಗಿನ ಆರು ಚೀಲು ಜ್ವಾಳಾ ತಂದು ಮನ್ಯಾಗ ತುಂಬಿಸಿಕೊಂಡೀದಿ. ಹೊಸಾ ಗೌಡನ ಚಿಗವ್ವ ಆದದ್ದಕ್ಕೂ ಸಾರ್ತಕ ಆತೇಳು!" ಎಂದು ತಳವಾದ ನಾಗವ್ವ ಚುಚ್ಚಿ ಮಾತಾಡಿದಳು.

ನಿಂಗವ್ವ.... "ಆ ಕಾಳೆಲ್ಲ ನಮಗ್ಯ ಅಂತ ತಿಳೀಬ್ಯಾಡ ನಾಗವ್ವಾ. ಲಿಂಗಪ್ಪಗೌಡರು ತಮಗs ಬೇಕೂ ಅಂತ ಹೇಳಿ ನಮ್ಮ ಮನ್ಯಾಗ ಕಾಳ ಹಚ್ಚ್ಯಾರು" ಎಂದು ಸಮರ್ಥಿಸಿಕೊಂಡಳು.

"ಪಾಡಾತೇಳ ಚಿಗವ್ವಾ. ಮನೀಗೆ ಮಗಾ-ಸೊಸೀ-ಮೊಮ್ಮಗಾ ಎಲ್ಲಾರೂ ಬಂದು ಮನೀ ತುಂಬಿ ದ್ಹಾಂಗಾತೇಳು" ಎಂದು ನಾಗವ್ವ ಇನ್ನಷ್ಟು ಆ ರಹಸ್ಯವನ್ನೂ ಬಯಲಿಗೆಳೆದಳು. ಅವಳ ಮಾತಿನಲ್ಲಡಗಿದ್ದ ಅಪೂರ್ವ ಧ್ವನಿಸಾಮರ್ಥ ಚಿಮಣಾಳ ಕತೆಯನ್ನು ಹೊರಗೆ ತರುವಂತಿತ್ತು (ಪು. ೩೯-೬೦ ಗ್ರಾಮಾಯಣ) ಎಂಬಲ್ಲಿ ಪ್ರಾದೇಶಿಕ ಭಾಷೆಯು ಯಥಾವತ್ತಾಗಿ ಮೂಡಿಬಂದಿದೆ.

ಶಂಕರಪ್ಪಗೌಡರ ದರ್ಪೋದತ್ತ ಮಾತುಗಾರಿಕೆ, ಬಾಳಾಚಾರ್ಯರ ಅನುಭವ ಮತ್ತು ಅನುಭಾವದ ನುಡಿಗಳು. ಶೇಷಪ್ಪನ ಕಾಯಿದೆ ಪಾಂಡಿತ್ಯ, ಪಡದಯ್ಯನ ಢಾಂಬಿಕತೆ ಮನಸೆಳೆಯುವ ವೈಖರಿ. ದಾದಾನ ಮೊಂಡುತನ, ಚಂದ್ರಿಯ ಬಿನ್ನಾಣದ ಮಾತುಗಳು ಇವೆಲ್ಲವೂ ಸ್ವಾಭಾವಿಕವಾಗಿಯೇ ಬಣ್ಣಗೊಂಡು ಬಂದಿವೆ. ಆದರೆ ಪಕುರುದ್ದೀನ ಸಾಹೇಬ, ಗಿಬ್ಸನ್, ಮಹಾರಾಜರಂಥ ಅನ್ಯದೇಶೀಯ ವ್ಯಕ್ತಿಗಳ ವಿಷಯದಲ್ಲಿ ಸಂಭಾಷಣೆ ಯಶಸ್ವಿಯಾಗಿಲ್ಲ.

ಉದಾ: ಗಿಬ್ಸನ ಸಾಹೇಬರು.... ಬಾಳಾಚಾರ್ಯರ ನಡುವಿನ ಪ್ರಸಂಗ "ಇದೇನು ರಾಜಪುರೋಹಿತರೇ, ತೀರ ನಸುಕಿನಲ್ಲಿಯೇ ಸ್ನಾನಕ್ಕೆ ಬಂದಂತಿದೆ" ಎಂದು ಸಾಹೇಬರು ಮಾತನಾಡಿಸಿದರು. ಆಚಾರ್ಯರು...

“ದಿನಾ ನಸುಕಿನ್ಯಾಗ ಎದ್ದು ಕೃಷ್ಣಾಸ್ನಾನ ಮಾಡುವ ರೂಢಿ ಇಟ್ಟಿಗೊಂಡೀನಿ ಸಾಹೇಬರ. ಈಗ ಐವತ್ತು ವರ್ಷ ಆಗಿರಬೇಕು, ಈ ರೂಢಿ ಎಂದೂ ತಪ್ಪಿಸಿಲ್ಲ” ಎಂದು ವಿನಯದಿಂದಲೇ ಆಚಾರ್ಯರು ಉತ್ತರವಿತ್ತರು.

“...... ನೀವು ಪ್ರವಾಹಕ್ಕೆ ಸಿಕ್ಕು ತೇಲಿಹೋಗುವಿರೆಂದು ನಾನು ಗಾಬರಿಯಾಗಿದ್ದೆ. ನಾನು ಕೂಗುವ ಮೊದಲೇ ನೀವು ಅನಾಯಾಸವಾಗಿ ದಂಡೆಗೆ ಬಂದು ಮುಟ್ಟಿದಿರಿ” ಎಂದು ಮುಗುಳುನಗುತ್ತಲೇ ಹೇಳಿದರು (ಪು. ೨೯೪ ಗ್ರಾಮಾಯಣ).

ಇವರಿಬ್ಬರ ಸಂಭಾಷಣೆಯಲ್ಲಿ, ಬಾಳಾಚಾರ್ಯರ ಮಾತುಗಳು, ಪ್ರಾದೇಶಿಕ ಭಾಷೆಯ ಸೊಗಡಿನಿಂದ ಕೂಡಿದ್ದರೆ, ಗಿಬ್ಸ್‌ನ ಸಾಹೇಬರದು. ಶಿಷ್ಟ ಅಥವಾ ಗ್ರಂಥಸ್ಥ ಭಾಷೆಯಿಂದ ಕೂಡಿರುವುದನ್ನು ಗಮನಿಸಬಹುದು. ಇಂತಹ ಕೆಲವು ಪ್ರಸಂಗಗಳನ್ನು ಬಿಟ್ಟರೆ ಗ್ರಾಮಾಯಣ ಪ್ರಾದೇಶಿಕ ಸೊಗಡಿನಿಂದ ಕೂಡಿದ ಕಾದಂಬರಿಯೆಂದು ಹೇಳಲು ಯಾವ ಅಡ್ಡಿಯೂ ಇಲ್ಲ.

ವೈಶಾಖ ಕಾದಂಬರಿಯಲ್ಲಿ ಗುರುತಿಸಬಹುದಾದ ಭಾಷಾ ವೈವಿಧ್ಯತೆ ಎರಡು ಬಗೆಯದ್ದು. ಒಂದು ಸಂಸ್ಕೃತದ ಕ್ಲಿಷ್ಟ ಪದಗಳ ಜೋಡಣೆಯೊಂದಿಗೆ ಶಿಷ್ಟಭಾಷೆಯನ್ನು ಪ್ರದರ್ಶಿಸುವ ಮೇಲ್ವರ್ಗ.

ಉದಾ: ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುವ ಲಕ್ಷ್ಮಮ್ಮ ರುಕ್ಮಿಣಿಯರ ಪ್ರಸಂಗ.

“ಯಾಕೆ ರುಕ್ಕೂ, ಈ ಚಾಳಿ ನಿನಗ್ಯಾಕೆ ಅಂಟಿತು? ಕೇಳಿಲ್ಲವೇನೆ ಹಿರಿಯರು ಹೇಳಿದ ಮಾತು? ಪಗಡೆ ಆಡಿ ಪಾಂಡವರು ಕೆಟ್ಟರು, ಇಸ್ಪೀಟಾಡಿ ಇದ್ದಬದ್ದವರೆಲ್ಲ ಕೆಟ್ಟರು ಅಂದು? ಇದ್ದಬದ್ದವರ ವಿಚಾರ ಯಾಕೆ? ನನ್ನ ತಮ್ಮನ ವಿಷಯಾನೆ ತೆಗೆದುಕೊ ಎಡತೋರೆಲಿ ಹೋಟಲಿಟ್ಟು ಭರ್ಜರಿ ಸಂಪಾದ್ನೆ ಮಾಡ್ತಿದ್ದ. ಏತನ್ಮಧ್ಯ ಯಾವ ತಲೆಮಾಸಿದವನು ಹಿಡಿಸಿದನೋ ಹುಚ್ಚನ್ನ ಅದೇನೋ ಮೂರೆಲೆ ಆಟವಂತಲ್ಲಮ್ಮ ಆ ಚಟಕ್ಕೆ ಬಲಿಯಾಗಿ ಕೊನೆಗೆ ಸಮಸ್ತ ಆಸ್ತೀನೂ ಕಳೆದುಕೊಂಡು ಎಕ್ಕಹುಟ್ಹೋದ!...” (ಪು.೧೩೮-೩೮ ವೈಶಾಖ).

ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸಮುದಾಯವನ್ನು ಪ್ರತಿನಿಧಿಸುವ ಕೃಷ್ಣಾಶಾಸ್ತ್ರೀ ಮತ್ತು ಗೋಸುಸಾಬ್‌ರ ಪ್ರಸಂಗ.

“ನಾನೂ ಇವಳ ಹಿಂದೆಯೇ ಹೊರಟೆ. ನಮ್ಮ ತೋಟದ ಬಾಗಿಲಿನಲ್ಲಿ ಒಂದು ಭಾರಿ ಕಾಳಿಂಗಸರ್ಪ ಅಡ್ಡ ಆಯ್ತು. ಹಾಗೆ ಹಾವು ಅಡ್ಡಬಂದಾಗ ಮುಂದೆ ಹೋದರೆ ಕಂಟಕವೆಂದು ತಿಳಿದವರು ಹೇಳ್ತಾರೆ. ಆದ್ದರಿಂದ ಪುನಃ ತೋಟದೊಳಕ್ಕೆ ಹೋಗಿ, ಕೊಂಚ ವೇಳೆ ಅಲ್ಲೇ ಕುಳಿತಿದ್ದೆ. ಆ ಕಾರಣಂದಲೆ ಬರೋದು ತಡವಾಯ್ತು. ಅಷ್ಟರಲ್ಲಿ ಈಪೋಲಿಪಟಾಲಂ” ಎನ್ನುತ್ತಿರುವಂತೆ, ಗೋಸು ಸಾಬರು ಹಣೆಹಣೆ ಚಚ್ಚಿಕೊಳ್ಳುತ್ತಾ,

“ನಿಮ್ಮದು ಬ್ರಾಂಬರ್ದು ಒಳ್ಳೆ ಕತೆ, ಸ್ವಾಮಿ.... ಕುಂತರೆ ಸಾಸ್ತ್ರ, ನಿಂತರೆ ಸಾಸ್ತ್ರ” (ಪು. ೨೨೨).

ಕಾದಂಬರಿಯಲ್ಲಿ ಗುರುತಿಸಬಹುದಾದ ಇನ್ನೊಂದು ಭಾಷಿಕ ಅಂಶ ಏನೂ ಅರಿಯದ ಅಜ್ಞಾನದ ಯಥವಾತ್ತಾದ ಗ್ರಾಮ್ಯಭಾಷೆಯನ್ನು ಪ್ರತಿನಿಧಿಸುವ ಬ್ರಾಹ್ಮಣೇತರ ವರ್ಗ(ಮಧ್ಯಮ ಮತ್ತು ಕೆಳಸಮುದಾಯ).

ಉದಾ: ಮಧ್ಯಮ ವರ್ಗವನ್ನು ಪ್ರತಿನಿಧಿಸುವ ನಂಜೇಗೌಡ ಮತ್ತು ಅಡವಿಯಪ್ಪರ ಪ್ರಸಂಗ.

"ಇದ್ಯಾಕೋ ಸುಮ್ಮಕಾದೆ? ಪಂಚಾತೀಲಿ ನಾನಿರಕಿಲ್ವ.... ಆ ಬಜಾರಿಗೆ ವಸಿ ಬುದ್ಧಿ ಕಲಿಸಿ, ನಿನ್ನ ತಂಟೆಗೆ ಬರದಂತೆ ಮಾಡ್ತೀವಪ್ಪ... ಅದು ಚೆಂದವೂ, ಇಲ್ಲ ನೀ ಇಂಗೆ ಬೋಗಳ ತಿಂತಿರಾದು ಚೆಂದವೂ, ನೀನೇ ಯೋಳಿಬಿಡು".

ಅಡವಿ ತಬ್ಬಿಬ್ಬಾದ್ನಂತೆ.

"ನಂಗೊಂದೂ ವೊಳೀತಾನೆ ಇಲ್ಲ. ಎಂಗೆ ಮಾಡಾದು ಗ್ವತ್ತಾಗ್ತಾ ಇಲ್ಲ"

ಇದೇ ನಿನ್ನ ಕೊನೆ ಮಾತ ಅಂಗಾರ ಬುಡು (ಪು ೨೩೪ ವೈಶಾಖ).

ಕೆಳಸಮುದಾಯವನ್ನು ಪ್ರತಿನಿಧಿಸುವ ಲಕ್ಕ ಮತ್ತು ಸಿವುನಿಯರ ಪ್ರಸಂಗ.

"ಈಟು ಜಿನ ನೀನು ಮಾಡಾಕಿದ್ರೂವೆ, ಇನ್ನೂ ಉಳಕಂಡಿದ್ದವ ಮಾಂವುಸದ ತುಂಡುಗಳು?" ಅಂದ.

ಸಿವುನಿ ಬೆಚ್ಚಿ, ಗಕ್ಕನೆ ತಿರುಗಿ

"ನೀನಾ? ಬುಡ್ತು ಅನ್ನು. ನಾನೇಟು ಬೆಚ್ಕ್ಯೋದಿ ಅಂತಾವ?" ಅಂದೋಳು, ಸಾವರಿಸಿಕತ್ತ, "ಅಡೀಲೆಲ್ಲೊ ವಸಿ ಉಳುದವೆ ಕನಣ್ಣ. ಇನ್ನೊಂದು ವೊತ್ತು, ತಪ್ಪದೆ ಏಡೊತ್ತು ಅಟ್ಟರೆ ಮುಗೀತು" ಅಂದ್ಲು.

"ಅಂಗಾರೆ ಈ ನಾತ್ರೀಕೆ ರಾಗಿಮುದ್ದೆ ಜ್ವತ್ಗೆ ಈ ಬಾಡಿನ ಸಾರನೂವೆ ಮಾಡು ಮತ್ತೆ ...." ಬಾಯಿ ಚಪುರಸ್ತ, ಲಕ್ಕ ಸೂಚನೆ ಕ್ವಟ್ಟ.

"ನಾತ್ರೀಕೆ ನೀ ಯೋಳ್ದಂಗೆ ಬಾಡಿನ ಸಾ ಮಾಡಾದ್ಯಾನೋ ಮಾಡ್ತೀವ್ನಿ. ಆದ್ರೆ ನಿನ್ನಗಂಟ ನೀಡಕ್ಕೆ ಅಯ್ಯ ಅದ ಬುಡಬೇಕಲ್ಲ?"... ಸಿವುನಿ ಯೇಳ್ತಾ ಯೇಳ್ತಾ, ನಗಾಡಿ. ಅದೇತಾನೆ ಎಚ್ಚರಾಗಿ ಕಜೆ ತಗುದ ಕೂಸ ತತ್ತಿಗಂಡು ಎದೆಕಚ್ಚುಸ್ತಿರೋನೂವೆ (ಪು. ೧೫೦ ವೈಶಾಖ).

ಈ ಉದಾಹರಣೆಗಳನ್ನು ಗಮನಿಸಿದಾಗ ಭಾಷೆಯ ದೃಷ್ಟಿಯಿಂದ ಬ್ರಾಹ್ಮಣರ ಭಾಷೆ ಮತ್ತು ಬ್ರಾಹ್ಮಣೇತರರ ಭಾಷೆ ನಿರೂಪಿತವಾಗಿದೆ ಅಲ್ಲದೆ, ನಿರೂಪಕರು ಸಂದರ್ಭಕ್ಕನುಸಾರವಾಗಿ ಬ್ರಾಹ್ಮಣರ ಭಾಷೆಯಲ್ಲೂ-ಬ್ರಾಹ್ಮಣೇತರರ ಭಾಷೆಯಲ್ಲೂ ನಿರೂಪಿಸಿರವುದನ್ನು ಗಮನಿಸಬಹುದು. ಇದರ ಬಗ್ಗೆ ವಿವರಣೆಯನ್ನು ನೀಡುತ್ತ ಡಾ. ಕೆ.ವಿ. ನಾರಾಯಣರವರು ಹೀಗೆ ಅಭಿಪ್ರಾಯ ಪಡುತ್ತಾರೆ. "ಕೆಳಸಮುದಾಯ ಅಥವಾ ಲಕ್ಕನನ್ನು ಪ್ರತಿನಿಧಿಸುವಾಗ ಏನೂ ಅರಿಯದ ಯಥಾವತ್ತಾದ ಗ್ರಾಮ್ಯಭಾಷೆನ್ನು ನಿರೂಪಣೆಗೆ ಮಾಧ್ಯಮವನ್ನಾಗಿಸಿಕೊಂಡಿದ್ದಾರೆ. ಅಥವಾ ಅವನ ಸಾಮಾಜಿಕ ಉಪಭಾಷೆಯನ್ನು ಬಳಸಲಾಗಿದೆ. ಆದರೂ ಶಿಕ್ಷಿತ ಮನಸ್ಸೊಂದು ಹೊರಗಿನಿಂದ ಆ ಸಾಮಾಜಿಕ ಉಪಭಾಷೆಯನ್ನು 'ಕೇಳಿ' ತಾನು ಅದನ್ನು ಬಳಸುತ್ತಿರುವ ಪರಿ ಉದ್ದಕ್ಕೂ ಢಾಳಾಗಿ ಕಾಣುತ್ತದೆ. ಆದರೆ ಅಂತರಂಗ ಪರಿವೀಕ್ಷಣೆಯ ಸಂದರ್ಭದಲ್ಲಿ ಹಾಗೂ ಪ್ರಥಮ ಪುರುಷ ನಿರೂಪಣೆಯಿರುವೆಡೆ ಕೆಲವೊಮ್ಮೆ ತಟಕ್ಕನೆ ಸರ್ವಸಾಕ್ಷಿತ್ವ ನಿರೂಪಣೆಯು ಪ್ರವೇಶಿಸುವುದುಂಟು. ಹೀಗಾದಾಗ ಗೊಂದಲ ಉಂಟಾಗುತ್ತದೆ. (ಪ್ರಸಂಗ ಪು. ೧೨೦) ಪ್ರಸಂಗ ಮೊದಲಾಗುವುದು ರುಕ್ಮಿಣಿಯ

ಪ್ರಥಮತೆಯಿಂದ ಆದರೆ ಕೆಲವು ವಾಕ್ಯ ಕಳೆದಂತೆ ಸರ್ವಸಾಕ್ಷಿತ್ವ ನಿರೂಪಣೆಗೆ ಜಾರಲಾಗಿದೆ. ನಡುವೆ ಮತ್ತೆ ರುಕ್ಮಿಣಿಯ ಮೂಲಕ ನಿರೂಪಣೆ ಹೀಗೆ ವ್ಯತ್ಯಯಗೊಳ್ಳುವುದನ್ನು ಗಮನಿಸಬಹುದು. ಇದು ಬರವಣಿಗೆಯಲ್ಲಿನ ಅವಧಾನದಿಂದ ಸಂಭವಿಸಿದೆ. ಹಾಗೂ ಮೂರು ಬಗೆಯ ನಿರೂಪಣಾ ವಿಧಾನವನ್ನು ಬಳಸಿದ್ದರಿಂದಾಗಿ ಅವಧಾನವು ಘಟಿಸಿದೆ" (ಡಾ. ಕೆ.ವಿ. ನಾರಾಯಣ, ಬೇರು, ಕಾಂಡ, ಚಿಗುರು, ಪು. ೩೩೦) ಎಂಬುದವಾಗಿ ಹೇಳುವ ಅವರ ಅಭಿಪ್ರಾಯವನ್ನು ಉಲ್ಲೇಖನೀಯವಾದುದಾಗಿದೆ.

ಬದುಕು ಕಾದಂಬರಿಯಲ್ಲಿ ಗೀತಾನಾಗಭೂಷಣರವರು ಗುಲ್ಬರ್ಗಾ ಜಿಲ್ಲೆಯ ಆಡುಮಾತನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಾದೇಶಿಕ ವಿಶಿಷ್ಟವಾಗಿರುವ ಜನಪದ ನುಡಿಗಟ್ಟು, ಗಾದೆ, ಒಗಟು, ಹಾಡು, ಉರ್ದು ಭಾಷೆಯ ಪದಪುಂಜಗಳನ್ನು ಬಳಸಿರುವುದರಿಂದ ಕಾದಂಬರಿಯ ಸತ್ವಸೊಬಗು ಹೆಚ್ಚಾಗಿದ್ದು, ಭಾಷೆ ಅತ್ಯಂತ ಸಮರ್ಥವಾಗಿ ಶಕ್ತಿಯುತವಾಗಿ ಮೂಡಿಬಂದಿದೆ.

ಪ್ರಾದೇಶಿಕ ಭಾಷೆಯ ಸೊಬಗಿನಿಂದ ಅಥವಾ ಕಲಾತ್ಮಕತೆಯಿಂದ ಮೂಡಿಬಂದುದಕ್ಕೆ ಕಾದಂಬರಿಯಿಂದಲೇ ಕೆಲವು ಸಂದರ್ಭಗಳನ್ನು ಉದಾಹರಿಸಬಹುದು.

"ಗುಡ್ಡದ ನೆತ್ತಿಯ ಮೇಲೆ ಆಕಾಸಂಬೋ ಆಕಾಸದ ಮಾರಿಯೆಲ್ಲಾ ಜಾಜ ಬರೆದಂಗಾಗಿ ಕೆಂಪಗೆ ಲಾಲ್ ಲಾಲ್ ಆಗಿತ್ತು. ತಣ್ಣಗ ಆವಾಜು ಮಾಡುತ್ತ ಬೀಸಿ ಬರೋ ಅಡವಿಮ್ಯಾಲಿನ ಗಾಳಿ ಆ ಗುಡ್ಡದ ತಂಪೆರಚಿ ಮೈಗೆ ಕೆಳಗಿಳಿದು ಸಿಂದಿಬನದ ಕಡೆಗೆ ನಡೆದಿತ್ತು. ನೋಡು ನೋಡುತ್ತಿದ್ದಂಗೇ ಮುಗಿಲ ಮಾರಿಯ ಕೆಂಪಿನಲ್ಲಿ ಅಲ್ಲೀಟು ಹಳದಿ, ಇಲ್ಲೀಟು ಕೇಸರಿ, ಮತ್ತೀಟು ಬಂಗಾರದ ಬಣ್ಣ ಕಲಸಿದಂಗಾಗಿ ಬೆಳಗು ಹುಟ್ಟಿ ಕೈಕಾಲು ಬಡಿಯುತ್ತಿತ್ತು. ಕರಿ ಬಿಳಿ ಮೋಡಗಳ ಸಂದಿಗೊಂದಿಯಲ್ಲಿ ಕೈಕಾಲು ಚಾಚುತ್ತ, ಬೆಳಗು ಬಲಿಯುತ್ತ, ಚಿನ್ನದ ನೀರು ಚಿಮುಕಿಸುತ್ತ ಹಂಗೇ ತುಸು ಕೆಳಜಾರಿ ಗುಡ್ಡದ ಪಾದಕ್ಕಂಟಿಕೊಂಡೇ ಮೈತುಂಬಿಕೊಂಡು ನಿಂತಿದ್ದ ಶಿವಳ್ಳಿಯ ಮನೆ, ಗುಡಿಸಲುಗಳ ನೆತ್ತಿಯ ಮೇಲೆ ಝಲ್ಲನೆ ಹರಿದು ಬಂದಿತು" (ಪು. ೧ ಬದುಕು).

"ಗಂಡಗ ಮಾಡಿಕುಡ್ತೇವಂದ್ರ ಹಳ್ಳಿ ಗಂಡ ನನಗ ಬ್ಯಾಡಂತಂದು ಈಗ ಈ ಶಾರಪಟ್ಟಣದ ಮಿಂಡಗಿಟ್ಕೊಂಡು ಹಾದರ ಮಾಡ್ಕೋತ ನಮ್ಮ ಮಾರೀಗಿ ಮಸಿ ಬಳೀಲಕ್ಕತ್ತಿದ್ದೇನೇ ಭೋಸಡಿ? ಹಡಸಿ ಹಾದರಗಿತ್ತಿ.... ನಿಮ್ಮಪ್ಪಗ ಈಗ ಆ ಸಾವ್ಕಾರ ನನ್ ಹಾಟ್ಯಾ ಯಾಕ ಕರ್‍ಸ್ಯಾನಂಬೋದು ನಿನಗ ಗೊತ್ತಾದಾಯೇನಗs ಕಾಶೀ.... ಒಂದೇ ನನ್ನ ಗಂಡನ ಕೂದಲೆಳಿಗಿ ಧಕ್ಕಿ ಆಗ್ಬೇಕು ನೋಡು. ನಿನ್ನ ಜೀವಾಂನೆ ತಗೋತಿನಿ ನಾನೂ, ಈ ಸಾವ್ಕಾರನ ಮಗನ ಜತಿ ಏನು ಚೆಲ್ಲಾಟಾ ನಡೆಸಿದೇ ರಂಡಿ (ಪು. ೧೯ ಬದುಕು).

"ಬಿಸಲು ಸತ್ತು ಮುಸ್ಸಂಜೆ ಹುಟ್ಟಿ ಮುಗಿಲ ನೆತ್ತಿಮ್ಯಾಲ ಹುಲ್ಲಿನ ಹೊರಿ, ಕಟಗಿ ಹೊರಿ ತಗೊಂಡು ಮನೀಗಿ ಹೊಳ್ಳಿ ಹೊಂಟಿದ್ದರು. ದನಗೋಳು ದಂಪಾಧೂಳಿ ನೆಲಾ ತುಳ್ಕೋತ ಊರಕಡಿ ನಡೆದಾಗ ರಸ್ತಾದ ಧೂಳೆಲ್ಲ ಮಂಜಿನಂಗೆ ಆಕಾಸಕ್ಕಡರಲಕತ್ತಿತ್ತು". (ಪು. ೨೦೫ ಬದುಕು).

ಹೀಗೆ ಕಾದಂಬರಿಯುದ್ದಕ್ಕೂ ವಿಶಿಷ್ಟವಾದ ಪ್ರಾದೇಶಿಕ ಪದಗಳಿಂದ ಉರ್ದು ಭಾಷೆಯ ಎರಕದಿಂದ, ಪರಸ್ಪರ ಸಾವಯವ ಸಂಬಂಧದಿಂದ ಸಾಗುವ ಕಾದಂಬರಿ ಸಹಜವಾಗಿ ಮಾತನಾಡಿದಂತೆ ಬರುವ ಭಾಷೆಯಿಂದಾಗಿ ಯಥಾವತ್ತಾಗಿ ಮೂಡಿಬಂದಿದೆ. ಲೇಖಕರು ಪ್ರಾದೇಶಿಕ ಭಾಷೆಯಲ್ಲಿ ಅಲ್ಲಿನ ಜನಜೀವನವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಅಸ್ಪೃಶ್ಯರು ಕಾದಂಬರಿಯಲ್ಲಿ ವೈದೇಹಿಯವರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ಕೋಟ್ಟ ಭಾಷೆಯನ್ನು ಬಳಸಿಕೊಂಡಿದ್ದಾರೆ. ಅವರ ಎಲ್ಲಾ ಬರವಣಿಗೆಯಲ್ಲಿ ಬರುವ ಕುಂದಾಪುರದ ಉಪಭಾಷೆಯ ಬಳಕೆಯ ಬಗ್ಗೆ ಅವರೇ ಹೇಳುವಂತೆ "ನಾನು ಕುಂದಾಪುರದ ಭಾಷೆಯನ್ನು ಬಳಸಿದ್ದು ಅವುಗಳ ಮೇಲಿನ ವ್ಯಾಮೋಹದಿಂದಲ್ಲ. ಅದನ್ನು ಉಳಿಸುವ, ತಿಳಿಸುವ, ಪ್ರಚಾರಪಡಿಸುವ ಮುಂತಾದ ಯಾವ ಭ್ರಮೆ ಅಥವಾ ಗರ್ವದಿಂದಲೂ ಅಲ್ಲ. ಜೀವನದ ಕಷ್ಟ, ಸುಖ, ತುಡಿತಗಳನ್ನು ನಾನು ಕಂಡ ಪರಿಸರದಲ್ಲೆ ಬಿಡಿಸಿಕೊಳ್ಳುವಾಗ, ಕೆಲಸ ಸಂದರ್ಭಗಳಲ್ಲಿ ನನಗಲ್ಲದ ಭಾಷೆಯನ್ನು ಹೊರತುಪಡಿಸಿ, ಗ್ರಾಂಥಿಕ ಕನ್ನಡ ವನ್ನಿಡಲು ಸಾಧ್ಯವಾಗಲೇ ಇಲ್ಲ. ಆ ಪರಿಸರದಲ್ಲೆ ಬೆಳೆದಿರುವ ನನಗೆ ಅಗತ್ಯ ಸನ್ನಿವೇಶಗಳಲ್ಲೇ ಮಾತುಗಳನ್ನು ಅಲ್ಲಿನ ರೀತಿಯಲ್ಲಿಯೇ ಹೇಳಿಕೊಳ್ಳದಿದ್ದರೆ, ಪಾತ್ರಗಳು ಸ್ಪಷ್ಟವಾಗಿ ಕಾಣಿಸುವುದೇ ಇಲ್ಲ. ಒಂದು ಜನ ಸಮುದಾಯ ಜೀವಿಸುವ ಸೀಮೆ, ಅವರ ಬದುಕು, ಹೋರಾಟ, ಪರಿಸರಗಳು ಒಂದು ಭಾಷೆಯನ್ನು ಕಟ್ಟಿ ಬೆಳೆಸಿಕೊಡುತ್ತವೆ. ಅದನ್ನು ಒತ್ತಾಯ ಪೂರ್ವಕವಾಗಿ ಯಾಕೆ ಬೇರ್ಪಡಿಸಬೇಕು. ಹಾಗೇ ಬೇರ್ಪಡಿಸಿದರೆ ಬರವಣಿಗೆಯ ನಾಭಿಯಿಂದ ಹೊರಡುವ ಸ್ವರಕ್ಕೆ ಧಕ್ಕೆಯಾದೀತಲ್ಲವೆ" (ವೈದೇಹಿ ಸಮಾಜಶಾಸ್ತ್ರಜ್ಞಯ ಟಿಪ್ಪಣಿಗೆ ಎರಡು ಮಾತು ಎಂಬ ಆರಂಭದ ಪುಟದಿಂದ) ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಕಾದಂಬರಿಯೂ ಕೂಡ ಕುಂದಾಪುರದ ಪ್ರಾದೇಶಿಕ ವಿಶಿಷ್ಟ ಪದ, ಗಾದೆ, ನುಡಿಗಟ್ಟು, ಬೈಗಳುಗಳು ಹಾಗೂ ತುಳು ಭಾಷೆಯ ಮಿಶ್ರಣದೊಂದಿಗೆ ಕಾದಂಬರಿಯು ಸರಳವಾಗಿ, ಸ್ಪಷ್ಟವಾಗಿ ನಿರೂಪಣೆಗೊಂಡಿದೆ. ಇದಕ್ಕೆ ಕಾದಂಬರಿಯಲ್ಲಿನ ಸಂಭಾಷಣೆಯ ಸಂದರ್ಭವನ್ನು ಉದಾಹರಣೆಯನ್ನು ನೋಡುವುದಾದರೆ,

"ಇಗ! ಅವಳನ್ನ ಅತ್ತಿಗೆ ಅತ್ತಿಗೆ ಅಂತ ಹೇಳಬೇಡ. ಯಾವ ದೊಡ್ಡ ಅತ್ತಿಗೆ! ನಿಮಗೆಲ್ಲ ಬುದ್ಧಿ ಬರುವುದು ಯಾವಾಗ ಅಂತ! ಗಾಡಮಿಣಿ, ಅವಳು ಬೇಕಾದ್ದು ಹೇಳುತ್ತಾಳೆ. ನಿನ್ನಂಥ ಕೇಳುವವರು ಸಿಕ್ಕಿದರೆ".

"ಸುಮ್ಮನೆಯಾದರೂ ಡೊಂಕು ಮಾತಾಡಬೇಡಿ. ನಿಮ್ಮ ಮೇಲೆ ಅವರಿಗೆ ಗೌರವವುಂಟು ಗೊತ್ತುಂಟ? ಭಾಸ್ಕರಣ್ಣ ನಿಮ್ಮ ಬಗ್ಗೆ.... ನೀವು ಕಷ್ಟಪಟ್ಟು ಅವನನ್ನು ಸಾಕಿದ ಬಗ್ಗೆ... ಎಲ್ಲ ಅವರಿಗೆ ಹೇಳಿದ್ದಾನೆ. 'ಅವರು ನಮ್ಮ ಮನೆಗೆ ಬಂದು ಇರುವಂತೆಯೇ ಇಲ್ಲವೆ?' ಅಂತ ಅವರು ಯಾವಾಗಲೂ ಹಂಬಲಿಕೆಯಲ್ಲಿ ಕೇಳುತ್ತಾರೆ".

"ನಾ ಹೇಳುವುದನ್ನು ನಂಬಿ. ತಾನು ತಾಯಿ ಮಗನನ್ನು ತೋರೆಸಿದೆ ಎಂಬ ಕೊರಗು ಉಂಟು ಅವರಿಗೆ.

'ಹಾಗೆಂತ ಹೇಳಿದಳ ನಿನ್ನ ಹತ್ತಿರ?'

"ಅದನ್ನೆಲ್ಲ ಹೇಳಬೇಕ? ಮಾತಿನಂಶ ನನಗೆ ಅರ್ಥವಾಗುತ್ತದೆ".

"ನಿನಗೆ ಅರ್ಥವಾಗುತ್ತದೆ, ಮಣ್ಣು. ಮೀಸೆ ಹಟ್ಟಿದ ಕೂಡಲೆ ಬ್ರಹ್ಮಾಂಡ ಅರ್ಥವಾಗುತ್ತದೆ ಎಂತ ಮಾಡಿದೆಯ? ......ಇಗಾ ಗೌರಿ, ನಾನು ಇರುವ ಒಬ್ಬ ಮಗನನ್ನು ಕೆಳೆದುಕೊಂಡೆ, ನಿನ್ನ ಮಗನನ್ನೂ ಕಳೆಯಿಸಿ ಕೊಡುತ್ತೇನೆ ಎಂದು ಹೆದರಿಕೆಯಾಗುತ್ತದೆ ಈಗ. ಈಗಿನಿಂದೀಗಲೇ ಕೆಮಿ ತಿಪ್ಪಿ ಬುದ್ಧಿ ಹೇಳು?"

"ಸಾಕು ಮಾರಾಯ, ಅವರೇನು ದೇವಲೋಕದಿಂದ ಇಳಿದು ಬಂದವರ?"

"ಹೀಗೆ ಹೇಳಿದರೆ! ಸದ್ಯ. ದೇವಲೋಕದಿಂದ ಇಳಿದು ಬರುವಂತಿಲ್ಲ. ನೆಲ ಬಿಟ್ಟು ಹಾರಿಲ್ಲವಲ್ಲ. ಅದಕ್ಕೆ ಸಂತೋಷ ಪಡಿ. ಒಂದು ಸಲ ಹೋಗಿ ಬನ್ನಿ. ಆಮೇಲೆ ಮಾತಾಡಿ".

"ನಿಂಗೆ ಬೇಡ ಅಂದೆನಲ್ಲ ಅಧಿಕ ಪ್ರಸಂಗ. ಅದನ್ನು ನೀನು ಅವರಿಗೆ ಹೇಳಬೇಕ ಮಣಿ?" ಗೌರಮ್ಮ ಜೋರಿನಿಂದ ಕಣ್ಣು ಕೆಂಚರಿಸಿದರು. (ಪು. ೬೯-೭೦ ಅಸ್ಪೃಶ್ಯರು)

ಈ ಮೇಲಿನ ಉದಾಹರಣೆಯಲ್ಲಿ ಭಾಷೆಯ ಹದವರಿತ ಬಳಕೆ ಹಲವೆಡೆ ಸೊಗಸಾಗಿ ಬಂದು ವಿಶೇಷ ವಾಗಿ ಪರಿಣಮಿಸಿರುವುದನ್ನು ಕಾಣಬಹುದು.

ವೈದೇಹಿಯವರ ಮತ್ತೊಂದು ವಿಶೇಷ ತಂತ್ರ ವೈದೃಶ್ಯದ ಪಾತ್ರಗಳನ್ನು ತರುವುದು. ಉದಾಹರಣೆಗೆ ರತ್ನ ಸರೋಜರ ಪಾತ್ರ. ರತ್ನ ಸಮಾಜದಲ್ಲಿನ ರೀತಿ-ನೀತಿ ಸಂಪ್ರದಾಯಗಳಿಗೆ ಹೆದರಿ ತಗ್ಗಿ-ಬಗ್ಗಿ ನಡೆಯುವ ಪಾತ್ರವಾದರೆ, ಸರೋಜ ಸಂಪ್ರದಾಯವನ್ನು ಪ್ರಶ್ನಿಸುವ, ಅದನ್ನು ಒಪ್ಪದೇ ವೈಚಾರಿಕವಾಗಿ ಯೋಚಿಸುವ ಪಾತ್ರವಾಗಿ ಚಿತ್ರಿತಗೊಂಡಿವೆ.

ಹೀಗೆ ಕಾದಂಬರಿಯ ಪ್ರಾದೇಶಿಕ ವಿಶಿಷ್ಟ ಪದಗಳಿಂದ ಗಾದೆ, ಬೈಗಳುಗಳು, ನುಡಿಗಟ್ಟು ಹಾಗೂ ವಿಶಿಷ್ಟ ತಂತ್ರಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಭಾಷೆಯಲ್ಲಿ ಸರಳವಾದ ನಿರೂಪಣೆಯಲ್ಲಿ ಸೋಗಸಾಗಿ ಮೂಡಿಬಂದಿದೆ.

ಪ್ರಸ್ತುತ ಭಾಗದಲ್ಲಿ ಸೃಜನಶೀಲ ಲೇಖಕರು ಕಾದಂಬರಿಗಳಲ್ಲಿನ ವಸ್ತು, ಭಾಷೆ ಮತ್ತು ವೈದೃಶ್ಯತೆಯ ಅಂಶಗಳನ್ನು ನಿದರ್ಶನಗಳ ಸಹಿತ ಚರ್ಚಿಸಲಾಗಿದೆ. ಸಮಾಜದಲ್ಲಿನ ಜಾತಿ, ವರ್ಗ, ಧರ್ಮ, ನ್ಯಾಯ, ಅಧಿಕಾರ, ಲಿಂಗಗಳಂತಹ ವಿವಿಧ ವಲಯಗಳಲ್ಲಿನ ಹೆಚ್ಚಿನ ಅಧಿಕಾರ, ಅವಕಾಶಗಳು ಕೇವಲ ಮೇಲ್ವರ್ಗದವರ ಪರವಾಗಿ ಅದರಲ್ಲೂ ಗಂಡಸರ ಪರವಾಗಿರುವ ಅಂಶಗಳನ್ನು 'ಸಾದೃಶ್ಯತೆ'ಗಳಲ್ಲಿಯೂ ಅದಕ್ಕೆ ವಿರುದ್ಧವಾದ ಪ್ರತಿರೋಧದ ಅಂಶಗಳನ್ನು ವೈದೃಶ್ಯಾಂಶಗಳಲ್ಲಿಯೂ ಗುರುತಿಸಲಾಗಿದೆ. ಅಂದರೆ ಕೆಳವರ್ಗ ಸ್ತ್ರೀಯರು, ತಮ್ಮ ಮೈಮನಗಳ ಮೇಲೆ ನಡೆಯುವ ಅನ್ಯಾಯ, ಆಕ್ರಮ, ಹಿಂಸೆಗಳನ್ನು ಪ್ರತಿರೋಧಿಸುವ, ತಿರಸ್ಕರಿಸುವ, ಪ್ರಶ್ನಿಸುವಂತಹ ಅಂಶಗಳನ್ನು ವೈದೃಶ್ಯಾಂಶಗಳೊಂದು ಪರಿಗಣಿಸಲಾಗಿದೆ. ಕಾದಂಬರಿಗಳಲ್ಲಿ ಮೂಡಿಬಂದಿರುವ

ಸಾದೃಶ್ಯ ಅಂಶಗಳನ್ನು ಹೇಳುತ್ತಲೇ ಅಲ್ಲಲ್ಲೇ ವೈದೃಶ್ಯಾಂಶಗಳನ್ನು ತರುವ ಪ್ರಯತ್ನ ಮಾಡಲಾಗಿದೆ. ಒಟ್ಟಾರೆಯಾಗಿ ಕಾದಂಬರಿಗಳಲ್ಲಿನ ಸಾದೃಶ್ಯ ಮತ್ತು ವೈದೃಶ್ಯಾಂಶಗಳನ್ನು ಪ್ರಮುಖವಾಗಿ ನಾಲ್ಕು ಅಂಶಗಳಲ್ಲಿ ಚರ್ಚಿಸಲಾಗಿದೆ.

೩.೨.೧ ಕಾದಂಬರಿಗಳಲ್ಲಿನ ಊಳಿಗಮಾನ್ಯ ಜೀತಪದ್ಧತಿ ಹಾಗೂ ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ

ಈ ಭಾಗದ ಅಧ್ಯಯದಲ್ಲಿ ಮಹಾಪ್ರಬಂಧಕ್ಕೆ ಆಯ್ದುಕೊಂಡಿರುವ ಕಾದಂಬರಿಗಳಲ್ಲಿ ನಿರೂಪಿತವಾಗಿರುವ ಊಳಿಗಮಾನ್ಯ ಜೀತಪದ್ಧತಿ ಹಾಗೂ ಜಮೀನ್ದಾರಿ ಪದ್ಧತಿಗಳು ಹೇಗೆ ಮೂಡಿಬಂದಿವೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ.

❁ ಊಳಿಗಮಾನ್ಯ ಪದ್ಧತಿ

ಊಳಿಗಮಾನ್ಯ ಪದ್ಧತಿ ಎಂದರೆ ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅಧೀನವಾಗಿರುವಂಥ ವೈಯಕ್ತಿಕ ಸಂಬಂಧಗಳಿರುವ ವಸ್ತು ಭೂಸ್ವಾಮ್ಯ ಹಕ್ಕುಗಳನ್ನು ಅಕ್ರಮವಾಗಿ ಪಡೆದಿರುವ ವ್ಯವಸ್ಥೆ ಎಂದು ಅರ್ಥೈಸಲಾಗಿದೆ. ಊಳಿಗಮಾನ್ಯ ಸಮಾಜವೆಂದಾಗ ಆ ಕಾಲದಲ್ಲಿದ್ದ ಪ್ರಭುಗಳ ಜೀತದಾರರ ಮತ್ತು ಉಂಬಳಗಳ ಚಿತ್ರ ಮೂಡಿನಿಲ್ಲುತ್ತದೆ.

ಊಳಿಗಮಾನ್ಯ ವ್ಯವಸ್ಥೆಯಲ್ಲಿ ರಾಜನೇ ಒಡೆಯ. ಅವನ ಕೆಳಗೆ ದೊಡ್ಡ ಪಾಳೆಯಗಾರರು, ಅವನ ಅಧೀನದಲ್ಲಿ ಚಿಕ್ಕಪಾಳೆಯಗಾರರು, ಕೊನೆಯ ಹಂತದಲ್ಲಿ ಜೀತಗಾರರು ಇದರಲ್ಲಿ ಪರಸ್ಪರ ಮುಖ್ಯಸಂಬಂಧ ಎಂದರೆ ಭೂಮಾನಕ್ಕೆ ಬದಲಾಗಿ ಊಳಿಗತನ ಮಾಡುವುದು. ಸೈನ್ಯಸೇವೆ, ಅರಮನೆಯ ಸೇವೆ ಇತ್ಯಾದಿ.

❁ ಜೀತಪದ್ಧತಿ

ರಾಜ ಪ್ರಭುತ್ವದಲ್ಲಿದ್ದ ಗುಲಾಮ ಅಥವಾ ದಾಸ್ಯಪದ್ಧತಿಯಿಂದ ಮಧ್ಯಯುಗದ ಸಾಮಂತ ಪ್ರಭುತ್ವಕ್ಕೆ ಜಾರಿಕೊಂಡ ಈ ಊಳಿಗಮಾನ್ಯ ವರ್ಗವು ಇಂಡಿಯಾದ ಸಂದರ್ಭದಲ್ಲಿ ಜೀತಗಾರ ಪದ್ಧತಿಯೆಂದು ಹೆಸರು ಪಡೆಯಿತು. ಜೀತಪದ್ಧತಿಯ ಕುರಿತು ಹಲವು ವ್ಯಾಖ್ಯೆಗಳಿವೆ ಅವುಗಳಲ್ಲಿ ಸಮಂಜಸವಾದ ಒಂದನ್ನು ನೋಡುವುದಾದರೆ "ಜೀತವು ಸಾಲದಿಂದ ಉದ್ಭವಿಸುತ್ತದೆ. ಸಾಲ ಕೊಡುವವನು ಮತ್ತು ತೆಗೆದುಕೊಳ್ಳುವವನು ರೂಢಿಯಂತೆ ಅಥವಾ ತಾವಿಬ್ಬರೂ ಒಪ್ಪಿದಂತೆ ಜೀತ ನಿಯಮಗಳನ್ನು ಪಾಲಿಸುವವರು. ಈ ಪ್ರಕಾರ ಸಾಲ ತೀರುವವರೆಗೆ ಪುಕ್ಕಟೆಯಾಗಿ ದುಡಿಯಬೇಕಾಗುತ್ತದೆ. ಸಾಲ ತೀರದಿದ್ದರೆ ವಂಶಪಾರಂಪರ್ಯವಾಗಿ ದುಡಿಯಬೇಕಾಗುತ್ತದೆ. ಜೀತಪದ್ಧತಿ ವಿಮೋಚನೆಯ ಕಾನೂನುಗಳು ಈಗ ಜಾರಿಗೆ ಬಂದಿದ್ದರೂ, ಯಾವುದೇ ಸರ್ಕಾರಗಳಿಂದ ಇದನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಾಗಿಲ್ಲ" (ನಾಗೇಶ್ ಎಚ್.ವಿ. ಭಾರತದಲ್ಲಿ ಜೀತಪದ್ಧತಿ ಪು. ೧೪೯) ಎಂಬ ಎಚ್.ವಿ. ನಾಗೇಶ್‌ರವರ ಅಭಿಪ್ರಾಯ ಸಮಂಜಸವಾದುದೆನಿಸುತ್ತದೆ.

❁ ಜಮೀನ್ದಾರಿ ಪದ್ಧತಿ

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸರ್ಕಾರಗಳು ರೈತರಿಂದ ಜಮೀನಿನ ಹುಟ್ಟುವಳಿಯಲ್ಲಿ ಒಂದು ಭಾಗವನ್ನು ಕಂದಾಯವಾಗಿ ಪಡೆಯುತ್ತಲೇ ಬಂದಿವೆ. ಜಮೀನ್ದಾರಿ ಪದ್ಧತಿಯನ್ನು ಕನ್ನಡ ವಿಶ್ವಕೋಶ

ಈ ರೀತಿ ವಿವರಿಸುತ್ತದೆ: ಮೊಗಲ್ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ವ್ಯಾಪಕವಾಗಿ ಜಾರಿಯಲ್ಲಿದ್ದ ಈ ಪದ್ಧತಿ ಅನಂತರ ವಿಕೃತ ರೂಪವನ್ನು ಪಡೆಯಿತು. ಕ್ರಮೇಣ ಜಮೀನ್ದಾರಿ ಪದ್ಧತಿ ಹುಟ್ಟಿಕೊಂಡಿತು. ಮೊಗಲ್ ಸಾಮ್ರಾಜ್ಯ ಕ್ಷೀಣಿಸತೊಡಗಿದಾಗ ದೆಹಲಿಯ ಸರ್ಕಾರಕ್ಕೆ ತನ್ನ ಸಾಮ್ರಾಜ್ಯದ ಪ್ರಾಂತ್ಯಗಳಲ್ಲಿದ್ದ ವಸೂಲಿ ಅಧಿಕಾರಿಗಳ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳುವುದು ಸಾಧ್ಯವಾಗದೇ ಹೋಯಿತು. ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವರಮಾನ ತಪ್ಪದಂತೆ ಯಾವುದಾದರೊಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಗತ್ಯವೆನಿಸಿತು. ಫಕೂರ್ ಸಿಯಾರ್‌ನ ಆಳ್ವಿಕೆಯ ಕಾಲದಲ್ಲಿ ಜಮೀನ್ದಾರಿ ಪದ್ಧತಿ ಖಚಿತವಾಗಿ ರೂಪುಗೊಂಡಿತೆನ್ನಬಹುದು" (ಕನ್ನಡ ವಿಶ್ವಕೋಶ, ಸಂಪುಟ-೭, ಪು. ೮೦೭) ಎಂಬ ವಿವರಣೆಯು ಸಮಂಜಸವಾದುದಾಗಿದೆ.

❁ ಕ್ರೌರ್ಯ

ಕ್ರೌರ್ಯ ಎಂಬ ಪದವನ್ನು ಹಿಂಸೆ, ಶೋಷಣೆ, ದಬ್ಬಾಳಿಕೆ ಎಂಬರ್ಥದಲ್ಲಿ ಬಳಸಲಾಗಿದೆ.

ಕೆಳವರ್ಗದ ಮೂಲ ಸಮಸ್ಯೆ ಭೂಮಿಯ ಒಡೆತನದ ಸಮಸ್ಯೆ ಇದನ್ನು ಅವಲಂಬಿಸಿಯೇ ವ್ಯಕ್ತಿಯ ಸಾಮಾಜಿಕ ಸ್ಥಾನ-ಮಾನಗಳು ನಿರ್ಧಾರವಾಗುತ್ತವೆ. ಡಾ. ಸಿದ್ಧಲಿಂಗಯ್ಯನವರು ಹೇಳುವಂತೆ "ಅವರಿಗೆ ಬೇಕಾಗಿರುವುದು ಊಟ, ಬಟ್ಟೆ, ಭೂಮಿ, ಮಳೆ ಬಂದರೂ ಸಹ ಬೀಳದಿರುವ ಮನೆಗಳು ಇವು ಬದುಕಿಗಾಗಿ ನಡೆಯುವ ಹೋರಾಟ" (ಸಿದ್ಧಲಿಂಗಯ್ಯ ಹಕ್ಕಿನೋಟ, ಪು. ೩೦) ಎಂಬ ಮಾತು ಕೆಳವರ್ಗದವರಿಗೆ ಅಗತ್ಯವಿರುವ ಜೀವನಾವಶ್ಯಕತೆಗಳನ್ನು ಕುರಿತು ಹೇಳುತ್ತದೆ.

ಊಳಿಗಮಾನ್ಯ, ಜೀತಪದ್ಧತಿ ಮತ್ತು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ ಈ ಭಾಗದಲ್ಲಿ ಮೇಲ್ವರ್ಗದವರು ಕೆಳವರ್ಗದವರನ್ನು ಅಮಾನುಷವಾಗಿ ನಡೆಸಿಕೊಳ್ಳುವ ಅನೇಕ ಸಾದೃಶ್ಯಾಂಶಗಳು ಕಂಡು ಬರುತ್ತವೆ. ತಮ್ಮ ಹೊಟ್ಟೆಪಾಡಿಗಾಗಿ ಜೀತವನ್ನು ಒಪ್ಪಿ ನಡೆಯುವ ಪಾತ್ರಗಳೇ ಹೆಚ್ಚಾಗಿ ಕಂಡುಬರುತ್ತವಾದರೂ ಕೆಲವು ಕಾದಂಬರಿಗಳಲ್ಲಿ. ಅವರ ದಬ್ಬಾಳಿಕೆಯನ್ನು ಪ್ರಶ್ನಿಸುವಂತಹ ವೈದೃಶ್ಯಾಂಶಗಳೂ ಇವೆ. ಕಾದಂಬರಿಗಳಲ್ಲಿ ಬರುವ ಇಂತಹ ಅಂಶಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಆಯ್ದ ಕಾದಂಬರಿಗಳಲ್ಲಿನ ಈ ವಿಷಯವನ್ನು ಹೀಗೆ ವಿಶ್ಲೇಷಿಸಬಹುದು. ಅರಮನೆ ಕಾದಂಬರಿಯು ವಸಾಹತುಶಾಹಿಯುಗದ ಆರಂಭಿಕ ಕಾಲದಲ್ಲಿದ್ದ ಗ್ರಾಮೀಣ ಭಾರತದ ವಿವಿದ ಮುಖಗಳನ್ನು ಅನಾವರಣಗೊಳಿಸುತ್ತದೆ. ಡಾ. ಸಿ.ಎನ್. ರಾಮಚಂದ್ರನ್‌ರವರು ಗುರುತಿಸುವಂತೆ "ಅಂದಿದ್ದ ನೂರಾರು ರಾಜ-ಮಹಾರಾಜರ, ಸಾವಿರಾರು ಪಾಳೇಗಾರರ, ಜಮೀನ್ದಾರರ ಊಳಿಗಮಾನ್ಯ ವ್ಯವಸ್ಥೆ ಎಷ್ಟು ಕ್ರೂರವಾಗಿತ್ತೆಂದರೆ ಭಾರತೀಯ ಜನ ಸಾಮಾನ್ಯರಿಗೆ ಬ್ರಿಟಿಶ್ ಆಡಳಿತ ಆ ಕ್ರೂರ ವ್ಯವಸ್ಥೆಯಿಂದ ಬಿಡುಗಡೆ ಪಡೆಯುವ ಮಾರ್ಗವಾಗಿಯೇ ಕಂಡಿತು ಎಂಬುದು ೧೮-೧೯ನೆಯ ಶತಮಾನಗಳಲ್ಲಿ ವಸಾಹತುಶಾಹಿ ಇಡೀ ಭಾರತವನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಲು ಏಕೆ ಮತ್ತು ಹೇಗೆ ಸಾಧ್ಯವಾಯಿತು ಎಂಬುದನ್ನು ವಿವರಿಸುತ್ತದೆ.

ಮಧ್ಯ ಸೇವನೆ, ಜೂಜು, ಲಂಪಟತನಗಳನ್ನಂಟಿಸಿಕೊಂಡೂ ಚಟಗಳ ದಾಸವರೇಣ್ಯರಾಗಿದ್ದ, ಪಾಳೆಯಗಾರರು ತಮ್ಮ ಹಣದ ಅಡಚಣೆ ನಿವಾರಿಸಲೋಸುಗ ಪ್ರಜೆಗಳ ಮ್ಯಾಲ ಹೊಸ ಹೊಸ ತೆರಿಗೆಗಳನ್ನು ಹೇರಲಾರಂಭಿಸಿದ್ದರು. ಪಿಳ್ಳೆ ನೋಡಿದರಿಷ್ಟು, ಮದುವೆ ಆದರಿಷ್ಟು, ಸೋಬನ ಪ್ರಸ್ಥವಾದರಿಷ್ಟು, ಮಕ್ಕಳಾದರೆ ಯಿಷ್ಟು ಯಂಬಂಥ ತೆರಿಗೆಗಳನ್ನು ಲೆಕ್ಕ ಹಾಕುತ್ತಾ ಹೋದರೆ... (ಪು.೭೬ ಅರಮನೆ) ಎಂಬ ವಿವರಣೆ ಊಳಿಗದ ಕ್ರೂರತೆಯನ್ನು ನಿರೂಪಿಸುತ್ತದೆ.

ಜರುಮಲೆಯ ರಾಜ, ನಿಚ್ಚಾಪುರದ ರಾಜ ಮುಂತಾದವರು ಹೆಚ್ಚಿನ ಆದಾಯಕ್ಕಾಗಿ ಕಳ್ಳಕಾಕರನ್ನು ಸಾಕುತ್ತಿದ್ದರು. ಮತ್ತೆ ಕೆಲವರು ಕಳ್ಳರಿಗೇಕೆ ಪಾಲು ಕೊಡಬೇಕೆಂದು ತಾವೇ ರಾತ್ರಿಯಲ್ಲಿ ಕಳ್ಳರಾಗುತ್ತಿದ್ದರು. ಎಂಬುದು ನೀಚತನಕ್ಕೆ ಪ್ರತೀಕವಾದರೆ, ಅರಮನೆಯ ಜನರಿಗೆ ಊಟಕ್ಕೆ ಗತಿಯಿಲ್ಲ, ಆಳು-ಕಾಳುಗಳಿಂದ ಸೇವೆ ಪಡೆಯಬೇಕು. ಎಲ್ಲರಲ್ಲಿಯೂ ಎಲ್ಲದರಲ್ಲಿಯೂ ತಾವೇ ಮುಂಚೂಣಿಯಲ್ಲಿರಬೇಕು. ಎಂದು ಆಶಿಸುವ ಭಯ್ರುಮಾಂಬೆಯಂಥವರು ತಾವೇ ಮತ್ತೊಬ್ಬರನ್ನು ಬೇಡುವಂತಹ ಸ್ಥಿತಿಯಲ್ಲಿಯೂ ಕೂಡ ಎಲೆ, ಅಡಿಕೆ ನಮಲಿದ್ದನ್ನು ಪೀಕದಾನಿಯಲ್ಲಿ ಉಗಿದಾಗ ಅದನ್ನು ಹಿಡಿದುಕೊಳ್ಳುವುದಕ್ಕಾಗಿ ಮೂಳೆ ಓಬಯ್ಯನಂತವರನ್ನು ನೇಮಿಸಿಕೊಳ್ಳುವುದು. ಆಕೆ ಉಗುಳಿದಾಗ ಉಗುಳು ಕೈಗೆ ಮೈಗೆ ಸಿಡಿದರೆ ಮುಖಸಿಂಡರಿಸಿ ಕೊಂಡರೆ ಕಪಾಳಕ್ಕೆ ಹೊಡೆಯುತ್ತಿದ್ದುದಂತಹ ವಿವರಣೆಗಳೆಲ್ಲ ಊಳಿಗದವರ ದೌರ್ಜನ್ಯವನ್ನು ವಿವರಿಸುತ್ತವೆ.

"ನಮ್ಮನ್ನು ನಮ್ಮ ಪಾಡಿಗೆ ಸುಮ್ಮಕ ಬಿಡಿರಿ ಯಜಮಾನರುಗಳಿರಾ... ನಮ್ಮ ಕಷ್ಟನಷ್ಟಕ್ಕಾಗದ ಯೀ ಅರಮನೆಯಿದ್ದರೆಷ್ಟು? ಹ್ವಾದರೆಷ್ಟು? "ಯಂಥ ಬರಗಾಲ ಬಂದರೂ ನಾವು ಗುತ್ತಿಗೆ ಕಟ್ಟುತ್ತಿರಲಿಲ್ಲೇನು? ಸಯ್ನಿಕರನು ಕಳುಸಿ ವದ್ದು ಬಡದೂ ನಮ್ಮಿಂದ ತೆರಿಗೆ ವಸೂಲಿ ಮಾಡುತ್ತಿರಲಿಲ್ಲೇನು ಯಿವರು? ಯಿವರು ತಿಂಥಿರೋ ಕೂಳು ನಮ್ಮದು, ಯಿವರು ವುಟುಕೊಂಡಿರೋ ಅರಿವೆ ನಮ್ಮದು, ಯಿವರ ಮಯ್ಯಿಮ್ಯಾಲ ಲಕಲಕ ಹೊಳೀತಿರೋ ವಡವೆ ವಸ್ತು ನಮ್ಮದು, ಯಿವರ ತಿಜೋರಿಲಿರೋ ರೊಕ್ಕ ನಮ್ಮದು, ಯಿವರ ಅಗೇವುಗಳಲ್ಲಿರೋ ದವಸ ನಮ್ಮದು.... ಯಿವರ ಹೆಂಡಂದಿರ ಹಣೇಲಿರೋ ಕುಂಕುಮ ಬೊಟ್ಟು ಮಾತ್ರ...

ಯೀ ಅರಮನೇನ ಸುಮ್ಮಕ ಬಿಡೋದಿಲ್ಲ..

ಯೀ ಅರಮನೆವಳಾಗಿರೋರನು ನಾವು ಸುಮ್ಮಕ ಬಿಡೋದಿಲ್ಲ" (ಪು. ೮೪ ಅರಮನೆ)

ಎಂಬ ವಿವರಣೆಯಲ್ಲಿ ಸಾಮಾನ್ಯಜನತೆಯು ರಾಜರನ್ನು, ರಾಜಪರಿವಾರದವರನ್ನು ಪ್ರಶ್ನಿಸುತ್ತಿರುವುದು. ತಮ್ಮ ಕಷ್ಟ ಸುಖಕ್ಕಾಗದ ಅರಮನೆ ಹಾಗೂ ರಾಜಪರಿವಾರದವರು ತಮಗೆ ಬೇಡವೆಂದು ಅವರನ್ನು ದಂಡಿಸಲು ಮುಂದಾಗುತ್ತಿರುವುದು ಹಾಗೂ ಇದೇ ಅರಮನೆಲ್ಲಿ ಪೀಕದಾನಿ ಹಿಡಿಯುವ ಓಬಯ್ಯನೆಂಬ ಸೇವಕ, ದೇವಿಯ ನೆಪದಲ್ಲಿ ಅರಮನೆ ಹಾಗೂ ಸಿಂಹಾಸನವನ್ನು ವಶಪಡಿಸಿಕೊಳ್ಳುವುದು ಊಳಿಗಮಾನ್ಯವನ್ನು ದಿಕ್ಕರಿಸಿ ಸ್ವತಂತ್ರವನ್ನು ಬಯಸುವ ಅಂಶಗಳಿಗೆ ಕೊಡಬಹುದಾದ ನಿದರ್ಶನಗಳಾಗಿವೆ.

ಕುಸುಮಬಾಲೆಯ ಅಕ್ಕಮಹಾದೇವಮ್ಮ ತನ್ನ ಭಾವನ ಆಸ್ತಿಯ ದುರಾಸೆಯ ಅಡಿಯಲ್ಲಿ ದೌರ್ಜನ್ಯಕ್ಕೆ

ಒಳಗಾದ ಪಾತ್ರ. ಅಕ್ಕಮಹಾದೇವಮ್ಮ ಗಂಡಸತ್ತ ಮೂರನೇ ದಿನಕ್ಕೆ ತವರು ಮನೆಗೆ ತೆರಳಿ ಮತ್ತೆ ಹನ್ನೆರಡು ತಿಂಗಳ ನಂತರ ತನ್ನ ಕಂದ ಯಾಡನೊಡನೆ ಬಂದು, ಭಾವ, ಬಸಪ್ಪ ಸೋಮಿಯ ಹತ್ತಿರ ತನ್ನ ಗಂಡನ ಪಾಲಿನ ಆಸ್ತಿಗಾಗಿ ಅಂಗಲಾಚುವಾಗ "ನಮ್ಮ ಬಾಯಿಂದ ಕೆಟ್ಟ ಮಾತುಗಳನ್ನು ನೀನು ಆಡಿಸ ಬಾರದಮ್ಮ. ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಯಾರಿಗಾದರೂ ಎಲ್ಲಿದರೂ ಈ ನರಲೋಕದ ರೂಢಾವಳಿ ಯಲ್ಲಿ ಮಕ್ಕಳಾಗಿರುವಂಥ ಪ್ರಸಂಗ ಏನಾದರೂ ಇದ್ದಲ್ಲಿ, ಅದನ್ನು ನಮಗೆ ತೋರಿಸಿ ನೀನು ಬರುವಂತ ವಳಾಗು. ಈಗ ನಡೆಯಾಚೆ" (ಪು. ೧೧೧ ಕುಸುಮಬಾಲೆ) ಎಂದು ಹೇಳಿ, ತನ್ನ ತಮ್ಮ ಸಿದ್ದೂರನ ಮೂಲಕ ಹೊಡೆಸಿ ಕುತ್ತಿಗೆ ಹಿಡಿದು ಹೊರಗೆ ನೂಕಿಸುತ್ತಾನೆ. ಅಕ್ಕಮಹಾದೇವಮ್ಮ ಹಟ್ಟಿ ಜೀತಗಾರನಿಗೆ ಗರ್ಭಿಣಿಯಾಗಿ ಯಾಡನಿಗೆ ಜನ್ಮವಿತ್ತಿರುತ್ತಾಳೆಂಬ ಅಪವಾದವನ್ನು ಮುಂದೆ ಮಾಡುವ ಮೂಲಕ ಅಕ್ಕಮಹಾದೇವಮ್ಮನನ್ನು ಆಸ್ತಿಯಿಂದ ಹೊರಗಿಡುತ್ತಾನೆ.

ಶಿವರಾಮಯ್ಯನವರು ಕುಸುಮಬಾಲೆ ಬಗ್ಗೆ ಪ್ರತಿಕ್ರಿಯಿಸುತ್ತಾ ಹೀಗೆ ಅಭಿಪ್ರಾಯ ಪಡುತ್ತಾರೆ. "ಅಕ್ಕಮಹಾದೇವಮ್ಮ ಗಂಡ ಸತ್ತ ಹನ್ನೆರಡು ತಿಂಗಳಿಗೆ ಜೀತಗಾರನಿಗೆ ಹುಟ್ಟಿದವನೆಂಬ ಅಪವಾದ ಹೊತ್ತ ತನ್ನ ಕುಡಿಯೊಡನೆ ಗಂಡನ ಮನೆಗೆ ಬರುತ್ತಾಳಷ್ಟೇ. ಇಲ್ಲಿ ಆಸ್ತಿಯ ವಿಚಾರ ಮುಖ್ಯ. ಭಾವ ಬಸಪ್ಪಸೋಮಿ ಮತ್ತು ಮೈದುನ ಸಿದ್ದೂರರಿಗೆ ಅವಳ ಪಾಲಿನ ಆಸ್ತಿಯನ್ನು ಲಪಟಾಯಿಸಲು ಒಂದು ನೆಪಬೇಕಾಗಿತ್ತು. ಅದು ಸಿಕ್ಕಿತು. ಬಹುಶಃ ಅವಳಿಗೆ ಗಂಡು ಸಂತಾನ ಇಲ್ಲದಿದ್ದು, ಇವರ ಮನೆಯಲ್ಲಿಯೇ ಗೊಡ್ಡು ದನದಂತೆ ಜೀತಮಾಡುವಂತಿದ್ದರೆ, ಖಂಡಿತ ಇವರು ಖುಷಿಯಿಂದಲೇ ಬರಮಾಡಿಕೊಳ್ಳುತ್ತಿದ್ದರೇನೋ ಆದ್ದರಿಂದ ಇಲ್ಲಿ ಜೀತ ಪದ್ಧತಿಯ ಪರಾಕಾಷ್ಠೆಯನ್ನು ಕಾಣಬಹುದು" ಶಿವರಾಮಯ್ಯ, (ಕುಸುಮಬಾಲೆ ಪ್ರತಿ ಸಂಸ್ಕೃತಿಯ ನಿರ್ಮಾಣದತ್ತ, ಪು. ೧೩೭) ಎಂಬ ಮಾತು ಆಸ್ತಿಯ ದೃಷ್ಟಿಯಿಂದ ಉಲ್ಲೇಖನೀಯವಾದುದಾಗಿದೆ.

ಹದಿನಾರು ಎಳೆನೀರು ಕದ್ದು ಸಿಕ್ಕಿ ಬೀಳುವ ಗಾರಸಿದ್ಧಮಾವನನ್ನು ಶಿವಾಚಾರದವರು ಕಂಬಕ್ಕೆ ಕಟ್ಟಿಹಾಕಿ ಹೊಡೆಯುತ್ತಿದ್ದಾಗ ಅವರ ನಡುವೆ ನಡೆಯುವ ಸಂಭಾಷಣೆಯಲ್ಲಿ "ಆಗಾರ ನಿಮ್ಮಪ್ಪನ ತೋಟ್ದಲ್ಲುಡ ನೀನು ಎಳ್ನೀರು ಕಿತ್ತಿರದು ಆಗಾರ?" (ಪು. ೧೪೪ ಕುಸುಮಬಾಲೆ) ಎಂದು ಬೈಯುತ್ತಾ ಅವನಿಗೆ ತಪ್ಪುದಂಡವೆಂದು ನೂರು ರೂಪಾಯಿ ಕೊಡಲು ಕೇಳುವ ಅವರಿಂದಲೇ ನೂರು ರೂಪಾಯಿ ಸಾಲಪಡೆದು ದಂಡ ಕಟ್ಟುವಲ್ಲಿ ಗಾರಸಿದ್ಧಮಾವನ ಚಾಲಾಕಿತನ ಗೋಚರವಾಗುತ್ತದೆಯಾದರೂ, ತಮ್ಮದೇ ಆದ ಸ್ವಂತ ಆಸ್ತಿ (ಹೊಸ-ಹಣ) ಇಲ್ಲದಕ್ಕಾಗಿಯೇ ಬೇರೊಬ್ಬರ ತೋಟದಲ್ಲಿ ಕದಿಯುವ ಪ್ರಸಂಗ ಬಂದದ್ದು ಎಂಬುದು ಕೂಡ ಗಮನಿಸಬೇಕಾದ ಅಂಶ.

ಇನ್ನು ದ.ಸಾ.ಸಂ. ದವರು ಜೀತಪದ್ಧತಿ ವಿಮೋಚನೆಗಾಗಿ ಹೋರಾಡುತ್ತಿರುವಾಗ ಚನ್ನನ ಅಪ್ಪನನ್ನು ಮೇಲ್ವರ್ಗದವರು (ಶಿವಾಚಾರದವರು) ಹೀಯಾಳಿಸುತ್ತಾ, "ಆ ನಿಮ್ ಜಾತ್ಯವರ ಆ ಇಂದ್ರಗಾಂದಿ ಅಂಬವ್ಳೇ ಜೀತ್ಕ ಇರಸ್ಕಂಡಿದ್ದಾಳಂತ! ಆ ಥರವಾಗಿ ಅವ್ಳೆ ಇರಬೇಕಾರ ಇನ್ನು ನಿಂಮ್ಗಳ ಜೀತಬುಡ್ರೋ ಅಂದಾಳ? ಇಲ್ಲಿ ನಾಕ್ ಐಕ ಕೂಕ್ಕಂಡ್ರ ದಿಳ್ಳಿಗ ಕೇಳ್ಸ ಮಾತುಡ ಅದೂ?" (ಪು.೧೭೭ ಕುಸುಮಬಾಲೆ) ಎಂಬಲ್ಲಿರುವ

ಮಾತುಗಳಲ್ಲಿ ಜೀತದ ವ್ಯಾಪ್ತಿಯನ್ನು ಮತ್ತು ಜೀತವಿಮೋಚನೆ ಅಷ್ಟು ಸುಲಭವಲ್ಲ ಎಂಬುದನ್ನು ದೇವನೂರರು ಧ್ವನಿಸುತ್ತಾರೆ.

'ಗ್ರಾಮಾಯಣ' ಕಾದಂಬರಿಯು ಪ್ರಾರಂಭದಲ್ಲಿ ಲೇಖಕರೇ ಹೇಳುವಂತೆ 'ಸಂಧಿಕಾಲದ' ಚಿತ್ರಣದಿಂದ ಕೂಡಿದೆ. ಸರಂಜಾಮಿ ಮತ್ತು ಜಾತಿಪದ್ಧತಿ ಬೇರೂರಿದ್ದ ಕಳೆದ ಶತಮಾನದ ಕೊನೆಯ ಭಾಗದ ಜೀವನವನ್ನು ಕಾದಂಬರಿ ವಿವೇಚಿಸಲು ತೊಡಗಿದೆ. ಸತ್ವವನ್ನು ಕಳೆದಕೊಳ್ಳುತ್ತಿದ್ದ ಇಲ್ಲಿನ ವ್ಯವಸ್ಥೆ ಪಾಶ್ಚಾತ್ಯ ನಾಗರಿಕತೆಗಳ ಆಘಾತವನ್ನು ಆಗ ಎದುರಿಸಬೇಕಾಯಿತು. ಪಾಶ್ಚಾತ್ಯ ಪ್ರಭಾವ ನಿಧಾನವಾಗಿ ನಗರಗಳಿಂದ ಹಳ್ಳಿಗಳಿಗೂ ಹರಿಯಲಾರಂಭಿಸಿದುದರಿಂದ. ಹಿಂದಿನ ಮೌಲ್ಯವ್ಯವಸ್ಥೆ ಕುಸಿಯಲಾರಂಭಿಸಿತು. 'ಗ್ರಾಮಾಯಣ' ಅಂಥ ಸಂಕ್ರಮಣ ಕಾಲದ ಜೀವನ ನೋವನ್ನು ತಳಮಳವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ. ಇಂತಹ ಬದಲಾದ ಪರಿಸರದಲ್ಲಿ ಅರ್ಥವನ್ನು ಕಳೆದುಕೊಂಡು ಟೊಳ್ಳಾಗಿರುವ ಸಾಮಾಜಿಕ ವ್ಯವಸ್ಥೆ ಹಂತಹಂತವಾಗಿ ಒಡೆಯುತ್ತಾ ಸಾಗಿ ಕೊನೆಮುಟ್ಟುತ್ತದೆ.

"ಪಾದಳ್ಳಿಯ ಅವನತಿಯ ಮೂಲ ಅದರ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯಲ್ಲಿಯೇ ಇದೆ. ಊಳಿಗಮಾನ್ಯ ಸಮಾಜ ತನ್ನ ದುರ್ಬಲತೆಯಿಂದಾಗಿ ಅವನತಿ ಹೊಂದುವುದನ್ನು ಕಾದಂಬರಿ ಪ್ರಾರಂಭದಿಂದ ಕೊನೆವರೆಗೂ ದಾಖಲಿಸುತ್ತದೆ. ಹೊರಗಿನ ಪ್ರಭಾವಗಳು ಆ ಸಮಾಜವನ್ನು ಇನ್ನಷ್ಟು ತೀವ್ರವಾಗಿ ಕ್ಷಿಪ್ರವಾಗಿ ಕುಸಿಯುವಂತೆ ಮಾಡಿದೆ" (ಡಿ.ಎಸ್. ರಘುನಾಥ, ಸೃಷ್ಟಿ ಪು.೬೨) ಎಂಬ ಡಿ. ರಘುನಾಥರವರ ಮಾತು ಸತ್ಯವಾದುದಾಗಿದೆ.

ವಾಡೆ, ಮಠ, ಗೌಡರ ಮನೆತನ ಮತ್ತು ಮೇಲ್ಜಾತಿಯವರ ಪ್ರಭಾವ ಅವರ ಅಂತಃಕಲಹ, ಅಹಂಕಾರ, ಪ್ರತಿಷ್ಠೆ, ದರ್ಪ, ಸ್ವಾರ್ಥ, ಅಭಿಮಾನ, ಹಠ, ಮುಂತಾದವುಗಳೇ ಪಾದಳ್ಳಿಯ ಘೋರ ದುರಂತಕ್ಕೆ ಕಾರಣವಾಗುತ್ತವೆ. ಕಾದಂಬರಿಯುದ್ದಕ್ಕೂ ಕೆಳಜಾತಿಯವರು ಮೇಲ್ಜಾತಿಯವರ ಕೈಗೊಂಬೆಗಳಾಗಿ ಬಳಕೆಗೊಳ್ಳುತ್ತಾರೆ. ಎಲ್ಲವನ್ನೂ ಎಲ್ಲರನ್ನೂ ತನ್ನ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುವ ಪ್ರತಿಷ್ಠಿತ ವರ್ಗದ ರೀತಿಯನ್ನು ಕಾದಂಬರಿ ಪ್ರತಿಹಂತದಲ್ಲೂ ಚೆನ್ನಾಗಿ ಚಿತ್ರಿಸುತ್ತದೆ.

ಪಾದಳ್ಳಿಯ ಇಡೀ ಭೂಮಿಯ ಅರ್ಧಭಾಗ ಜಾಗೀರದಾರರಿಗೆ, ಅದರರರ್ಧಭಾಗ ಗೌಡರಿಗೆ, ಉಳಿದ ಭಾಗ ರೈತರಿಗೆ ಹಂಚಲ್ಪಟ್ಟಿರುತ್ತದೆ. ಇಂತಹದರಲ್ಲಿ ಎಷ್ಟೋ ಜನ ಕೂಳಿಲ್ಲದೆ ನರಳುವ ಸ್ಥಿತಿಯಲ್ಲಿದ್ದಾಗ, ಪಾದಳ್ಳಿಯ ಪ್ರತಿಷ್ಠಿತ ವರ್ಗದ ಈರ್ಸೆ ನೆಲವನ್ನು ಬಂಜೆಯಾಗಿಸುತ್ತದೆ. ಅಧಿಕಾರ ಭೂಮಿಯನ್ನು ಮುಟ್ಟದಂತೆ ನಿರ್ಬಂಧ ಹಾಕುತ್ತದೆ ಕಪಟಕಾರ ಸ್ಥಾನಗಳೆಲ್ಲ ಬೀಜ ಮೇಲೇಳದಂತೆ ಮಾಡುತ್ತದೆ.

ಗೌಡರ ಮರಣದ ನಂತರ ಕಾವಲಿಲ್ಲದಂತಾಗುವ ಅವರ ಮನೆತನಕ್ಕೆ ಪಡದಯ್ಯ ಶನಿಯಂತೆ ಕಾಡುತ್ತಾನೆ. ದಾದಾನ ಸ್ನೇಹಿತ ಹೇಳುವಂತೆ "ನೋಡದಾದ, ಇಂದ ಊರಿಗೆ ಊರ ಗೌಡರ ಹೊಲ ಲೂಟಿ ಮಾಡ ಹೊಂಟೈತಿ ಪಡದಪ್ಪನೋರು ಈಟೆಲ್ಲಾ ಮಂದಿನ್ನ ಗೂಳೆಹಾಕಿ ಹೊಲದಾಗಿನ ಬದುಕ ಕಳುಮಾಡಲು

ಕಳಿಸ್ಯಾರ" ಎಂಬುದೂ, ಕಾಮಣ್ಣನ ಹಬ್ಬಕ್ಕೆ ಕುಳ್ಳು ಕಳುವು ಮಾಡುವ ನೆಪದಿಂದ ಗೌಡರ ಮನೆಯನ್ನು ಲೂಟಿ ಮಾಡಲು ಹೊಂಚು ಹಾಕುವುದು, ಗೌಡರ ಹಗೆಗೆಳನ್ನು ರಾತ್ರೋರಾತ್ರಿ ಲೂಟಿ ಮಾಡಿಸುವುದು. ಬಿತ್ತಿದ ಹೊಲವನ್ನು ಹರಗಿಸುವುದು. ರೈತರ ಮನೆಯ ಚಿಮಣಿಗಳನ್ನು ಕಳುವುಮಾಡಿಸುಲ್ಲಿ, ಮೇಲ್ವರ್ಗದವರು ಕೆಳವರ್ಗದವರನ್ನು ತಮಗಿಷ್ಟ ಬಂದಂತೆ ನಡೆಸಿಕೊಂಡಿರುವುದನ್ನು ನೋಡಬಹುದು.

ಬರಗಾಲದಲ್ಲಿ ಕೂಳಿಲ್ಲದೆ ಬಾಯಿ-ಬಾಯಿ ಬಿಡುತ್ತಿದ್ದ ಜನರಿಗೆ ಗೌಡರು ತಮ್ಮ ಹಗೆಯಲ್ಲಿನ ಕಾಳನ್ನು ಸುಗ್ಗಿಯಲ್ಲಿ ಮರಳಿ ತೆಗೆದುಕೊಳ್ಳುವುದಾಗಿ ಹೇಳಿ ಕಡಕೊಟ್ಟರೆ, ಇದಕ್ಕೆ ಪ್ರತಿಯಾಗಿ ಪಡದಯ್ಯನಿಂದ ಪ್ರೇರಿತನಾದ ಬಾಪುಸಾಹೇಬ ವಾಡೆಯಲ್ಲಿನ ಮುಗ್ಗಾದ ಕಾಳನ್ನು ಯಾವ ಕರಾರು ಇಲ್ಲದೆ ಜನರಿಗೆ ಹಾಕುವ ಮೂಲಕ ನೂರಾರು ಜನರ ಸಾವಿಗೆ ಕಾರಣನಾಗುತ್ತಾನೆ. ಒಟ್ಟಿನಲ್ಲಿ ಊರ ಜನರು ಹೊಟ್ಟೆಗೆ ಕೂಳಿಲ್ಲದೆ ಸಾಯುತ್ತಿರುವಾಗ ಇವರು ತಮ್ಮ ಪ್ರತಿಷ್ಠೆಯನ್ನು ಸ್ಥಾಪಿಸಲು ಬಡಿದಾಡಿ, ಮುಗ್ಗಾದ ಜೋಳದಿಂದ ಜನರ ಪ್ರಾಣಕ್ಕೆ ಸಂಚಕಾರ ತರುತ್ತಾರೆ.

ನಾನಾನ ಕೊಲೆಯ ವಿಷಯವಾಗಿ ಅಮಲ್ದಾರರು ಗೌಡ ಮತ್ತು ದಾದಾನನ್ನು ಚಾವಡಿಗೆ ಬರಹೇಳಿದಾಗ ದಾದಾ ಸ್ವಾಭಿಮಾನದಿಂದ ಸೆಟೆದು ನಿಂತಿದ್ದು, ಅಮಲ್ದಾರರ ಕೆಂಗಣ್ಣಿಗೆ ಕಾರಣವಾದ ಪ್ರಸಂಗ, ಗಂಗಾ ಸಮಾರಾಧನೆಯನ್ನು ಮಾಡಲು ತಿರಸ್ಕರಿಸಿದ ಬಾಳಾಚಾರ್ಯರನ್ನು ಮಾಮಲೇದಾರರು ನಡೆಸಿಕೊಂಡ ರೀತಿ..... ಪಡದಯ್ಯನನ್ನು ಮಠದಿಂದ ಹೊತ್ತು ತಂದು ಹೊರಕಟ್ಟೆಗೆ ಕೂಡಿಸುವ ದಾದಾನನ್ನು ಚೌಕಸಿ ನಡೆಸಿದ ಗಿಬ್ಸನ ಸಾಹೇಬರು ಊರಲ್ಲಿ ಮಾಮಲೇದಾರ, ಮಹಾರಾಜರ ಕ್ಯಾಂಪು ಎಲ್ಲವೂ ಇದ್ದಾಗ್ಯೂ ಪುಂಡನಂತೆ ವರ್ತಿಸಿ ಕಾಯಿದೆ ಮೀರಿದ್ದಕ್ಕಾಗಿ ದಾದಾನನ್ನು ಅಪರಾಧಿಯೆಂದು ಪರಿಗಣಿಸಿ ಅವನಿಗೆ ತಕ್ಕ ಶಾಸನ ಆಗಬೇಕು ಎಂದು ತೀರ್ಪನ್ನು ನೀಡುವ ಪ್ರಸಂಗಗಳು ಊಳಿಗಮಾನ್ಯ ಸಮಾಜದ ಅಧಿಕಾರವನ್ನು ಪ್ರತಿ ಬಿಂಬಿಸುತ್ತವೆ.

ಒಟ್ಟಿನಲ್ಲಿ ಗ್ರಾಮಾಯಣ ಸಂಕ್ರಮಣಾವಸ್ಥೆಯ ಜೀವನದ ನೋವಿನ ದಾರುಣತೆಯನ್ನು, ವಿಷಮತೆಯನ್ನು ಅತ್ಯಂತ ಯಶಸ್ವಿಯಾಗಿ ಚಿತ್ರಿಸಿದೆ. ಊಳಿಗಮಾನ್ಯ ಪದ್ಧತಿಯನ್ನು ದಾಖಲಿಸುವ ಪ್ರಯತ್ನ ಕಾದಂಬರಿಯಲ್ಲಿದೆ.

ಬುದುಕು ಕಾದಂಬರಿ ನಿಜಾಮನ ಕಾಲದಲ್ಲಿನ ಹಳ್ಳಿಗಳಲ್ಲಿ ಗೌಡ ಕುಲಕರ್ಣಿ ಸಾಹುಕಾರರದೇ ಆಡಳಿತ ಅಧಿಕಾರ ದಬ್ಬಾಳಿಕೆ ಕೆಳವರ್ಗದ ಹೆಣ್ಣುಗಳಿಗೆ ಮನೆ ಮಾಡಿಡುವುದು. ತಮ್ಮ ಅಂತಸ್ತಿನ ಹೆಮ್ಮೆಯ ಸಂಗತಿ ಎಂದು ಭಾವಿಸುತ್ತಿದ್ದ ಕಾಲ.

ಸಮಾಜದ ಮಧ್ಯಮ ವರ್ಗಕ್ಕೆ ಸೇರಿದ ಮಲ್ಲ. ಸರಕಾರದಿಂದ ಜಮಾದಾರರ ತೋಟ ಸ್ವಂತದ ಕಲ್ಲಿನ ಮನೆ. ಭೂಮಿ ಆಳುಕಾಳುಗಳಿಂದ ಕೂಡಿ ಮಂದಿಯಿಂದ ಸಲಾಂ ಸ್ವೀಕರಿಸುವವನೇ ಆದರೂ, ಗೌಡ ಕುಲಕರ್ಣಿಯರು ಹೇಳಿಕಳಿಸಿದಾಗ ಅವರಿಗೆ ಸಲಾಂ ಹೊಡೆದು ಅವರ ಮನೆಯ ಕೊನೆ ಕಟ್ಟೆಯ ಮೇಲೆ ಕೂಡುವುದು, ಅವರ ಹುಕುಂ ಪಾಲಿಸುವುದು ಮೇಲ್ವರ್ಗದವರ ಜಮೀನ್ದಾರಿಕೆಯ ಪ್ರತೀಕವಾಗಿದೆ.

"ಹುಲಿ ಸಿಂಹ ಆದ್ರ ಬಂದೂಕಿನ ಗುಂಡು ಹಾರ್ಸಿ ಹೊಡೀಬೌದು. ಆದರ ಈ ಗೋಡಾ ಕುಕ್ಕಣ್ಣಿ ಸಾವ್ಕಾರ ಅಂಬಂತಾ, ದವುಳ್ಳವರು ಇರ್ತಾರಲ್ಲ ಈ ಸೂಳ್ಯಾಮಕ್ಕಳು ಹುಲಿ ಸಿಂಹಕ್ಕಿಂತ ಭಾಳ ಖತರನಾಕ ಇರ್ತಾರಲೇ" (ಪು. ೧೦೩) ಎಂಬುದು ಸಾಹುಕಾರರ ಆಡಳಿತದ ಗತ್ತಿನ ಬಗೆಗಿನ ಉದಾಹರಣೆಯಾಗಿದೆ.

ಈ ರೀತಿ ಮೇಲ್ವರ್ಗದವರ ಮುಂದೆ ಕೈಕಟ್ಟಿ ನಿಲ್ಲದೆ, ಸ್ವತಂತ್ರವಾಗಿ ಬದುಕ ಬಯಸುವ ಕಲ್ಯಾಣಿ ಜಮಾದಾರಿಕೆಯನ್ನು ನಿರಾಕರಿಸುತ್ತಾನೆ. ಇಡೀ ಕಾದಂಬರಿಯುದ್ದಕ್ಕೂ ಮಲ್ಲಪ್ಪನಾಗಲಿ, ಅವನ ಮನೆಯವರಾಗಲೀ ಆಳುಮಕ್ಕಳೊಂದಿಗೆ ಊಟೋಪಚಾರದಲ್ಲಿ ತಾರತಮ್ಯ ಭಾವವಿಲ್ಲದೆ ನೋಡಿಕೊಳ್ಳುತ್ತಾರೆ. ಆದರೂ ಅವರ ವ್ಯವಹಾರವೇನಿದ್ದರೂ ಅಂಗಳದಲ್ಲಿಯೆ ಎಂಬುದು ಗಮನಿಸಬೇಕಾದ ಅಂಶ.

ಕಾಶಮ್ಮ ಮತ್ತು ಲಿಂಗರಾಜರ ವಿಷಯವಾಗಿ ಮಠದಲ್ಲಿ ಊರ ಹಿರಿಯರು ಸಭೆ ಸೇರಿದಾಗ, ನೀಲಮ್ಮನ ತಂದೆ "ನಿಮ್ಮವ್ವನ ಸೂಳ್ಯಾಮಗನೇ. ನೀವು ಕಮಜಾತಿ ಮಂದೀ ಜಾಲ ನನ್ಗೊತ್ತಿಲ್ಲೇನು? ಮಗಳಿಗಿ ಊರ ಸಾವ್ಕಾರನ ತೆಳಗೆ ಹಾಕಿ, ಅಂವಗ ಬುಟ್ಯಾಗ ಹಾಕ್ಕೊಂಡು ಅವನ ಸಂಪತ್ತನ್ನೆಲ್ಲಾ ಹಡಪ ಮಾಡ್ಕೋಳ್ಳೋ ಹುನ್ನಾರ ಮಾಡ್ತೀರಿ. ಇಗಾ..... ನಿನಗೇಸು ರೊಕ್ಕಾ ರುಪ್ಯೆಬೇಕ್ಹೇಳು ತಗೊಂಡು ನಿನ್ ಮಗಳಿಗೆ ಕರ್ಕೊಂಡು ಈ ಊರುಬಿಟ್ಟು ಹೋಗು" (ಪು.೩೧೫) ಎಂದು ಹೇಳುವಲ್ಲಿ ಉಳ್ಳವರ ಪರ್ದ ಹೊಡೆದು ಕಾಣುತ್ತದೆ.

ಕೆಳವರ್ಗದ ಹೆಣ್ಣುಗಳೊಂದಿಗೆ ವಿವಾಹೇತರ ಸಂಬಂಧವನ್ನು ಹೊಂದುವುದು, ಅವರಿಗೆ ಮನೆ ಮಾಡಿಡುವುದು. ತಮ್ಮ ಅಂತಸ್ತಿಗೆ ತಕ್ಕ ಮತ್ತು ಹೆಮ್ಮೆಯ ಸಂಗತಿಯೆಂದು ಭಾವಿಸುತ್ತಾರೆಂಬುದಕ್ಕೆ ಮಲ್ಲಪ್ಪ ಈರಿಯನ್ನು ಇಟ್ಟುಕೊಂಡು ಮನೆ ನಡೆಸಿಕೊಂಡು ಹೋಗುವುದು ಲಿಂಗರಾಜು-ಮದುವೆಯಾದ ಕಾಶಮ್ಮನ ವಗತನವನ್ನು ಹರಿದು ತೋಟದ ಮನೆಯಲ್ಲಿ ತಂದಿಡುವುದು. ಒಂಟಿಯಾದ ಬೆಳ್ಳಿಯನ್ನು ಗಂಡ ಬರುವವರೆಗೂ ನೋಡಿಕೊಳ್ಳುವುದಾಗಿ ಆಸೆ ತೋರಿಸುವ ಈರಪಾಗಸೆಪ್ಪಗೌಡ ಇವರುಗಳನ್ನು ಉದಾಹರಿಸಬಹುದು. ಹೀಗೆ ನಿಜಾಮರ ಕಾಲದ ಆಡಳಿತದ ಬಹುಪಾಲು ಕಾದಂಬರಿಯಲ್ಲಿ ಸೊಗಸಾಗಿ ಚಿತ್ರಣಗೊಂಡಿದೆ.

ವೈಶಾಖ ಕಾದಂಬರಿ ಆರ್ಥಿಕ ಮುಗ್ಗಟ್ಟು ದಲಿತರ ಜೀತ ಪ್ರವೃತ್ತಿಗೆ ಪ್ರಧಾನ ಕಾರಣ ಎಂಬುದನ್ನು ನಿರ್ದೇಶಿಸುತ್ತದೆ. ಲಕ್ಕನ ಮನೆಯವರು ಕೂಡ ಒಂದು ಕಾಲಕ್ಕೆ ನಾಲ್ಕು ಎಕರೆ ಕುಸ್ಕಿ ಜಮೀನು ಹೊಂದಿದವರು ತಂದೆಯ ಲಗ್ನಕ್ಕೆಂದು ಕೆಂಗಣ್ಣಪ್ಪನ ಹತ್ತಿರ ಮಾಡಿದ ಸಾಲಕ್ಕೆ ಬಡ್ಡಿಯೇರಿ-ಯೇರಿ ತಂದೆ-ಮಗ (ನಿಂಗಣ್ಣ ಗೆಜ್ಜುಗ) ಇಬ್ಬರೂ ಮೂಗಿನಲ್ಲಿ ಕವಡೆ ಕಟ್ಟಿಕೊಂಡು ದುಡಿದರೂ ಸಾಲ ತೀರದೆ ಜಮೀನು ಕೆಂಗಣ್ಣಪ್ಪನ ಪಾಲಾಗುತ್ತದೆ" ಮತ್ತೆ ಜೀವನವನು ಸಾಗಿಸುವ ಸಲುವಾಗಿ ಅದೇ ಕೆಂಗಣ್ಣಪ್ಪನ ಹತ್ತಿರ ಅರವತ್ತು ರೂಪಾಯಿ ಸಾಲ ಪಡೆದು ಅದಕ್ಕೆ ಬದಲಾಗಿ ಶಾಲೆಗೆ ಹೋಗುತ್ತಿದ್ದ ಲಕ್ಕನನ್ನು ನಿಂಗ ಜೀತಕ್ಕೆ ಇರಿಸುತ್ತಾನೆ. ಬುಂಡಮ್ಮ ಅರವತ್ತು ರೂಪಾಯಿಗೆ ಇನ್ನೂ ಐವತ್ತು ಸೇರಿಸಿ ಲಕ್ಕನನ್ನು ತನ್ನಲ್ಲಿ ಜೀತಕ್ಕೆ ಇರಿಸಿಕೊಳ್ಳುತ್ತಾಳೆ. ಟಗರೂರ

ಮಾಡಿದ ತಪ್ಪಿಗಾಗಿ ಪಂಚಾಯಿತಿಯವರು ತಪ್ಪುದಂಡವೆಂದು ಸಾವಿರ ರೂಪಾಯಿ ಹಾಕಿದಾಗ ಅನ್ಯಮಾರ್ಗ ವಿಲ್ಲದೆ ಮದುವೆ ವಯಸ್ಸಿಗೆ ಬಂದ ಮಗಳನ್ನು ಜೀತಕ್ಕಿರಿಸುತ್ತಾನೆ. ಇಂಥ ಉದಾಹರಣೆಗಳು ಕಾದಂಬರಿಯಲ್ಲಿ ತುದಿ ಮೊದಲೆನ್ನದೆ ನಿರೂಪಿತಗೊಂಡಿವೆ.

ಇನ್ನು ಜೀತಗಾರರಾಗಿರುವವರ ಬದುಕು ಅವರನ್ನು ಇರಿಸಿಕೊಂಡವರನ್ನು ಅವಲಂಬಿಸಿ ಸಹನೀಯವೋ ಅಸಹನೀಯವೋ ಆಗಿರುತ್ತದೆ. ಉದಾ. ಕೆಂಗಣ್ಣಪ್ಪ ಮತ್ತು ಆತನ ಮಡದಿಯ ಬಳಿಯಲ್ಲಿ ಜೀತಕ್ಕೆ ನಿಂತವರ ಬದುಕಂತೂ ನಿತ್ಯ ನರಕ. ಅದೇ ಬುಂಡಮ್ಮ, ಕೃಷ್ಣಾಶಾಸ್ತ್ರಿಯವರಂಥವರ ಬಳಿ ಲಕ್ಕ ಜೀತಕ್ಕೆ ನಿಂತರೂ, ಅವರಿಬ್ಬರ ನಡುವೆ ಮಾನವೀಯ ಸಂಬಂಧ ಏರ್ಪಡುವುದು ಕಂಡುಬರುತ್ತದೆ.

ಬುಂಡಮ್ಮನವರ ಸಾಲವನ್ನು ಹಿಂದುರಿಗಿಸಿ ಲಕ್ಕನನ್ನು ಜೀತಬಿಡಿಸಿ ಮಠಕ್ಕೆ ಕಳಿಸಲು ಕೇಳಿದಾಗ "ನಿನ್ನ ಅಣ ತಕ್ಕೊಂಡು ನಾಯೇನು ಮಾಡಿಕೊಳ್ಳಲ್ಲಲೋ ನಿಂಗ...? ನನಗೆ ಬೇಕಾಗಿರೋದು ನಿನ್ನ ಹೈದ" (ಪು.೧೦೧ ವೈಶಾಖ) ಎನ್ನುತ್ತಾರೆ. ಬುಂಡಮ್ಮನಿಗೆ ಹಣಕ್ಕಿಂತ ಲಕ್ಕನ ಒಡನಾಟ ಕಳೆದುಕೊಳ್ಳಲು ಇಷ್ಟ ವಿರುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕೊನೆಗೆ ಶಾಲೆಗೆ ಸೇರಿಸಲು ಲಕ್ಕನನ್ನು ಜೀತಬಿಡಿಸು ತ್ತಿರುವುದಾಗಿ ಹೇಳಿದಾಗ ಬುಂಡಮ್ಮ ಲಕ್ಕನನ್ನು ಹಾರ್ದಿಕವಾಗಿ ಕಳಿಸಿಕೊಡುತ್ತಾಳೆ.

ಸವರ್ಣೀಯರ ಕ್ರೌರ್ಯದಲ್ಲಿ ಜೀತದಾಳುಗಳ ಜೀವನ ನರಳುವುದೂ ಕೂಡ ಕಾದಂಬರಿಯಲ್ಲಿ ಚಿತ್ರಿತಗೊಂಡಿದೆ. ಇನ್ನೂರು ರೂಪಾಯಿ ಸಾಲಕ್ಕಾಗಿ ಬುಂಡನ ಮಗ ಗಂಗಪ್ಪನ ಮನೆಯ ಜೀತಕ್ಕೆ ಸೇರಿಸು ತ್ತಾನೆ. ಅಲ್ಲಿನ ಹಿಂಸೆ ತಡೆಯಲಾರದೆ ಒಂದೇ ತಿಂಗಳಲ್ಲಿ ಅವನ ಮಗ ಮನೆಗೆ ತಿರುಗಿ ಬಂದಾಗ ಗಂಗಪ್ಪ ಪಂಚಾಯಿತಿ ಕರೆಸುತ್ತಾನೆ. ಪಂಚಾಯಿತಿಯಲ್ಲಿ ಗಂಗಪ್ಪನಿಗೆ ಎದುರಾಗಿ ಕ್ಯಾಟೆ ಬುಳ್ಳಪ್ಪ ಬುಂಡನ ಮಗನನ್ನು ಅರ್ಧಕ್ರಯ(ಹಣ)ಕ್ಕೆ ಇರಿಸಿಕೊಳ್ಳುತ್ತಾನೆ. ಆದರೂ ಒಂದು ದಿನ ಬುಂಡನ ಮಗನಿಗೆ ಎಲೆ ಅಡಿಕೆ ಸೊಪ್ಪುಕೊಡುತ್ತ ಅವನನ್ನು ಒಲಿಸಿಕೊಂಡು ಕಾಯಿ ಕೀಳಲು ತೋಟಕ್ಕೆ ಕಳಿಸುತ್ತಾನೆ. ತೆಂಗಿನ ಮರದಿಂದ ಆಳು ಎಳೆನೀರನ್ನು ಕೆಳಕ್ಕೆ ಎಸೆಯುತ್ತಿದ್ದಾಗ ಬುಂಡನ ಮಗನಿಗೆ ಬಿದ್ದು ಬಲದ ತೋಳು ಮತ್ತು ಬಲದ ಮಂಡಿಮೂಳೆ ಮುರಿದು ಆತ ಹೆಳವನಾಗುತ್ತಾನೆ. ಇಂತಹದೇ ಮತ್ತೊಂದು ಪ್ರಸಂಗ ಗೆಜ್ಜುಗನದು.

ಕೆಂಗಣ್ಣಪ್ಪ ಹತ್ತಿರ ಗೆಜ್ಜುಗನ ಮದುವೆಗೆಂದು ಸಾಲ ತಂದಿದ್ದರಿಂದ ಕೆಂಗಣ್ಣಪ್ಪ ತಮ್ಮ ಬಳಗದವರ ಮದುವೆಗೆ ಜೊತೆಯಾಗಿ ಗೆಜ್ಜುಗನನ್ನು ಕರೆದುಕೊಂಡು ಹೋಗುತ್ತಾನೆ. ಗೆಜ್ಜುಗ ನೀರಿನ ಮಡುವಿಗೆ ಸಿಲುಕಿ ಸತ್ತಾಗ ಅದಕ್ಕೆ ನಷ್ಟ ಪರಿಹಾರವಾಗಿ ಏನನ್ನು ಕೊಡದೆ. ಮಾಡಿದ ಸಾಲಕ್ಕೆ ನಿಂಗನೇ ಅವರ ಮನೆಯ ಜೀತಕ್ಕಿರಬೇಕಾಗಿ ಬರುವುದು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯವನ್ನು ಪರಿಚಯಿಸುತ್ತದೆ.

ಬೆಳಗಾವಿ ಜಿಲ್ಲೆಯ ಉತ್ತರ ತುದಿ ಹಳ್ಳಿಗಳಲ್ಲಿಯ ಜೈನ ಸಮಾಜದ ಜನಜೀವನವನ್ನು ಕಟ್ಟಿಕೊಡುವ ಕಾದಂಬರಿ ನಿಸರ್ಗ. ಶಾಂತಿನಾಥ ದೇಸಾಯಿಯವರು ಗುರುತಿಸುವಂತೆ "ಈ ಸಮಾಜದ ಜನ ಪ್ರಮುಖವಾಗಿ ಸಣ್ಣ ಹಿಡುವಳಿದಾರರು. ತಮ್ಮ ಚಿಕ್ಕ ಹೊಲಗಳಲ್ಲಿ ಸ್ವಂತ ದುಡಿಯುವವರು. ಅವರಿಗೆ ತಮ್ಮ ಆಸ್ತಿಯೆಂದರೆ

ಜೀವ. ಅದು ಹೆಚ್ಚಾದರೆ ಚಲೋ ಕಡಿಮೆಯಾದರೆ ಕೇಡು. ಸ್ವಂತ ದುಡುಮೆಯಲ್ಲದೆ ಕಾಳುಕಡ್ಡಿಗಳಿಲ್ಲ. ಉತ್ಪನ್ನವಿಲ್ಲ. ಸ್ವಂತ ಉತ್ಪನ್ನವಿಲ್ಲದಿದ್ದರೆ ಅಥವಾ ಆ ಉತ್ಪನ್ನ ಕಡಿಮೆಯಾದರೆ ಸಾಲದ ಜಾಲದಲ್ಲಿ ಬೀಳುವುದೊಂದೇ ಹಾದಿ ಜೀವನದ ಮೇಲೆ ಅಂದರೆ ದುಡಿಮೆ ಗಳಿಕೆಯ ಮೇಲೆ ಹಿಡಿತ ತಪ್ಪಿತೋ ಅಥವಾ ಸಡಿಲಾಯಿತೋ ಕೇಡಿನ ಪರಂಪರೆ ಸುರವಾಯಿತೆಂದೇ ತಿಳಿಯಬೇಕು. (ಗಿರಡ್ಡಿ ಗೋವಿಂದರಾಜು (ಸಂ), ಮಿರ್ಜಿ ಅಣ್ಣಾರಾಯ ಸಾಹಿತ್ಯ, ಪು. ೧೩) ಎಂಬ ನಂಬಿಕೆಯುಳ್ಳ ಜನರ ಕಥೆಯಾಗಿದೆ.

ಚಿಮ್ಮವ್ವ, ಅಣ್ಣ ಮಲ್ಲನ ಮಗಳು ತಾರಾಳನ್ನು ತನ್ನ ಮಗನಿಗೆ ತಂದುಕೊಳ್ಳುವುದು. ಗಂಡು ಸಂತಾನವೇ ಇಲ್ಲದ ಅಣ್ಣನ ಆಸ್ತಿಗೆ ಆಸೆಬಿದ್ದು. ತಾರಾ ಮೈನೆರೆದಾಗ. ಭರಮನಿಗೆ ಸಾಕಾಗುವಷ್ಟು ಬಂಗಾರ ಕೊಡಲಿಲ್ಲವೆಂಬ ಕಾರಣಕ್ಕೆ ಸೊಸೆಯನ್ನು ಪೀಡಿಸತೊಡುಗುತ್ತಾಳೆ. ಅಲ್ಲದೆ ಗಂಡ ಹೆಂಡಿರು ಒಟ್ಟು ಗೂಡದಂತೆ ನೋಡಿಕೊಳ್ಳುತ್ತಾಳೆ. ರತ್ನವ್ವ ತನ್ನ ಅಣ್ಣನ ಮಗ ಅನಂತನನ್ನು ಅಕ್ಕರೆಯಿಂದ ಕಾಣುವುದನ್ನು ಕಂಡಾಗಲಂತೂ ರತ್ನವ್ವ ತನ್ನ ಹೊಲ ಮನೆಯನ್ನು ತನ್ನ ತವರವರಿಗೆ ಕೊಡುವ ಸಲುವಾಗಿ ಅನಂತನನ್ನು ಮುದ್ದಿಸುತ್ತಾಳೆಂಬ ಅನುಮಾನದಿಂದ ತಾರಾಳಿಗೆ ಅನ್ನ ನೀರು ಕೊಡದೆ ಹಿಂಸಿಸುತ್ತಾಳೆ.

ತಾರಾಳ ಎರಡನೇ ಗಂಡ ಅಪ್ಪಣ್ಣನೂ ಕೂಡ ಮೊದ ಮೊದಲು ಈ ರೀತಿಯ ಭಾವನೆಗಳನ್ನು ತಳೆದಿರುವುದಿಲ್ಲವಾದರೂ ತಾರಾಳ ತವರಿಗೆ ಹೋದಾಗ ಜನರಾಡುವ ಮಾತುಗಳಿಂದ ಪ್ರೇರಿತನಾಗಿ ತಾರಾಳನ್ನು ಮಾವನ ಮನೆಯ ಕಟ್ಟೆಕಲ್ಲನ್ನು ಏರದಂತೆ ಮಾಡುತ್ತಾನಲ್ಲದೆ ರತ್ನವ್ವನನ್ನು ತವರು ಮನೆಯವರಿಂದ ದೂರಮಾಡುತ್ತಾನೆ. ಕೊನೆಗೆ ಅಪ್ಪಣ್ಣನ ಮನಸ್ಥಿತಿಯನ್ನು ಅರಿತ ಮಲ್ಲಪ್ಪ ರತ್ನವ್ವರು ಹೊಲ ಮನೆಯನ್ನು ಅಳಿಯನ ಹೆಸರಿಗೆ ಬರೆಯುತ್ತಾರೆ.

ಹೀಗೆ ಕಾದಂಬರಿಯಲ್ಲಿ ಊಳಿಗಮಾನ್ಯ ಜೀತಪದ್ಧತಿಯಂತಹವುಗಳು ಇಲ್ಲವಾದರೂ ಆಸ್ತಿಗಾಗಿ ತಾರಕ್ಕನನ್ನು ಹಿಂಸಿಸುವ ಪರಿಯನ್ನು ನೋಡಬಹುದು.

ಅಸ್ಪೃಶ್ಯರು ಕಾದಂಬರಿಯಲ್ಲಿ ಜೀತ ಊಳಿಗದಂತಹ ಪದ್ಧತಿಗಳು ನೇರವಾಗಿ ಗೋಚರಿಸುವುದಿಲ್ಲವಾದರು ಯಾವ ಜಾತಿಯ ಜನ ಯಾವ ಕೆಲಸ ಮಾಡಬೇಕು ಎಂಬುದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವ ಜಾತಿ ವ್ಯವಸ್ಥೆಯನ್ನು ಕೃತಿ ಬಹಳ ಸೂಕ್ಷ್ಮವಾಗಿ ದಾಖಲಿಸುತ್ತದೆ. ಇದಕ್ಕೆ ಕಾದಂಬರಿಯಿಂದಲೇ ನಿದರ್ಶನಗಳನ್ನು ನೋಡುವುದಾದರೆ;

ಸಮಾಜ, ಕೆಳಸಮುದಾಯದವರನ್ನು ತಲತಲಾಂತರದಿಂದಲೂ ನೀಚ, ನಿಕೃಷ್ಟ ಕೆಲಸಗಳಿಗೆ ಬಳಸಿ ಕೊಂಡಿದೆ. ಅದರಲ್ಲಿ ಮಲಹೊರುವ ಕೆಲಸವೂ ಒಂದು. "ಹಲಸಿನ ಕಾಯಿ ಸೊಳೆ ಬಿಡಿಸುತ್ತ ಮಾತುಕತೆ ಸಾಗುತ್ತಿದ್ದಾಗ ಘಂ ಎಂತ ವಾಸನೆ ಹೊಡೆಯಿತು. ಯಂತದದು ಯಂದು ತಿರುಗಿ ನೋಡಿದರೆ ತೋಟಿ! ತಲೆಯ ಮೇಲೆ ಮಲದ ಬಾಲ್ದಿ ಇಟ್ಟುಕೊಂಡು ಹೋಗುತ್ತಿದ್ದಳು.

ಹೀಗೆ ಹೋಗುತ್ತಿದ್ದವಳಿಗೆ ಪಾರ್ವತಕ್ಕ "ಯೇ ಸತ್ತವಳೆ, ನಿಂಗೆ ಬೇರೆ ಯಾವ ಹೊತ್ತಿಲ್ಲವ ಬರಲಿಕ್ಕೆ?

ನಾವು ಸೊಳೆ ಬಿಡಿಸಿ ಇಟ್ಟುಕೊಂಡ ಮುಹೂರ್ತ ಕಂಡೇ ಬಂದಿದ್ದೀಯಲ್ಲ! ಎಲ್ಲರೂ ಹೊಟ್ಟೆ ಮಗುಚಿ ವಾಂತಿ ಮಾಡಿಕೊಳ್ಳಲಿ ಅಂತವ?" ಎನ್ನುತ್ತ ಪಾರ್ತಕ್ಕ ಸೊಳೆ ತುಂಬಿದ ಪಾತ್ರೆಗೆ ಅಡ್ಡ ಕುಳಿತುಕೊಳ್ಳುತ್ತಾಳೆ. "ಅದರ ಕಣ್ಣಿಗೆ ಬಿದ್ದರೆ ಸಾಕು ಸೊಳೆ ಬೇಯುವ ಆಸೆ ಬಿಟ್ಟಂತೆಯೇ, ರಾವು ಬಡಿದ ಜಾತಿಯಲ್ಲವೆ? ಕೊಳಕು ಜಾತಿ".

"ಅದು ಹೇಗೆ ಕೊಳಕು?" ಎಂದು ಕೇಳಿದ ಪುಟ್ಟನಿಗೆ "ಕೊಳಕಲ್ಲದೆ ಪವಿತ್ರವ? ಅದರ ತಲೆಯ ಮೇಲೆ ಯಂತದು ಇರುವುದು? ಯಾರ ಯಾರ ಮನೆ ಪಾಯಿಖಾನೆ! ಎಲ್ಲದರ ಒಟ್ಟು ವಾಸನೆ ನಮ್ಮ ಮೂಗಿಗೆ. ಥು ನಾ ಮಿಂದು ಕೂಡ ಆಯಿತು". ಎಂದಾಗ ಶಿವ "ಮನುಷ್ಯನಿಗೆ ಇದೊಂದು ಅಸಹ್ಯ ಇಲ್ಲದಿರುತ್ತಿದ್ದರೆ!" ಎಂದಾಗ "ತೋಟಿ ಕೆಲಸವಿಲ್ಲದೆ ಸಾಯುತ್ತಿತ್ತು" ಎನ್ನುತ್ತಾರೆ. ಪಾರ್ತಕ್ಕ (ಪು.೨೭-೨೮) ಈ ವಿವರಣೆಯಲ್ಲಿ ಮಲಹೋರುವಂತಹ ನೀಚ ಕೆಲಸವನ್ನು ತೋಟಿಯಲ್ಲದೆ ಮತ್ತಾರೂ ಮಾಡುವಂತಿಲ್ಲ, ತೋಟಿಯೂ ಕೂಡ ಈ ಕೆಲಸವನ್ನು ಬಿಟ್ಟು ಮತ್ತ್ಯಾವ ಕೆಲಸಕ್ಕೂ ಹೋಗುವಂತಿಲ್ಲ ಎನ್ನುವ ಸಾಮಾಜಿಕ ನಿರ್ಬಂಧಗಳಿವೆ ಎಂಬುದನ್ನು ಧ್ವನಿಸುತ್ತದೆ. ಆದರೆ ಕಾಲ ಬದಲಾಗುತ್ತಿದೆ ಎಂಬುದನ್ನು ಇದೇ ಜಾತಿಯ ಕೂಸಾಳು ಓದಿ ಬರಹ ಕಲಿತು ದೊಡ್ಡ ಹುದ್ದೆಯಲ್ಲಿದ್ದಾನೆ ಎಂಬ ಅಂಶ ಸ್ಪಷ್ಟಪಡಿಸುತ್ತದೆ.

ರತ್ನನ ಮಗಳ ನಾಮಕರಣದ "ದಿನ ಯಾವ ಮಾಯಾಕದಲ್ಲಿಯೋ ನರಪಟೆ ಮತ್ತು ಅವಳ ಪಂಗಡ ಹಿಂಬದಿಯ ದೊಡ್ಡ ಹಿತ್ತಲ ಮೂಲೆಯಲ್ಲಿ ಬಂದು ಕುಳಿತಿತ್ತು. ಬೇಡ ಬೇಡವೆಂದರೂ ಅನ್ನ ಮೇಲೋಗರ ಸಿಹಿ ಭಕ್ಷ್ಯಗಳನ್ನು ಬಡಿಸಿದ್ದರಿಂದ ಹಿತ್ತಲ ಮೂಲೆಯಲ್ಲಿ ಬಿಸಾಕಿದ ಎಲೆಗಳ ಮೇಲೆ ರಾಶಿ ರಾಶಿ ಉಳಿದಿರುವುದನ್ನು ಕಂಡ ಪಂಗಡಕ್ಕೆ ಬಹಳ ಆನಂದವಾಯಿತು. ಎಲೆ ಬಂದದ್ದು ಬಿದ್ದದ್ದೇ ಅದಕ್ಕೆ ಪಂಗಡ ಬಂದು ಮುತ್ತಿತು. ಎಡಗೈಯಲ್ಲಿ ಕಾಗೆ ನಾಯಿ ಇತ್ಯಾದಿಗಳನ್ನು ಸಾಧ್ಯವಾದಷ್ಟು ಓಡಿಸಿಕೊಳ್ಳುತ್ತ ಭೋಜನ ಆರಂಭವಾಯಿತು". (ಪು. ೭೫)

ಎಂಬಂತಹ ವಿವರಣೆಯು ಕಾಗೆ ನಾಯಿಗಳಂತೆ ಬಾಳುವ ಅವರ ಜೀವನಕ್ಕೆ ಅವರದೇ ಆದ ಸ್ವಂತ ಆಸ್ತಿಯೆಂಬುದು ಇಲ್ಲದುದೇ ಪ್ರಮುಖ ಕಾರಣವಾಗಿದೆಯಲ್ಲದೆ, ಹೀಗೆ ಊಟ ಮಾಡುವವರು ನರಪಟೆಗಳು ಮಾತ್ರ ಅಂದರೆ ನೀಚರಲ್ಲಿ ನೀಚರು. ಇವರಿಗೆ ಸಮಾರಂಭಗಳಲ್ಲಿ ಸಿಗುವ ಎಂಜಲಿನ ಎಲೆಯ ಅನ್ನವೇ ಮೃಷ್ಟಾನ್ನವಾಗಿರುತ್ತದೆ.

ಕೆಳಸಮುದಾಯಗಳಲ್ಲಿ ದುಡಿದ ಜನರ ದುಡ್ಡು ಅಂದಂದಿನ ದಿನಕ್ಕೆ ವ್ಯಯವಾಗುವುದನ್ನು ನೋಡಬಹುದು. (ಅಂದರೆ ಅವರಿಗೆ ಕೆಲಸ ಹೆಚ್ಚು ಅದಕ್ಕೆ ಪ್ರತಿಫಲವಾಗಿ ಬರುವ ಹಣ ಕಡಿಮೆ) ಇದಕ್ಕೆ ಕಾದಂಬರಿಯಿಂದ ಒಂದು ನಿದರ್ಶನವನ್ನು ನೋಡುವುದಾದರೆ

ಹುಲ್ಲುಕೂಸು - ನಾಡಿದು ಚೌತಿಯ ದಿನಕ್ಕೆ ಕೊಟ್ಟಿಗೆ ಮುಂಡುಗನೋಲೆಯ ಒಂದು ದೊಡ್ಡ ಕಟ್ಟನ್ನೇ ತಂದು ಅಂಗಳದಲ್ಲಿ ದೂರದಲ್ಲಿಟ್ಟು ನಿಂತಿದ್ದಾಳೆ ಕೂಸ. ತಲೆಯ ಮೇಲಿನ ವಸ್ತ್ರದ ಇರಿಕೆಯಾಕಾರದ ಚಂಚೆಯನ್ನು ತೆಗೆಯದೆ ತುಂಬಿದ ಬಸುರಿ.

"ಎಂಥಾ ಮುಳ್ಳು ಎಂದರೆ ಅಂಥಾ ಮುಳ್ಳು ಮೈಕೈಯೆಲ್ಲ ಗೆರಚಿ ಗಾಯವಾಗಿದೆ. ಅಮ್ಮ, ಈ ಸುತ್ತಿನಲ್ಲಿ ಎಲ್ಲಿಯೂ ಇಲ್ಲ. ದೂರ ಹೋಗಬೇಕು. ಅಂತೂ ಇಷ್ಟು ತಂದೆ ಕಾಣಿ" ಎಂದು ಹೇಳುತ್ತಾಳೆ. ಹೀಗೆ ಹೇಳುವುದರ ಹಿಂದಿನ ಉದ್ದೇಶ ಏನು ಕೊಡುವುದಿದ್ದರೂ ಸ್ವಲ್ಪ ಜಾಸ್ತಿ ಕೊಡಲಿ ಎಂಬ ಇಂಗಿತ ಅವಳ ಮಾತಿನಲ್ಲೆಲ್ಲಾ ಹರಡಿತ್ತು. ಗೌರಮ್ಮ ಸೀರೆ ನೆರಿಗೆಯ ಬಾಳೆಕಾಯಿಯಲ್ಲಿ ಸಿಕ್ಕಿಸಿಕೊಂಡಿದ್ದ ಚಿಲ್ಲರೆಯಿಂದ ಪಾವಲಿ ತೆಗೆದು ಅವಳ ಕೈ ಮೇಲೆ ಹಾಕಿದರು. ದುಡ್ಡು ತೆಗೆದುಕೊಂಡು ತಲೆಯ ಮೇಲಿನ ಚಂಡೆ ತೆಗೆದು ಕುಳಿತಳು ಕೂಸ. ಮನೆಯೊಳಗೆ ಅಕ್ಕಿಯಿಲ್ಲವೆಂದು ಗೌರಮ್ಮನಿಂದ ಅಕ್ಕಿ ಕೇಳಿ ಪಡೆಯುತ್ತಾಳೆ.....

ಈಗ ಹೆರುವ ದಿನವೆಂತ ಕಾಣುತ್ತದೆ. ಹೌದ?" ಎಂದು ಗೌರಮ್ಮ ಕೇಳಿದಾಗ "ಹೌದು ಹೆತ್ತು ಮಲಗಿದ ಹತ್ತುದಿನ ನನ್ನ ಹಿರೇಮಗಳು ಬರುತ್ತಾಳೆ. ನಿಮಗೆ ಹುಲ್ಲಿಗೆ ಮೋಸವಿಲ್ಲ" (ಪು. ೮೧-೮೩ ಅಸ್ಪೃಶ್ಯರು) ಎಂದು ಹೇಳುತ್ತಾಳೆ.

ಈ ವಿವರಣೆಯನ್ನು ಇಲ್ಲಿ ದಾಖಲಿಸಿದ ಉದ್ದೇಶವಿಷ್ಟೇ ಗೌರಮ್ಮನ ಮಗಳು ರತ್ನನೂ ಬಸುರಿ ಹೆತ್ತಮೇಲೆ ಮೂರು ತಿಂಗಳುಗಳ ಕಾಲ ಬಾಣಂತನವನ್ನು ಮಾಡಿಸಿಕೊಳ್ಳುವಳು. ಆದರೆ ಕೂಸ ಇನ್ನೂ ಹೆರಿಗೆ ಕೇವಲ ಹತ್ತು ದಿನಗಳು ಇವೇ ಎಂಬುವವರೆಗೂ ಹುಲ್ಲು ಹೊರುವಂತಹ ಕಷ್ಟದ ಕೆಲಸವನ್ನು ಮಾಡಿ ಮನೆಯವರನ್ನು ಸಾಕುವ ಜವಾಬ್ದಾರಿಯನ್ನು ಹೊರುತ್ತಾಳೆ. ಇವಳಿಗೆ ಹೆರಿಗೆಯಾದ ನಂತರವೂ ಆಗುವ ಬಾಣಂತನ ಕೇವಲ ಹತ್ತೇ ದಿನ. ನಂತರ ಪುನಃ ಕೆಲಸಕ್ಕೆ ಹೋಗಬೇಕಾದ ಪ್ರಸಂಗ ಇಲ್ಲವಾದರೆ ಅವಳನ್ನೊಳಗೊಂಡಂತೆ ಇಡೀ ಕುಟುಂಬವೇ ಉಪವಾಸವಿರಬೇಕಾಗುವ ಸಂದರ್ಭ ಒದಗಿಬರುತ್ತದೆ. ಕೂಸನಿಗೆ ತನ್ನದು ಎನ್ನುವ ಯಾವ ಸ್ವಂತ ಆಸ್ತಿಯೂ ಇಲ್ಲದಿದ್ದುದರಿಂದ ಎಷ್ಟೇ ಕಷ್ಟವಾದರೂ ಯಾವುದೇ ಸಂದರ್ಭವಾದರೂ ಸರಿ ಸವರ್ಣೀಯರ ಅಗತ್ಯಕ್ಕೆ ತಕ್ಕಂತೆ ಕೆಲಸ ಮಾಡಲೇಬೇಕಾಗುತ್ತದೆ. ಹೀಗೆ ಕಾದಂಬರಿಯಲ್ಲಿ ಊಳಿಗದ ಭಿನ್ನ ರೂಪಗಳು ಚಿತ್ರಿತಗೊಂಡಿದೆ.

೩.೨.೨ ಜಾನಪದೀಯ ಅಂಶಗಳು

ಪ್ರಸ್ತುತ ಭಾಗದಲ್ಲಿ ಮಹಾಪ್ರಬಂಧಕ್ಕೆ ಆಯ್ದುಕೊಂಡಿರುವ ಕಾದಂಬರಿಗಳಲ್ಲಿ ಮೂಡಿಬಂದಿರುವ ಜಾನಪದ ಗೀತೆ, ಗಾದೆ, ನುಡಿಗಟ್ಟು, ಬೈಗುಳ, ಆಹಾರ, ಜಾತ್ರೆ, ದೈವ ಮೈಮೇಲೆ ಬರುವುದು, ಹೇಳಿಕೆಗಳು, ಸಂಪ್ರದಾಯ, ಆಚರಣೆ, ಸಮಾಜದ ಅನಿಷ್ಟ ಪದ್ಧತಿಗಳು ಮೊದಲಾದ ಜಾನಪದೀಯ ಅಂಶಗಳನ್ನು ಗುರುತಿಸಲಾಗಿದೆ.

ಈ ಭಾಗದಲ್ಲಿಯೂ ಕೂಡ ಜಾತಿಯಾಧಾರಿತ ಹಬ್ಬದ ಆಚರಣೆಗಳಲ್ಲಿ ಮೇಲ್ವರ್ಗದವರು ಕೆಳವರ್ಗದವರೆಂಬ ಭಿನ್ನತೆಯ ಅಂಶಗಳು ಕಂಡುಬರುತ್ತವಾದರೂ ಅವೆಲ್ಲವನ್ನೂ ಮರೆತು ದೈವಸಂಬಂಧಿ ಕಾರ್ಯಗಳಿಗಾಗಿ, ಹಬ್ಬ ಹರಿದಿನಗಳಲ್ಲಿ ಜಾತಿ ಭೇದ ಮರೆತು, ಮೇಲುಕೀಳೆನ್ನದೆ ಎಲ್ಲರೂ ಒಂದಾಗುವುದು, ಊರಗೌಡನಿಂದ ಹಿಡಿದು ಎಲ್ಲರೂ ಕೆಳವರ್ಗದವರೆಂಬ ತಾರತಮ್ಯವಿಲ್ಲದೆ ಗಲ್ಲಬಡಿದುಕೊಂಡು ನಿಲ್ಲುವಂತಹ ಅಂಶಗಳು ವೈದೃಶ್ಯತೆಯ ಅಂಶಗಳಾಗಿವೆ. ಇಂತಹ ಅಂಶಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಅರಮನೆ ಕಾದಂಬರಿಯು ಜನಪದೀಯ ಅಂಶಗಳಿಂದ ತುಂಬಿದ ಒಂದು ದೊಡ್ಡ ಗುಡಾಣವೆಂದು ಹೇಳಿದರೆ ತಪ್ಪಾಗಲಾರದು. "ಪರಂಪರಾಗತವಾಗಿ ಬಂದಿರುವ ಧಾರ್ಮಿಕ ನಂಬಿಕೆಗಳು, ಆಚರಣೆಗಳನ್ನು ಕೃತಿಕಾರರು ಕೃತಿಯ ಪ್ರಾರಂಭದಿಂದಲೇ ಪರಿಚಯಿಸುತ್ತಾ ಹೋಗುತ್ತಾರೆ. ಕುದುರೆಡವು ಪಟ್ಟಣದ ಅರಮನೆಯಲ್ಲಿ ಪೀಕದಾನಿ ಹಿಡಿಯುವ ಮೂಳೆ ಓಬಯ್ಯ ಎಂಬುವವನ ದೇಹವನ್ನು ದೇವಿ ಶಾಂಭವಿ ಪ್ರವೇಶಿಸಿ ಅದನ್ನು ತನ್ನ ವಸತಿಯನ್ನಾಗಿ ಮಾಡಿಕೊಳ್ಳುತ್ತಾಳೆ. ಕಥಾನಕವು ಬೆಳೆದಂತೆ ಈ ಪವಿತ್ರ ವಸ್ತಿಯ ಮಹಾತ್ಮೆ ದೇವಿ ಸಾಂಭವಿಯನ್ನು ಹೊಳೆಗೆ ಹೊಂಡಿಸುವ ಅದ್ಧೂರಿಯ ಆಚರಣೆ. ಅನಂತರ ಸಾಂಭವಿಗೆ ಮಕ್ಕಳನ್ನಾಡಿಸುವ ಆಸೆ ಕೊನೆಗೆ ಓಬಯ್ಯನೇ ಅವಳ ಮಗುವಾಗುವುದು. ಆ ಮಗುವಿನ ಅನ್ನಪ್ರಾಶನ, ನಾಮಕರಣ, ಅಕ್ಷರಾಭ್ಯಾಸ ಇತ್ಯಾದಿ ಸಂಸ್ಕಾರಗಳು ಇವೆಲ್ಲವುಗಳನ್ನೂ ದೀರ್ಘವಾಗಿ, ವಿವರವಾಗಿ ಕೃತಿ ದಾಖಲಿಸುತ್ತದೆ. ಏಳೆಂಟು ಪುಟಗಳಷ್ಟು ದೀರ್ಘವಾಗಿರುವ ಜಾತ್ರೆಯ ವರ್ಣನೆ ಕಣ್ಣಿಗೆ ಕಟ್ಟುವಷ್ಟು ನೈಜ ವಾಗಿ ಬಂದಿದೆ" (ಪು. ಅರಮನೆಯ ಮುನ್ನುಡಿ) ಎಂದು ಹೇಳುವ ಸಿ.ಎನ್. ರಾಮಚಂದ್ರನ್‌ರವರ ಮಾತು ಸಮಂಜಸವಾದುದಾಗಿದೆ.

"ಯಲ್ಲಿ ನೋಡಿದರಲ್ಲಿ ಮಾಯಿನ ತೋರಣಗಳೇನು? ಸಾರಣೆ ಕಾರಣೆ ಕಂಡಿದ್ದ ನೆಲಗಳೇನು? ಅವರ ಮನೆಯಂಗಳದಿಂದ ಯಿವರ ಮನೆ ಮನೆಯಂಗಳಕೂ, ಯಿವರ ಮನೆಯಂಗದಿಂದ ಅವರ ಮನೆಯಂಗಳಕೂ ಪಯಿಪೋಟಿಯಿಂದ ಹೋಗಿ ಬರುತಲಿದ್ದ ರಂಗವಲ್ಲಿ ಚಿತ್ತಾರಗಳೇನು? ರುಮುರುಮು ಅನ್ನುತಲಿದ್ದ ರುಮ್ಮಿ ಗಳೇನು ಡೊಳ್ ಡೊಳ್ ಅನ್ನುತಲಿದ್ದ ಡೊಳ್ಳುಗಳೇನು? ಟಡ್ಡೆಣಕ್ಕು ಣಕ್ಕುಣಕ್ಕು ಯಂದು ಸಪ್ಪಳ ಮಾಡುತಲಿದ್ದ ಹಲಗೆ ತಮಟೆಗಳೇನು? ದಯ್ ದಯ್ ದದ್ದಿಯೆಂದು ಕುಣಿದಾಡುತಲಿದ್ದ ಕೋಲಾಟಗಳೇನು? ಅವ್ವನ ಮಯ್ಮೆ ಪವಾಡಗಳನ್ನು ಪೋಣಿಸಿದ್ದ ಹಾಡುಗಳೇನು ನೃತ್ಯಗಳೇನು ಜನರನ್ನು ರಂಜಿಸುತ್ತಲಿದ್ದ ಬಗೆ ಬಗೆಯ ಯಾಸಗಳೇನು? ಹೊಬ್ಬ ಹೊಬ್ಬಯೆಂದು ಪಲ್ಲವಿ ಹಾಡುತಲಿದ್ದ ಬಗೆಬಗೆ ಯಿನ್ಯಾಸದ ಡೇಗುಗಳೇನು? (ಪು.೨೯೨ ಅರಮನೆ) ಎಂಬುದು ಜಾತ್ರೆಗಾಗಿ ಸಿಂಗಾರಗೊಂಡ ಊರನ್ನೂ, "ಯಲ್ಲಿ ನೋಡಿದರೂ ಮೂಕ ಪ್ರಾಣಿಗಳ ಮಹೆಹೆಹೇ ರಾಗಗಳ ಡಪ್ಪಿನಾಟವು. ಯಲ್ಲಿ ನೋಡಿದರೂ ಹರಕೆ ತೀರಿಸಲೋಸುಗ ಬತ್ತಲಾಗುತ್ತಿದ್ದವರೆಷ್ಟೋ? ತಮ್ಮ ತಮ್ಮ ಬತ್ತಲು ಮಯ್ಯಿಗಳನ್ನು ಬೇಯಿನ ತೊಪ್ಪಲಿನಿಂದ ಮರೆಮಾಚುತಲಿದ್ದವರೆಷ್ಟೋ? ತಮ ಸರೀರ ಬರುವಾಗ ಹೆಂಗಿತ್ತೋ ಹಂಗ ಯಿರಲಿ ಎಂದು ಮರೆಯ ಹಂಗನ್ನು ತೊರೆದಿದ್ದವರೆಷ್ಟೋ.... ವುಧೋ.... ವುಧೋ ಅಂಬುವ ಯರಡಕ್ಕರದ ಪದಗಳನು ಬಿತ್ತಿ ಬೆಳಕಂತಿದ್ದವರೆಷ್ಟೋ? ಹಿಂಗss ಎಲ್ಲಿ ನೋಡಿದಡಲ್ಲಿ ಆ ರೂಪದಲ್ಲಿ ತಾಯಿಯಿದ್ದಳು. ಯೀ ರೂಪದಲ್ಲಿ ತಾಯಿಯಿದ್ದಳು. ಸಾಧುಸಂತಾವಧೂತರು ಜಗದಂಬಾ ಜಗದಂಬಾ ಯಂದನಕಂತ ಸೇದುತಲಿದ್ದುದಂತೂ ಯಾಗ ಯಗ್ನಗಳ ಭ್ರಮಾವುಂಟು ಮಾಡುತ್ತಲಿತ್ತು...." (ಪು.೨೯೩ ಅರಮನೆ) ಎಂಬಲಿಯ ಜನರ ಸೇವೆಗಳು ಹರಕೆಗಳೂ, ಚಂಡನ ಬಲಿಯ ಜೊತೆಗೆ ನಡೆಯುವ ಅಗಾದ ಪ್ರಾಣಿಬಲಿ ಮತ್ತು ಭೂತಬಿಲ್ಲೆಯ (ನರಬಲಿ) ಬಲಿಗಳು ಕಾದಂಬರಿಯಲ್ಲಿ ನೈಜವಾಗಿಯೇ ಮೂಡಿಬಂದಿದೆ ಎಂಬುದಕ್ಕೆ ಉದಾಹರಣೆಗಳಾಗಿವೆ.

ಈ ಕಥಾನಕ ಸಾಗುತ್ತಾ ಸಾಗುತ್ತಾ ಸಂಪ್ರದಾಯಿಕ ಸ್ಥಳ ಪುರಾಣಗಳು, ತಿಲ್ಲಾನ ತಾಯಕ್ಕ ಮತ್ತು ಅವಳ ಮಗಳು ಚಿನ್ನಸಾನಿ ಇವರುಗಳ ಪ್ರಣಯ ಕಥೆ, ಭಾರತೀಯ ರಾಬೀನಹುಡ್ ಬೊಬ್ಬಿಲಿನಾಗಿ ರೆಡ್ಡಿಯ ಕಥೆ ಇತ್ಯಾದಿ ಹತ್ತಾರು ಉಪಕಥೆಗಳು, ಚೋರ ಶಿಖಾಮಣಿ ಆಕಾಸ ರಾಮಣ್ಣ, ಅವಧೂತ ಸುಡುಗಾಡೆಪ್ಪ ಮುಂತಾದವರ ಐತಿಹ್ಯಗಳು. ತನ್ನ ದೇಹದೊಳಗೆ ಚಿನ್ನಸಾನಿಯನ್ನು ಕುರಿತು ಹೆಪ್ಪುಗಿರುವ ಪ್ರೇಮಭಾವನೆಗಳನ್ನು ಸಾಕ್ಷಾತ್ಕರಿಸಿಕೊಂಡಿರುವ ಅಂಜಿನಿ ಎಂಬ ಕೋತಿ, ಕವಿಯ ಮೋಹಕ ಸ್ತುತಿಗೆ ಮರುಳಾದ ಸೂರನೆಂಬ ಕೋಣ ಇತ್ಯಾದಿ ಹಾಸ್ಯಪ್ರಸಂಗಗಳು, ಪಾತ್ರಗಳು, ಘಟನೆಗಳು ಇವೆಲ್ಲವನ್ನೂ ತನ್ನ ಒಡಲೊಳಗೆ ತುಂಬಿಕೊಳ್ಳುತ್ತದೆ. ಈ ಬಗೆಯ ಕಿಕ್ಕಿರಿದ ಪಾತ್ರ, ಘಟನೆ, ಪ್ರಸಂಗಗಳಿಂದಾಗಿ "ಒಂದು ಕಾಲಘಟ್ಟದ ಗ್ರಾಮೀಣ ಭಾರತವೇ ಈ ಕೃತಿಯಲ್ಲಿ ಉಸಿರಾಡುತ್ತಿದೆ ಎಂದರೆ ಅದೇನೂ ಉತ್ಪ್ರೇಕ್ಷೆಯಾಗಲಾರದು" (ಪು. ಅರಮನೆಯ ಮುನ್ನುಡಿ) ಎಂಬ ಡಾ. ಸಿ.ಎನ್. ರಾಮಚಂದ್ರನರವರ ಮಾತು ಒಪ್ಪುವಂಥದಾಗಿದೆ.

ಅಲ್ಲದೆ ಸುಮಾರಾಗಿ ಗೊಂದಲಿಗರ ಕಥನ ಸಂಪ್ರದಾಯವನ್ನು ಆಧರಿಸಿರುವ ಅರಮನೆಯ ಕಥನ ಶೈಲಿಯೂ ಕೂಡ ಜಾನಪದೀಯ ಅಂಶಕ್ಕೆ ನಿದರ್ಶನವಾಗಿದೆ.

ನಿಸರ್ಗ ಕಾದಂಬರಿಯಲ್ಲಿ ಹಬ್ಬ ಹರಿದಿನಗಳು, ದ್ವೇಷ ಅಸೂಯೆಗಳು ಅಲ್ಲಿ ಬದುಕುವ ಜನರ ಕಷ್ಟಕಾರ್ಪಣ್ಯಗಳು, ಮದುವೆಯ ಸಂಭ್ರಮ, ಮಗಳನ್ನು ಗಂಡನ ಮನೆಗೆ ಕಳಿಸುವಾಗಿನ ದೃಶ್ಯ, ಶೋಭನ ಪ್ರಸ್ತ, ಪಂಡಿತನಲ್ಲಿ ಮೂರ್ತ ಕೇಳುವುದು. ಉಡಿಕೆ ಮಾಡಿಕೊಳ್ಳುವ ಪದ್ಧತಿ, ಜಾತ್ರೆ ಪೂಜಾರಿ ಮೈಮೇಲೆ ದೇವರು ಬರುವುದು. ಊರ ಭವಿಷ್ಯ ಹೇಳುವುದು. ಕಾದಂಬರಿಯ ಪಾತ್ರಗಳ ಸಂಭಾಷಮೆಯುದ್ದಕ್ಕೂ ಸಂದರ್ಭೋಚಿತವಾಗಿ ಬರುವ ಗಾದೆ ಮಾತುಗಳು ಚಮತ್ಕಾರಿಕ ಚತುರೋಕ್ತಿಗಳು ಶಕ್ತಿಯುತವಾಗಿ ಮೂಡಿ ಬಂದಿವೆ.

ತಾರ ಮೈನೆರೆದಾಗ ಭರಮನೊಂದಿಗೆ ಮಕರದಲ್ಲಿ ಕೂಡಿಸಿದ ಸಂದರ್ಭದಲ್ಲಿ ಭರಮ 'ಪೋಚಿ'ಗಾಗಿ ಮುನಿಸಿಕೊಂಡಾಗ ಪಂಡಿತನ ಒತ್ತಾಯದ ಮೇರೆಗೆ ಅಲ್ಲಿ ನೆರೆದಿದ್ದ ಹೆಂಗಸರು ಇನಿದನಿಯಲ್ಲಿ

"ಚಿಕಣಿಯ ಅಡಕಿ ಚಿಗುರಿನ ಎಲೆಯ
ಕಾಚ ಬಿಳಪಿನ ಸುಣ್ಣಾ
ಲವಂಗ ಪತ್ತರಿ ಜಾಜಿಕಾಯಿ ಹಾಕಿದ
ಜಾಣ ವೀಳೆಯ ಹಿಡಿಯ" ಸೋ...

ಎಂದು ಮನವೊಲಿಸಲು ಹಾಡುವ ಹಾಡು ಜಾನಪದೀಯತೆಗೆ ಹಿಡಿದ ಕನ್ನಡಿಯಾಗಿದೆ. ಇದೇ ಕಾದಂಬರಿಯಲ್ಲಿ ದೇವರ ಹೇಳಿಕೆಯ ಪ್ರಸಂಗದಲ್ಲಿಯೂ ಕೂಡ ಜಾನಪದೀಯ ಅಂಶ ಒಡೆದು ಮೂಡಿರುವುದನ್ನು ಗುರುತಿಸಬಹುದು.

ಮರೆಪ್ಪನ ಮೈಯಲ್ಲಿ ದೇವರು ಹೊಕ್ಕು ನುಡಿಯ ತೊಡಗಿದಳು. "ಹಾ! ಹಾ! ಹಾ! ಹಾ! ನನ್ನ

ನೆನಪ ಇಲ್ಲರ್‍ಯೋ ನಿಮಗ ಊಂ ಆಂ.....?" ಯಾನ ಮಾಡೀರಿ.... ನೀವ.... ಗುಡೀ ಸುಣ್ಣ ಕಾಣಲಿಲ್ಲ ಮೂರು ವರ್ಷದಾಗ.... ಜನಜಂಗುಳಿಯೆಲ್ಲ ಭಯಭಕ್ತಿಯಿಂದ ಗಲ್ಲಗಲ್ಲ ಬಡಿದುಕೊಂಡರು. "ದವನಿಗೀ ದವನೀನ ಹುರದ ತಗದಿನೂ ಇನ್ನ ಸುದ್ಧಿಮ್ಯಾಲ ಬರವಲ್ಲಾ ಇನ್ನ ಹಲ್ಲ ಮುರದಿಲ್ಲ ಯಾವ ಅವನು?" ಗೌಡ ಭಯ-ಭಕ್ತಿಯಿಂದ ನಮಸ್ಕಾರ ಮಾಡಿ "ನನ್ನ ಕಡಿಂದ ಯಾನ ತಪ್ಪ ಆಗೇತಿ ಹೇಳು ನಾ ತಿದ್ದಿಕೋತ್ಯಾನು" ಎಂದು ಬೇಡಿಕೊಂಡ್ಲು ಅಷ್ಟರಲ್ಲಿ ದೇವಿ ಕೂಗ ಹೊಡೆದು ಹೇಳ ಹತ್ತಿದಳು.

"ಹಿಂಗಾರೀ ಹೊಲಾ ಬೀಜಾ ಕಾಣಕಿಲ್ಲರ್‍ಯೋ.... ಹೊಳೀಲೇ ಊರಕ ಊರ ಹೋದಾವರ್‍ಯೋ... ಒಂದ ಮೂಲಿಗಿ ಘಾಳಿ ಹಾಯಿತೇತಿ.. ಯಾರ ಕಾರುಣ್ಣೆ ಹೋಳಿಗಿ ಉಂಡಾರು...... ಯಾರೂ ಇಲ್ಲ...."

"ನೀನs ಉಳಸಾಕೆಲ್ಲ....." ಎಂದು ಜನ ಒಂದೇ ದನಿಯಿಂದ ಒದರಿ ಕೈ ಮುಗಿಯಿತು. "ಹೆಣ ಸುಡಲಾಕ ದಾದ ಇಲ್ಲರ್‍ಯೋ.... ಒಂದು ಸರಣದಾಗ ಮೂರು ಹೆಣರ್‍ಯೋ.... ಹಃ! ಹಃ! ಹಃ! ಮಳೀಲೇ ಕಾಲ ಕೊಳತ್ಯಾವರ್‍ಯೋ...... ಹುಃ! ಹುಃ! ಹುಃ!" ಎಂದು ಭವಿಷ್ಯ ನುಡಿದು ಕೆಳಗೆ ಬಿದ್ದ. ಡೊಳ್ಳುಗಳು ಮೊಳಗಿದವು". (ಪು.೬ ನಿಸರ್ಗ)

ಇಂತಹ ಹಬ್ಬಹರಿದಿನಗಳು ಜನಸಾಮಾನ್ಯರಲ್ಲಿ ಭಯಭಕ್ತಿಯನ್ನು, ಸಚ್ಚಾರಿತ್ರವನ್ನು ಮೂಡಿಸುತ್ತವೆ. ಅಲ್ಲದೆ ದೇವರು ಮೈಮೇಲೆ ಬಂದದ್ದಕ್ಕಾಗಿ ಮರೆಪ್ಪ ಮಾದಿಗನಾದರೂ. ಗೌಡನನ್ನೊಳಗೊಂಡಂತೆ ಇಡೀ ಊರಿಗೆ ಊರೆ ಗಲ್ಲಬಡಿದುಕೊಂಡು ನಿಲ್ಲುವುದು. ದೈವದ ನೆಪದಲ್ಲಿ ಜಾತಿ ಮರೆತು ಎಲ್ಲರೂ ಒಂದುಗೂಡಿ ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡಿರುವುದನ್ನು ನೋಡಬಹುದು.

ಹಾಗೆಯೇ ಈ ಕಾದಂಬರಿಯಲ್ಲಿ

"ಹೆಗ್ಗಣ ಮಣ್ಣಗೂಳೆ ಮಾಡಿದಾಂಗ

ಹಳ್ಳ ಹೋದ ಗೆಜ್ಜೆ ಹಂಗಾ" ಎಂಬಂಥಹ ಸಾಂದರ್ಭಿಕ ಗಾದೆಗಳನ್ನು

"ಕೆಂಪು ಕುದುರೆಯ ಮೇಲೆ ಕರಿಯ ಜಾನ

ಒಬ್ಬ ರಾಜಾ ಇಳೀತಾ ಒಬ್ಬ ರಾಜಾ ಕೊಡತಾ" ಎಂಬಂತಹ ಒಗಟುಗಳನ್ನು

"ಪಾರಿವಾಳ ಪಟಕ... ಎಣ್ಣೀ ಜಟಕ್... ಬೆಕ್ಕಿಗೆ ಹಾಲಿಲ್ಲ.... ನಾಯಿಗೆ ನುಚ್ಚಿಲ್ಲ ಮುತ್ತಿನಂಥಾ ಅವ್ವನ ಕೊಡತೇವ ಕೂಡ... ಬಂಗಾರದಂಥಾ ಹ್ಯಾಂತೀನ ಕೊಡುತೇವ ಕೂಡ. ಆಕಳ ಅಂಥಾ ಅಕ್ಕಾನ ಕೊಡತೇವ ಕೂಡ" ಎಂಬಂತ ಮಕ್ಕಳ ಆಟಗಳನ್ನು, ತಾರಾಗೆ ಕಳ್ಳಕುಬುಸ ಮಾಡಿ ರತ್ನ ಚಂದೂರಿಗೆ ಹೋಗುವಾಗ ಸಮನೆಲಕ್ಕೆ ಗಾಡಿಯ ನೊಗ ಮುರಿದು. ತಾರಾ ಸಾಯುವ ಮುನ್ಸೂಚನೆಯನ್ನು ತಿಳಿಸುವಲ್ಲಿ ತರುವ ಅಪಶುಕನದ ಪ್ರತಿಮೆಗಳು ಕಾದಂಬರಿಯುದ್ದಕ್ಕೂ ಯಥೇಚ್ಛವಾಗಿ ಮೂಡಿಬಂದಿವೆ. ಅಣ್ಣಾರಾಯರು ಇವೆಲ್ಲಾ ಪ್ರಾದೇಶಿಕ ವಿವರಗಳನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾರೆ ಎಂದೇ ಕಾದಂಬರಿಯ ಮುನ್ನುಡಿಯಲ್ಲಿ

ರಂ.ಶ್ರೀ. ಮುಗಳಿಯವರು "ಬೆಳಗಾವಿ ಜಿಲ್ಲೆಯ ಉತ್ತರ ತುದಿಯ ಹಳ್ಳಿಗಳಲ್ಲಿಯ ಜನ ಜೀವನ ಅದರಲ್ಲೂ ಜೈನ ಸಮಾಜದ ಚಿತ್ರ ಈ ಕಾದಂಬರಿಯಲ್ಲಿ ಮೊದಲನೆಯ ಸಲ ಬಂದಿರುವುದು ಇದರ ಹೆಚ್ಚಿನ ವೈಶಿಷ್ಟ್ಯವಾಗಿದೆ" (ನಿಸರ್ಗದ ಮುನ್ನುಡಿ) ಎಂದು ಹೇಳಿರುವುದು ಸಮಂಜಸವಾಗಿದೆ.

ಇನ್ನೂ ಕುಸುಮಬಾಲೆಯ ಬಗ್ಗೆ ಹೇಳುವುದಾದರೆ ಅದೊಂದು ಗದ್ಯ ಕಾವ್ಯವೆಂದು ಹೇಳಿದರೆ ತಪ್ಪಾಗಲಾರದು. ಗಂಡು ಹೆಣ್ಣಿನ ಸಂಬಂಧದ ಮೂಲಕವೆ ಹೊಸ ಲೋಕದ ಸೃಷ್ಟಿಯನ್ನು ನಂಬಿರುವ ಲೇಖಕರು ಈ ಕೃತಿಯ ಮೂಲಕ ಮನುಷ್ಯ ಬದುಕಿನ ಮೇಲು ಕೀಳು ಭಾವನೆಗಳಿಗೆ ಅನೈತಿಕ ಸಂಬಂಧಗಳಿಗೆ ಕೊಡಲಿಯೇಟು ಕೊಡುವ ಪ್ರಯತ್ನ ಮಾಡಿದ್ದಾರೆ. ಇದಕ್ಕಾಗಿ ಅವರು ಕಾದಂಬರಿಯಲ್ಲಿ ಕತೆ, ದಂತಕಥೆ, ನಂಬಿಕೆ, ಆಚರಣೆಗಳಂತಹ ಹಲವು ಜಾನಪದೀಯ ಅಂಶಗಳನ್ನು ತುಂಬಾ ಕುಶಲತೆಯಿಂದ ಎಣೆದಿದ್ದಾರೆ. ಇದಕ್ಕೆ ಕೆಲವು ನಿದರ್ಶನಗಳನ್ನು ಹೀಗೆ ನೋಡಬಹುದು.

ಜೋತಮ್ಮಂದಿರು (ಎಲ್ಲಾ ಜಾತಿಯ) ಊರ ಜನ ಮಲಗಿದ ಮೇಲೆ ಊರಲ್ಲಿ ನಡೆವ ಪ್ರತಿಯೊಂದು ಘಟನೆಗಳನ್ನು ಮಾತಾಡಿಕೊಳ್ಳುವುದು. ಉದಾಹರಣೆ ಕುಸುಮ ಮತ್ತು ಚೆನ್ನನ ಸಂಬಂಧ ಕುರಿತು.

ಕೆಂಪಾಗಿರೋ ಗಂಡ ಹೆಂಡತಿಗೆ ಹುಟ್ಟಿರೋ ಕೂಸ್ಸು ಚೆನ್ನನ ಥರ್‍ಗಾಗಿ ಕಪ್ಪಾಗಿ ಅದ ಹುಟ್ಟಿ ಎನ್ನುವ ಮಾತಿಗೆ ಹಾರೂರ ಮನೆ ಜೋತಮ್ಮ "ಐ... ಎಲ್ರೂ ಮಾಡೋ ಯಥಾರ್ಥನೆ ಹೇಳ್ತಳ. ಏನ್ ವಿಚಾರ್ವ ಅದು?" ಎಂಬಲ್ಲಿ ಜೋತಮ್ಮಂದಿರು ಮಾತನಾಡುವುದು ಮಿಥ್ ಆದರೂ ಕುಸುಮ ಮತ್ತು ಚೆನ್ನರ ನಡುವಿನ ಸಂಬಂಧ ಓದುಗರಿಗೆ ತಿಳಿಯುವುದು ಜೋತಮ್ಮಂದಿರ ಮಾತಿನಿಂದಲೇ. 'ಅಷ್ಟೇ ಅಲ್ಲ ಎಲ್ರೂ ಮಾಡೋ ಯಥಾರ್ಥನೆ ಹೇಳ್ತಳ' ಎಂಬಲ್ಲಿ ಇದು ಕೇವಲ ಕುಸುಮ ಮತ್ತು ಚೆನ್ನರಿಗೆ ಮಾತ್ರ ಸಂಬಂಧಿಸಿದಿಲ್ಲ ಎಂಬುದನ್ನು ಸೂಚ್ಯವಾಗಿ ಧ್ವನಿಸುತ್ತದೆ.

ಕೆಂಪಿಗ ಹುಟ್ಟುವ ಮಕ್ಕಳು ಮೂರು ತಿಂಗಳಾದರೂ ಊರ್ಜಿತ ವಾಗದಿರಲು ತೂರಮ್ಮ ಹೇಗಾದರೂ ಮಾಡಿ ಕೊನೆಗೆ ಪ್ರಾಣವನ್ನಾದರೂ ಕೊಟ್ಟು ಮೊಮ್ಮಗುವನ್ನು ಉಳಿಸಿಕೊಳ್ಳುವ ಸಲುವಾಗಿ ವಿಧಿಯಮ್ಮನ ಜೊತೆ ಸೆಣಸಾಟಕ್ಕೆ ಇಳಿಯುವುದು.

ನನ್ನಿ ಅಥವಾ ಸಂಬಂಧವನ್ನು ಕುರಿತು ಕುರಿಯಯ್ಯನು ಹೇಳುವ ಮಾತು. ಈಗ ಅಂಥಾ ಒಳ್ಳೆ ಕಾಲ್ವ ಕೂಸೂ? ಈ ಕಾಲಕೆಟ್ ಕಾಲ ತಿಳ್ಕ. ಈಗ ನಂ ನೋಡ್ದಾಗ ಏನಾಗ್ತದೆ? ಯಾರಗ್ಯ? ಆ ಉತ್ತಮ ಜಾತ್ಯವರ್‍ಗ, ಕೇಳೀ ಅವರ ಒಳ್ಗ ಆಗುವುದರ ಅರ್‍ತಮಾನದ ಅರಿವು ಅವ್ರಿಗಿಯ ಅರಿವಾಗ್ತ ಇರಲ್ಲ. ಆದ್ರೂವ ಅವರ ರಕ್ತಕ? ರಕ್ತಕ ತಲತಲಾಂತರದ ನೆಪ್ಪಿರ್‍ತದ.... ತಿಳ್ಕಳ್ಳೀ.... ಅವರು ಸುಮ್ಮಿದ್ರೂ ಅವರ ರಗ್ತ ಸುಮ್ಮಿದುದಾ? ಹೆಂಗ್ ತಾನೀಯಾ.... ಸುಮ್ಮಿರಕ ಆದ್ದು? ಅವರ ತೆಪ್ಪಾ ಅದೂ? ನಂ ಜಾತ್ಯವರ ಕಂಡೇಟ್ಗಿಯ ಉತ್ತಮ ಕುಲ್ದವರ ರಕ್ತ ಏನಂದ್ಕತ್ತದ:

ಓಹೋ! ಈಗ ಕಾಣೋ ಈ ಹೊಲಮಾದುಗಾದಿ ಪೂರ್ವಿಕನು, ಹೋಗಿದ್ದವನ ಆ ವಂಶದ ಕುಡಿ

ಹೊಲಮಾದುಗಾದಿ, ಅಂತ ಅಂದ್ಕತ್ತದ ಯಾನ? ಈಗಲ ಉತ್ತಮನ ರಗ್ತ ಈಗಲ ಈ ಉತ್ತಮನ ರಗ್ತಗ ಆ ಅದೆಲ್ಲವಿ ಪಕ್ಚರ್ ಬುಟ್ಟಂಗ ಕಾಣುಸ್ತದಕಯ್ಯ. ಆ ನೆಪ್ಪಗ ಉತ್ತಮರ ರಗ್ತ ಕುದಿತಾದ. ನಮ್ಮಾದ್ರೂವಿ ಹಂಗೆ ತಾನಿ ಯಪ್ಪ ಆಗದು? ಅವ್ವೆ.... ಈ ಥರ್ರಾಗಿ ಇರ್ರಾಗ ಕಾರಣ್ವ ಕೇಳ್ತಿಯಲಪ್ಪಾ ಕೂಸು'' (ಪು. ೧೭೦, ಕುಸುಮಬಾಲೆ) ಎಂಬುದು ದಂತಕತೆ, ಮಿಥ್‌ಗೆ ನಿದರ್ಶನವಾಗಿದೆ.

ಜೋತಮ್ಮಗಳಂತೆ ಮಂಚ ವಯಸ್ಸಾದ ನಾಯ್ಕಸಾನಿ ರೂಪದಲ್ಲಿ ಎದ್ದುಕುಂತು ತನ್ನ ಆತ್ಮಕಥೆಯನ್ನು ಹೇಳುವಾಗ ದಣಿದ ಸೋಮಪ್ಪನ ಜೀವಾತ್ಮ 'ಹುಂ' ಗುಟ್ಟುವುದು ಜಾನಪದ ಕತೆಯನ್ನು ಹೇಳುವ ರೀತಿಯನ್ನು ಅನುಸರಿಸಿದೆ.

ಚೆನ್ನನ ಅಪ್ಪ ಅವ್ವರ ಬೊಂಬಾಯಿಯ ಕಲ್ಪನೆ, ಹಳ್ಳಿಗರು ಪಟ್ಟಣವನ್ನು ಕಲ್ಪಿಸಿಕೊಳ್ಳುವ ರೀತಿಯನ್ನು ಅವರ ಮುಗ್ಧತೆ ಮತ್ತು ಭಯವನ್ನು ಸ್ಪಷ್ಟಪಡಿಸುತ್ತದೆ. ಎಂದೇ ಡಾ.ಚಕ್ಕೆರೆ ಶಿವಶಂಕರರವರು ''ಜನಪದ ನಂಬಿಕೆಗಳು, ಐತಿಹ್ಯಗಳು, ತಮ್ಮ ಕಥೆಗಳಲ್ಲಿ ಅರ್ಥವತ್ತಾಗಿ ಬಳಸಿಕೊಂಡಿರುವ ದೇವನೂರರು ಕಥಾ ನಿರೂಪಣಾ ವಿಧಾನದಲ್ಲಿ ಜನಪದ ದಲಿತ ಕಥೆಗಳ ನಿರೂಪಣಾ ತಂತ್ರವನ್ನು ಅವಲಂಬಿಸುತ್ತಾರೆ. ಅವರ ಕಥೆಗಳ ಸಾಂದ್ರತೆ ಸಂಕೀರ್ಣತೆಗಳು ಜನಪದ ಕತೆಗಳ ಮಾದರಿಯನ್ನು ಹೋಲುತ್ತದೆ. ಇವರ ಕುಸುಮಬಾಲೆ ಕಾದಂಬರಿಯು ಜನಪದ ಮಹಾಕಾವ್ಯದ ಮಿಥ್‌ಗಳನ್ನು ಬಳಸಿಕೊಂಡ ಯಶಸ್ವಿ ಕಾದಂಬರಿಯಾಗಿರುತ್ತದೆ''. (ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ಅಂಶಗಳು, ಪು. ೧೫೬) ಎಂಬ ಅಭಿಪ್ರಾಯ ಕಾದಂಬರಿಯ ಜಾನಪದೀಯತೆಯ ದೃಷ್ಟಿಯಿಂದ ಉಲ್ಲೇಖನೀಯವಾಗಿದೆ.

ಗ್ರಾಮಾಯಣ ಕಾದಂಬರಿಯಲ್ಲಿ ಸವರ್ಣೀಯರು ಮತ್ತು ದಲಿತರು ಸೇರಿಕೊಂಡು ಮಾಡುವ ಎರಡು ಹಬ್ಬಗಳಿವೆ. ಒಂದು ಕಾಮನಹಬ್ಬ ಅಂದು ''ಅಗಸೆ ಮುಂದಿನ ಊರ ದೊಡ್ಡ ಕಾಮಣ್ಣನಿಗೆ ನಡುರಾತ್ರಿ ಬೆಂಕಿ ಹಚ್ಚುವ ಪದ್ಧತಿ ಇದೆ. ಅದಕ್ಕೂ ಮೊದಲು ಹೊಲಗೇರಿಯ ಕಾಮನಿಗೆ ಬೆಂಕಿ ಹಚ್ಚಿ, ಆ ಬೆಂಕಿಯನ್ನು ತಂದಮೇಲೆ ಅಗಸೆಯ ಕಾಮದಹನ ನಡೆಯಬೇಕು. ಹೀಗಾಗಿ ಹೊಲಗೇರಿಯಿಂದ ಬೆಂಕಿ ತರಲು ಮುಂದಿನ ಹುಲಿಬ್ಯಾಟಿ ಹಳಬರು (ಸವರ್ಣೀಯರು) ಹೊಲಗೇರಿಯ ದಿಗ್ವಿಜಯಕ್ಕೆ ಹೊರಡುತ್ತಾರೆ. ಹೊಲಗೇರಿಯಲ್ಲಿ ಆಗ ದಲಿತರಿಗೂ ಸವರ್ಣೀಯರಿಗೂ ಮೋಜಿನ ಆಟ ನಡೆಯುತ್ತದೆ. ಹಳಬರು ಹೊಲಗೇರಿಯ ಬೆಂಕಿಗೆ ಕೈ ಹಾಕಿದಾಗ, ಹೊಲೆಯರು ಅದನ್ನು (ಬೆಂಕಿ) ಒಯ್ಯಗೊಡದೆ, ಅವರ ಕೈಗಳ ಮೇಲೆ ಸತ್ತ ದನಗಳ ಎಲುಬುಗಳನ್ನು ತೂರುತ್ತಾರೆ. ಅದನ್ನು ಲೆಕ್ಕಿಸದೆ ಹಳಬರು ಬೆಂಕಿಯನ್ನು ತರಬೇಕು''. (ಪು.೧೫೮ ಗ್ರಾಮಯಣ) ಎಂಬ ವಿವರಣೆಯಿಂದ ಕಾಮನ ಬೆಂಕಿಯ ಮಹತ್ವ ತಿಳಿಯುವುದಿಲ್ಲವಾದರೂ ಇಂಥ ಆಚರಣೆಯೊಂದರ ವೈಶಿಷ್ಟ್ಯದ ಬಗ್ಗೆ ಗಮನಿಸಬಹುದು. ಅಲ್ಲದೆ ಕಾಮದಹನದ ಮರುದಿನ ನಡೆಯುವ ಓಕಳಿ ಕತ್ತೆ, ಸವಾರಿಯ ವಿವರಗಳು ನೈಜವಾಗಿ ಮೂಡಿಬಂದಿವೆ.

ಇದೇ ಕಾದಂಬರಿಯಲ್ಲಿ ಬರುವ ಇನ್ನೊಂದು ಹಬ್ಬ ಮಾರುತಿ ದೇವರ ಓಕಳಿ. ಇದು ಸಹ ದಲಿತ ಮತ್ತು ಸವರ್ಣೀಯರು ಸೇರಿಕೊಂಡು ಆಚರಿಸುವ ಹಬ್ಬ. ಮಾರುತಿಗುಡಿಯ ಮುಂದೆ ಎರಡಾಳುದದ್ದ

ಹೊಂಡದಲ್ಲಿ ಹುಲಿಬ್ಯಾಟಿ ಹಳಬರು ನೀರು ತಂದು ತುಂಬುತ್ತಾರೆ. ಅನಂತರ ಜಲಯುದ್ಧ ಆರಂಭವಾಗುತ್ತದೆ. ಕುಸ್ತಿಯ ಗಡಿಗಳು ಚಡ್ಡಿಹಾಕಿ ನೀರಲ್ಲಿ ಬೀಳಲು ಸಿದ್ಧರಾಗುವಾಗ ಹೊಲಗೇರಿಯಿಂದ, ಹಲಗೆಯ ವೈಭವದೊಂದಿಗೆ ಹೊಲೆಸೂಳೆಯರನ್ನು ಕರೆಸಲಾಗುತ್ತದೆ. ಕುಸ್ತಿಯ ಗಡಿಗಳು ಹೊಂಡದ ನೀರನ್ನು ತಮ್ಮ ಧೋತರದ ಚಾಳಿಯಲ್ಲಿ ತುಂಬಿಕೊಂಡು, ಸೂಳೆಯರ ಮೇಲೆ ತೂರುತ್ತಾರೆ. ಆ ನೀರಿನ ಮಡಿಕೆಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ಸೂಳೆಯರು ಮುಳ್ಳಿನ ಕಂಟಿಗಳನ್ನು ಉಪಯೋಗಿಸುತ್ತಾರೆ. ಅವುಗಳಿಂದ ಬೀಸಿ ಹೊಡೆದಾಗ ಕುಸ್ತಿಯ ಮೈಗೆ ತೀಡಿ, ಚಿಮ್ಮದ ರಕ್ತದಿಂದಾಗಿ ನೀರು ಅಲ್ಲಲ್ಲೇ ಕೆಂಪಾಗುತ್ತದೆ. ಆದರೆ ಅದರ ಪರಿವೆಯಿಲ್ಲದೆ ಇನ್ನೂ ಆವೇಶದಿಂದ ಕುಸ್ತಿಗಳು ನೀರು ಎಸೆಯುತ್ತಾರೆ. (ಪು.೧೮೦ ಗ್ರಾಮಾಯಣ) ಆಜನ್ಮ ಬ್ರಹ್ಮಚಾರಿಯಾದ ಮಾರುತಿಯ ಗುಡಿಯ ಮುಂದೆ ಹೀಗೆ ನಡೆಯುವ ಕುಸ್ತಿಗಳ ದಲಿತ ವೇಶ್ಯಾ ಸ್ತ್ರೀಯರ ಆಟ ನೋಡಲು ಊರವರೆಲ್ಲ ನೆರದಿರುತ್ತಾರೆ ಎಂಬ ಅಂಶ ಅಂದಿನ ಕಾಲದಲ್ಲಿ ದೇವರ ಹೆಸರಿನಲ್ಲಿ ಸ್ತ್ರೀಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ತಿಳಿಸುತ್ತದೆ. ಹಾಗೆಯೇ ಕಾದಂಬರಿಯಲ್ಲಿ ಮೂಡಿಬಂದಿರುವ ಕರೀಹರಿಯುವ ಹಬ್ಬದ ಆಚರಣೆ ಮತ್ತು ಊರಜನರೆಲ್ಲರೂ ಕಾಲರದಿಂದ ಸಾಯುತ್ತಿದ್ದಾಗ ದೇವರ ಶಾಂತಿಗಾಗಿ ಬೆಳಗಿನತನಕ ಮಾಡುವ ಭಜನಾ ಕಾರ್ಯಗಳು ಕೂಡ ಜಾನಪದೀಯ ಅಂಶಗಳಿಗೆ ಕೊಡಬಹುದಾದ ಉದಾಹರಣೆಗಳಾಗಿವೆ.

ವೈಶಾಖ ಕಾದಂಬರಿಯು ಜನಪದ ಅಂಶಗಳ ಆಗರವೆಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ಕೆಲವು ನಿದರ್ಶನಗಳನ್ನು ಹೀಗೆ ನೋಡಬಹುದು. ಕಾದಂಬರಿಯಲ್ಲಿ ದಲಿತರು ಮತ್ತು ಸವರ್ಣೀಯರು ಸೇರಿ ಮಾಡುವ 'ಸಿಡಿ ಹಬ್ಬ'ದ ವಿವರಣೆ ಈ ರೀತಿಯಾಗಿದೆ.

"ಕೊಂಬು ಕಹಳೆ ತಮ್ಮಟೆ ಕಿವಿಗಡಚಿಕ್ಕುವ ಅಸಾಧ್ಯಗದ್ದಲದಲ್ಲಿ ಸಿಡಿಯಾಡುವ ತರುಣರು ಗುಡಿಯಿಂದ ಹೊರಬಂದಾಕ್ಷಣ ಗುಡಿಯನ್ನೊಮ್ಮೆ ಪ್ರದಕ್ಷಿಣೆ ಮಾಡಿದರು. ಅವರಲೆಲ್ಲರೂ ಕೇವಲ ಕಾಚಾಧರಿಸಿ, ತಲೆಗೆ ಕೆಂಪು ಪೇಟ ಧರಿಸಿದ್ದರು. ಪೇಟವು ಕಳಚಿ ಬೀಳದಂತೆ ಅದಕ್ಕೆ ವಸ್ತ್ರವೊಂದನ್ನು ಬಿಗಿಯಲಾಗಿತ್ತು. ಗುಡಿಯ ಪ್ರದಕ್ಷಿಣೆ ಮುಗಿಸಿ ಅವರೆಲ್ಲರೂ ಸಿಡಿ ತೇರನ್ನೂ ಭಕ್ತಿಯಿಂದ ಸುತ್ತು ಹಾಕಿದರು. ಆ ಬಳಿಕ ಕೊಬ್ಬಿದ ಟಗರನ್ನು ಬಲಿಕೊಡಲಾಯಿತು. ಆಗ ತಮಟೆಯ ಆರ್ಭಟ ಹೆಚ್ಚಿತು. ಅದಾದ ನಂತರ ಸಿಡಿಯಾಡು ವವರಲ್ಲಿ ಒಬ್ಬನನ್ನು ಆಯ್ದು. ಮೊದಲು ಅವನ ಬೆನ್ನಿನ ಕೊಕ್ಕೆಗಳನ್ನು ಸಿಡಿ ಮರದ ಹಗ್ಗಕ್ಕೆ ಸಿಕ್ಕಿಸಿದರು. ಸಿಡಿ ಮರದ ಇನ್ನೊಂದು ತುದಿಗೆ ಸಮತೋಲನದ ಅಗತ್ಯಕ್ಕಾಗಿ, ಒಬ್ಬ ವ್ಯಕ್ತಿ ಅದನ್ನು ತಬ್ಬಿ ಹಿಡಿದ. ಸುಮಾರು ನಲವತ್ತು ನಲವತ್ತೈದು ಅಡಿ ಉದ್ದದ ಸಿಡಿ ಮರ ತಟ್ಟನೆ ಮೇಲೆದ್ದಿತು. ತಕ್ಕಡಿಯಂತೆ ಅದು ಸಮಾನಾಂತರ ರೇಖೆಯಾಗಿ ನಿಂತಿತು. ಎರಡೂ ತುದಿಗಳಿಗೂ ಹಗ್ಗಕಟ್ಟಿ ಸಮತೋಲನಕ್ಕೆ ತಂದರು. ನಿಧಾನವಾಗಿ ಮೇಲೇರಿದ ಸಿಡಿಯಾದ ಆ ತರುಣ ಆಕಾಶದಲ್ಲಿ ಸುಮಾರು ಹದಿನೈದು ಹದಿನಾರು ಅಡಿ ಎತ್ತರದಲ್ಲಿ ತೂಗುತ್ತಾ, ಈಜಾಡುವವನಂತೆ ತನ್ನ ಕೈಕಾಲುಗಳನ್ನು ಬಡಿಯುತ್ತಿದ್ದ. ಕೊಂಬು ಕಹಳೆಗಳು ಗಗನವನ್ನೇ ಭೇದಿಸುವಂತೆ ಮೊಳಗಿದ್ದವು" (ಪು. ೨೧೬ ವೈಶಾಖ) ಎಂಬ ವಿವರಣೆಯು ಜನರ ನಂಬಿಕೆ, ಆಚರಣೆ, ಸಂಪ್ರದಾಯಗಳಿಗೆ ನಿದರ್ಶನವಾಗಿದೆ.

ಕಾದಂಬರಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಂದಿರುವ

"ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆ"

"ಅನ್ನ ಅದೆ ಅಂತ ಉಂಡೋನು ಕೆಟ್ಟ, ಹೆಣ್ಣು

ಅವಳೆ ಅಂತ ಮೋದೋನು ಕೆಟ್ಟ" ಎಂಬಂತ ಗಾದೆಗಳು

"ಪಂಚ ಮೊಕದ ಕುದರೆ ಪಾರ ತಿರಗ್ತದೆ ಅದೇನು ಯೋಳಿ!" (ಮಜ್ಜಿಗೆ ಕಡೆಯೋ ಮಂತು)

"ಕತ್ತಲೆ ಮನೇಲಿ ಕರಿಯಪ್ಪ ಗುಟುರಾಕ್ತಾನೆ" (ರಾಗಿಕಲ್ಲು)

ಎಂಬಂಥ ಮಕ್ಕಳ ಒಗಟು ಒಡೆಯುವ ಆಟ. ಜನಪದ ಆಟಕ್ಕೆ ಸಾಕ್ಷಿಯಾದರೆ, ಲಕ್ಕ ದನಕಾಯಲು ಹೋದಾಗ ಒಂದು ಮರದ ಬುಡದಲ್ಲಿ ಕೂಡಿಸಿದ್ದ ಹೆಂಗಸಿನ ಹೆಣವನ್ನು ಹದ್ದು ಕಾಗೆಗಳು ಕಿತ್ತು ತಿನ್ನುವುದನ್ನು ನೋಡಿ ತನ್ನ ತಾಯಿಗೆ "ಅದ್ಯಾಕವ್ವ ಅವಳ ಹೆಣವ ಹಂಗೆ ಕೂಡಿಸಿದ್ರು? ಎಂದು ಕೇಳಿದಕ್ಕೆ ಕಲ್ಯಾಣಿ "ಬಿಮ್ಮನಸೆ ಆದ ಎಂಗಸು ಸತ್ತರೆ, ಹ್ವಟ್ಟೆವಳುಗಡೆ ಇರೊ ಇನ್ನೊಂದು ಜೀವೂವೇ ಸತ್ತಂಗೆ ಅಲ್ವ?" ಅದುಕೆ ಸುಮಾರು ಜಾತಿ ಜನ ಮಣ್ಣು ಬಗದು, ಅಂತಾ ಹೆಣವ ಹೂಳಕ್ಕಿಲ್ಲ ಕನಪ್ಪ ಒಂದು ಪಕ್ಕಸ ಹೂತರೆ, ಆ ಹೆಣವ ಹೂತ ಆಸುಪಾಸ್ನಲ್ಲಿ ಮಳೆ ಬೆಳೆಯೇ ಆಗಕಿಲ್ವಂತೆ!" (ಪು.೧೭೭-೧೭೮ ವೈಶಾಖ) ಎಂಬ ವಿವರಣೆಯು ಜನಪದರ ನಂಬಿಕೆಗೆ ಕನ್ನಡಿ ಹಿಡಿಯುತ್ತದೆ. ಹಾಗೆಯೇ ಪಂಚಾಯಿತೀ ವಿಷಯಗಳು ಮತ್ತು ತೀರ್ಮಾನಗಳು ಕೂಡ ಜಾನಪದೀಯತೆಯ ಭಾಗವಾಗಿ ಕಾದಂಬರಿಯಲ್ಲಿ ಮೂಡಿ ಬಂದಿರುವನ್ನು ನೋಡಬಹುದು.

ಬದುಕು ಕಾದಂಬರಿಯಲ್ಲಿಯೂ ಕೂಡ ಜಾನಪದೀಯ ಅಂಶಗಳು ಯಥೇಚ್ಛವಾಗಿ ಮೂಡಿಬಂದಿವೆ. ಬದುಕು ಕಾದಂಬರಿ ಒಂದು ಊರಿನ ಕೆಳಗೇರಿಯ ಕೆಳವರ್ಗದ ಮಂದಿಯ ಕತೆ, ಕೆಳಜಾತಿಯ ಜನರ ನಂಬಿಕೆಗಳು. ಆಚರಣೆಗಳು, ಸಂಪ್ರದಾಯಗಳು ಜೀವನದ ರೀತಿ ನೀತಿಗಳು ಮೊದಲಾದವುಗಳೆಲ್ಲ ಕಾದಂಬರಿಯ ನೆಲೆಯಲ್ಲಿ ನಡೆದಾಡುತ್ತವೆ. ಮೂಢನಂಬಿಕೆಗಳನ್ನು ಹೇಳುತ್ತಲೇ ಅವುಗಳನ್ನು ಅಲ್ಲಲ್ಲೇ ವೈಚಾರಿಕ ನೆಲೆಯ ಬಗೆಗೆ ಹಚ್ಚುವ ಕೆಲಸವೂ ನಡೆದಿದೆ ಎಂಬ ಕಾದಂಬರಿಯ ಬೆನ್ನುಡಿಯ ವಿವರಣೆಯು. ಕಾದಂಬರಿಯಲ್ಲಿ ಬಂದಿರುವ ಜಾನಪದೀಯ ಅಂಶಗಳ ಬಗ್ಗೆ ತಿಳಿಸುತ್ತದೆ.

ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯಾ ಭರಮ್ಯಾನ ಮಗಳು ನೀಲವ್ವನನ್ನು ಚುಂಚೂರು ಮಾಪುರ ತಾಯಿಗೆ ಹರಕೆ ಹೊತ್ತಿದ್ದರಿಂದ ಆಕೆ ಒಲ್ಲೆಯಂದರೂ ಬಲವಂತದಿಂದ ಜೋಗಣಿಯ ಪಟ್ಟ ಕಟ್ಟುವುದು. ಅದರಿಂದಾಗುವ ಪರಿಣಾಮ ಈ ರೀತಿಯಾಗಿದೆ; ಪೂಜಾರೆಪ್ಪ ನೀಲವ್ವ ಒಲ್ಲೆ ಎಂದರೂ ಜೋರಾ ಜಬರಿಲಿಂದ ನೀ ಹರಕಿ ಹೇಳ್ಕೊಂಡಂಗ ನಡೀಲಿಲ್ಲಂದ್ರ ಆ ದೇವಿ ನಿನ್ನ ಮೀಸಿ ಜೋಳ್ಸೀ ನಿನ ಗಂಡಸ್ತನ ಕಳ್ದು ನಿನಗ ಸೀರೆ ಉಡ್ಸಿ ಹಸರ ಬಳಿ ತೊಡ್ಸಿ ನೆತ್ತಿ ಮ್ಯಾಲ ಪರಡಿ ಹೊರಸ್ತಾಳ ನೋಡು ಹುಷಾರ್ ಅಂತ ಧಮಕಿ ಹಾಕಿ ಪಟ್ಟಕ್ಕೆ ಹಾಕಲು ಮುಂದಾದಾಗ "ಒಲ್ಲೆಪ್ಪೊ...... ನಾ ಜೋಗಣಿ

ಆಗಂಗಿಲ್ಲೋ ಯಪ್ಪಾ.... ಬ್ಯಾರೆ ಹೆಂಗಸರಂಗ ಮದಿಮಾಡ್ಕೊಂಡು ಒಬ್ಬ ಗಂಡನ ಹೆಣ್ತ್ಯಾಗಿ ಗರತ್ಯಾಗಿ ಬಾಳ್ಯಾ ಮಾಡ್ತೀನೋ ಯಪ್ಪಾ ನಾ ದೇವರ ಹೆಸರನ ಮ್ಯಾಲ ಸೂಳಿಧಂಧಾ ಮಾಡಂಗಿಲ್ಲೇ ಯಾವ್ವಾ ನನಗಿದೆಲ್ಲಾ ಪಸಂದಿಲ್ಲೇ ಹಡದವ್ವಾ ನೀ ಅರೆ ಅಪ್ಪಗ ಹೇಳೇ ಯವ್ವಾ" ಎಂದು ಅತ್ತು ಕರೆದರೂ ಯಾರೊಬ್ಬರು ಆಕೆಯ ಮಾತು ಕೇಳದೆ ಒತ್ತಾಯದಿಂದ ಜೋಗಣಿ ಮಾಡಿದಾಗ ನೀಲವ್ವ ಬಾವಿಗೆ ಬಿದ್ದು ಸಾಯುತ್ತಾಳೆ.

ವಯಸ್ಸಿಗೆ ಬಂದ ಮಗಳು ಸತ್ತದ್ದರಿಂದ ಬಾಯಿ ಬಡಿದುಕೊಂಡು ಅಳುವ ಭರಮ, ಅವನ ಹೆಂಡತಿಯನ್ನು ಕಂಡು ಮರುಗುವ ಮಲ್ಲವ್ವ ಅಂದು ರಾತ್ರಿ ಮಲ್ಲಪ್ಪನೊಂದಿಗೆ "ಆ ದೇವತೆ ಹೆಣ್ಣು ಪೋರಿಗೋಳಿಗಿ 'ಜೋಗಣಿ' ಆಗಿ ಹಾದರ ಮಾಡಂತ ಹೇಳ್ತಾಳಂತಿ? ಅಕಿನೂ ಹೆಣ್ಣಲ್ಲ? ದೇವರಾದ್ರೇನು, ದೆವ್ವಾದ್ರೇನು ಹೆಣ್ಣ ಹೆಣ್ಣೇ ಅಲ್ಲೇನು? ಹಿಂತಾ ಹಲ್ಕಟ್ ಹರಕಿ ಮಾಡ್ರಿ ಅಂತ ಹೇಳ್ತಾಳೇನು ದೇವಿ. ಮತ್ತ ಹಿಂತಾ ಹರಕಿ, ಅದೇ ಕೆಳಜಾತಿ ಮಂದಿನೇ ಮಾಡ್ತರ. ಮ್ಯಾಲಿನ ಜಾತಿ ಮಂದಿ ತಮ್ಮ ಹೆಂಗಸರಿಗೆ ಹಿಂಗ್ ಜೋಗಣಿ ಬಿಡ್ತಾರಾ ಎಂದಾರೆ? ಅವರಿಗಿಲ್ಲದ ಹರಕಿ ಇವರಿಗ್ಯಾಕೋ....." (ಪು.೬೭ ಬದುಕು) ಎಂದು ತನ್ನ ಗಂಡನೊಡನೆ ಆಡುವ ಮಾತುಗಳು ವೈಚಾರಿಕ ನೆಲೆಯಲ್ಲಿ ತರ್ಕಬದ್ಧವಾಗಿ ಯೋಚಿಸಲು ಹಚ್ಚುತ್ತವೆ.

ಈ ಕಾದಂಬರಿಯಲ್ಲಿ ಮೂಡಿ ಬಂದಿರುವ ಹಬ್ಬ ಮೊಹರಂ. ಪೀರರ ಹುಟ್ಟು ಹರಕೆ ಆಚರಣೆಗಳನ್ನು ಹೇಳುತ್ತಾ ಮುಂದುವರೆಯುವ ಈ ಹಬ್ಬದ ವಿವರಣೆ ಕೊನೆಗೆ ಹರಕೆ ತೀರಿಸುವ ಮನೆಗಳಿಗೆ ಹೋದಾಗ ಮಲ್ಲಪ್ಪನ ಮನೆಯ ಮುಂದೆ ನಿಂತು "ಕಟ್ಟಿ ಕಲ್ಲು ಕಟ್ಟೀಗಿ ಕೂಡ್ಸಿದ್ದಿ ಖರೇ. ಅದುಗಟ್ಟ್ಯಾಗಿ ಕೂಡಾಂಗ ಗಚ್ಚಾಕಿ ಬಿಗಿ ಮಾಡು..... ಉಚ್ಚಿ ಬಿದ್ದರ ಮಾತ ಘಾತಾಗ್ತದೋ ಬೇಟಾ.... ಕತ್ತಲ ಗವ್ಯಾಗ ನೀ ದಾರಿ ಹುಡುಕ್ಕೋತ ತೆಳಗಿಳಬ್ಯಾಡೋ ಮಗಾ.... ತೆಳಗಿನ ಸುಳಿ ನಿನಗೆಳ್ಕೊಂಡೊಯ್ದಿತ್ತೂ ಹುಷಾರ್!" (ಪು. ೧೮೨ ಬದುಕು) ಎಂದು ಭವಿಷ್ಯ ನುಡಿಯುವುದು. ನುಡಿದಂತೆ ಕಾಶಮ್ಮ ಗಂಡನನ್ನು ಬಿಟ್ಟು ಲಿಂಗರಾಜನ ಜೊತೆ ಬರುವುದು. ಅವಮಾನ ತಾಳಲಾರದೆ ಮಲ್ಲಪ್ಪ ಹೊಳೆಗೆ ಬಿದ್ದು ಸಾಯುವುದು ದೈವ ಹಾಗೂ ಜನರೊಂದಿಗಿನ ಸಂಬಂಧ, ನಂಬಿಕೆ, ಆಚರಣೆಗಳನ್ನು ತಿಳಿಸುತ್ತದೆ. ಕಾದಂಬರಿಯಲ್ಲಿ ಈ ಪ್ರದೇಶದ ಗ್ರಾಮೀಣ ಜನರ ಅದರಲ್ಲೂ ಕೆಳವರ್ಗದ ಜನರ ಆಹಾರದ ವಿವರಣೆಯು ಈ ರೀತಿಯಾಗಿದೆ. ಬಿಳಿ ಜೋಳದ ರೊಟ್ಟಿ, ಗೋಧಿ ಚಪಾತಿ, ಗಟ್ಟಿಬ್ಯಾಳಿ, ತಾಳಸಿದ ಕಡ್ಲಿಪಲ್ಲೆ, ಸೇಂಗಾದ ಹಿಂಡಿ, ಕರಿದ ಮೆಣಸಿನಕಾಯಿ, ಹುರಿದ ಮೊಟ್ಟೆ, ಖಂಡದ ಅಡುಗೆ, ಸೇಂದಿ, ಸೇಂದಿಯ ಜೊತೆಗೆ ಹುರಿದ ಸೇಂಗಾ, ಖಂಡದ ಚೂರುಗಳು ಮೊದಲಾದ ವಿವರಣೆಗಳು ಆಹಾರ ಪದ್ಧತಿಯನ್ನು ವಿವರಿಸುತ್ತದೆ.

ಬೆಳ್ಳಿ ಮೈನೆರೆದಾಗ ಹದಿನೈದು ದಿನಗಳ ಕಾಲ ಕೂಡಿಸಿ ಹಾಡಿಸುವುದು ಹೆಂಡತಿಯ ಹೊಟ್ಟೆನೋವನ್ನು ತೋರಿಸುವ ಸಲುವಾಗಿ ನಾಗ್ಯನು ಮಾಡುವ ಪಾಕೇಟ್ ಕಳ್ಳತನ, ದುಡ್ಡುಕೊಟ್ಟು ಕುಡಿಯಲಾರದೆ ರಾತ್ರೋರಾತ್ರಿ ಸಿಂದಿ ಕಳು ಮಾಡುವುದು, ಜೋಗತಿಯರೊಂದಿಗಿನ ಸಂಬಂಧ ಮೊದಲಾದ ಅಂಶಗಳು ಗುಲ್ಬರ್ಗಾ ಜಿಲ್ಲೆಯ ಕೆಳವರ್ಗದವರ ಜನಪದ ಜೀವನವನ್ನು ಕೃತಿ ಕಟ್ಟಿಕೊಡುತ್ತದೆ.

‘ಅಸ್ಪೃಶ್ಯರು’ ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಾನಪದೀಯ ಅಂಶಗಳು ಕಥೆಗೆ ಪೂರಕವಾಗಿ ಸೊಗಸಾಗಿ ಮೂಡಿ ಬಂದಿವೆ. ಕಾದಂಬರಿಯಲ್ಲಿ ಮೂಡಿ ಬಂದಿರುವ ಆಚಾರ, ಸಂಪ್ರದಾಯ, ಮೂಢನಂಬಿಕೆಗಳಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸಬಹುದು.

ಆಚಾರಗಳಿಗೆ ಸಂಬಂಧಿಸಿದಂತೆ ಕಾದಂಬರಿಯಿಂದಲೇ ಉದಾಹರಣೆಯನ್ನು ನೋಡುವುದಾದರೆ ಸೋಣೆ ತಿಂಗಳಲ್ಲಿ ನಡೆಯುವ ‘ಹೊಸಲು ಬರೆಯುವ ಹಬ್ಬ’. ಸೋಣೆ ತಿಂಗಳಲ್ಲಿ ಹೊಸಲು ಬರೆಯುವ ಕೆಲಸವೆಂದರೆ ವಿಶೇಷ ಆಸ್ಥೆಗಳಿರುತ್ತವೆ. ಸೋಣೆ ತಿಂಗಳು ಬರುವುದಕ್ಕೆ ಐದಾರು ದಿನಗಳ ಮುಂಚೆಯೇ ಹುರುಳಿ, ರಾಗಿ ಇತ್ಯಾದಿಗಳನ್ನು ನೆನೆಸಿ ಹಿತ್ತಲಲ್ಲಿ ಪಾಗಾರದ ಬದಿಯಲ್ಲಿ ಸ್ವಲ್ಪ ಮಣ್ಣು ಹರಡಿ ಅದರಲ್ಲಿ ಬಿತ್ತಿ ಮೇಲೆ ಮೂರು ನಾಲ್ಕು ಬೇಡದ ಖಾಲಿ ಬಿಸ್ಕಿಟು ಡಬ್ಬಿಗಳನ್ನೋ, ಮಡಿಕೆಗಳನ್ನೊ ಕವುಚಿ ಇಡುತ್ತಾರೆ. ಸೋಣೆ ಸಂಕ್ರಾಂತಿಯ ದಿನ ಡಬ್ಬಿ ತೆಗೆದಾಗ ಚಂದದ ರೇಶಿಮೆಯಂತಹ ನಯವಾದ ಕೋಮಲ ದಂಡಿಗೆ ತಲೆಯ ಮೇಲೆ ಹಳದಿ ಜುಟ್ಟಿನ ಹೂವು ‘ಕೊಳ್ಳು ಹೂವು’ ಎಂದು ಅದಕ್ಕೆ ಊರಮನೆ ಹೆಸರು. ಅದು ಹೊಸಲಿಗೆ ಶ್ರೇಷ್ಠವೆಂದು ಆದಿಕಾಲದಿಂದಲೂ ಬಂದದ್ದು. ಆ ದಿನ ಶಾಮಿಗೆ ಮಾಡಲೇಬೇಕು. ಶಾಮಿಗೆ ನೂಲಿನಿಂದ ಹೊಸಲಜ್ಜಿಯನ್ನು ಕಟ್ಟಿ ಹಾಕುವುದರ ಸಂಕೇತವಾಗಿ, ಸಿಂಹ ಸಂಕ್ರಾಂತಿಯಂದು ಹೀಗೆ ಕಟ್ಟಿಹಾಕಿ ಕೂರಿಸಿದ ಅಜ್ಜಿಯನ್ನು ಮುಂದಿನ ಸಂಕ್ರಾಂತಿಯ ದಿನ ದೋಸೆ ಮಾಡಿ ಎಬ್ಬಿಸಿ ಕಳಿಸುವುದು ಅಂತೆಲ್ಲ ರಿವಾಜಿದೆ. ಗೋಧಿ ಹಿಟ್ಟಿನ ಮೋದಕವೂ ನೈವೇದ್ಯಕ್ಕೆ ಆಗಬೇಕು. ಅದೊಂದು ತಿಂಗಳು ಮನೆಯಲ್ಲಿ ಏನು ತಿಂಡಿ ಮಾಡಿದರೂ ಮೊದಲು ಹೊಸಲಜ್ಜಿ ತಿನ್ನಬೇಕು. ಆಮೇಲೆ ಮನೆಯವರು, ಶುಕ್ರವಾರ, ಮಂಗಳವಾರದಂದು ದೋಸೆ, ಕಡುಬು, ಪತ್ರೊಡೆ ಇತ್ಯಾದಿ ಅರೆದು ಮಾಡುವ ತಿಂಡಿಗಳೇ. ಸಂಜೆ ದೀಪ ಹಚ್ಚಿದ ಮೇಲೆ ಹೊಸಲು ನಮಸ್ಕಾರವಾಗಬೇಕು. ಹೊಸಲಿಗೆ ದೀಪವಿಟ್ಟು ನಾಲ್ಕು ಮಾಧ್ಯಾಹ್ನ ಮಲ್ಲಿಗೆ ಹೂವಾದರೂ ಅಡ್ಡಿಲ್ಲ ಏರಿಸಿ ಹಾಲು ಸಕ್ಕರೆ ನೈವೇದ್ಯ ಮಾಡಿ ನಮಸ್ಕರಿಸಿ ಪ್ರಸಾದ ಮುಡಿದು ಗೌರಮ್ಮ ಎದ್ದ ಮೇಲೆ ಉಳಿದ ಹೆಣ್ಣು ಮಕ್ಕಳೆಲ್ಲ ಬಗ್ಗಿ ಏಳುತ್ತಾರೆ. ಕಡೆಗೆ ಅದೇ ದೀಪವನ್ನು ದೇವರ ಕಂಡಿಯಲ್ಲಿಟ್ಟು ನಿಂತಲ್ಲೇ ಮೂರು ಪ್ರದಕ್ಷಿಣೆ ಬಂದು ಎಲ್ಲರೂ ದೇವರಿಗೆ ಅಡ್ಡ ಬೀಳುತ್ತಾರೆ.

“ಒಟ್ಟಾರ ಮೇಲೆ ಸೋಣೆ ತಿಂಗಳಿಡೀ ಹೊಸಲಜ್ಜಿಯ ನೆಪದಿಂದ ದಿನಕ್ಕೊಂದು ಬಗೆಯ ವಿಶೇಷ ತಿಂಡಿ ತಿನ್ನುತ್ತ ತಿಂಗಳು ಕಳೆದದ್ದೇ ಗೊತ್ತಾಗುವುದಿಲ್ಲ” ಎಂದು ಹೇಳುತ್ತ, “ಈಗೆಲ್ಲ ಮನೆಗಳಿಗೆ ಹೊಸಲೇ ಇರುವುದಿಲ್ಲವಲ್ಲ, ಬೋಳು ಬೊಪ್ಪನ ಮನೆಗಳು, ಒಂದು ಹೊಸಲು ಪೂಜೆ ನೈವೇದ್ಯ ಇಲ್ಲದ ಮನೆ ಎಂತಹ ಮನೆ ಗೃಹಸ್ಥೋಳಿಕೆ ಇಲ್ಲದ್ದು?” (ಪು. ೭೯-೮೧ ಅಸ್ಪೃಶ್ಯರು) ಎಂಬ ಕಳವಳವನ್ನು ವೈದೇಹಿಯವರು ಗೌರಮ್ಮನವರ ಸಂಭಾಷಣೆಯ ಮೂಲಕ ವ್ಯಕ್ತಪಡಿಸುತ್ತಾರೆ.

ಕಾದಂಬರಿಯಲ್ಲಿ ಬರುವ ಮತ್ತೊಂದು ಹಬ್ಬದ ವಿವರಣೆ ‘ಗೆಂಡ’ (ಕೆಂಡ ಎಂದರ್ಥ: ಇದು ಜಾನಪದೀಯ ಒಂದು ಪೂಜಾಕ್ರಮ) ಕೋಡಿಗೆಂಡ ಆಗುವುದು ಭಾರತ್ ತಿಂಗಳಲ್ಲಿ. ಕೈಪಾಡಿ, ಬಡಕೋಡಿ,

ಅಸೋಡಿ ಕಲಗರ... ಕಡೆಯಲ್ಲೆಲ್ಲ ಈ ಹಬ್ಬ ನಡೆಯುತ್ತದೆ. ಬೆಕ್ಕಮ್ಮ ಮರುಳು ಬೆಕ್ಕು, ಕೋಡಿ ಅಮ್ಮ ಎಂದು ಹಲವು ಬಗೆಯ ಅಮ್ಮಂದಿರಿಗೆ ಈ ಹಬ್ಬದಲ್ಲಿ ಪೂಜೆ ನಡೆಯುತ್ತದೆ.

ಕೋಡಿಗೆಂಡ ಅಂದರೆ ಅಂತಿಂತಹದ್ದಲ್ಲ. ಯಾವ ಗಂಟಿಗೆ ಎಂತಹ ಘಟಾನು ಘಟಿ ಭೂತ ಮೆಟ್ಟಿಕೊಂಡರೂ ಕೋಡಿ ಅಮ್ಮನವರಿಗೆ ಹೇಳಿಕೊಂಡರೆ ಸಾಕು. ಅದು ಕುಂಡೆಗೆ ಕಾಲುಕೊಟ್ಟು ಓಡಬೇಕು. ಹೆಂಡತಿಯನ್ನು ಬಿಟ್ಟು ಘಟ್ಟಕ್ಕೆ ಹಾರಿದ ಗಂಡ ವಾಪಾಸು ಬರಬೇಕಾದರೂ ಕೋಡಿ ಅಮ್ಮನವರಿಗೆ ಹರಕೆಯಾಗಬೇಕು.

ಹಗಲಿಗೆ ಧಕ್ಕೆ ಬಲಿ, ಧಕ್ಕೆ ಬಲಿಯಲ್ಲಿ ಕೋಳಿ ಕೂಯ್ಯುತ್ತಾರೆ. ಗೆಂಡದ ಕಾರ್ಯಕ್ರಮವೆಲ್ಲ ರಾತ್ರಿಯೇ .... ಕೋಡಿ ಬಂತು ಸರೀ ಕತ್ತಲೆಯಾಗಿತ್ತು. ಗೆಂಡದ ಹೊಂಡಕ್ಕೆ ಆಗಲೇ ಬೆಂಕಿ ಹಾಕಿದ್ದರು. ಒಳಗೆ ಅಮ್ಮನವರಿಗೆ ಪೂಜೆ ನಡೆಯುತ್ತಿತ್ತು. ಪೂಜೆ ಮುಗಿಯುತ್ತಿದ್ದಂತೆಯೇ ಅಮ್ಮನವರ ಅವಾಹನೆಯಾದ ಪಾತ್ರಿ, ಅತ್ತಿತ್ತ ವಾಲುತ್ತ ತೊನೆಯುತ್ತ ಹೆಜ್ಜೆಯಿಡುತ್ತ ಹೊರಗೆ ಬಂದ. ಅವನ ಆಚೆ ಈಚೆ ಎರಡು ಜನ ಪಾತ್ರಿ ಕೈಯಲ್ಲಿ ಸಿಂಗಾರ ಹೂವಿತ್ತು. ಕತಕತ ಕುದಿಯುವಂತೆ ನಡುಗುತ್ತಾ ಅತ್ತ ಇತ್ತ ಸುತ್ತ ತಿರುಗಿ ಕುಣಿಯುತ್ತಾ ಬಂದ ಪಾತ್ರಿ ನಿಗಿ ನಿಗಿ ಉರಿಯುತ್ತಿದ್ದ ಗೆಂಡದ ರಾಶಿಗೆ ಹಾರಿ ನಡೆದು ಹೋದ. ಅವನು ಹಾರಿದ ರಭಸಕ್ಕೆ ಸುತ್ತಲೂ ಅಷ್ಟು ದೂರಕ್ಕೆ ಕೆಂಡದ ಚೂರು ಹಾರಿ ಜನದೂರ ಸರಿದರು. ಭಯ ಮಿಶ್ರಿತ ನಿಶ್ಯಬ್ಧತೆ ಸುತ್ತ ಆವರಿಸಿತು. ಪಾತ್ರಿ ಗೆಂಡದ ಹೊಂಡಕ್ಕೆ ತೀರ್ಥ ಪ್ರೋಕ್ಷಣೆ ಮಾಡಿದ ಮೇಲೆ ಅವನ ಆಚೆ ಈಚೆ ನಿಂತ ತೈನಾತಿಗಳು ಹರಕೆ ಹೊತ್ತವರ ಹೆಸರುಗಳನ್ನು ಕರೆಯತೊಡಗಿದರು. ಊಂಚು ಜಾತಿಯವರನ್ನು ಮೊದಲು ಕರೆಯುತ್ತಾರೆ. ಕಡೆಕಡೆಗೆ ಕೀಳು ಜಾತಿಯವರನ್ನು ಕೊರರು, ಕೂಸಾಳುಗಳಿಗೆ ಗೆಂಡದ ಕಾರ್ಯಕ್ರಮಕ್ಕೆ ಪ್ರವೇಶವೇ ಇಲ್ಲ.

ಕಾಣಿ ಮಕ್ಕಳೆ ಗೆಂಡದ ಮೇಲೆ ನಡೆಯುತ್ತಿರುವವರ ಕಾಲು ಚೂರಾದರೂ ಸುಡುತ್ತದೆಯ ಅಂತ ಗೆಂಡಕ್ಕೆ ಹಾರುವ ದಿನ ವ್ರತ, ನೇಮ ಬಹಳ ಕಡು ಇರಬೇಕು. ಮಾಂಸ, ಮೀನು ತಿನ್ನಬಾರದು, ಮುಟ್ಟಾದವರನ್ನು ಕೊರಕೊಸಾಳುಗಳನ್ನು ಮುಟ್ಟಿಸಿಕೊಳ್ಳಬಾರದು. ಒಂದು ಚೂರು ನೇಮ ತಪ್ಪಿತೆಂದರೆ ಕಾಲಲ್ಲಿ ಬೊಕ್ಕೆ ಬಂದಿತೆಂದೇ..... (ಪು. ೧೦೩-೧೦೬ ಅಸ್ಪೃಶ್ಯರು).

ಕೋಡಿ ಹಬ್ಬದ ಬಗ್ಗೆ ಬಂದಿರುವ ಈ ವಿವರಣೆಯಲ್ಲಿ ಹರಕೆ ಬಲಿ ಮೊದಲಾದ ವಿವರಣೆಗಳ ಜೊತೆಗೆ ಶೂದ್ರರಲ್ಲಿ ಒಳಪಂಗಡಗಳಲ್ಲಿ ನಡೆಯುವ ಜಾತಿಯ ತಾರತಮ್ಯದ ಕುರಿತ ವಿವರಣೆಯೂ ಇದೆ.

೩.೨.೩ ಲೈಂಗಿಕ ಅಥವಾ ಅನೈತಿಕ ಸಂಬಂಧಗಳು

ಕಾದಂಬರಿಗಳಲ್ಲಿ ಮೂಡಿ ಬಂದಿರುವ ಹೆಣ್ಣು ಗಂಡಿನ ಲೈಂಗಿಕ ಅನೈತಿಕ ಸಂಬಂಧವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಈ ಭಾಗದಲ್ಲಿ ಮೇಲ್ವರ್ಗದವರು ಕೆಳವರ್ಗದ ಸ್ತ್ರೀಯರನ್ನು ನಡೆಸಿಕೊಳ್ಳುವ ರೀತಿ. ದೇವರ ಹೆಸರಿನಲ್ಲಿ ಸ್ತ್ರೀಯರನ್ನು ದೇವದಾಸಿ ಜೋಗಣಿ ಮಾಡುವ ಮೂಲಕ ಊರ ಗಂಡಸರು

ಅವರನ್ನು ಬಳಸಿಕೊಳ್ಳುವ ರೀತಿಗಳು ಸಾದೃಶ್ಯಾಂಶಗಳಾಗಿವೆ. ಕಾದಂಬರಿಗಳಲ್ಲಿ ಇಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಒಪ್ಪಿ ನಡೆದ ಪಾತ್ರಗಳೇ ಹೆಚ್ಚಾದರೂ, ಕೆಲವು ಕಾದಂಬರಿಗಳಲ್ಲಿ ಅದನ್ನು ಪ್ರಶ್ನಿಸುವ, ವಿವೇಚಿಸುವ ಮೂಲಕ ಆ ವೃತ್ತಿಯನ್ನು ಬಿಡುವ ಇವೆರಡೂ ಆಗದಿದ್ದಾಗ ಸಾವಿಗೆ ಶರಣಾಗುವ ಮೂಲಕ ಮೌನ ಪ್ರತಿಭಟನೆಯನ್ನು ಮಾಡುವ ಪಾತ್ರಗಳು ವೈದೃಶ್ಯಾಂಶಗಳಾಗಿವೆ. ಕಾದಂಬರಿಗಳಲ್ಲಿ ಬರುವ ಇಂತಹ ಅಂಶಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

'ಅರಮನೆ' ಕಾದಂಬರಿಯಲ್ಲಿ ಬರುವ ತಿಲ್ಲಾನ ತಾಯಕ್ಕಳ ಪಾತ್ರ ಅನೈತಿಕ, ಲೈಂಗಿಕ ಸಂಬಂಧವನ್ನು ಹೊಂದಿದುದಕ್ಕೆ ಕೊಡಬಹುದಾದ ಉದಾಹರಣೆಯಾಗಿದೆ. ತಾಯಕ್ಕ ಶ್ರೀಕೃಷ್ಣದೇವರಾಯನ ರಾಣಿ ಚಿನ್ನಾಂಬಳ ವಂಶಸ್ಥಳು (ವೇಶ್ಯೆ) ತಾನಿನ್ನು ಗರ್ಭಿಣಿಯಾಗಿದ್ದಾಗಲೇ ಬಾದನಹಟ್ಟಿ ಪಾಳೆಪಟ್ಟಿನ ನಾಯಕನಾದಂತ ಯೀರಭೋಜನಾಯಕನೊಂದಿಗಿನ ಸಂಬಂಧ ಹದಗೆಟ್ಟದ್ದರಿಂದ ಅವನನ್ನು ಬಿಟ್ಟು ಬಂದ ತಾಯಕ್ಕ ಚಿನ್ನಾಸಾನಿಗೆ ಜನ್ಮವೀಯುತ್ತಾಳೆ. ನಂತರ ಬುಗಡಿ ನೀಲಕಂಠಪ್ಪ ಇವಳ ಮನೆಯ ಏಕರಿಕೆ ದೇಕರಿಕೆ ನೋಡಿಕೊಳ್ಳುತ್ತಿರುತ್ತಾನೆ. ಚಿನ್ನಾಸಾನಿ ಈತನ ಮಗಳಲ್ಲ. ತಾಯಕ್ಕನ ರೂಪಕ್ಕೆ ಮಾರು ಹೋಗಿದ್ದ ಸ್ವಾಮಿ ಗೋರಖನಾಥರ (ಸನ್ಯಾಸಿ) ಮಗಳು. ಆದರೂ ಬುಗಡಿ ನೀಲಕಂಠಪ್ಪ ಆಕೆಯನ್ನು ತನ್ನ ಸ್ವಂತ ಮಗಳಂತೆ ನೋಡಿಕೊಳ್ಳುತ್ತಿರುತ್ತಾನೆ.

ತಾಯಕ್ಕ ನೋಡಲಷ್ಟೇ ಸ್ಫೂರದ್ರೂಪಿಯಲ್ಲ. ಅವಳ ಸಹವಾಸದಿಂದ ಸಾಮಾಜಿಕ ಸ್ಥಾನಮಾನವೂ ಹಿಮ್ಮಡಿಯಾಗುತ್ತದೆ ಎಂಬುದಕ್ಕೆ ತಾಯಕ್ಕನ ಹತ್ತಿರ ಹೋಗದಿರಲು ಬುಗಡಿ ನೀಲಕಂಠಪ್ಪನ ಪತ್ನಿ ಗೃಹಸ್ಥಾಶ್ರಮ ಧರುಮದ ಕಟ್ಟುಪಾಡುಗಳನ್ನು ಹೇಳಿದಾಗ "......ತಿಲ್ಲಾನ ನಿವಾಸದ ಸಹವಾಸದಿಂದಾಗಿಯೇ ತನಗೆ ಸಾಮಾಜಿಕ ಸ್ಥಾನಮಾನ ದ್ವಿಗುಣಗೊಂಡಿರುವುದು" ಎಂದು ಹೇಳುವ ಬುಗಡಿ ನೀಲಕಂಠಪ್ಪನ ಮಾತುಗಳಿಂದ ತಿಳಿಯುತ್ತದೆ.

ಆದರೆ ಆಕೆ ಬೇಕೆಂದರವರಿಗೆಲ್ಲಾ ಒಲಿಯುವವಳಲ್ಲ ಎಂಬುದಕ್ಕೆ ಮುರಾರಿರಾಯನ ಪ್ರಸಂಗವನ್ನು ಉದಾಹರಿಸಬಹುದು. ಆಕೆ ಯಾರಿಗೂ ಹೇಳದೆ ಕೇಳದೆ ಊರುಬಿಟ್ಟು ಹೋದದ್ದಕ್ಕಾಗಿ ವಿಚಾರಣೆ ನಡೆಸಲು ಹೋಗುವುದಾಗಿ ಹೇಳಿ ತನ್ನ ಸರೀರಕ್ಕೂ ಕೋವಿಗೂ ಘಮ್ಮಂದೆಣ್ಣೆ ಪೂಸಿಕೊಂಡು ಬಂದ ಮುರಾರಿರಾಯನಿಗೆ ತಾಯಕ್ಕನನ್ನು ನೋಡಿ "ಯೀ ವಯಸ್ಸಿನಲ್ಲೇ ಯಿಷ್ಟು ಸುಂದರಿಯಿರುವ ಯೀಕೆ ವಂದು ವಯಸ್ಸಿನಲ್ಲಿ... ಯೀಕೆಯ ಮಗಳು ಯಿನ್ನದೆಷ್ಟು.....?" ಯಂದು ಯೋಚಿಸುತ್ತಿದ್ದ ಅವನ ನಡುವಳಿಕೆಯಿಂದಲೇ ಅರ್ಥಮಾಡಿಕೊಂಡ ತಾಯಕ್ಕ ಚಿನ್ನಾಸಾನಿ ಇರುವ ಕೋಣೆಗೆ ಅವನನ್ನು ಕರೆದುಕೊಂಡು ಹೋಗಲು ತನ್ನ ಆಳುಗಳಿಗೆ ಹೇಳಿ ಕಣ್ಣು ಮಿಟುಕಿಸಿದಾಗ, ಆಕೆಯ ಮನದಿಂಗಿತವರಿತ ಆಳುಗಳು ಮುರಾರಿಯನ್ನು ಗೌರವಪೂರ್ವಕವಾಗಿ ಹಿತ್ತಲ ಕೋಣೆಗೆ ಕರೆದೊಯ್ದು 'ಚಿನ್ನಾಸಾನಿಯ ತಂಟೆಗೆ ಬರ್ತೀಯಾ' ಎಂದು ಛಪ್ಪನ್ನಾರು ಕೀಲುಗಳು ಸಯ್ಲುಗೊಳ್ಳುವಂತೆ ಕಾಮಗಾರಿಯನ್ನು ನಡೆಸಿದರು" (ಪು.೨೭೦ ಅರಮನೆ) ಎಂಬ ವಿವರಣೆಯು ಆಕೆ ಮತ್ತು ಆಕೆಯ ಮಗಳ ಸೌಂದರ್ಯವನ್ನು ಬಯಸಿ ಬಂದವರೆಲ್ಲರಿಗೂ ದೊರೆಯುವುದಿಲ್ಲ ಎಂಬುದನ್ನು ತಿಳಿಸುತ್ತದೆ.

ಯಂಕೋಬರಾಯನಂಥ ನಿಷ್ಠಾವಂತ ಸದ್ಗುಹಸ್ಥನನ್ನು ತನ್ನ ವನಪು ವೈಯಾರದಿಂದ ತನ್ನತ್ತ ಸೆಳೆದು ಕೊಳ್ಳುವ ತಾಯಕ್ಕ ತನ್ನ ಮಗಳು ಚಿನ್ನಾಸಾನಿಯ ಮೇಲೆ ಕಣ್ಣು ಹಾಕುವವನಿಗೆ ತಕ್ಕಶಾಸ್ತಿ ಮಾಡಿಸುವವ ಳಲ್ಲದೆ ಅವಳಾಗಿಯೇ ಇಷ್ಟಪಡುವ ಹೆನ್ರಿಯಿಂದಲೂ ದೂರ ಮಾಡಿ ಅವಳನ್ನು ದಣಾಪುರ ಕಲಿಯೀರ ನಾಯಕನಿಗೆ ವಿವಾಹ ಮಡಿಕೊಡುತ್ತಾಳೆ.

ಕಾಟಯ್ಯ ನಾಯಕನಿಗೆ ಸಂಬಂಧಿಸಿದಂತೆ "ಮುಗಬೊಟ್ಟುಗಳೆಂದರೆ ಮೂಗು ಕೊಯ್ಸಿಕೊಳ್ಳುತ್ತಾನೆ" (ಪು. ೬೦ ಅರಮನೆ) ಎಂಬಂಥ ಮಾತುಗಳು ಅವನ ಲಂಪಟತನವನ್ನು ಕೇವಲ ಸೂಚ್ಯವಾಗಿ ತಿಳಿಸುತ್ತವೆಯೇ ಹೊರತು ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ವಿವರಣೆಗಳಿಲ್ಲ.

'ನಿಸರ್ಗ' ಕಾದಂಬರಿಯಲ್ಲಿ ಬರುವ ತಾರ ಮತ್ತು ಅನಂತರ ನಡುವಿನ ಸಂಬಂಧ ಅನೈತಿಕವೇ ಆದರೂ ಅದನ್ನು ಲೇಖಕರು ನಿಸರ್ಗ ಸಹಜವಾದುದು ಎಂಬಂತೆ ನಿರೂಪಿಸಿದ್ದಾರೆ. ಗಂಡ ಭರಮನಿಂದ ದಾಂಪತ್ಯ ಜೀವನದ ಸುಖವನ್ನು ಅನುಭವಿಸಲಾರದ ತಾರ. ಒಮ್ಮೆ ಪ್ರಕೃತಿಯ ಸೆಳೆತಕ್ಕೆ ಸಿಲುಕಿ ಮಾವನ ಮಗ ಅನಂತನೊಡನೆ ಕೂಡುತ್ತಾಳೆ. ಅವರು ಕೂಡಿದ ಈ ವಿಷಮಗಳಿಗೆಯೇ ಅವರಿಬ್ಬರ ಜೀವನದುದ್ದಕ್ಕೂ ಹಿಂಸೆಯಾಗಿ ಬೆನ್ನುಬಿಡದೆ ಹಿಂಬಾಲಿಸುತ್ತದೆ.

ಅನಂತ ತಾರೆಯರಿಗೆ ಪರಸ್ಪರ ಇಷ್ಟವಿದ್ದಾಗ್ಯೂ ಸಮಾಜವನ್ನು ಹೆದುರಿಸಲಾರದೆ ತಮ್ಮ ಒಲವಿನ ಬಗೆಯನ್ನು ಯಾರಿಗೂ ಹೇಳಲಾರದೆ ಮೌನವಾಗಿ ದಹಿಸುತ್ತಾರೆ. ಕೊನೆಗೂ ಈ ಎರಡು ಪಾತ್ರಗಳು ಅತೃಪ್ತಿಯಲ್ಲಿಯೇ ದುರಂತ ಸಾವನ್ನಪ್ಪುತ್ತವೆ.

ಅನಂತ ತಾರೆಯೊಡನೆಯೂ ಕೂಡಲಾರದೆ, ಹೆಂಡತಿ ಇಂದಿರಾಳ ಜೊತೆಯೂ ಬಾಳ್ವೆ ಮಾಡಲಾರದೆ ಶೂನ್ಯಮನಸ್ಕನಾಗಿ ಗೊತ್ತುಗುರಿಯಿಲ್ಲದೆ ತಿರುಗುವವನಿಗೆ ಬಂಗಾರಿಯ ಸ್ನೇಹವಾಗಿ ಅವಳೊಂದಿಗೆ ಸಂಬಂಧ ವನ್ನು ಬೆಳೆಸಿ ಬೇರೆ ಊರಿಗೊಯ್ದು ಇಡುತ್ತಾನಾದರೂ ಅನಂತ ಈಕೆಯೊಡನೆಯೂ ತೃಪ್ತಿಯ ಬಾಳ್ವೆ ಮಾಡುವುದಿಲ್ಲ.

ಅಪ್ಪಣ್ಣನ ಮೊದಲ ಹೆಂಡತಿಯ ಸತ್ಯನೊಂದಿಗಿನ ಸಂಬಂಧ, ಅಪ್ಪಣ್ಣ ಹೆಂಡತಿಯ ಮೇಲಿನ ದ್ವೇಷದಿಂದ ಸೋನಿಯೊಂದಿಗೆ ಬೆಳೆಸುವ ಸಂಬಂಧಗಳು ಕಾದಂಬರಿಯಲ್ಲಿ ಗುರುತಿಸಬಹುದಾದ ಮತ್ತೆರಡು ಅನೈತಿಕ ಸಂಬಂಧಕ್ಕೆ ಕೊಡಬಹುದಾದ ಉದಾಹರಣೆಗಳಾಗಿವೆ.

'ಕುಸುಮಬಾಲೆ' ಅನೈತಿಕ ಸಂಬಂಧಗಳ ಕಥೆ ಎಂದೇ ಹೇಳಬಹುದು. ಕೃತಿಯ ಪ್ರಾರಂಭದಲ್ಲಿ ಬರುವ ಅಕ್ಕಮಹಾದೇವಮ್ಮ ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಯಾಡನನ್ನು ಹಟ್ಟಿ ಜೀತಗಾರನಿಗೆ ಹಡೆದವಳು. ಕುಸುಮಾಳ ತಾಯಿ ಮಲ್ಲಾಜಮ್ಮಳು ಹುಟ್ಟುತ್ತಲೇ ಅವಳ ತಾಯಿ ಆಸ್ಪತ್ರೆಯಲ್ಲಿ ಬಿಟ್ಟು ಹೋಗಿದ್ದಳು ಎಂಬಂಥ ವಿವರಣೆಗಳು ಯಾಡ ಮತ್ತು ಮಲ್ಲಾಜಮ್ಮರು ಅನೈತಿಕ ಸಂಬಂಧದಿಂದ ಹುಟ್ಟಿದವರು ಎಂಬುದನ್ನು ನಿರೂಪಿಸುತ್ತದೆ.

ತೂರಮ್ಮ, ತನ್ನ ಮಗಳು ಗಂಡನನ್ನು ಬಿಟ್ಟು ಬಂದು ತವರು ಮನೆಯಲ್ಲಿ ವಿವಾಹೇತರ ಸಂಬಂಧ ಹೊಂದಿರುವುದನ್ನು ಪತ್ತೆ ಹಚ್ಚಿ ಎಡಗೈಲಿ ಮಗಳ ತಲೆಗೂದಲು ಹಿಡಿದು ಬಲಗೈಲಿ ಪೊರಕೆ ಹಿಡಿದು ಹಲ್ಲು ಕಚ್ಚುತ್ತ "ಯಾನಮ್ಮಿ? ಯಾನ ಇದು ನಿನ್ ಮಾಯಾ ಮಂಗಾಟ? ಚಾಲೂ ಚಲಾಕು? ಎಂದು ಮಗಳನ್ನು ಘಟ್ಟಿಸಿ ಕೇಳಿದಾಗ. ತಾಯಿಯ ಪ್ರಶ್ನೆಗೆ ಸೊರಗುಟ್ಟುತ್ತ ಕೆಂಪಿ "ಅದ ಯಾನ ಅಂತ ನಾ ಹೇಳ್ಳವ್ವ? ನಾ ತಂದಂಥ ಫಲ್ವ ನಾ ಯಾಗ್ ಹೇಳ್ಳಿ ಹೇಳು. ನಾ ಸತ್ತಾಗ ಸೊರ್ಗಕ್ಕ ಸೇರ್ಕಳ್ಳಿ ನಂ ಅವ್ವ ಅಂತ ಹಿಂಡಕೂಳಾಕಾಕ ಒಂದು ಗಂಡ್ಕೂಸು ಆಗೋದು ಬ್ಯಾಡ ಬೇಕಾರ ನಂಗ. ಬೆನ್ನುಜ್ಜಿ ಕೊಡಾಕ ಅಂತ ಒಂದು ಹೆಣ್ಣುಗೂಸು ಅಂತಾರೂ ಆಗದು ಬ್ಯಾಡವವ್ವ ನಂಗಾ?" (ಪು. ೧೧೬ ಕುಸುಮಬಾಲೆ) ಎಂದು ತನ್ನ ದಾಂಪತ್ಯದ ವಿಷಮತೆಯನ್ನು ಹೇಳುತ್ತಾ ತಾನು ಹೊಂದಿದ ಸಂಬಂಧಕ್ಕೆ ಕಾರಣವನ್ನು ಹೇಳುತ್ತಾಳೆ. ಕೆಂಪಿಯು ಹೇಳಿದಂತಾ ಬಾಣವು ಬಂದು ತೂರಮ್ಮನ ಎಡಗೈಗೆ ನಾಟಲು ಹಿಡ್ದ ಹಿಡುಗಲ ಬಿಟ್ಟು ಅಲ್ಲಿಂದ ಜೀವಕ್ಕೆ ನಾಟಲು ಕುಸಿದಳು. ಎಂದರೆ ಅನೈತಿಕ ಸಂಬಂಧದ ಕುರಿತು ಕಟ್ಟು ವಿರೋಧವನ್ನು ಹೊಂದಿದ್ದ ತೂರಮ್ಮನಿಗೆ ಮಗಳು ಸಂತಾನಕ್ಕಾಗಿ ಈ ರೀತಿ ನಡೆದುಕೊಂಡದ್ದು ಅಪರಾಧವಲ್ಲವೇನೋ ಎನಿಸಿ ಬಿಡುತ್ತದೆ.

ಕುಸುಮ ಮತ್ತು ಚೆನ್ನರ ನಡುವಿನ ಸಂಬಂಧ ಕಾದಂಬರಿಯಲ್ಲಿ ತಿಳಿಯುವುದು ಅವರಿಗೆ ಹುಟ್ಟುವ ಕೂಸು ಹೊಂದಿದ್ದ ಬಣ್ಣದಿಂದ ಇದರಿಂದಲೇ ಚನ್ನನ ಕೊಲೆ ಯಾರ ಅರಿವಿಗೂ ಬಾರದೆ ನಡೆದು ಹೋಗುತ್ತದೆ.

ಈ ಕಾದಂಬರಿಯಲ್ಲಿ ಮೂಡಿಬಂದಿರುವ ಸಂಬಂಧಗಳು. ವಿಶೇಷವಾದವುಗಳಾಗಲಿ, ಅಕ್ಷಮ್ಯ ಅಪರಾಧ ಗಳೆಂದಾಗಲಿ ಅಲ್ಲ ಎಂಬುದಕ್ಕೆ ಕುಸುಮ ಚೆನ್ನರ ನಡುವಿನ ಸಂಬಂಧವನ್ನು ಹೇಳಿದ ನಂತರ ದೊಡ್ಡೋರ ಹಟ್ಟೀ ಜೋತಮ್ಮ ಪ್ರತಿಕ್ರಿಯಿಸುವುದು ಹೀಗೆ.

"ಐ.... ಎಲ್ರೂ ಮಾಡೋ ಯಥಾರ್ಥನೆ ಹೇಳ್ತಾಳೆ ಏನ್ ವಿಚಾರ್ವ ಅದು!" (ಪು.೧೧೩ ಕುಸುಮ ಬಾಲೆ) ಎಂಬಲ್ಲಿ ಗಂಡು ಹೆಣ್ಣಿನ ನಡುವಿನ ಸಂಬಂಧದ ಸಾಮಾನ್ಯತೆ ವ್ಯಕ್ತವಾಗಿದೆ.

ಗ್ರಾಮಾಯಣ ಕಾದಂಬರಿಯು ಪ್ರಾರಂಭವಾಗುವುದೇ ಚಿಮಣಾಳ ಶೀಲಹರಣದಿಂದ, ಬಾಪುಸಾಹೇಬ ನನ್ನು ಬಯಿಸಿದ್ದ ಚಿಮಣಾ ಪಡದಯ್ಯನಿಗೆ ಬಲಿಯಾಗುತ್ತಾಳೆ. ಕಾದಂಬರಿಯಲ್ಲಿ ಬರುವ ಈ ಪ್ರಕರಣವೇ ಪಾದಳ್ಳಿಯ ಪತನಕ್ಕೆ ನಾಂದಿಯಾಗುತ್ತದೆ.

ವಾಡೆಯಲ್ಲಿ ಓಡಾಡುವ ಚಿಮಣಾಳನ್ನು ಕಂಡು ಬಾಪುಸಾಹೇಬ ಆಕೆಯ ಮೇಲೆ ಕಣ್ಣಾಕುತ್ತಾನೆ. ಆಕೆಯನ್ನು ಪಡೆಯುವ ಸಲುವಾಗಿ ಮಠದ ಪಡದಯ್ಯನ ಸಹಾಯವನ್ನು ಯಾಚಿಸುತ್ತಾನೆ. ಮಠದ ದಾನಮ್ಮ ಇದಕ್ಕೆ ಮಧ್ಯವರ್ತಿಯಾಗಿ ಮಠಕ್ಕೆ ಚಿಮಣಾಳನ್ನು ಕರೆದುಕೊಂಡು ಬಂದಾಗ ಚಿಮಣಾಳನ್ನು ಕಂಡು ಮೋಹಗೊಂಡ ಪಡದಯ್ಯ ಬಾಪು ಸಾಹೇಬ ಬರುವ ಮೊದಲೇ ಆಕೆಯ ಮೇಲೆ ಬಲಾತ್ಕಾರ ನಡೆಸುತ್ತಾನೆ.

ಈ ಪ್ರಕರಣದಿಂದ ಗರ್ಭಿಣಿಯಾದ ಚಿಮಣಾಳನ್ನು ಕಂಡು ಬಾಪುಸಾಹೇಬನೇ ಕಾರಣ ಅವನೊಂದಿಗೆ ಮದುವೆ ಮಾಡು, ಇಲ್ಲವಾದರೆ ನಮ್ಮಿಬ್ಬರ ನಡುವಿನ ಸಂಬಂಧವನ್ನು ಊರವರಿಗೆ ಹೇಳುತ್ತೇನೆ ಎಂದು ಹೆದರಿಸುವ ಮೂಲಕ ತನ್ನ ಮತ್ತು ಪುತಳಾಬಾಯಿಯ ನಡುವಿನ ಸಂಬಂಧವನ್ನು ಅಸ್ತ್ರವಾಗಿ ಬಳಸಿಕೊಳ್ಳಲು ನೋಡುತ್ತಾನಾದರೂ ನಾನಾ ಇದರಲ್ಲಿ ವಿಫಲನಾಗಿ ತಾನೇ ಸಾಯುತ್ತಾನೆ.

ನಾನಾ ಮತ್ತು ಪುತಳಾಬಾಯಿಯವರ ಸಂಬಂಧವೂ ವಿವಾಹೇತರವಾದುದೇ ಪುತಳಾ ವಿವಾಹವಾಗಿ ಮೊದಲಿಗೆ ಪಾದಳ್ಳಿಗೆ ಬಂದಾಗ ಬರಮಾಡಿಕೊಳ್ಳಲು ಬಂದ ನಾನಾನನ್ನು ನೋಡಿ ಮೋಹಗೊಳ್ಳುತ್ತಾಳೆ. ಸಂದರ್ಭ ನೋಡಿ ಒಂದಾಗುವ ಅವರಿಬ್ಬರೂ ತಮ್ಮ ತಪ್ಪನ್ನು ಮನಗಂಡು ದೂರವಿರುತ್ತಾರಾದರೂ. ಪುತಳಾಳ ಪತಿ ರಾಣೋಜಿರಾಯರು ಮರಣವನ್ನಪ್ಪಿದ ನಂತರ ನಾನಾ ವಾಡೆಯಲ್ಲಿರತೊಡಗಿದ ಮೇಲೆ ಪುನಃ ಅವರ ಸಂಬಂಧ ಬೆಳೆಯುತ್ತದೆ. ಆದರೆ ಚಿಮಣಾಳ ಪ್ರಕರಣದಿಂದಾಗಿ ಒಡೆದ ಇವರಿಬ್ಬರ ಸಂಬಂಧ ನಾನಾನನ್ನು ಕೊಲೆಮಾಡಿಸುವ ಮಟ್ಟಕ್ಕೆ ತಿರುಗುತ್ತದೆ. ಕೊನೆಗೆ ನಾನಾನ ಕೊಲೆ ಬಾಪುಸಾಹೇಬನ ಮೇಲಿಂದ ದಾದಾನಿಗೆ ತಿರುಗಿದಾಗ ಪುತಳಾಬಾಯಿಯು ನೇಣು ಹಾಕಿಕೊಂಡು ಸಾಯುವ ಮೂಲಕ ತನ್ನ ಮತ್ತು ನಾನಾನ ನಡುವಿನ ಸಂಬಂಧದ ಗುಟ್ಟು ಗುಟ್ಟಾಗಿಯೇ ಉಳಿಯುವಂತೆ ಮಾಡುತ್ತಾಳೆ.

ಶಂಕರಪ್ಪಗೌಡರ ಮೊದಲ ಹೆಂಡತಿ ಅತ್ತೆಯ ಮನೆಗೆ ಬರುವ ಮೊದಲೇ ಬಸಿರಾಗಿದ್ದುದು, ದಾನಮ್ಮ ಮಠದ ಪಡದಯ್ಯನೊಂದಿಗೆ ಹೊಂದಿದ ಸಂಬಂಧ, ಮಲ್ಲಿ ಮತ್ತು ಚಂದ್ರಿಯರನ್ನು ದೇವರ ಹೆಸರಿನಲ್ಲಿ ಸಾರ್ವಜನಿಕರು ಊರವರು ಮತ್ತು ಅಧಿಕಾರಿಗಳು ನಡೆಸಿಕೊಳ್ಳುವ ರೀತಿ ಕಾದಂಬರಿಯಲ್ಲಿ ವಿವಾಹೇತರ ಅನೈತಿಕ ಸಂಬಂಧಕ್ಕೆ ಉದಾರಿಸಬಹುದಾದ ಹಲವು ಪಾತ್ರಗಳು.

ಆದರೆ ಇವರೆಲ್ಲರಿಗಿಂತಲೂ ದೌರ್ಜನಕ್ಕೆ ಒಳಗಾಗುವವಳೆಂದರೆ ಚಿಮಣಾ, ಜಾಗೀರುದಾರರ ಕೈಹಿಡಿದು ಸುಖವನ್ನನುಭವಿಸಬೇಕೆಂದು ಕನಸು ಕಾಣುತ್ತಿದ್ದವಳಿಗೆ ಪಡದಯ್ಯ ಅವಳ ಬಾಳನ್ನು ಮೂರಾಬಟ್ಟೆ ಮಾಡುತ್ತಾನೆ. ಪಡದಯ್ಯನು ಮಾಡಿದ ಒಂದು ತಪ್ಪಿಗೆ ದಾದಾ ಚಿಮಣಾಳನ್ನು ಮಠದಲ್ಲಿಯೇ ಬಿಟ್ಟು ಬಂದು ಮತ್ತೊಂದು ತಪ್ಪನ್ನು ಮಾಡುತ್ತಾನೆ. ಪಡದಯ್ಯನನ್ನು ಒಪ್ಪದ ಬೇರೆಯವರನ್ನು ಕೂಡಲಾರದ ಚಿಮಣಾ ಲಿಂಗಪ್ಪಗೌಡನ ಕಿರಿಕಿರಿಯಿಂದಾಗಿ ಆತ್ಮಹತ್ಯೆಯನ್ನೇ ಮಾಡಿಕೊಳ್ಳುತ್ತಾಳೆ. ಚಿಮಣಾಳನ್ನು ಬಲಾತ್ಕಾರ ಮಾಡಿದ ಪಡದಯ್ಯನಿಗೆ ದಾದಾ ಶಿಕ್ಷೆಯನ್ನು ನೀಡುವುದು ಸಹಜವೇ ಆದರೂ. ಚಿಮಣಾಳನ್ನು ಮಠದಲ್ಲಿಯೇ ಬಿಟ್ಟು ಬರುವುದು ವ್ಯತಿರಿಕ್ತವಾದ ಪ್ರಕ್ರಿಯೆಯಾಗಿದೆ.

ವೈಶಾಖ ಕಾದಂಬರಿಯಲ್ಲಿ ವ್ಯಕ್ತವಾಗಿರುವ ಕಾಮಸಂಬಂಧಿ ಪ್ರಕ್ರಿಯೆಗಳು ಭಿನ್ನನೆಲೆಯಲ್ಲಿ ನಿರೂಪಿತ ಗೊಂಡಿವೆ. ಗಂಡ ಸತ್ತ ಸಕೇಶಿ ವಿಧವೆ ರುಕ್ಮಿಣಿಯನ್ನು ನಿರೀಕ್ಷೆಗೂ ಮೀರಿ ಅವಳ ಮಾವನೇ ಅತಿಕ್ರಮಿ ಸುತ್ತಾನೆ. ನಂತರ ತನ್ನ ಮಾವಯ್ಯನಿಂದ ಕೆದಕಲ್ಪಟ್ಟ ಬಯಕೆಯನ್ನು ತೃಪ್ತಿಪಡಿಸಿಕೊಳ್ಳುವ ಸಲುವಾಗಿ ಕಾಡಿನಲ್ಲಿ ಒಂಟಿಯಾಗಿ ಸಿಕ್ಕುವ ಲಕ್ಕನನ್ನು ರುಕ್ಮಿಣಿ ಬಲಾತ್ಕರಿಸುತ್ತಾಳೆ. ಒಂದೇ ಮಾಸದಲ್ಲಿ ಇಬ್ಬರು

ಗಂಡಸರ ಸಂಪರ್ಕದಿಂದಾಗಿ ಗರ್ಭಿಣಿಯಾಗುವ ರುಕ್ಮಿಣಿಗೆ ಆ ಗರ್ಭಕ್ಕೆ ಕಾರಣ ಯಾರೆಂಬುದು ಅವಳಿಗೇ ತಿಳಿದಿರುವುದಿಲ್ಲವಾದರೂ ಊರ ಜನರ ದೃಷ್ಟಿಯಲ್ಲಿ ಲಕ್ಕ ಅಪರಾಧಿಯಾಗುತ್ತಾನೆ. ಇದರ ಪರಿಣಾಮವಾಗಿ ಅವನಿಗೆ ಗಡಿಪಾರಿನ ಶಿಕ್ಷೆಯಾಗುತ್ತದೆ. ಅದೇ ರೀತಿ ರುಕ್ಮಿಣಿಗೆ ಘಟಶ್ರಾದ್ಧ ವಿಧಿಯನ್ನು ಅವಳು ಬದುಕಿದ್ದಾಗಲೇ ಮಾಡುತ್ತಾರೆ. ಅವಳನ್ನು ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಬೇಕು ಎಂದು ತೀರ್ಮಾನಿಸುತ್ತಿದ್ದಂತೆ ರುಕ್ಮಿಣಿ ಊರಿನಿಂದಷ್ಟೇ ಅಲ್ಲ, ಕಾದಂಬರಿಯಿಂದಲೇ ಕಾಣೆಯಾಗುತ್ತಾಳೆ.

ಹಾಗೆಯೇ, ಲಕ್ಕ ಚಿಕ್ಕವನಿದ್ದಾಗ ಗಂಗಿಯಿಂದ ಬಲಾತ್ಕಾರಕ್ಕೊಳಗಾಗುವ ಘಟನೆಗಳು ಅನಿರೀಕ್ಷಿತವಾದ, ಆಕಸ್ಮಿಕವಾದ ಸಂಗತಿಗಳಿಗೆ ಉದಾಹರಣೆಯಾದರೆ, ಗಂಡನನ್ನು ಬಿಟ್ಟು ಬಂದ ಹದಿಹರೆಯದ ಶಿವುನಿ ಬಡತನದಲ್ಲಿದ್ದಾಗಲೂ ಮೊದಲು ಕೇಶವಯ್ಯನ ಸಹಾಯವನ್ನು ದಿಟ್ಟತನದಿಂದ ನಿರಾಕರಿಸುತ್ತಾಳಾದರೂ. ರುಕ್ಮಿಣಿಯ ವಿಷಯವಾಗಿ ಲಕ್ಕನಿಗಾದ ಗಡಿಪಾರು ಶಿಕ್ಷೆ, ತಾಯಿಯ ಸಾವು, ತಂದೆಯ ಕುಡಿತಗಳಿಂದಾಗಿ ಒಂಟಿಯಾದರೂ, ದುಡಿದು ಬದುಕುವ ಹಠದಿಂದ ಹೊಲಗಳಿಗೆ ಹೋದರೆ, ಪ್ರತಿಸಾರಿ ಅಳುವ ಮಗುವನ್ನು ರಮಿಸುವ ಸಲುವಾಗಿ ಹಿಂದಾಗುವ ಅವಳನ್ನು ಯಾರೂ ಹೊಲಗಳಿಗೆ ಸೇರಿಸುವದಿಲ್ಲ, ಕೊನೆಗೆ ತಾನೂ ಬದುಕಿ ಮಗುವನ್ನು ಸಾಕುವ ಹೊಣೆಗಾರಿಕೆ ತನ್ನ ಮೇಲೆಯೇ ಬಿದ್ದಾಗ ಅನಿವಾರ್ಯವಾಗಿ ಕೇಶವಯ್ಯನೊಂದಿಗೆ ಕೂಡುತ್ತಾಳೆ.

ಹೀಗೆ ಅನಿವಾರ್ಯವಾಗಿ ಸೇರುವ ಮತ್ತೊಂದು ಪಾತ್ರ ಗಂಗಿ, ಅವಳು ನ್ಯಾಯಸ್ಥಾನದಲ್ಲಿ ಅವಾಚ್ಯವಾಗಿ ಮಾತನಾಡಿದಳೆಂಬ ಕಾರಣಕ್ಕೆ ಪಾಂಡವರ ಕಟ್ಟೆಗೆ ಬೆತ್ತಲೆಯಾಗಿ ಕಟ್ಟಿ ಥಳಿಸಬೇಕು ಎಂದು ತೀರ್ಮಾನವಾದಾಗ, ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಂಜೇಗೌಡನಿಗೆ ಆಹಾರವಾಗುತ್ತಾಳೆ. ಹಾಗೆಯೇ ಮಠದ ಮಾದಮ್ಮನು ತನ್ನ ಜೀವನವನ್ನು ನಡೆಸುವ ಸಲುವಾಗಿ ನಂಜೆಗೌಡನೊಂದಿಗಿರುವ ಅಂಶಗಳು ಅನೈತಿಕ ಸಂಬಂಧಗಳಿಗೆ ಅನಿವಾರ್ಯ ಕಾರಣವಾಗಿದೆ.

ಈ ಅನೈತಿಕ ಸಂಬಂಧಗಳು ಕೇವಲ ಅನಿವಾರ್ಯ ಮತ್ತು ಬಲಾತ್ಕಾರವಾಗಿಯಷ್ಟೇಯಲ್ಲ, ಇದರಿಂದ ಅನ್ಯರ ಮೇಲಾಗುವ ಪರಿಣಾಮವೂ ಅಷ್ಟೇ ಭೀಕರವಾಗಿ ಚಿತ್ರಿತಗೊಂಡಿದೆ. ಇದಕ್ಕೆ ಕಾದಂಬರಿಯಲ್ಲಿ ಬರುವ ಟಗರೂರನ ಪ್ರಸಂಗವನ್ನು ಉದಾಹರಿಸಬಹುದು. ಟಗರೂರ ಪರಿವಾರದೋರ ಎಂಕಿಯ ಮಗ ಹಲಗನ ಸಾವಿಗೆ ಕಾರಣನೆಂದು ಆ ಹುಡುಗುನ ಕ್ರಿಯಾದಿಗಳಿಗೆ ಮತ್ತು ಅವನ ತಾಯಿಗೆ ಪರಿಹಾರಾರ್ಥವಾಗಿ ಸಾವಿರ ರೂಪಾಯಿಯನ್ನು ಪಂಚಾಯಿತಿಯವರು ದಂಡ ಹಾಕುತ್ತಾರೆ. ಬಡವನಾದ ಟಗರೂರ ಆ ಹಣವನ್ನು ತೀರಿಸುವ ಸಲುವಾಗಿ ಲಗ್ನಕ್ಕೆ ಬಂದಿರುವ ಮಗಳು ಚೆಲುವಿನಯನ್ನು ನಾಮದಾರಿಗಳ ಉದ್ಧೂರಯ್ಯನ ಮನೆಯಲ್ಲಿ ಜೀತಕ್ಕಿರಿಸುತ್ತಾನೆ. ನಿಜಸ್ಥಿತಿಯೆಂದರೆ ಎಂಕಿಯ ಮಗಸತ್ತಿದ್ದು ಟಿಫಿನ್ ಕ್ಯಾರಿಯರ್‌ನ ವಿಷಯವಾಗಿ ಅಲ್ಲ. ಬದಲಿಗೆ ಯಂಕಿ ಮತ್ತು ಅಂಗಡಿ ಬಸುಲಿಂಗನ ಜೊತೆಗಿದ್ದ ಸಂದರ್ಭವನ್ನು ನೋಡಿದ್ದರಿಂದ, ತಾಯಿ ಕೊಡುತ್ತಿದ್ದ ಹಿಂಸೆಯನ್ನು ಸಹಿಸಲಾರದೆ ನೇಣು ಹಾಕಿಕೊಂಡು ಸತ್ತಿರುತ್ತಾನೆ. ಆದರೆ ಅಪರಾಧಿಯಲ್ಲದ ಟಗರೂರ ಕ್ಯಾರಿಯರನ್ನು ತೆಗೆದುಕೊಂಡ ಕಾರಣಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನು ದಂಡತೆತ್ತುದಲ್ಲದೆ.

ಅದನ್ನು ತೀರಿಸುವ ಸಲುವಾಗಿ ಮಗಳು ಚೆಲುವಿಯನ್ನು (ಲಕ್ಕನಿಗೆ ಮಾಡಿಕೊಳ್ಳಬೇಕೆಂದಿದ್ದ ಹೆಣ್ಣು) ಜೀತಕ್ಕಿಸಲಾಗುತ್ತದೆ.

ಹಾಗೆಯೇ ಮಕ್ಕಳಿಲ್ಲದ ಚಿಕ್ಕೀರಮ್ಮ ಬೆಟ್ಟಯ್ಯನೊಂದಿಗೆ ಹೊಂದಿದ್ದ ಸಂಬಂಧದ ಅಧಿಕಾರದಿಂದಾಗಿ ಅವಳು ಸಾಯುವ ಮೊದಲು ಎಷ್ಟು ಕೇಳಿದರೂ ತನ್ನ ಆಸ್ತಿಯ ಪತ್ರಕ್ಕೆ ಹೆಬ್ಬೆಟ್ಟು ಒತ್ತದೆ ಕೊನೆಯುಸಿರೆಳೆದುದರಿಂದ ಅವಳು ಸತ್ತ ಮೇಲೆ ಹೆಬ್ಬೆಟ್ಟಿನಿಂದ ಪತ್ರಕ್ಕೆ ಮಸಿ ಒತ್ತಿಸಿಕೊಂಡು ಆಸ್ತಿಯನ್ನು ತನ್ನದಾಗಿಸಿಕೊಳ್ಳುತ್ತಾನೆ. ಬೆಟ್ಟಯ್ಯ ಚಿಕ್ಕೀರಿಯ ದೇಹವನ್ನು ತನ್ನದಾಗಿಸಿಕೊಂಡಂತೆ ಆಸ್ತಿಯನ್ನು ತನ್ನದಾಗಿಸಿಕೊಳ್ಳುತ್ತಾನೆ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದು. ಇನ್ನೂ ಋತುಮತಿಯಾಗದಿರುವ ಸಾಂವತ್ರಿಯನ್ನು ಕೆಂಗಣಪ್ಪ ಬಲಾತ್ಕಾರಿಸುವುದು, ಪುಟ್ಟಾರಿಯ ಮಡದಿಯಾದ ಲೂಸಿ ಪಾದ್ರಿಯೊಂದಿಗಿನ ಸಂಬಂಧಗಳು ವ್ಯತಿರಿಕ್ತವಾದ ಸಂಬಂಧಗಳಿಗೆ ಉದಾಹರಣೆಗಳಾಗಿವೆ.

ಹೀಗೇ ಕಾದಂಬರಿಯುದ್ದಕ್ಕೂ ಕಾಮಸಂಬಂಧಿ ಪ್ರಕ್ರಿಯೆಗಳಿದ್ದಾಗ್ಯೂ ಕೂಡ. ಲಕ್ಕ ರುಕ್ಮಿಣಿಯರ ಸಂಬಂಧವೇ ಮಹಾಪಾಪವೆಂಬಂತೆ ಪರಿಗಣಿತವಾಗಿ ಲಕ್ಕನನ್ನು ಪಾಂಡವರ ಕಂಬಕ್ಕೆ ಕಟ್ಟಿ ಹೊಡೆದು ಊರಿನಿಂದ ಬಹಿಷ್ಕಾರಿಸಲಾಗುತ್ತದೆ. ಲಕ್ಕನ ವಿಷಯವಾಗಿ ನಡೆಯುವ ಪಂಚಾಯಿತಿಯ ತೀರ್ಮಾನದಿಂದ ಸಿಡುಕಿನಲ್ಲಿ ದ್ಯಾವಾಜಿ ಹೇಳುವ ಮಾತುಗಳು ಉಲ್ಲೇಖನೀಯವಾಗಿದೆ.

"ತೆಗಿ, ತೆಗಿ... ಇವುರದ್ಯಾವ ಸೀಮೆ ನ್ಯಾಯವ? ಇನ್ನೂ ರುತುವಾಗ್ದೆ ಇದ್ದ ನಮ್ಮ ಕುಂಡಿಮಾದಿ ಎಣ್ಣು ಸಾವಂತ್ರಿಯ ಇಂದ್ಕೆ ಆ ಕೆಂಗಣ್ಣಪ್ಪ ಮ್ಯಾಲೆ ಬಿದ್ದು ವೊಸುಕಾಡ್ದ ಇಚಾರ್ವ ನಿಮ್ಮ ಪಂಚಾತಿ ಮುಂದಿಡೀಂತ ಕೇಳಿದ್ಕೆ, ಇದೇ ನಂಜೇಗೌಡ. ಮೋಗಮ್ಮಿ 'ಇದ್ಯಾವ ದ್ವಡ್ಡ ಸಂಗ್ತೀಂತ ತಂದಿದ್ದೀಯೆ? ಗಂಡಸ್ಗೆ ಯಾವ ಕಟ್ಟು? ದನ ಒಂಟಿ ಸಿಕ್ದಾಗ, ಅದರ ಮ್ಯಾಲೆ ಅತ್ತುಬ್ಯಾಡಾಂತ ಹೋರ್ಯಾ ಅದಾರು ತಾನೆ ತಡೆಯಕ್ಕಾದಾತು? ಅಂದಿತ್ನಲ್ಲ! ಇವುರಿಗೊಂದು ನ್ಯಾಯ, ನಮಗೊಂದು ನ್ಯಾಯವ" (ಪು. ೨೫೭ ವೈಶಾಖ) ಎಂದು ಗೊಣಗುವಲ್ಲಿ ಲಕ್ಕನಿಗೆ ಆಗಿರುವ ಶಿಕ್ಷೆ ಲಿಂಗಸಂಬಂಧಿಯದಲ್ಲ ಜಾತಿಸಂಬಂಧಿಯದು ಎಂದೂ ರುಕ್ಮಿಣಿಗೆ ವಿಧಿಸಿರುವ ಶಿಕ್ಷೆ ಧರ್ಮ ಸಂಬಂಧಿಯದು ಎಂಬುದೂ ಸ್ಪಷ್ಟವಾಗುತ್ತದೆ.

ಬದುಕು ಕಾದಂಬರಿ ಸ್ತ್ರೀ ಕೇಂದ್ರಿತವಾದುದಾಗಿದೆ. ಮೇಲ್ವರ್ಗಗಳ ಹಿಂಸೆಗೆ, ಕ್ರೌರ್ಯಕ್ಕೆ ಶೋಷಣೆಗೆ ಬಲಿಯಾಗುವ ಹೆಣ್ಣುಗಳಂತೆ ಸಮಾಜದ ಅನಿಷ್ಠ ಪದ್ಧತಿಗಳನ್ನು ದಿಟ್ಟತನದಿಂದ ತಿರಸ್ಕರಿಸಿ ಅವುಗಳಿಗೆ ಪ್ರತಿಭಟಿಸುವ ಪಾತ್ರಗಳೂ ಇವೆ.

ಗುರುಲಿಂಗಪ್ಪ ಸಾಹುಕಾರನ ಮಗ ಲಿಂಗರಾಜ ಮತ್ತು ಜಮಾದಾರ ಮಲ್ಲಪ್ಪನ ಮಗಳು ಕಾಶಮ್ಮ ಒಬ್ಬರಿಗೊಬ್ಬರು ಪ್ರೀತಿಸಿದ್ದರೂ. ಹಳ್ಳಿಯ ವಾತಾವರಣದಲ್ಲಿ ಪ್ರತಿಭಟಿಸಲಾರದೆ ಅವರವರ ಮನೆಯವರ ಮೋಸ ಹಾಗೂ ಒತ್ತಾಯಕ್ಕೆ ಮಣಿದು ಬೇರೆ ಬೇರೆ ಕಡೆಗೆ ಲಗ್ನವಾಗುತ್ತಾರೆ. ಕೊನೆಗೆ ಗುರುಲಿಂಗಪ್ಪ ಸಾಹುಕಾರ ಸತ್ತ ಬಳಿಕ, ಮನೆಯ ಅಧಿಕಾರ ತನ್ನ ಕೈಗೆ ಬಂದಾಗ ಲಿಂಗರಾಜು, ಮದುವೆಯಾಗಿ ಗಂಡನ ಮನೆಯಲ್ಲಿದ್ದ ಕಾಶಮ್ಮನನ್ನು ಕರೆತಂದು ತೋಟದ ಮನೆಯಲ್ಲಿರಿಸುವುದು ಅವರಿಬ್ಬರ ವಿವಾಹೇತರ

ಸಂಬಂಧಕ್ಕೆ ಉದಾಹರಣೆಯಾದಂತೆ ಇಡೀ ಕಾದಂಬರಿಯ ತಿರುವಿಗೂ (ಜಮಾದಾರ ಮಲ್ಲಪ್ಪ ಮಲ್ಲವ್ವರ ಸಾವು, ಕಲ್ಯಾಣಿಯ ಜೈಲು, ಬೆಳ್ಳಿಯ ವನವಾಸ) ಮೂಲಕಾರಣವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯ ಭರಮಾನ ಮಗಳು ನೀಲವ್ವ ಜೋಗಣಿ ಆಗಲು ಒಲ್ಲೆಯೆಂದು ಹೇಳಿದರೂ ಆಕೆಯ ಮಾತನ್ನು ಯಾರೂ ಕೇಳದೆ ಒತ್ತಾಯದಿಂದ ಜೋಗಣಿ ಮಾಡುತ್ತಾರೆ. ಆದರೆ ಸಮಾಜವನ್ನು ಹೆದರಿಸಲಾಗದ ನೀಲವ್ವ ಬಾವಿಗೆ ಹಾರಿ ಸಾಯುವ ಮೂಲಕ ಜೋಗಣಿ ಬಿಡುವಂತಹ ಅಮಾನುಷ ಕೃತ್ಯವನ್ನು ಮೌನವಾಗಿ ಪ್ರತಿಭಟಿಸಿದರೆ, ಜೋಗಣಿ ಧಂದಾ ಬಿಟ್ಟು ತುಳಜವ್ವ ಹುಸೇನಪ್ಪನನ್ನು ಲಗ್ನ ಆಗಿ ತನ್ನ ಗಂಡ ಮತ್ತು ಕೂಸಿನೊಡನೆ ಊರಿಗೆ ಬಂದಾಗ ಊರ ಜನ ಎಲ್ಲಾ ಸೇರಿ ಪೂಜಾರೆಪ್ಪನ ಮೂಲಕ ಪಂಚಾಯಿತಿ ಮಾಡಿಸಿ ತುಳಜವ್ವನಿಗೂ ಆಕೆಯ ತಂದೆಗೂ ದಂಡ ವಿಧಿಸಿ ತುಳಜವ್ವ ಮತ್ತೆ ಜೋಗಣಿಯಾಗಿ ನಡೆಯಬೇಕು. ಇಲ್ಲದಿದ್ದರೆ ಬಹಿಷ್ಕಾರ ಹಾಕಬೇಕಾಗುವುದೆಂದು ತಿಳಿಸಿದಾಗ ಮೈಮನಗಳ ಮೇಲೆ ನಡೆಯುವ ದೌರ್ಜನಕ್ಕೆ ದಬ್ಬಾಳಿಕೆಗೆ ತಿರುಗಿಬಿದ್ದು ಪ್ರತಿಭಟಿಸಿ ಅಪ್ಪ ಅವ್ವನನ್ನು ಕರೆದುಕೊಂಡು ಗಂಡ ಮತ್ತು ಮಗುವಿನೊಂದಿಗೆ ಊರು ಬಿಟ್ಟು ಹೊರಟು ಹೋಗುವುದು ಅವಳ ಬಂಡಾಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಮಲ್ಲಪ್ಪ ಮತ್ತು ಕೊರವರ ಈರಿಯರ ನಡುವಿನ ಸಂಬಂಧ ಅವರಿಬ್ಬರೂ ಒಪ್ಪಿದುದೇ ಆದರೂ ವಿವಾಹೇತರ ಸಂಬಂಧಕ್ಕೆ ಕೊಡಬಹುದಾದ ಮತ್ತೊಂದು ಉದಾಹರಣೆಯಾಗಿದೆ. ಆದರೆ, ಎಲ್ಲ ಸ್ತ್ರೀಯರು ಬಯಸಿದ ಗಂಡಸಿರಿಗೆಲ್ಲ ಧಕ್ಕುವವರಲ್ಲ ಎಂಬುದಕ್ಕೆ ಇರಪಾಗಸಪ್ಪಗೌಡನ ಪರವಾಗಿ ಕುಂಟಲುತನ ಮಾಡಲು ಬಂದ ಮುರಗವ್ವ ಜೋಗಣಿಗೆ ಬೆಳ್ಳಿ ಆಡಿದ ಮಾತುಗಳು ಮೆಟ್ಟಿನಲ್ಲಿ ಹೊಡೆದಂತೆ ಇದೆ. ಬೆಳ್ಳಿ ಕಚ್ಚೆ ಹರಕ ಹೆಂಗಸಲ್ಲ. ಗಂಡ ಹದಿನಾಲ್ಕು ವರ್ಷ ಜೈಲಿನಲ್ಲಿದ್ದಾಗಲೂ ಯಾರಿಗೂ ಅಂಜದೆ, ಅಳುಕದೆ, ತನ್ನನ್ನು ಬಯಸಿ ಬಂದ ಕಾಮುಕ ಗಂಡಸರನ್ನು ಧಿಕ್ಕರಿಸಿ ಅವರೆದುರಿಗೆ ಗಂಡು ಕಚ್ಚೆ ಹಾಕಿಕೊಂಡು ಎದೆಗಾರ್ತಿಯಾಗಿ ಗರತಿಯಾಗಿ ಬಾಳುವೆ ಮಾಡುತ್ತಾಳೆ. ತಾವು ಬಯಸಿದಾಗ ಸ್ತ್ರೀಯರು, ಅದರಲ್ಲೂ ಕೆಳವರ್ಗದ ಹೆಂಗಸರು ಧಕ್ಕುತ್ತಾರೆಂಬ ಗಂಡಸರ ಅದರಲ್ಲೂ ಮೇಲ್ವರ್ಗದ ಗಂಡಸರ ನಂಬಿಕೆ ಬೆಳ್ಳಿಯ ವಿಷಯದಲ್ಲಿ ಸುಳ್ಳಾಗುತ್ತದೆ. ಕುಡಿದು ಮನೆಗೆ ಬಂದ ಮುಕ್ಕಾ ಹೆಂಡತಿ ಕಲ್ಲವ್ವ ತುಂಬಿದ ಬಸುರಿ ಯಾಗಿದ್ದರೂ ಅನಾಗರಿಕವಾಗಿ ವರ್ತಿಸುವ ಅವನ ಕಾಮುಕತನಕ್ಕೆ ಬಲಿಯಾಗುತ್ತಾಳೆ ಎಂಬುದು ಸ್ವಜಾತಿ ಯಲ್ಲಿಯೇ ಹೆಣ್ಣಿನ ಮೇಲೆ ನಡೆಯುವ ಕ್ರೌರ್ಯಕ್ಕೆ ಅಮಾನುಷತೆಗೆ ಉದಾಹರಣೆಯಾಗಿದೆ. ಹೀಗೆ ಕಾದಂಬರಿಯುದ್ದಕ್ಕೂ ಸ್ತ್ರೀಯರ ಮೈಮನಗಳ ಮೇಲೆ ನಡೆಯುವ ದೌರ್ಜನ್ಯಗಳು ಪ್ರತಿಭಟನೆಗಳು ನಿರೂಪಿತವಾಗಿವೆ.

೩.೨.೪ ಗ್ರಾಮೀಣ ನ್ಯಾಯ ವ್ಯವಸ್ಥೆ

ಕಾದಂಬರಿಗಳಲ್ಲಿ ಮೂಡಿ ಬಂದಿರುವ ಗ್ರಾಮೀಣ ನ್ಯಾಯ ವ್ಯವಸ್ಥೆಯನ್ನು ಕುರಿತು ಈ ಭಾಗದಲ್ಲಿ ಚರ್ಚಿಸಲಾಗಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪಂಚಾಯಿತಿಯವರ ನ್ಯಾಯ ತೀರ್ಮಾನ ಯಾವಾಗಲೂ

ಇದ್ದವರ, ಶ್ರೀಮಂತರು, ಮೇಲ್ವರ್ಗದವರು, ಗಂಡಸರು, ಅಧಿಕಾರಿಗಳ ಕಡೆಗೆ ಆಗುವುದೆಂಬುದನ್ನು ನಿದರ್ಶಿಸುವ ಅಂಶಗಳು ಸಾದೃಶ್ಯಾಂಶಗಳಾದರೆ, ಪಂಚರು ನೀಡಿದ ನ್ಯಾಯ ತೀರ್ಮಾನವನ್ನೆ ಪ್ರಶ್ನಿಸಿ, ಅವರ ನ್ಯಾಯವನ್ನು ತಿರಸ್ಕರಿಸಿ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವ ಅಂಶಗಳನ್ನು ವೈದೃಂಶ್ಯಾಂಶಗಳಲ್ಲಿ ಚರ್ಚಿಸಲಾಗಿದೆ. ಹೀಗೆ ಕಾದಂಬರಿಯಲ್ಲಿನ ಸಾದೃಶ್ಯ ಮತ್ತು ವೈದೃಶ್ಯಾಂಗಳನ್ನು ಈ ಭಾಗದಲ್ಲಿ ವಿಶ್ಲೇಷಿಸ ಲಾಗಿದ್ದು ಅವು ಹೀಗಿವೆ;

'ಗ್ರಾಮ' ಎಂದೊಡನೆ ಅದರ ಒಂದು ಪ್ರಮುಖ ಅಂಗವೇ ಆದ 'ಪಂಚಾಯಿತಿ'ಯನ್ನು ಮರೆಯು ವಂತಿಲ್ಲ. ಸಮಾಜದಲ್ಲಿರುವ ವ್ಯಕ್ತಿಗಳನ್ನು ಅಂಕೆಯಲ್ಲಿಟ್ಟುಕೊಳ್ಳಲು ಬಯಸುವ ಸಂಸ್ಥೆಗಳಲ್ಲಿ ಧರ್ಮದಂತೆ ನ್ಯಾಯವ್ಯವಸ್ಥೆಯೂ ಪ್ರಮುಖವಾದುದು ಹಾಗೂ ಶಕ್ತಿಯುತವಾದುದು. ದಲಿತರ ಅಥವಾ ಕೆಳವರ್ಗದವರ ಮೇಲಿನ ಹಿಂಸೆ, ಹಲ್ಲೆಯಲ್ಲಿ ಈ ಸಂಸ್ಥೆಯಷ್ಟು ವಿನಾಶಕಾರೀ ಪಾತ್ರವನ್ನು ಇನ್ನಾವುದೂ ವಹಿಸಿಲ್ಲ. ಏಕಕಾಲಕ್ಕೆ ಪೋಲಿಸ್‌ಠಾಣೆ, ಕೋರ್ಟು ಎಲ್ಲವೂ ಆಗಿ ಬಿಡುವ ಪಂಚಾಯತಿ ಎಂಬ ಸಂಸ್ಥೆ ಆಧುನಿಕ ಜನತಂತ್ರದ ಸಮಾಜವಾದದ ಯಾವ ಮೌಲ್ಯಗಳನ್ನು ಒಪ್ಪುವುದಿಲ್ಲ. ಬದಲಿಗೆ ಜಾತಿ ಮತ್ತು ಲಿಂಗಾಧಾರಿತ ಶ್ರೇಣೀಕೃತ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವಲ್ಲಿ ಪೂರಕವಾಗಿ ಕೆಲಸ ಮಾಡುತ್ತದೆ.

ಆಯ್ದ ಕಾದಂಬರಿಗಳಲ್ಲಿ ಗ್ರಾಮೀಣ ನ್ಯಾಯವ್ಯವಸ್ಥೆಯ ಚಿತ್ರ ಮೂಡಿಬಂದಿರುವ ಬಗೆಯನ್ನು ಸ್ಥೂಲವಾಗಿ ಎರಡು ರೀತಿಯಲ್ಲಿ ನೋಡಬಹುದು. ಒಂದು ಗ್ರಾಮೀಣ ನ್ಯಾಯ ವ್ಯವಸ್ಥೆಯ ಮುಂದುವರಿಕೆಯ ಚಿತ್ರವಿರುವ ಕಾದಂಬರಿಗಳು. ಉದಾ: ವೈಶಾಖ, ಗ್ರಾಮಾಯಣ ಇನ್ನೊಂದು ಗ್ರಾಮೀಣ ನ್ಯಾಯವ್ಯವಸ್ಥೆಯ ಶಿಥಿಲತೆಯನ್ನು ಸೂಚಿಸುವ ಕಾದಂಬರಿಗಳು, ಉದಾ: ಕುಸುಮಬಾಲೆ, ಬದುಕು.

ಗ್ರಾಮಪಂಚಾಯತಿಯ ಮುಖ್ಯಸ್ಥರು ಎಂದರೆ ಸಾಮಾನ್ಯವಾಗಿ ಆ ಗ್ರಾಮದ ಗೌಡ, ಶ್ಯಾನುಭೋಗ, ಪಟೇಲ ಮತ್ತು ಆರ್ಥಿಕವಾಗಿ ಬಲಿಷ್ಟವಾದವರು ಹಾಗೂ ಜಾತಿಯಿಂದ ಶ್ರೇಷ್ಠರಾದವರೇ ಆಗಿರುತ್ತಿದ್ದರು. ಕೆಲವೊಮ್ಮೆ ಒಬ್ಬರೇ ಪಂಚಾಯಿತಿಯ ಮುಖಂಡರಾಗಿರಬಹುದು ಅಥವಾ ಇಬ್ಬರೋ, ಮೂವರೋ ಸಮಾನ ಸ್ಥಾನಮಾನವನ್ನು ಹೊಂದಿದವರು ಪಂಚಾಯಿತಿ ನ್ಯಾಯ ತೀರ್ಮಾನದಲ್ಲಿ ಭಾಗವಹಿಸಬಹುದು. ಹೀಗೆ ಪಂಚಾಯಿತಿಯ ಮುಖಂಡತ್ವ ಯಾರದೇ ಇರಲಿ. ಅಲ್ಲಿ ದೊರೆಯುವ ನ್ಯಾಯ ಸ್ವರೂಪವೇನು ಎಂಬುದು 'ವೈಶಾಖ' ಕಾದಂಬರಿಯಲ್ಲಿ ಸೂಚಿತವಾಗಿದೆ. "ಪಂಚಾಯತಿಯೋರು ಮಾಡೋ ನ್ಯಾಯದ ದಾಳ ಉಳ್ಳೋದು ಕೊನೀಕೆ ಉತ್ತಮರ ಕಡೀಕೆಯ" (ಪು.೧ ವೈಶಾಖ) ಎಂಬ ಕಾದಂಬರಿಯ ಆರಂಭದ ಮಾತೇ ಕೊನೆಯವರೆಗೂ ಸಾಕ್ಷಾತ್ಕಾರಗೊಳ್ಳುತ್ತಾ ಹೋಗುತ್ತದೆ. ಟಗರೂರನಿಗೆ ಸಂಬಂಧಿಸಿದ ನ್ಯಾಯ ತೀರ್ಮಾನ ಅದಕ್ಕೊಂದು ನಿದರ್ಶನ ಟಗರೂರ ಎಂಕಿಯ ಮಗ ಹಲಗನ ಟಿಫಿನ್ ಕ್ಯಾರಿಯರ್ ಕದಿಯುತ್ತಾನೆ. ಇದೇ ಕಾರಣಕ್ಕೆ ಹಲಗ ಆತ್ಮಹತ್ಯೆ ಮಾಡಿಕೊಂಡ ಎಂದು ಊರುವರು ನಂಬುತ್ತಾರೆ. ಹೀಗಾಗಿ ಟಗರೂರನಿಗೆ ಒಂದು ಸಾವಿರ ರೂಪಾಯಿಯ ದಂಡವನ್ನು ಪಂಚಾಯತಿಯವರು ಶಿಕ್ಷೆಯಾಗಿ ವಿಧಿಸುತ್ತಾರೆ. ಮತ್ತೊಬ್ಬರ ಮನೆಯಲ್ಲಿ ಜೀತಕ್ಕಿದ್ದು ಹೊಟ್ಟೆ ಹೊರೆಯುವ ಟಗರೂರ ಒಂದು ಸಾವಿರದಷ್ಟು

ಹಣವನ್ನು ತರುವುದಾದರೂ ಎಲ್ಲಿಂದ ಎಂದರೆ ಅದಕ್ಕೂ ಪಂಚಾಯತಿಯವರಲ್ಲಿ ಸಿದ್ಧಗೊಂಡ ಪರಿಹಾರವಿದೆ. "ಯೆಲ್ಲಿಂದ ತರಾನೆ ಯಲ್ಲಿಂದ ತರಾನೆ ಅಂತಾನೇ ಸತಾಯಿಸ್ತ ಕುಂತಿದ್ರೆ ಈ ನ್ಯಾಯ ಸವೆಯಕ್ಕಿಲ್ಲ. ಯಾರ ಅಟ್ಟೀಲಾದ್ರೂ ಜೀತಕಿರ್ರೀನಿ ಅಂತ ಈಸುಂಗಬಂದು ಹಣ ಕಟ್ಟಬೇಕು ಕನ್ನ" (ಪು.೧೮೧ ವೈಶಾಖ) ಎಂದು ಸೂಚಿಸುತ್ತಾರಾದರೂ, ವಯಸ್ಸಾದ ಟಗರೂರನನ್ನು ಜೀತಕ್ಕಿರಿಸಿಕೊಳ್ಳಲು ಯಾರೂ ಮುಂದಾಗದಾಗ ಮದುವೆಯ ವಯಸ್ಸಿಗೆ ಬಂದ ಮಗಳು ಚೆಲುವಿಯನ್ನು ಜೀತಕ್ಕಿರಿಸುವ ಮೂಲಕ ಪಂಚಾಯತಿಯವರ ದಂಡದ ಹಣವನ್ನು ಕಟ್ಟಬೇಕಾಗುತ್ತದೆ. ಪಂಚಾಯತಿಯವರ ಕ್ರೌರ್ಯ ಇಲ್ಲಿಗೆ ನಿಲ್ಲುವುದಿಲ್ಲ. ದಂಡದ ಹಣ ನೊಂದ ಎಂಕಿಗೆ ಎಂದಿದ್ದ ಪಂಚಾಯಿತಿಯವರು. ಎಂಕಿಗೆ ನೀಡಿದ್ದು ಬರಿ ನೂರು ರೂಪಾಯಿ ಮಾತ್ರ ಉಳಿದ ಒಂಬೈನೂರು ರೂಪಾಯಿ ಮಾದೇಶ್ವರನ ಗುಡಿ ರಿಪೇರಿಗೆ ಸಂದಾಯವಾಗುತ್ತದೆ. ಎಂದರೆ ದಂಡದ ಹಣವನ್ನು ದೇವರ ಹೆಸರಿನಲ್ಲಿ ಪಂಚಾಯಿತಿಯವರೇ ಸ್ವಾಹ ಮಾಡುತ್ತಾರೆ. ಈ ನ್ಯಾಯ ತೀರ್ಮಾನದಲ್ಲಿ ಎಂಕಿ ಮತ್ತು ಟಗರೂರ ಏಕಕಾಲಕ್ಕೆ ಶೋಷಿತರಾಗುತ್ತಾರೆ. ಹಲಗ ಸತ್ತಿರುವ ನಿಜಕಾರಣ ಗೊತ್ತಾದ ಮೇಲೂ ಲಕ್ಕ ಏನೂ ಮಾಡಲಾಗದ ಅಸಹಾಯಕನಾಗುತ್ತಾನೆ.

ಆದರೆ ಇದಕ್ಕೆ ತದ್ವಿರುದ್ಧವಾದ ನ್ಯಾಯ ತೀರ್ಮಾನವನ್ನು ನಿಂಗನ ಹಿರಿಯ ಮಗ ಗೆಜ್ಜುಗನ ವಿಷಯದಲ್ಲಿ ನೋಡಬಹುದು. ಗೆಜ್ಜುಗನ ಮದುವೆಗೆಂದು ಕೆಂಗಣ್ಣಪ್ಪನ ಹತ್ತಿರ ಆರುನೂರು ರೂಪಾಯಿ ಸಾಲ ಮಾಡುತ್ತಾರೆ. ಇದನ್ನೆ ನೆಪ ಮಾಡಿಕೊಂಡ ಕೆಂಗಣ್ಣಪ್ಪ ತನ್ನ ಬಂಧುಗಳ ಮದುವೆಗೆ ಹೋಗುವಾಗ ಜೊತೆಯಾಗಿ (ಕಾವಲಿಗಾಗಿ) ಗೆಜ್ಜುಗನನ್ನೂ ತಲಕಾಡಿಗೆ ಕರೆದೊಯ್ಯುತ್ತಾನೆ. ಕೆಂಗಣ್ಣಪ್ಪನೊಂದಿಗೆ ಮದುವೆಗೆ ಹೋದ ಗೆಜ್ಜುಗ ನದಿಯಲ್ಲಿ ಈಜಲು ಹೋಗಿ ಅಪಮೃತ್ಯವನ್ನು ಹೊಂದುತ್ತಾನೆ. ಗೆಜ್ಜುಗನ ಸಾವಿಗೆ ಪರೋಕ್ಷವಾಗಿ ಕೆಂಗಣ್ಣಪ್ಪನೇ ಕಾರಣನಾದರೂ ಸಾವಿಗೆ ಪರಿಹಾರವನ್ನು ಕೊಡದೆ, ನಿಂಗನಿಗೆ ಕೊಟ್ಟ ಸಾಲವನ್ನು ಮರಳಿ ಪಡೆಯುವ ಸಲುವಾಗಿ ಅವನನ್ನೇ ತಮ್ಮ ಮನೆಯಲ್ಲಿ ಜೀತಕ್ಕಿರಿಸಕೊಳ್ಳುತ್ತಾನೆ ಎಂಬ ಅಂಶ ಉಳ್ಳವರ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ.

ಇದೇ ಕಾದಂಬರಿಯಲ್ಲಿ ಬರುವ ಎರಡನೆಯ ತೀರ್ಮಾನ ಲಕ್ಕನಿಗೆ ಸಂಬಂಧಿಸಿದ್ದು. ರುಕ್ಮಿಣಿಯ ಪ್ರಸಂಗದಲ್ಲಿ ಲಕ್ಕ ತಾನೇ ತಪ್ಪು ಮಾಡಿರುವುದಾಗಿ ಒಪ್ಪಿಕೊಂಡಾಗ ಪಂಚಾಯಿತಿ ಮುಖಂಡರು ಏಕಮುಖದ ವಿಚಾರಣೆಯಿಂದಲೇ ತೀರ್ಪು ನಿಡುತ್ತಾರೆ. ಅಂದರೆ ಅಪರಾಧಿಗಳಾದ ಲಕ್ಕ ಮತ್ತು ರುಕ್ಮಿಣಿ ಇಬ್ಬರಲ್ಲಿ ಲಕ್ಕ ಮಾತ್ರ ಹಾಜರಿರುತ್ತಾನೆ. ಪಂಚಾಯಿತಿಯ ತೀರ್ಪಿನ ಪ್ರಕಾರ ಲಕ್ಕನನ್ನು ಪಾಂಡವರ ಕಂಭಕ್ಕೆ ಕಟ್ಟಿ ಛಟಿ ಏಟಿನಿಂದ ಹೊಡೆಯುವ ಶಿಕ್ಷೆ ಹಾಗೂ ಅನಂತರ ಗಡಿಪಾರಿನ ತೀರ್ಮಾನವಾಗುತ್ತದೆ. ಪಂಚಾಯತಿಯ ಈ ತೀರ್ಮಾನ ಅಮಾನುಷವಾದುದು ಹಾಗೂ ಉಳ್ಳವರ ಪರವಾದುದು ಎಂಬುದನ್ನು ದ್ಯಾವಜಿಯ ಮಾತು ಸ್ಪಷ್ಟಪಡಿಸುತ್ತದೆ. "ತೆಗಿ, ತೆಗಿ, ಇವ್ರರದ್ಯಾವ ಸೀಮೆ ನ್ಯಾಯವ? ಸಾಂವತ್ರಿಯ ಇಂದ್ಕೆ ಈ ಕೆಂಗಣ್ಣಪ್ಪ ಮ್ಯಾಲೆ ಬಿದ್ದು ವೊಸಿಕಾಡ್ದ ಇಚಾರ್ವ ನಿಮ್ಮ ಪಂಚಾತಿ ಮುಂದಿಡೀಂತ ಕೇಳಿದ್ಕೆ. ಇದೇ ನಂಜೆಗೌಡ "ವೋಗಮ್ಮಿ, ಇದ್ಯಾವ ದ್ವಡ್ಡ ಸಂಗ್ತೀಂತ ತಂದಿದ್ದೀಯೆ?.... ಗಂಡಸ್ಗೆ ಯಾವ ಕಟ್ಟು, ದನ

ಒಂಟಿ ಸಿಕ್ಕಾಗ, ಅದರ ಮ್ಯಾಲೆ ಅತ್ತುಬ್ಯಾಡಾಂತ ಹೋರ್‍ಯ ಅದ್ಯಾರು ತಾನೆ ತಡಯಕ್ಕಾದಾತು? ಅಂದಿತ್ನಲ್ಲ!" ಇವುರಿಗೊಂದು ನ್ಯಾಯ ನಮಗೊಂದು ನ್ಯಾಯವ ಎಂದು ಗೊಣಗುತ್ತಾಳೆ. (ಪು. ೨೫೭)

ಈ ರೀತಿಯ ಪ್ರತಿಕ್ರಿಯೆ ಕೇವಲ ಒಬ್ಬರೆ ಗೊಣಗುವಿಕೆಯ ರೂಪವೇ ಹೊರತು ಸಾಮೂಹಿಕವಾದ ಪ್ರತಿಭಟನೆಯ ಸ್ವರೂಪದಲ್ಲ. ತಪ್ಪು ಯಾರದೇ ಇರಲಿ. ಆದರೆ ಶಿಕ್ಷೆ ಮಾತ್ರ ಯಾವಾಗಲೂ ಕೆಳವರ್ಗದವರಿಗೆ ಎಂಬಂತ ತೀರ್ಮಾನಗಳಾಗಿರುವುದನ್ನು ಈ ಕಾದಂಬರಿಯಲ್ಲಿ ನೋಡಬಹುದು.

ಗ್ರಾಮಾಯಣ ಕಾದಂಬರಿಯಲ್ಲಿ ಕೊಡಬಹುದಾದ ಉದಾಹರಣೆ ಚಿಮಣಾಳ ಬಲಾತ್ಕಾರ ಮತ್ತು ನಾನಾನ ಸಾವು. ಚಿಮಣಾಗೆ ಮುಟ್ಟು ನಿಂತದ್ದು ತಿಳಿದು ನಾನಾ ಸಾಯುತ್ತಾನೆ. ಆದರೂ ಇದು ಸಹಜ ಸಾವಲ್ಲ ದುರ್ಮರಣ. ನಾನಾನಿಗೆ ವಿಷಪ್ರಯೋಗವಾಗಿರಬೇಕೆಂದು ಶಂಕರಪ್ಪಗೌಡರು ಆರೋಪಿಸಿದಾಗ ಬಾಪು ಸಾಹೇಬ ತಪ್ಪು ಒಪ್ಪಿ ದಂಡ ಕೊಡಲು ಒಪ್ಪುವುದಿಲ್ಲ. "ತಪ್ಪು ಮಾಡಿದ್ದರ ನೀವು ಹೇಳಿದಕ್ಕ ಕಬೂಲ ಮಾಡ್ತಿದ್ದೆ ಕುಲಕರ್ಣ್ಯಾರ. ನಾನಾಮಾಮಾ ಸತ್ತದ್ದು ಧಡೇದ ಬ್ಯಾನಿ ಬಂದು. ನಾನ್ಯಾ ಅವನ ಖೂನಿ ಮಾಡಿದ್ಹಾಂಗ ನೀವೆಲ್ಲ ನನ್ನ ಮ್ಯಾಲೆ ಮುರಕೊಂಡು ಬಿದ್ದರ ನಾ ಏನ ಹೇಳಬೇಕು" (ಪು. ೨೪ ಗ್ರಾಮಾಯಣ) ಎಂದು ಹಠ ಹಿಡಿಯುತ್ತಾನೆ. ಚಿಮಣಾ ಬರೆದುಕೊಟ್ಟ ಪತ್ರದಿಂದ ಗೌಡರು ಪಂಚನಾಮೆ ಮಾಡುವುದಾಗಿ ಹೆದರಿಸಿದಾಗ ಬಾಪುಸಾಹೇಬ ಆಚಾರೆಪ್ಪನ ಕಾಲಿಗೆ ಬಿದ್ದು "ಆಚಾರಸ್ವಾಮಿ ನನ್ನ ಮಾನ ಕಳೀಬ್ಯಾಡ್ರಿ ಈ ಪ್ರಕರಣ ಇಲ್ಲಿಗೆ ಮುಗಿಯೂ ಹಾಂಗ ಮಾಡ್ರಿ. ನೀವು ಹೇಳಿದ ದಂಡ ಕೊಡಲಿಕ್ಕೆ ನಾ ತಯಾರಿದ್ದೇನೆ" ಎಂದು ಹೇಳಿದ ಮೇಲೆ ಬಾಪುಸಾಹೇಬನಿಗೆ ೧೫೦೦.೦೦ ರೂ.ಗಳ ದಂಡ ಹಾಕುತ್ತಾರೆ. ಬಾಪು ಕೊಟ್ಟ ದಂಡದ ಹಣವನ್ನು ತೆಗೆದುಕೊಂಡು ಈ ಪ್ರಕರಣವನ್ನು ಮುಗಿಸುತ್ತಾರೆ. ಇಲ್ಲಿ ಗಮನಿಸ ಬಹುದಾದ ಅಂಶವೆಂದರೆ ಹಣ, ಅಧಿಕಾರ ಉಳ್ಳವರು ಎಂತಹ ಪ್ರಕರಣದಿಂದಲಾದರೂ ಪಾರಾಗುತ್ತಾರೆ ಎಂಬುದನ್ನು ಈ ಪ್ರಕರಣ ಸ್ಪಷ್ಟಪಡಿಸುತ್ತದೆ.

ಗ್ರಾಮೀಣ ನ್ಯಾಯವ್ಯವಸ್ಥೆಯ ಶಿಥಿಲವಾಗುತ್ತಿರುವ ಅಂಶವನ್ನು ಕುಸುಮಬಾಲೆಯ ಗಾರಸಿದ್ಮಾವನ ಕುರಿತು ನಡೆವ ನ್ಯಾಯ ಪಂಚಾಯತಿಯಲ್ಲಿ ಗುರುತಿಸಬಹುದು. ಸವರ್ಣೀಯರೊಬ್ಬರ ತೋಟದ ಹದಿನಾರು ಎಳನೀರು ಕಿತ್ತನೆಂಬ ಕಾರಣಕ್ಕೆ ಗಾರಸಿದ್ಧಮಾವನನ್ನು ಕಟ್ಟಿ ಹಾಕಿ ಸವರ್ಣೀಯರು ಆತನಿಗೆ ಹೊಡೆಯು ತ್ತಿರುತ್ತಾರೆ. ದಲಿತ ಮುಖಂಡ ನಾಗರಾಜು ಬರುವಷ್ಟರಲ್ಲಿ ಸವರ್ಣೀಯರ ಗುಂಪು ಹೊಡೆತದ ಎರಡನೆ ರೌಂಡು ಮುಗಿಸಿ ಮೂರನೆಯದಕ್ಕೆ ರೋಷವನ್ನು ಮೈದುಂಬಿಸಿಕೊಳ್ತಾ ಇರುತ್ತದೆ. ಇಲ್ಲಿ ಹೊಡೆಯು ವವರಿಗಿಂತ ಹೊಡೆಸಿಕೊಳ್ಳುವವ ಬಲಿಷ್ಠನಾಗಿ ಕಾಣಿಸುತ್ತಾನೆ. "ಆ ಕಟ್ಟಾಕಿಸಿಕೊಂಡ ಅವನ ದೇಹವು ಹೊಡೆದವರ ಕಯ್ಗಳನ್ನು ನೋಯುಸ್ತ ಹಾಗಾಗಿ ನೊಂದ ಕಯ್ಗಳಿಗೆ ವಿಶ್ರಾಂತಿ ಕೊಡಲೋಸುಗ ಪ್ರತಿ ಹೊಡ್ತದ ರೌಂಡ್‌ನ ನಡುವೂ ಡೈಲಾಗ್ ನಡೆಯುತ್ತಿತ್ತು ಎಂಬ ನಿರೂಪಣೆ ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಗಾರಸಿದ್ಮಾವನಿಂದ ತಪ್ಪು ಒಪ್ಪಿಸಿ ದಂಡ ವಿಧಿಸುವ ಮೂಲಕ ತಮ್ಮ ಅಧಿಕಾರ ಚಲಾಯಿಸುವ ಬಯಕೆ ಸವರ್ಣೀಯರದು ಈ ಸಂದರ್ಭದ ಮಾತುಗಳು ಹೀಗಿವೆ.

“ತಪ್ಪು ಮಡ್ಗಕ ನಾ ತಪ್ಪು ಮಾಡಿರದಾರುವಿ ಯಾನ್ನಪ್ಪ?”

“ಪುನಃ ಅದ್ನೆ ಅಂದನು? ಆಗಾರ ನಿಮ್ಮಪ್ಪನ ತೋಟ್ದಲ್ಲುಡ ನೀನು ಎಳ್ನೀರ ಕಿತ್ತಿರದು ಆಗಾರ?”

“ಕುಡಿಯಾಕ ಅಂತ ಎಳ್ನೀರ ಕಿತ್ಗಂಡ್ರೂ ತಪ್ಪಪ್ಪ ಅದೂವಿ?”

“ಅಡಡೆ ಇದುಕುಡ ಮಾತು! ಕುಡಿಯಾಕ? ಯಾನುಡ ಯಾನುಡಾ? ಅದೂ ಕುಡಿಯಾಕ! ಒಂದು ಕಿತ್ಗಯ್ಯ. ಸಾಲ್ನಿಲ್ಲ ಇನ್ನೂ ಒಂದು ಕಯ್ಯ ಅಮ್ಮಮ್ಮಾ ಅಂದ್ರ ಇನ್ನೂ ಒಂದು ಕಯ್ಯ. ನಿಮ್ಮೌನ ಜಾತಿನ ಕಯ್ಯ ಹದಿನಾರ ಕಿತ್ತಿರುಡ ಕುಡಿಯಾಕ? ಅದೂ ಹದ್ನಾರ?”

“ಎಲ್ಲನುವಿ ನಿಮ್ಮೆದ್ರುಗ ಕುಡುದ್ರ ಒಪ್ಪಗಂಡರ್‍ಯಪ್ಪ ಅಗ್ಲಾರುವಿ” (ಪು.೧೪೩ ಕುಸುಮಬಾಲೆ) ಇಲ್ಲಿ ತಪ್ಪಿತಸ್ಥ ಭಾವನೆ ಗಾರಸಿದ್ದಮಾವನಿಗಿಲ್ಲ. ಆತ ತನ್ನ ಕೃತಿಯನ್ನು ಸಮರ್ಥಿಸಿಕೊಳ್ಳುತ್ತಿದ್ದಾನೆ. ಅಷ್ಟೇ ಅಲ್ಲ ಈ ಹದಿನಾರು ಎಳೆನೀರನ್ನೂ ಈಗ ಕುಡಿದು ತೋರಿಸುವ ಸವಾಲು ಹಾಕಿದೊಡನೆ. ತೋಟದವನು ತಬ್ಬಿಬ್ಬಾಗುತ್ತಾನೆ. ಈಗೇನಾದರೂ ಇವನೊಂದಿಗೆ ಜೂಜಿಗೆ ಬಿದ್ದರೆ ಇರುವ ಎಳೆನೀರನ್ನೂ ಕಳೆದುಕೊಳ್ಳ ಬೇಕಾಗುವದೆಂದು ತಿಳಿದು ತನಗಿಲ್ಲದ ರೋಷವನ್ನು ಕೃತಕವಾಗಿ ಹೊರಗಿನಿಂದ ಮೈದುಂಬಿಸಿಕೊಂಡು ಗಾರಸಿದ್ಮಾವನನ್ನು ಅಂಕಿತದಲ್ಲಿಟ್ಟುಕೊಳ್ಳಲು ವ್ಯರ್ಥ ಪ್ರಯತ್ನ ನಡೆಸುತ್ತಿರುತ್ತಾನೆ.

ಅಷ್ಟರಲ್ಲಿ ಅಲ್ಲಿಗೆ ಬಂದ ನಾಗರಾಜುವನ್ನು ಕಂಡ ಸವರ್ಣೀಯರು ತಮ್ಮ ಅಹವಾಲನ್ನು ಅವನ ಮುಂದಿಡುತ್ತಾರೆ. ಹಾಗೂ ಆತನಿಗೆ ನ್ಯಾಯ ತೀರ್ಮಾನದ ಜವಾಬ್ದಾರಿಯನ್ನು ನೀಡುತ್ತಾರೆ. ಎಂದರೆ ಯಾವುದು ಒಂದು ಕಾಲದಲ್ಲಿ ಊಹಿಸಲೂ ಅಸಾಧ್ಯವಾಗಿತ್ತೋ ಅಂಥ ಪರಿವರ್ತನೆ ಇಲ್ಲಿ ಕಂಡು ಬರುತ್ತದೆ. ಇದಕ್ಕೆ ನಾಗರಾಜ ಶಿಕ್ಷಿತ, ಅಧ್ಯಾಪಕ ಎಂಬುದು ಒಂದು ಕಾರಣವಾದರೆ ದಲಿತರ ಮೇಲಿನ ಸಾಂಪ್ರದಾಯಿಕ ಹಿಡಿತ ಕೈತಪ್ಪಿದ ಸ್ಥಿತಿ ಇನ್ನೊಂದು ಕಾರಣವಾಗಿದೆ. ನಾಗರಾಜ ಮೇಷ್ಟ್ರನನ್ನು ಕಂಡ ಸವರ್ಣೀಯರು,

“ಅಲ್ಲಕಯ್ಯ ಮೇಸ್ಟ್ರ ಒಂದ್ ಕೂದ್ಲ ಎಳ ಅಸ್ಟು ನಮ್‌ಕಡ
ತಪ್ಪಿದ್ರು, ಅದ ಒಪ್ಕತ್ತಿವಿಕಯ್ಯ ನಾವು. ಇವ ಈ ಗಾರಸಿದ್ದ ಅವ್ನಲ್ಲಾ,
ಅವ ಕಿತ್ತಿರ ಎಳ್ನೀರು ನೋಡುದ್ರ ಹದ್ನಾರು. ಹದ್ನಾರು
ಕಯ್ಯ! ಅದ್ಕ ತಪ್‌ಕೊಡ್ಡ ಅಂದ್ರಾ... ಅದ್ನಿಗ ಕುಡಿಯಾಕ ಕಿತ್ತಿ ಅಂತಾನಲ್ಲಾ?....!
ಯಾವ ಲಾಯರ್ ತಾನೀಯ ಒಪ್ಪೀನು ಇದ? (ಪು.೧೪೫)

ಎಂಬಲ್ಲಿ ಸ್ವಸಮರ್ಥನೆಯ ಧಾಟಿ ಇದೆ. “ಏನ್ರೀ ಸ್ವಾಮೀ ಇಷ್ಟಕ್ಕೂ ಕಂಬಕ್ಕಟ್ಟಿ ಹೊಡ್ದಿದ್ದೀರೆಲ್ಲಾ ನಿಮ್ದೂ ತಪ್ಪಲ್ವ?” ಎಂಬ ನಾಗರಾಜುವಿನ ಪ್ರಶ್ನೆಗೆ “ಇದ್ನೀಗಪ್ಪ ಅಪ್ಪನಿಗ ಹುಟ್ಟಿದ್ ಮಾತು ಅನ್ನದು. ಶಬಾಸ್‌ಕಯ್ಯ! ಅಯ್ಯಯ್ಯಾ ಎಂತ ಹೊಸ ಮಾತಯ್ಯ ಇದು.....! ಆಯ್ತು ಕಯ್ಯ ಮೇಸ್ಟ್ರ. ಅದ್ನೂವಿ ಒಪ್ಗತೀನಿ. ಅದೆ ನಾವು ಸುಮ್‌ಸುಮ್ನೆ ಕಟ್ಟಾಕಿ ಬುದ್ದಿಲ್ದೆ ಅವ್ನಗ ಹೊಡ್ದೆವಲ್ಲಾ... ತಪ್ಪುಕಯ್ಯಾ ನಮ್‌ದೆ ತಪ್ಪು ಅಂತೀನಿ (ಪು. ೧೪೫) ಎಂಬ ಮಾತುಗಳಲ್ಲಿ ಅಸಹನೆ, ಸಿಟ್ಟು, ರೋಷ, ಲೇವಡಿ ಎಲ್ಲವೂ ಸೇರಿದೆ.

ನಾಗರಾಜು "ಅದೂ ತಪ್ಪೀಯ. ಅದ್ಕ ನೀವ್ಗಳು ಕಟ್ಟಾಕಂಡು ಹೊಡ್ಡಿರದೂ ತಪ್ಪಿಯ. ಆ ಎಳನೀರನ್ನೂ ಅದ ಕಿತ್ತವರನ್ನೂ ಪೋಲಿಸ್‌ಗ ಕೊಡಬೇಕಿತ್ತು. ಅದು ಬಿಟ್ಟು...." ಎಂದಾಗ, ಪೋಲೀಸ್ ವ್ಯವಸ್ಥೆ ದಲಿತರ ಪರವಾಗಿ ಇರುವುದನ್ನು ಬಲ್ಲ ಸವರ್ಣೀಯರು ಏಕಕಾಲಕ್ಕೆ ಪೋಲೀಸ್ ವ್ಯವಸ್ಥೆಯನ್ನು ನಿರಾಕರಿಸುತ್ತಾರೆ. ಹಾಗೂ ರಾಜೀಗೆ ಬಂದು ಬಿಡುತ್ತಾರೆ. ಅದಕ್ಕೆ ಅವರು ಕೊಡುವ ಕಾರಣ ನಾವು ಬಳೆ ತೊಟ್ಟವರೇ ಎಂಬುದು ಒಂದಾದರೆ, ಊರಲ್ಲಿ ನ್ಯಾಯವಂತರು ಯಾರೂ ಇಲ್ಲವೆ ಎಂಬುದು ಮತ್ತೊಂದು. ಹಾಗೂ ತಮ್ಮ ತಪ್ಪನ್ನು ಒಪ್ಪಿಕೊಂಡು ತಪ್ಪುದಂಡವೆಂದು ನೂರೊಂದು ರೂಪಾಯಿಯನ್ನು ಇಟ್ಟು ಗಾರಸಿದ್ದನಿಗೂ ನೂರೊಂದು ರೂಪಾಯಿಯನ್ನು ದಂಡವಾಗಿ ಕೊಡಲು ಹೇಳುತ್ತಾರೆ. ಗಾರಸಿದ್ದಾ್ಮವ ತಪ್ಪು ಗಾಣಿಕೆ ವಿಷಯದಲ್ಲೂ ಸ್ವತಃ ನಾಗರಾಜುವನ್ನು ದಿಗಿಲು ಬೀಳಿಸುವಂತೆ ವರ್ತಿಸುತ್ತಾನೆ. ಮುಖಂಡ ಮಠಕ್ಕೆ ಒಪ್ಪಿಸಲೆಂದು ಕೊಟ್ಟ ನೋಟನ್ನು ತೆಗೆದುಕೊಂಡು ಅದು ತನಗೆ ಸಾಲವಾಗಿ ನೀಡಿದ್ದೆಂದು ತಿಳಿಯಬೇಕು ಎನ್ನುತ್ತ ತನ್ನ ತಪ್ಪುದಂಡವಾಗಿ ಅದೇ ನೂರನ್ನು ನೀಡುತ್ತಾನೆ. ಯಾವಾಗ ಸಾಲ ಹಿಂದುರುಗಿ ಸುತ್ತೀ ಎಂದಾಗ "ಯಂದಾರುವಿ ಕೊಡ್ತೀನಿ ತಕ್ಕಪ್ಪ" ಎಂದು ಉಢಾಪೆಯಿಂದ ಮಾತನಾಡುತ್ತಾನೆ. ಎಂದರೆ ಮೇಲ್ವರ್ಗದ ದಬ್ಬಾಳಿಕೆಯ ವ್ಯೂಹವನ್ನು ಅಂಥದೇ ಪ್ರತಿವ್ಯೂಹದ ಮೂಲಕ ಎದುರಿಸುವ ಅವಶ್ಯಕತೆಯನ್ನು ದಲಿತವರ್ಗ ಮನಗಾಣುತ್ತಿರುವುದನ್ನು ಇದು ಸೂಚಿಸುತ್ತವೆ. (ಪು.೫೦ ಆರ್ಕೆ ಮಣಿಪಾಲ, ಸಾಹಿತ್ಯ ಆಶಯ ವಿನ್ಯಾಸ) ಎಂಬ ಆರ್ಕೆಯವರ ಮಾತು ಅರ್ಥಪೂರ್ಣನೆನಿಸುತ್ತದೆ.

ಬದುಕು ಕಾದಂಬರಿಯಲ್ಲಿ ಜೋಗಣಿ ದಂದಾ ಬಿಟ್ಟು ತುಳಜವ್ವ ಹುಸೇನಪ್ಪನಿಗೆ ಲಗ್ನ ಆಗಿ ತನ್ನ ಗಂಡ, ಕೂಸಿನೊಂದಿಗೆ ಊರಿಗೆ ಬಂದಾಗ ಊರ ಜನ ಎಲ್ಲಾ ಸೇರಿ ಪೂಜಾರಪ್ಪನ ಮೂಲಕ ಪಂಚಾಯಿತಿ ಸೇರಿಸುತ್ತಾರೆ. ಪಂಚರೆಲ್ಲರೂ ಏನೇನೋ ಮಾತಾಡಿಕೊಂಡು ಕೊನೆಗೆ ಮುದುಕಪ್ಪ ಎದ್ದು ನಿಂತು ಫೈಸಲಾ ಹೇಳುತ್ತಾನೆ.

"ಶಾಂತೀ..... ಶಾಂತೀ.... ಗದ್ದಲ ಮಾಡಬ್ಯಾಡ್ರೀ.... ಭಾಳ ಹೊತ್ತಾಗ್ಯಾದ... ಪಂಚಾಯ್ತಿ ಮುಗೀಲಕ್ಕ ಬಂದಾದ.... ನಮ್ಮ ಫೈಸಲಾ ಹೇಳ್ತೀನಿ ಕೇಳ್ರೀ.... ಎಲ್ಲಾ ತಪ್ಪ ತುಳಜವ್ವಂದದಾ... ಅಕಿ ಈ ಊರಿಗೆ ಬಂದಿದ್ದಿಲ್ಲಂದ್ರ ಇದೆಲ್ಲಾ ಏನೂ ಆಗ್ತಿರಲಿಲ್ಲ. ನಮ್ಮ ಕಣ್ಣ ಮರಿ ಅಕಾಡಿ ಅಕಾಡಿ ದೂರ ದೇಶಾದಾಗ ಏನು ನಡದಿತ್ತೋ ನಡದಿತ್ತು. ಆದರಕಿ ಈ ಊರಿಗೆ ಬಂದಾಳ. ಅಕಿನ ಮಾತಿನಿಂದ ನಮ್ಮೂರ ಜೋಗಣೇರ ತಲೀನೂ ಕೆಡ್ತಾದ ಹಿಂಗಾದ್ರ.... ನಮ್ಮ ಚುಂಚೂರು ದೇವಿ ಜಾತ್ರ್ಯಾಗ ಮೋಜು ಇರಾದೇ ಜೋಗಣೆರ ಹಾಡು, ಕುಣಿತಾಗಳಿಂದ. ಬಾರಾ ಹರದಾರಿ ದೂರದಿಂದ ಮಂದೆಲ್ಲಾ ಈ ಜಾತ್ರಿಗಿ ಬರಾದೇ ಜೋಗಣ್ಯೇರ ಸಲ್ಯಾಕ. ತುಳಜಾನಂಗೇ ಎಲ್ಲಾ ಜೋಗಣೇರು ಆಕಿನ ಹಾದಿ ತುಳಿದಳೆಂದ್ರ ನಾಕೆಂಟೂರ್ಸಿನ್ಯಾಗ ಈ ಜೋಗಣಿ ಬಿಡಾ ರಿವಾಜೇ ಮುಗ್ಗಿ ಹೋಗ್ತಾದ. ನಮ್ಮ ಹಿರೇರು ನಡೆಸ್ಕೊಂಡು ಬಂದಿರಾ ಈ ರೀತಿ ರಿವಾಜುಗೋಳು ಶಾಸತ್ರಗೋಳು, ಈಗ ನಮ್ಮ ಕಾಲಕ್ಕ ನಿಂದರಾದು ನಾವು ನೋಡಂಗಿಲ್ಲ. ಅದಕ್ಕಾಗಿ ತುಳಜಾ ತಾನು ಮಾಡಿದ ತಪ್ಪೀಗಿ ಪಾನಸೆ ರುಪೈ ದಂಡಕಟ್ಟಿ ತಪ್ಪಾಯ್ತಂತ ಪೂಜಾರೆಪ್ಪನ ಪಾದಕ್ಕೆ ಬಿದ್ದು

ಮಾಫಿ ಬೇಡ್ಬೇಕು. ಮತ್ತಕಿ ತನ್ನ ಕೊಳ್ಳಾಗಿನ ತಾಳಿ ಕಿತ್ತಿ ಮಾಪುರ ತಾಯಿ ಭಾಂವ್ಯಾಗ ಹಾಕಿ, ಮತ್ತ ಹಿಂದಿನಂಗೇ ಜೋಗಣ್ಯಾಗ್ಬೇಕು. ಮಗಳಿಗಿ ಮನ್ಯಾಗಿಟ್ಕೊಂಡಿದ್ದಕ್ಕೆ ಪರಪ್ಪನೂ ನೂರಾ ಒಂದು ರುಪೈ ದಂಡಾ ಕಟ್ಟಿ ಮಾಫಿ ಕೇಳ್ಬೇಕು. ಇಲ್ಲಂದ್ರ ಈಗಿನಿಂದೇ ಅವನಿಗಿ ಅವನ ಹೆಣ್ತೇಗಿ ಕೇರಿಲಿಂದ, ಕುಲದಿಂದೆತ್ತಿ ಹೊರಗಿಡ್ತೀವಿ. ಅನ್ನ, ನೀರು, ಭೆಂಕಿ ಏನೂ ಯಾರೂ ಅವರಿಗೆ ಕುಡಂಗಿಲ್ಲ. ಇದು ಪಂಚಾಯ್ತಿ ತೀರ್ಮಾನದಾ ಅಂತ್ಹೇಳಿ ಕುಳಿತುಕೊಳ್ಳುತ್ತಾನೆ.

ಮೊದಲಿನಂತೆ ಅಂಜುಬುರುಕಿ, ಅಳುಮುಂಜಿ ಆಗಿರದ ತುಳಜಾ. ಈ ಊರಿನ ಈ ಕೇರಿಯ ಕೆಟ್ಟ ರೂಢಿ ಸಂಪ್ರದಾಯಗಳ ಹಂಗು ತೊರೆದು ಮಾನಸಿಕವಾಗಿ ಗಟ್ಟಿಯಾದ ತುಳಜಾ ಅಪ್ಪನ ಕೈ ಹಿಡ್ಕೊಂಡು ಸೆಟೆದು ನೀಂತು ಹೀಗೆ ಹೇಳುತ್ತಾಳೆ. "ದೈವದವರೇ.... ನೀವೂ ಒಂದೀಟು ನನ್ನ ಫೈಸಲಾನೂ ಕೇಳಿ ಹೋಗ್ರೀ... ನೀವು ಕೊಟ್ಟ ತೀರ್ಮಾನ ನಮಗ ಒಪ್ಪಗಿಯಿಲ್ಲ. ಏಕತರಫಾ ನ್ಯಾಯ ನಿಮ್ದು. ನಾವೇನೂ ತಪ್ಪು ತಂಡಾ ಕುಡಂಗಿಲ್ಲ. ಹಾಂಗ ಕೂಡ್ಲಕ್ಕ ನಾವೇನೂ ತಪ್ಪು ಕೆಲಸಾ ಮಾಡಿಲ್ಲ! ನೀವು ನಮ್ಮಪ್ಪೇಗೇನು ಕುಲದಲಿಂದ, ಕೇರಿಲಿಂದ, ಹೊರಗಿಡ್ತೀರಿ? ನಾನೇ ನಮ್ಮಪ್ಪಾ ಅವ್ವಗ ಈ ಊರು ಕೇರಿಲಿಂದ ದೂರ ಮಾಡಿ ನನ ಜೋಡಿ ಕರ್ಕೊಂಡು ಹೋಗ್ತೀನಿ... ನಿಮಗಾ ನಿಮ್ಮ ನ್ಯಾಯಕ್ಕಾ ದೊಡ್ಡ ನಮಸಗಾರ್ರೀ ಯಪ್ಪಾ...." ಅಂದವಳೇ ಅವ್ವ ಅಪ್ಪನನ್ನು ಕರೆದುಕೊಂಡು ಹಂಗೇ ಕೇರಿಲಿಂದ, ಊರಿನಿಂದ ಹೊರ ನಡೆದಳು. ಹುಸೇನಪ್ಪ ಮಗುವನ್ನೆತ್ತಿಕೊಂಡು ಜೊತೆಗೂಡಿದ. (ಪು.೨೨೫ ಬದುಕು) ಎಂಬಲ್ಲಿನ ವಿವರಣೆಯು ಸಾಂಪ್ರದಾಯಿಕ ನ್ಯಾಯವ್ಯವಸ್ಥೆಯು ಶಿಥಿಲಗೊಳ್ಳುತ್ತಿರುವ ಅಂಶವನ್ನು ಸ್ಪಷ್ಟಪಡಿಸುತ್ತದೆ.

ಅಧ್ಯಾಯ ನಾಲ್ಕು

ಸಾಮಾಜಿಕ ವರ್ಗಗಳು ಮತ್ತು ಭಾಷೆ

ಅಧ್ಯಾಯ ೪

ಸಾಮಾಜಿಕ ವರ್ಗಗಳು ಮತ್ತು ಭಾಷೆ

ಭಾಷೆ ಭಾವನೆಗಳ ಅಭಿವ್ಯಕ್ತಿ ಮಾಧ್ಯಮ. ಮಾನವನು ತನ್ನ ಮನದಲ್ಲಿ ಮೂಡುವ ಬಗೆ ಬಗೆಯ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಇರುವ ಸಾಧನ. ಮನುಷ್ಯ ಇತರ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿ ರುವುದು ಕೂಡ ಈ ಹಿನ್ನೆಲೆಯಿಂದಲೇ, ಅಂದರೆ ಭಾಷೆ ಸಂಪೂರ್ಣವಾಗಿ ಮಾನವಾವಲಂಬಿ. ಅದಕ್ಕೆ ವ್ಯಕ್ತಿತ್ವ ಸಿದ್ಧಿಸುವುದು ಕೂಡ ಮಾನವರಿಂದಲೇ ಎಂದಾಯಿತು. ವ್ಯಕ್ತಿಗಳಿಂದಲೇ ಭಾಷೆಯೆಂದು ಪರಿಗಣಿಸು ವುದಾದರೆ ಸಮಾಜ ಮತ್ತು ಭಾಷೆಯ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳಬಹುದು. ಯಾಕೆಂದರೆ ಸಮಾಜ ಮತ್ತು ಭಾಷೆ ಬೇರೆ ಬೇರೆಯಲ್ಲ. ಇವರೆಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಭಾಷೆ ಒಂದು ಸಮಾಜದ ಸಂಸ್ಕೃತಿಯ ಅಂಗವಲ್ಲದೆ ಸಮಾಜದ ಎಲ್ಲಾ ಜೀವಂತ ಚಟುವಟಿಕೆಯ ಮೂಲವಾಗಿರುವುದರಿಂದ ಸಮಾಜದಿಂದ ಭಾಷೆಯನ್ನು, ಭಾಷೆಯಿಂದ ಸಮಾಜವನ್ನು ಬೇರ್ಪಡಿಸಲಾಗದು. ಅಲ್ಲದೆ ವ್ಯಕ್ತಿಯ ದೈನಂದಿನ ವ್ಯವಹಾರಗಳೆಲ್ಲವೂ ಅವರು ವಾಸಿಸುವ ಭಾಷಿಕ ಸಮುದಾಯದ ಒಪ್ಪಿತ ನಡಾವಳಿಗಳ ಪ್ರತಿರೂಪವಾಗಿರು ವುದರಿಂದ ಭಾಷೆಯನ್ನು ಸಮಾಜದ ಕೈಗನ್ನಡಿ ಎನ್ನಬಹುದು. ಹಾಗಾದರೆ ಸಾಮಾಜಿಕ ರಚನೆಯನ್ನು ಭಾಷೆಯ ಆಧಾರದ ಮೇಲೆಯೂ ಅರ್ಥ ಮಾಡಿಕೊಳ್ಳಬಹುದು ಎಂದಾಯಿತು.

ಒಂದು ಸಮುದಾಯದಲ್ಲಿ ಒಂದೇ ಭಾಷೆಯನ್ನಾಡುವ ಜನರಿದ್ದರೂ ಎಲ್ಲಾ ವ್ಯಕ್ತಿಗಳು ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಅಷ್ಟೇ ಏಕೆ ಒಬ್ಬ ವ್ಯಕ್ತಿ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಒಂದು ಭಾಷೆಯನ್ನು ಒಂದೇ ರೀತಿಯಾಗಿ ಬಳಸಲಾರ. ಅಂದರೆ ಸಮಾಜದಲ್ಲಿ ಸಮುದಾಯಗಳು ಭಿನ್ನ ವಾದಂತೆಲ್ಲ ಅವು ಬಳಸುವ ಭಾಷೆಯೂ ಭಿನ್ನವಾಗುತ್ತಾ ಹೋಗುತ್ತದೆ. ಕ್ರಮೇಣ ಈ ಭಿನ್ನತೆಯು ಆಯಾ

ಸಮಾಜದ ಭಾಷಿಕ ಚಹರೆಯಾಗಿ ರೂಪುಗೊಳ್ಳುತ್ತದೆ. ಯಾರೇ ಭಾಷೆಯನ್ನು ಬಳಸುತ್ತಿರಲಿ ಅವರ ಭಾಷೆಯನ್ನು ಗಮನಿಸಿ ಕೆಲವು ಚಹರೆಗಳನ್ನು ಗೊತ್ತು ಮಾಡುವುದು ಸಾಧ್ಯ. ವ್ಯಕ್ತಿಯು ಗಂಡಸೋ, ಹೆಂಗಸೋ, ಯಾವ ಭೌಗೋಳಿಕ ಪ್ರದೇಶಕ್ಕೆ ಸೇರಿದವರು, ಸಾಮಾಜಿಕವಾಗಿ ಅವರ ಸ್ಥಾನಮಾನವೇನು? ಈಗ ಮಾತನಾಡುತ್ತಿರುವ ಸಂದರ್ಭದ ಸ್ವರೂಪವೇನು? ಇವೇ ಮೊದಲಾದ ಅಂಶಗಳು ಅವರ ಮಾತನ್ನು ಕೇಳುವುದರಿಂದಲೇ ತಿಳಿಯುತ್ತದೆ. ಇಷ್ಟೇ ಅಲ್ಲದೆ ಅವರ ಮಾತಿನಿಂದ ಅವರು ಯಾರು? ಎಂಬುದನ್ನು ತಿಳಿಯಲು ಸಾಧ್ಯ. ಅಂದರೆ ಪ್ರತಿ ವ್ಯಕ್ತಿಗೂ ಸಮುದಾಯಕ್ಕೂ ಪ್ರದೇಶಕ್ಕೂ ವಿಶಿಷ್ಟವಾದ ಅನ್ಯರಲ್ಲಿ ಇಲ್ಲದ ಕೆಲವು ಭಾಷಾ ಲಕ್ಷಣಗಳು ಅವರ ಭಾಷಾ ಬಳಕೆಯಲ್ಲಿ ಕಾಣಸಿಗುತ್ತವೆ. ಆ ಲಕ್ಷಣಗಳನ್ನು ಗುರುತಿಸಿ ಮಾತನಾಡುವ ವ್ಯಕ್ತಿ ಇಂಥವರೆ, ಇಂಥಹ ಸಮುದಾಯದವರೇ, ಈ ಪ್ರದೇಶಕ್ಕೆ ಸೇರಿದವರೇ ಎಂದು ಗುರುತಿಸುತ್ತೇವೆ.

ಪ್ರಸ್ತುತ ಅಧ್ಯಯದಲ್ಲಿ ವ್ಯಕ್ತಿಯ ಭಾಷೆಯಿಂದಲೇ ಅವನ ಸಾಮಾಜಿಕತೆಯನ್ನು ಗುರುತಿಸಬಹುದು ಎಂಬುದನ್ನು ಅಥವಾ ವ್ಯಕ್ತಿಯ ಭಾಷೆ ಸಾಮಾಜಿಕ ಚಹರೆಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಜಾತಿ, ಲಿಂಗ, ಅಧಿಕಾರ, ಶಿಕ್ಷಣ, ವ್ಯಕ್ತಿನಾಮ, ಸಂಭೋದನಾವಾಚಿ, ಗಾದೆಗಳು, ಬೈಗುಳಗಳಂತಹ ವಿವಿಧ ಸಾಮಾಜಿಕ ಭಿನ್ನಾಂಶಗಳಲ್ಲಿ ಗುರುತಿಸಲಾಗಿದ್ದು ವಿಶ್ಲೇಷಣೆ ಮತ್ತು ನಿದರ್ಶನಕ್ಕಾಗಿ ಕಾದಂಬರಿ ಗಳಿಂದಾಯ್ದ ಉದಾಹರಣೆಗಳನ್ನು ನೀಡುವ ಮೂಲಕ ಚರ್ಚಿಸಲಾಗಿದೆ.

೪.೧ ಜಾತಿ

ಭಾರತವು ಅಸಮಾನತೆಯಿಂದ ಕೂಡಿದುದಾಗಿದೆ. ಸಮಾಜದಲ್ಲಿರುವ ಜಾತಿ, ವರ್ಗ, ವರ್ಣ, ಅಧಿಕಾರ, ಅಂತಸ್ತು, ಮೊದಲಾದ ಅಂಶಗಳು ಇಂತಹ ಅಸಮಾನತೆಗೆ ಕಾರಣವಾಗಿವೆ. ಈ ರೀತಿಯ ತಾರತಮ್ಯಗಳನ್ನು ಕಂಡುಕೊಳ್ಳಲು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾದ ಅಂಶಗಳನ್ನು ಮಾನದಂಡ ವನ್ನಾಗಿಸಿಕೊಂಡಿದೆ. ಇಂತಹ ಮಾನದಂಡಗಳಲ್ಲಿ ಭಾಷೆಯೂ ಒಂದು. ಪಂಪ, ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ ದ್ರೋಣನ ಮೂಲಕ ಒಂದು ಮಾತನ್ನು ಆಡಿಸುತ್ತಾನೆ. "ಕುಲಮಂ ನಾಲಗೆ ತುಬ್ಬವವೊಲ್" ಅಂದರೆ ನಾಲಗೆ ಕುಲವನ್ನು ಹೊರಹಾಕುವ ಹಾಗೆ ಎಂಬುದು ಇದರ ನಿಜವಾದ ಅರ್ಥ. ಹಾಗೆ ನೋಡಿದರೆ ಕುಲವನ್ನು ಸೂಚಿಸುವುದು ಅವರ ನಾಲಗೆಯಲ್ಲ, ಬದಲಿಗೆ ಅವರಾಡುವ ಮಾತು. ಅಂದರೆ ವ್ಯಕ್ತಿಯೊಬ್ಬನನ್ನು ತನ್ನ ಸಂಸ್ಕೃತಿಗೆ ಬದ್ಧನಾಗಿರುವಂತೆ ಭಾಷೆ ನಿಯಂತ್ರಿಸುತ್ತಿರುತ್ತದೆ. ಆದುದರಿಂದ ಸಾಮಾಜಿಕವಾಗಿ ಬಳಕೆ ಯಾಗುವ ವೈವಿಧ್ಯತೆಯನ್ನಾಧರಿಸಿ ವ್ಯಕ್ತಿ ಯಾವ ಜಾತಿಗೆ ಸೇರಿದವರು ಎಂಬುದನ್ನು ಗುರುತಿಸಲು ಮಾತನ್ನು ಒಂದು ಸಾಧನವಾಗಿ ಬಳಸಲಾಗುತ್ತದೆ. ಒಟ್ಟಿನಲ್ಲಿ ಜಾತಿ ಅಥವಾ ಕುಲವನ್ನು ಗುರುತಿಸುವಲ್ಲಿ ಭಾಷೆಯು ಒಂದು ಸಾಮಾಜಿಕ ಚಹರೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಕಾದಂಬರಿಗಳಿಂದ ಆಯ್ದ ನಿದರ್ಶನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಭಾಗದಲ್ಲಿ ಚರ್ಚಿಸಲಾಗಿದೆ.

"ನೋಡೆ ಸಾಕಿ, ನಮ್ಮ ಜೊತೆ ನೀನು ನಾವು ಹೇಳಿದ ಹಾಗೆ ಹೇಳಬೇಕು. ಹೇಳ್ತಿಯ?" ಎಂದರು.

"ಆಗ್ಲಿ, ನೋಡಾನ. ಅದೆಂಗೆ ಯೋಳುಕಡಿ. ಪರ್ಯತ್ನ ಮಾಡ್ತೀನಿ" ಎಂದು ಸಾಕಿ ಹೇಳಿದಳು.

“ನೋಡೆ, ಹೀಗೆ ಹೇಳಬೇಕು....: ಇನ್ನು ಮುಂದೆ ಈ ಪಾಪಿ ರುಕ್ಮಿಣಿಗೂ ನನಗೂ ಉದಕ ಸಂಬಂಧವಿಲ್ಲ... ಇಷ್ಟೆ. ಎಲ್ಲಿ ಹೇಳು ನೋಡೋಣ.....” ಸಾಕಿ ಹೇಳಲುಪಕ್ರಮಿಸಿದಳು.

“ನೋಡೆ ಹಿಂಗೆ ಹ್ಯಾಳಬೇಕು....”

ವೆಂಕಣ್ಣ ಜೋಯಿಸರು ಹಣೆ ಹಣೆ ಚಚ್ಚಿಕೊಂಡರು.

“ಹಾಗಲ್ಲ. ಹೀಗೆ ಹೇಳು....... ಆ ಪಾಪಿ ರುಕ್ಮಿಣಿಗೂ ನನಗೂ ಉದಕ ಸಂಬಂಧವಿಲ್ಲ”.

ಸಾಕಿ ಪುನಃ ಪ್ರಯತ್ನಿಸಿದಳು.

“ಹಂಗಲ್ಲ ಹಿಂಗೇಳು.... ಮುಂದಕೆ?” ಮುಂದೆ ಹೇಳಬೇಕಾದುದನ್ನು ಮರೆತು ಕೇಳಿದಳು. ಹೀಗೆಯೇ ಬಹಳ ಸಮಯ ಕಳೆದು ಹೋಯಿತು. ವೆಂಕಣ್ಣ ಜೋಯಿಸರು ಅವಳಿಂದ ಆ ವಾಕ್ಯವನ್ನು ಹೇಳಿಸಲು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತು.

ಆಗ ಸುಬ್ಬಾವಧಾನಿಗಳು ಶಾಂತವಾಗಿ,

“ಲೇ ಸಾಕಿ, ನಾನು ಹೇಳಿದ ಹಾಗೆ ಸುಮ್ಮನೆ ಗಂಭೀರವಾಗಿ ಹೇಳು. ಹೇಳ್ತೀಯ?” ಸಾಕಿ ಮನದಲ್ಲೆ ‘ಇದೊಳ್ಳೆ ರಾಮಾಣ್ಯ’ ಎಂದುಕೊಳ್ಳುತ್ತ,

“ಊ, ಅದೇನ ಹ್ಯಾಳಿ” ಅಂದಳು.

ಸುಬ್ಬಾವಧಾನಿಗಳು,

“ರುಕ್ಮಿಣವ್ವಂಗೂ.....” ಎಂದು ನಿಲ್ಲಿಸಿದರು.

ಸಾಕಿ,

“ರುಕ್ಮಿಣವ್ವಂಗೂ .....” ಗಿಳಿಪಾಠ ಒಪ್ಪಿಸಿದಳು.

ಉತ್ತೇಜಿತರಾದ ಸುಬ್ಬಾವಧಾನಿಗಳು,

“ನನಗೂ....” ಎಂದು ನಿಲ್ಲಿಸಿದರು.

“ನಂಗೂ.....” ಎಂದು ಪಾಠ ಒಪ್ಪಿಸಿದಳು, ಸಾಕಿ

“ಇನ್ನು ಮುಂದೆ......”

“ಇನ್ನು ಮ್ಯಾಕೆ.......”

“ಉದಕ.....”

“ಉದಕ.....”

“ಸಂಬಂಧ.....”

“ಸಮ್ಮಂಧ......”

"ಇಲ್ಲ...."

"ಇಲ್ಲ...." (ಪು.೨೭೨-೭೩ ವೈಶಾಖ)

* ಊರು ಮುಂದಿನ ಗೋಣಿಮರವನ್ನು ದಾಟುತ್ತಲೂ ಶಾಸ್ತ್ರಿಗಳು ನಿಧಾನವಾಗಿ ಮಾತೆತ್ತಿದರು.

"ಏನು ನಂಜೇಗೌಡರೆ, ಆ ರುದ್ರನ ದೆಸೆಯಿಂದ ನಮ್ಮ ತೋಟಕ್ಕೆ ಉಳಿಗಾಲವಿಲ್ಲವಲ್ಲ?.... ಎಳನೀರು, ಬಾಳೆಗೊನೆ ಎಲ್ಲವನ್ನೂ ಒಂದೊಂದು ಸಲ ತನ್ನ ಪುಂಡು ಗುಂಪು ಸೇರಿಸಿಕೊಂಡು, ಒಂದೊಂದು ವೇಳೆ ತಾನೊಬ್ಬನೆ ರುದ್ರ ಲೂಟಿ ಹೊಡೀತಾ ಇದಾನಲ್ಲ?" ಎನ್ನುತ್ತಲೂ ತನ್ನ ಬೀಡಿಯಿಂದ ಎರಡು ಧಂ ಎಳೆದು ಅದನ್ನು ಬಿಸಾಡಿ. ಒಳ್ಳೆ ಪಸಂದಾಯ್ತು. ಪಟಿಂಗ ಮುಂಡೆಯೋವಕ್ಕೆ ನಾಲ್ಕು ಬಿಗ್ದು ಬುದ್ದಿ ಕಲಿಸೋದು ಬುಟ್ಟು; ನನ್ನ ಕುಟ್ಟೆ ವಪ್ಪುಸ್ತಾ ಇದ್ದೀರಲ್ಲ..... ಏನು ಯೋಳ್ಲಿ?" ಎಂದು ತಲೆ ಚಚ್ಚಿ ಮೀಸೆಯ ಮರೆಗೆ ನಕ್ಕ ನಂಜೇಗೌಡ.

"ಸರಿಹೋಯ್ತು. ನಾನು ಶಿಕ್ಷೆ ಮಾಡಲು ಹೋದರೆ ಅವನ ಮಾವ ಗಂಗಪ್ಪ ಸುಮ್ಮನಿರಬೇಕಲ್ಲ!... ನಾಳೆ, ತನ್ನ ಸೋದರಳಿಯನ್ನ ಹೊಡೆದರು ಬಡಿದರೂಂತ ಪಂಚಾಯಿತಿ ಕಟ್ಟೆ ಹತ್ತಿಸಿದರೆ ನಾನೇನು ಮಾಡೋದು, ಗೌಡರೆ?"

ಎನ್ನುತ್ತ ಆಕಾಶ ನೋಡಿದರು. ಬೇಲಿಯಲ್ಲಿ ಬೆಳೆದಿದ್ದ ಉಣ್ಣಿಯ ಹಳದಿ ಕೇಶರಿ ಹೂಗೊಂಚಲನ್ನು ಕಿತ್ತು ಮೂಸುತ್ತ,

"ಸರಿಕನ ಬುಡಿ. ಆ ಗಂಗಪ್ಪ ಯಾವ ಮಹಾಸ್ಯಾಟ ಅದ್ನ ಸುಟ್ಟರೆ ಇದ್ದಲೂ ಅಲ್ಲ, ಬೂದಿಯೂ ಅಲ್ಲ.

ಎಂದ, ಶಾಸ್ತ್ರಿಗಳ ಮುಖ ಗಂಟಿಕ್ಕಿತು. (ಪು.೯ ವೈಶಾಖ)

ಮೇಲಿನ ಎರಡು ಉದಾಹರಣೆಗಳಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ (ಉದಾ: ೧ ಕೆಳವರ್ಗ ಮತ್ತು ಉದಾ: ೨ ಮದ್ಯಮವರ್ಗ) ವರ್ಗಗಳನ್ನು ಪ್ರತಿನಿಧಿಸುವ ಪಾತ್ರಗಳಿವೆ. ಉದಾಹರಣೆಗಳಲ್ಲಿ ಬಳಕೆ ಯಾಗಿರುವ ಮಾತುಗಳನ್ನಾಧರಿಸಿ ಹೇಳುವುದಾದರೆ. ಬ್ರಾಹ್ಮಣ ವರ್ಗವನ್ನು ಪ್ರತಿನಿಧಿಸುವ ವೆಂಕಣ್ಣ ಜೋಯಿಸರು ಮತ್ತು ಕೃಷ್ಣಾಶಾಸ್ತ್ರಿಗಳು. ಶುದ್ದ (ಶುದ್ಧ ಎಂಬುದನ್ನು ಉಚ್ಚಾರಣೆ ಮತ್ತು ಕಾಗುಣಿತ ಸರಿ ಯಾದುದು ಎಂಬರ್ಥದಲ್ಲಿ ಬಳಸಲಾಗಿದೆ) ಕನ್ನಡವನ್ನು ಬಳಸುವ ಮೂಲಕ ಸಂಸ್ಕೃತ ಭೂಯಿಷ್ಟವಾದ ಪಾಂಡಿತ್ಯ ಪ್ರಧಾನವಾದ ಬ್ರಾಹ್ಮಣ ಸಮಾಜವನ್ನು ಮೇಲ್ವರ್ಗವನ್ನು ಪ್ರತಿನಿಧಿಸಿದರೆ. ಕೆಳ ಸಮುದಾಯವನ್ನು ಪ್ರತಿನಿಧಿಸುವ ಸಾಕಿ ಅದೇ ಪದಗಳನ್ನು ಪುನರುಚ್ಚರಿಸಲು ತನ್ನ ಭಾಷೆಯಲ್ಲಿ ಏರಿಳಿತಗಳನ್ನು ಮಾಡಿಕೊಳ್ಳುವ ಮೂಲಕ ತನ್ನ ಅಜ್ಞಾನವನ್ನು ಪ್ರದರ್ಶಿಸುತ್ತಾಳೆ. ನಂಜೇಗೌಡ, ಕೃಷ್ಣಶಾಸ್ತ್ರಿಯವರೊಂದಿಗೆ ಪ್ರತಿಕ್ರಿಯಿಸಲು ಗ್ರಾಮ್ಯಭಾಷೆಯನ್ನೇ ಬಳಸುವ ಮೂಲಕ ಬ್ರಾಹ್ಮಣೇತರ ಸಮುದಾಯವನ್ನು ಪ್ರತಿನಿಧಿಸುತ್ತಾನೆ.

ಸಂಭಾಷಣೆಯಲ್ಲಿಯಂತೆ ಪದಗಳಲ್ಲಿಯೂ ಭಿನ್ನತೆಯಿದ್ದು ಇವುಗಳಿಂದಲೂ ಜಾತಿಯನ್ನು ಗುರುತಿಸಲು ಸಹಾಯಕವಾಗುತ್ತದೆ. ಅಂದರೆ ಒಂದೇ ಪದ ಭಿನ್ನ ಜಾತಿ ಅಥವಾ ವರ್ಗಗಳಲ್ಲಿ ಭಿನ್ನ ನೆಲೆಯಲ್ಲಿ ಉಚ್ಚಾರಗೊಳ್ಳುವುದನ್ನು ನೋಡಬಹುದು. ಇದಕ್ಕಾಗಿ ವೈಶಾಖ ಕಾದಂಬರಿಯಿಂದ ಕೆಲವು ನಿದರ್ಶನಗಳನ್ನು ಹೀಗೆ ನೋಡಬಹುದು.

ಬೇಸರ - "ಬೇಸರ ಆಯಿತು. ನುಡಿಸೋಣ ಅಂತ ತಕ್ಕೊಂಡೆ" (ಪು.೬೧)

- "ನೀ ತಡೀಬ್ಯಾಡ ಬುಡು, ಕುಂತು ಕುಂತು ನನಗೆ ಸಿಬ್ರಿ ಆಗ್ಯದೆ". (ಪು. ೧೩೧)

ಸೀರೆ - "ಇನ್ನೂ ಒಂದು ಸೀರೆ ತೆಗೀರಿ" (ಪು.೧೩೪)

- "ನಂಗೆ ಸ್ಯಾಲೆ ಗೀಲೆ ಯಾವ್ದೂ ಬ್ಯಾಡ". (ಪು. ೧೩೩)

ಮಗು - "ಏನಾಯಿತು, ಕಂದ?" (ಪು.೬೬)

- ಬಂದ್ಯಾ ಮೊಗ (ಪು.೭೧)

ಮೇಲಿನ ನಿದರ್ಶನಗಳಲ್ಲಿ ಬೇಸರ, ಸೀರೆ, ಕಂದ ಎಂಬುವು ಮೇಲ್ವರ್ಗವನ್ನು ಪ್ರತಿನಿಧಿಸಿದರೆ, ಸಿಬ್ರಿ, ಸ್ಯಾಲೆ, ಮೊಗ ಎಂಬ ಪದಗಳು ಕೆಳವರ್ಗವನ್ನು ಪ್ರತಿನಿಧಿಸುತ್ತವೆ. ಹೀಗೆ ಭಾಷೆಯ ಉಚ್ಚಾರದ ಆಧಾರದ ಮೇಲೂ ಜಾತಿ ಅಥವಾ ವರ್ಗವನ್ನು ಗುರುತಿಸಬಹುದಾಗಿದೆ.

೪.೨ ಲಿಂಗ

ಲಿಂಗ ತಾರತಮ್ಯ ಎನ್ನುವುದು ಇಂದು ನಿನ್ನೆಯದಲ್ಲ. ಇದು ಕಾಲ, ದೇಶ, ಜಾತಿ, ಜನಾಂಗಗಳ ಎಲ್ಲೆಯನ್ನು ಮೆಟ್ಟಿ ನಿಂತಂಥ ಪ್ರವೃತ್ತಿಯಾಗಿರುವುದರಿಂದ ಸಮಾಜದ ಪ್ರತಿಯೊಂದು ವಲಯದಲ್ಲಿಯೂ ಅದರ ಇರುವಿಕೆಯನ್ನು ಗುರುತಿಸಬಹುದು. ಲಿಂಗ ತಾರತಮ್ಯಕ್ಕೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಜೈವಿಕವಾದಂತಹ ಕಾರಣಗಳೇನೆ ಇದ್ದರೂ ಈ ಕಾರಣಗಳಿಂದಾಗಿ ರೂಪುಗೊಂಡಿರುವ ತಾರತಮ್ಯವನ್ನು ಪೋಷಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಭಾಷೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಂದರೆ ಭಾಷೆಯಲ್ಲಿಯೂ ಲಿಂಗಭಿನ್ನತೆಯನ್ನು ಸೂಚಿಸುವ ಭಾಷಿಕಾಂಶಗಳಿವೆ. ಗಂಡು-ಹೆಣ್ಣುಗಳು ಅಭಿವ್ಯಕ್ತಿಗೊಳಿಸುವ ಭಾಷೆಯ ನೆಲೆಯನ್ನಾಧರಿಸಿ ನಿರ್ದಿಷ್ಟ ಲಿಂಗವನ್ನು (ಕೆಲವು ಸಂದರ್ಭಗಳನ್ನು ಹೊರತುಪಡಿಸಿ) ಗುರುತಿಸಬಹುದು. ಇದಕ್ಕೆ ಕಾದಂಬರಿಗಳಿಂದ ನಿದರ್ಶನಗಳನ್ನು ನೋಡುವುದಾದರೆ.

* "ಯಾನಿಲ್ಲ; ರತ್ನಾ ಬಂದಾಗ ನಾನ್ಯ ಅಂದಿನು ಊರಾಗ ಮಗಳ್ನ ಕೊಟ್ಟಿ, ಬೇಕಾದವರ ಕರೀಕ ಬಂದರ ನಡೀತೇತಿ. ಅಡ್ಡಿ ಆಪತ್ತಿನೊಳಗ ಒಬ್ಬರ್‍ಗಿ ಒಬ್ಬರ ನೋಡಕ ಬರತೇತಿ... ಮುಪ್ಪಿನವರ ಆಗಾನ ಇಲ್ಲೇ ಮಗಳ ಒಂದ ಬಿಸಿ ರೊಟ್ಟಿ ಮಡಚಿ ಕೈಯಾಗ ಕೊಟ್ಟಾಳ, ಅವ್ವಾ ಅಪ್ಪಾ ಅಂತ....?" "....ಅದ್ಯಾಕ ಈಗ ಹೊಂಟಿತ್ತು?" ಹೂವಣ್ಣ ಪ್ರಶ್ನೆ ಮಾಡಿದ.

"ಮಾತಿಗೆ ಮಾತ ಹೊರಟಾಗ...... ಗಂಡಸ ಮಕ್ಕಳ ಇಲ್ಲಾ... ಯಾವಾಗಾದರ ಮಗಳೀಗೇ ಆಗೋದಾ.."

ಅವಳ ಮಾತನ್ನು ತಡೆದು ಹೂವಣ್ಣ "ಯಾನ ಹುಚ್ಚ ಇದಾಳ ಇಕ್ಕಿ...? ಇನ್ನ ಅವರ ಗಂಡ ಹ್ಯಾಂತಿ.... ಧಡಧಡೀತ ಇದಾರ... ಅವರ ಹೊಲಾಮನೀ ಮಗಳಿಗಿ ಆಗ್ತೇತಿ ಅಂತ... ಮಗಳಿಗೆ ಯಾಕ ಆಗ್ತೇತಿ...? ಅವರ ಇನ್ನ ಹಡದಾರಲ್ಲ? ಇಲ್ಲಾದರ ಅವರ ಹೊಲಾಮನೀ... ಅವರ ಯಾನ ಯಾಕ ಮಾಡಕೋವಾರು... ಅದರ ಮ್ಯಾಲ ಯಾಕ ನಿನ್ನ ಕಣ್ಣ.....?" ಬಾಯಿಂದ ಹೊಗೆ ಹೋಗುತ್ತಿರಲು ಹೂವಣ್ಣ ಬೆದರಿದ. (ಪು.೫೨ ನಿಸರ್ಗ)

* ನಡುಮನೆಯಿಂದ ಹೆಡ್ತಿದನಿಯು "ಐ, ಅದ್ಯಾನ ನೀವು, ಅವ್ವ ನೋಡ್ತ ಪುರಾಣ ಮಾಡ್ತೀರದು ಇನ್ನುವಿ ನೀವೂ..." ಅಂದಿತು. ಹೆಡ್ತಿ ಮಾತಿಗೆ ಬಸಪ್ಪಸೋಮಿಯವರು "ನನಗೆ ಹೇಳಲು ಬರಲು ಮೂರು ಕಾಶಿನ ಹೆಣ್ಣಾದ ನೀನು ಎಸ್ಟು ಮಾತ್ರದವಳು! ಎಂದರು. ಆ ದನಿ ಆ ಕಡೆ ನಿಂತಿತು". (ಪು.೧೧೨ ಕುಸುಮಬಾಲೆ)

* "ದಾನವ್ವ ಒಬ್ಬಾಕಿ ಆಗ ಮಟದಾಗ ಇದ್ದಳು. ಆಕಿಗೆ ಎಲ್ಲಾ ಗೊತ್ತೈತಿ ಬೇಕಾರ ಆಕಿನ್ನ ಕರೆಸಿ ಎಲ್ಲಾ ಕೇಳಿಕೋರಿ?" ಚಿಮಣಾ ತಲೆ ತಗ್ಗಿಸಿ ನುಡಿದಳು....

"ಓತೀಕಾಟಕ್ಕೆ ಬೇಲಿಸಾಕ್ಷಿ. ಆಕ್ಯೊಬಾಕಿ ಊರಹಾದರಗಿತ್ತಿ. ಆಕಿನ್ನ ಕರೆಸಿ ಕೇಳಬೇಕಂತ, ಈಕಿ ಹೇಳತಾಳ" ಎಂದು ಪಡದಯ್ಯನವರು ತಿರಸ್ಕಾರದ ನಗೆ ನಕ್ಕರು. (ಪು.೬೦ ಗ್ರಾಮಾಯಣ)

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಗಂಡು ಹೀಗೆಯೇ ಇರಬೇಕು ಎಂಬ ಕೆಲವು ನಿರ್ದಿಷ್ಟ ನಿಯಮಗಳಿವೆ. ಉದಾ: ಗಂಡಸು ನಿರ್ಧಾರಾತ್ಮಕವಾಗಿ ಯಾವ ಹೆದರಿಕೆಯೂ ಇಲ್ಲದೆ ಗಡುಸಾದ ಧ್ವನಿಯಲ್ಲಿ ಶ್ವೆಚ್ಛವಾಗಿ ಮಾತನಾಡಬಹುದು. ಆದರೆ ಹೆಂಗಸು ಮೃದುವಾಗಿ ನಾಚಿಕೆಯಿಂದ ಬೇಡಿಕೊಳ್ಳುವ ಅಥವಾ ಕೋರಿಕೊಳ್ಳುವ ರೀತಿಯಲ್ಲಿಯೇ ಮಾತನಾಡಬೇಕು. ಈ ನಿಯಮಕ್ಕೆ ವಿರುದ್ಧವಾಗಿ ವರ್ತಿಸಿದರೆ ಗಂಡಸನ್ನು ಹೆಣ್ಣಿಗನೆಂದೂ, ಹೆಂಗಸನ್ನು ಗಯ್ಯಾಳಿಯೆಂದು ಹಳಿಯಲಾಗುತ್ತದೆ.

ಗಂಡಸಿಗೆ ಬೈಯ್ಯುವ, ಬಡಿಯುವ, ಗದರುವ, ಕಣ್ಣುಕೆಂಪಗೆ ಮಾಡುವ ಎಲ್ಲಾ ಅಧಿಕಾರಗಳು ಸಮಾಜದತ್ತವಾಗಿಯೇ ಬಂದಂತೆ, ಹೆಂಗಸರಿಗೆ ಬೈಸಿಕೊಳ್ಳುವ, ಬಡಿಸಿಕೊಳ್ಳುವ, ಗದರಿಸಿಕೊಳ್ಳುವ ಗಂಡಸಿನ ಮಾತಿಗೆ ಎದುರಾಡದೆ ಒಪ್ಪಿಕೊಂಡು, ಅದರಂತೆ ನಡೆಯುವ ಕಟ್ಟಳೆಗಳನ್ನು ಕೂಡ ಇದೇ ಸಮಾಜವೇ ಅವಳಿಗೆ ನಿರ್ಬಂಧಿಸಿದೆ. ಮೇಲಿನ ಮೂರು ಉದಾಹರಣೆಗಳು ಇದನ್ನು ಸ್ಪಷ್ಟಪಡಿಸುತ್ತವೆ. ಮೊದಲನೆಯ ಉದಾಹರಣೆಯಲ್ಲಿ ಚಿಮ್ಮವ್ವ ತನ್ನ ಗಂಡ ಹೂವಣ್ಣನಿಗೆ ರತ್ನ ಬಂದಾಗಿನ ಸಂದರ್ಭದಲ್ಲಿ ನಡೆದ ಮಾತುಕತೆಯನ್ನು ಒಪ್ಪಿಸುವಾಗ ಅವಳ ಮಾತನ್ನು ತಡೆದು ಬೆದರಿಸುವ ಸಂದರ್ಭವಿದ್ದರೆ, ಎರಡನೆಯ ಉದಾಹರಣೆಯಲ್ಲಿ ತನ್ನ ಗಂಡನಿಗೆ ನಿರ್ದೇಶಿಸಲು ಬರುವ ಹೆಂಡತಿಗೆ ಬಸಪ್ಪ ಸೊಮಿಯವರು ಬೈಯ್ಯುವ ಮೂಲಕ ಆಕೆಯ ಮಾತನ್ನು ನಿಲ್ಲಿಸುತ್ತಾನೆ. ಇನ್ನೂ ಮೂರನೇ ಪ್ರಕರಣದಲ್ಲಿ ಸಾಕ್ಷಿಯಾಗಿ ಮಾತನಾಡುವ ಚಿಮಣಾಳ ಮಾತುಗಳನ್ನು ತಿರಸ್ಕೃತದಾಗಿ ನೋಡುವ ಪಡದಯ್ಯನವರ ಉದಾಹರಣೆ ಇದೆ. ಹೀಗೆ ಮೂರು

ಪ್ರಕರಣದಲ್ಲಿಯೂ ಗಂಡಸಿನ ಮಾತು ಪ್ರಧಾನವಾಗಿ ಉಳಿದು ಹೆಣ್ಣಿನ ಮಾತು ಅಧೀನವಾಗುವುದನ್ನು ನೋಡಬಹುದು. ಈ ಅಂಶ ಗಂಡಸು ಸಾಮಾಜಿಕವಾಗಿ ಮೇಲ್ವರ್ಗವನ್ನು ಪ್ರತಿನಿಧಿಸಿದರೆ ಹೆಣ್ಣು ದ್ವಿತೀಯ ಅಥವಾ ಕೆಳವರ್ಗವನ್ನು ಪ್ರತಿನಿಧಿಸುತ್ತಾಳೆ.

೪.೩ ಶಿಕ್ಷಣ

ವ್ಯಕ್ತಿ ಬಳಸುವ ಭಾಷೆಯಿಂದ ವರ್ಗ, ಜಾತಿ, ಲಿಂಗ, ಅಧಿಕಾರವನ್ನು ಗುರುತಿಸುವಂತೆ ಶಿಕ್ಷಿತ ಅಥವಾ ಅಶಿಕ್ಷಿತ ಎಂಬ ಅಂಶವನ್ನು ಗುರುತಿಸಬಹುದು. ಶಿಕ್ಷಿತನಾದ ವ್ಯಕ್ತಿ ಯಾವ ವರ್ಗ ಅಥವಾ ಜಾತಿಗೆ ಸೇರಿದ್ದರೂ ಶಿಕ್ಷಣದ ಪ್ರಭಾವದಿಂದಾಗಿ ತನ್ನ ಜಾತಿ, ಸಮುದಾಯದ ಭಾಷೆಯನ್ನು ಬಿಟ್ಟು ತನ್ನ ಭಾಷೆ ಶಿಷ್ಟವಾಗಿರುವಂತೆ ನೋಡಿಕೊಳ್ಳುವ ಮೂಲಕ ಉಚ್ಚಾರಣೆ ಮತ್ತು ಧ್ವನಿಯಲ್ಲಿ ಮಹಾಪ್ರಾಣ, ಸ, ಶ, ಷ ಗಳಂತಹ ಧ್ವನಿಗಳನ್ನು ಸ್ಪಷ್ಟವಾಗಿ ಉಚ್ಚರಿಸುವವರು ಮೇಲ್ವರ್ಗದವರು. ವ್ಯತ್ಯಾಸವಿಲ್ಲದೆ ಬಳಸುವವರು ಕೆಳವರ್ಗದವರು ಎಂಬ ಒಪ್ಪಿತವಾದ ಹೇಳಿಕೆಯನ್ನು ಒಡೆಯುತ್ತಾನೆ. ಇಂತಹಲ್ಲಿ ವ್ಯಕ್ತಿ ಬಳಸುವ ಮಾತು ಗಳಿಂದಲೇ ಅವನು ಶಿಕ್ಷಿತನೋ ಅಶಿಕ್ಷಿತನೋ ಎಂಬ ಅಂಶವನ್ನು ಕಂಡುಕೊಳ್ಳಬಹುದು. ಇದಕ್ಕೆ ಕಾದಂಬರಿ ಯಿಂದ ಒಂದು ನಿದರ್ಶನವನ್ನು ನೀಡುವುದಾದರೆ.

"......ಇನ್‌ಸ್ಪೆಕ್ಟರ್ ಸಾಹೇಬರಿಗೆ ನಮಸ್ಕಾರ. ಯಾವಾಗ ದಯಮಾಡಿಸೋಣವಾಯ್ತು?" ಎಂದು ಕೈ ಜೋಡಿಸುತ್ತ...., ಅಯ್ಯಯ್ಯೋ ಇದೇನು ಸಾಹೇಬರನ್ನ ಚಾಪೆ ಮೇಲೆ ಕೂರಿಸಿದೀರಲ್ಲ? ಎನ್ನುತ್ತ ಗೂಳಪ್ಪ ಬೇಡ ಬೇಡವೆಂದರೂ ಕೇಳದೆ. ಮನೆಯ ಒಳಗಿನಿಂದ ತಾವೇ ಕುರ್ಚಿಯನ್ನೆತ್ತಿ ತಂದು. "ತಾವು ಇಲ್ಲಿ ಇಲ್ಲಿ ಮುಹೂರ್ತ ಮಾಡಬೇಕು" ಎಂದು ವಿನೀತರಾಗಿ ಭಿನ್ನೈಸಿದರು.

".....ಇದೇನು ಶ್ಯಾನುಭೋಗರೆ, ಊರ್ನಲ್ಲಿ ನೀವು, ಪಟೇಲರು, ಇಂಥಿಂಥ ಯಜಮಾನರು, ಎಲ್ಲರೂ ಇದ್ರೂ ಕೂಡ, ಇಂಥ ಅಚಾತುರ್ಯ ನಡೆಯೋಕೆ ಅವಕಾಶ ಕೊಟ್ರಿ?" ಪ್ರಶ್ನಿಸಿದ.

"ಅಚಾತುರ್ಯ....?" ಏನು ಸ್ವಾಮಿ ತಾವು ಹೇಳ್ತಿರೋದು? ನನಗೆ ಅರ್ಥ ಆಗ್ತಿಲ್ಲ" ಎಂದು ನಶ್ಯಾ ಏರಿಸುತ್ತ ಯಜಮಾನರ ಕಡೆ ನೋಡುತ್ತ ಹೇಳಿದರು.

"ಶ್ಯಾನುಭೋಗರೆ, ನೀವು ಹಿಂದೆ ಎಲ್ಲಾದರೂ ನಾಟಕದಲ್ಲಿ ಪಾರ್ಟು ಮಾಡಿದ್ದೀರೇನ್ರಿ....?"

"ಹಿ ಹ್ಹಿ ಹ್ಹಿ..... ಯಾಕೆ, ಇಲ್ಲವಲ್ಲ ಸ್ವಾಮಿ...."

ಗೂಳಪ್ಪ ಕಣ್ಣಿನಿಂದಲೇ ಇರಿಯುತ್ತ,

"ಈ ನಾಟಕ ಯಾವುದೂ ನನ್ನ ತಾವು ನಡೆಯಕ್ಕಿಲ್ಲ. ಶ್ಯಾನುಭೋಗರೆ ನೇರವಾಗಿ ಮಾತಾಡಿ. ನೀವೆಲ್ಲ ಸೇರಿ ಆ ಪರಿವಾರದೋರ ಜಾತಿ ಎಂಕಿ ಅನ್ನೋಳ.

ಮಗ ಸುಮಾರು ಹತ್ತು ವರ್ಷದ ಹುಡುಗ ಹಲಗ ನೇಣು ಹಾಕ್ಕೊಂಡು ಸತ್ತಿದ್ದನ್ನು ನಮಗೆ

ರಿಪೋರ್ಟ್ ಮಾಡದೆ. ಅವನ ಹೆಣಾವ ಮಣ್ಣು ಮಾಡಕ್ಕೆ ಅವಕಾಶ ಕೊಟ್ಟಿದ್ದೀರಿ ಇದು ಸರ್ಕಾರಿ ಕಾನೂನು ದೃಷ್ಟೀಲಿ ಘೋರ ಅಪರಾಧ ಅನ್ನೊ ವಿಷಯ ನಿಮಗೆ ತಿಳಿದೇ ಇದೆ...." ಎಂದು ಮಾತಿನ ಶಲಾಕೆಗಳನ್ನು ಎಸೆಯುತ್ತಿರುವ ಸಮಯದಲ್ಲಿ ಶ್ಯಾನುಭೋಗರು.

"ಅದರಲ್ಲಿ ಮಾತ್ರ ನಾನು ಭಾಗಿಯಲ್ಲ, ಸ್ವಾಮಿ" ಎಂದು ಒದರಿಬಿಟ್ಟರು! ಅಂದರೆ ಈ ಹೂಟದಲ್ಲಿ ನೀವು ಮಾತ್ರ ಭಾಗಿಯಾಗಿಲ್ಲ. ಆದರೆ "ಅದರಲ್ಲಿ ನಿಮ್ಮನ್ನು ಬಿಟ್ಟು ಈ ಪಟೇಲರು, ನಂಜೇಗೌಡರು ಇತರೆ ಯಜಮಾನರು ಇವರೆಲ್ಲ ಭಾಗಿಗಳು ಎಂದು ನೀನು ರುಜುವಾತುಪಡಿಸಿದ ಹಾಗಾಯ್ತು"....

" ಹಾಗಲ್ಲ ಇನ್ಸ್‌ಪೆಕ್ಟರ್, ನಾನು ಹೇಳಿದ್ದು... ನಾನು ಏನು ಹೇಳಬೇಕು ಎಂದಿದ್ದೆ ಅಂದರೆ ಈ ಊರಿನ ಯಾವ ವ್ಯವಹಾರದಲ್ಲೂ ನಾನು ಭಾಗವಹಿಸಲ್ಲ... ನಾನುಯ್ತು, ನನ್ನ ತೋಟವಾಯ್ತು. ನೀವು ಹೇಳ್ತಿರೋದು ನನಗೆ ಗೊತ್ತೆಇಲ್ಲ..." ...."ಊರಿನಲ್ಲಿ ನಡೆಯೊ ಯಾವ ವಿಷಯವೂ ನಿಮ್ಮ ಗಮನಕ್ಕೆ ಬರದೇ ಹೋಯ್ತು ಅಂದ ಬಳಿಕ, ಸೀತರಾಮಯ್ಯನೋರೆ, ನೀವು ನಿಮ್ಮ ಶ್ಯಾನಭೋಗಿಕೇನ ಊರಿನಲ್ಲಿ ಬೇರೆ ಇನ್ನಾರಿಗಾದರೂ ಬಿಟ್ಟು ಕೊಟ್ಟು ಸ್ವಸ್ಥವಾಗಿ ನಿಮ್ಮ ತೋಟತುಡಿಕೆ ನೋಡಿಕೋತ ಆರಾಮಾಗಿ ಇರಬಹುದಲ್ಲ?"

..... "ಅಯ್ಯೋ, ಕಾಲಾದಿಂದ ವಂಶಪಾರಂಪರ್ಯವಾಗಿ ನಡೆದುಬಂದದ್ದು ಈಗ ಇಷ್ಟು ಚಿಲ್ಲರ ವಿಷಯಕ್ಕೆಲ್ಲ ಬಿಟ್ಟುಬಿಡೋದು ಅಂದರೆ" ಎನ್ನುತ್ತ. ಕೈ ಕೈ ಹೊಸೆಯುತ್ತ ಹಲ್ಲುಕಿರಿದರು.

"ಸರಿ" ಎಂದ ಗೂಳಪ್ಪ, "ವಿಷಯ ತಿಳಿದ ಹಾಗಾಯ್ತು. ಮುಂದೆ ಕಾನೂನಿನ ಪ್ರಕಾರ ಏನೇನು ಖಟ್ಲೆ ತಗೋಬೇಕೊ ಅದ್ನೆಲ್ಲ ತಗೋತೀನಿ" ನಿರ್ಧಾರವಾಗಿನುಡಿದ.

ನಂಜೇಗೌಡನಿಗೆ ಇನ್ನೂ ಸುಮ್ಮನೆ ಕೂರುವುದು ಸಾಧ್ಯವಾಗಲಿಲ್ಲ. ಅವರು ಎದ್ದು ನಿಂತು "ಈಗ ನಮ್ಮೂರ್ನಲ್ಲಿ ಯಾನಾಗದೆ ಅಂತ್ಲ ಇನ್‌ಸ್ಪಕ್ಟರ್? .....ಯಾರೊ ಹಲಾಲ್ ಕೋರ್ರು ನಿಮ್ಗೆ ಸುಳ್ಳು ಸುದ್ದಿ ಕ್ವಟ್ಟು, ಪಾಪ ನಿಮ್ನ ಇಲ್ಲೀತಂಕ ದಣಿಸವ್ರೆ. ಎಂಕಿ ಹೈದುಂಗೆ ಅದೆಂತಾದ್ದೊ ಯೋಳ್ತಾರಲ್ಲ... ನಿಮೊನಿ ಊ ನಿಮೊನಿ ಜೊರಾನೊ ಯೇನೊ, ಅದಾಗಿತ್ತು. ಹೈದ ತೀರಿಕತ್ತು... ಹೆಣವ ಅಂಗೇ ಬೋ ಕಾಲ ಇಟ್ಟರೆ, ಕೊಳೆತು ನಮ್ಮೂರ್ನ ಬ್ಯಾರೆ ಹೈಕಳಗೂವೆ ಈ ಕಾಯ್ಲೆ ಅಮರಿಕಂಡಾದು ಅಂತ ಜಟಪಟನೆ ಅದ್ನ ಮಸಣಕ್ಕೆ ತಟಾಯಿಸ್ಲೊ, ವೋಟೆಯ.... ಇದ್ನ ದೊಡ್ಡದು ಮಾಡಬ್ಯಾಡಿ ನಾನು ನಮ್ಮ ಊರಿನೋರ ಪರ್‍ವಾಗಿ ಕಯ್ಯ ಮುಗುದು ಬೇಡಿಕತ್ತೀನಿ ಇದರಿಂದ ನಮ್ಮೂರ ಮಾನವೇ ವೊಂಟೋಯ್ತದೆ" ಎಂದು ಅಂಗಲಾಚಿದ. (ಪು. ೧೯೩, ವೈಶಾಖ)

"ಹಂಗಾದರೆ ನಿಮ್ಮೂರ್ನಲ್ಲಿ ಆ ಎಂಕಿ ಹೈದ ನೇಣು ಹಾಕಿಕೊಂಡದ್ದು, ಅವೆಲ್ಲ ಸುಳ್ಳಾ....? ಇಂತಾದೆಲ್ಲ ನಡೀಲೇ ಇಲ್ಲ ಅಂತೀರ, ಗೌಡರೆ?"

"ಬೇಸಕ್ಕಾಗಿ, ನಡೀರ ಬೇಕಾರೆ ಯಾವ ದ್ಯಾವರ ಮುಂದೆ ನಿಂತು ಬೇಕಾರೂ ಪ್ರಮಾಣ ಮಾಡ್ತೀನಿ"

"ಅಷ್ಟೆಲ್ಲ ತೊಂದರೆ ಯಾಕೇ?..... ನೀವು ಪ್ರಮಾಣಾನು ಮಾಡಬೇಕಾಗಿಲ್ಲ. ಬೇರೆ ಯಾವ ತೊಂದರೇನೂ ತಕ್ಕೊಬೇಕಿಲ್ಲ.... ಇದ್ನ ಪತ್ತೆ ಮಾಡಕ್ಕೆ ನಾನು ಬೇರೆ ಔಷಧಾನೆ ಇಟ್ಟಿದ್ದೀನಿ......"

"ಬ್ಯಾರೆ ಔಷದಿ ಇಟ್ಟೀವ್ನಿ ಅಂದ್ರಲ್ಲ-ಅಂಗಂದ್ರೇನ ಸೋಮಿ?" ಗಂಗಪ್ಪ ಧೈರ್ಯ ಮಾಡಿ ಕೇಳೇ ಬಿಟ್ಟ.

.... ಜಗಲಿಯಿಂದ ಇಳಿಯುತ್ತ, ಗಂಗಪ್ಪನತ್ತ ದೃಷ್ಟಿ ಹಾಯಿಸಿ, ಗೂಳಪ್ಪ "ಬ್ಯಾರೆ ಔಷಧಿ ಯಾವದೂಂತ ನಿವೇನಪ್ಪ ಕೇಳಿದೋರು?.... ಅದು ಬಲು ಸುಲಭದ ಔಷಧ ಆ ಹುಡಗನ ಹೆಣವ ಹೂಳಿರೊ ಜಾಗದಿಂದ ಆಗಿಸಿ ತೆಗಿಸ್ತೀನಿ, ಆಮೇಲೆ ಅದ್ನ ವೈದ್ಯರ ಪರೀಕ್ಷೆಗೆ ಗುರಿ ಮಾಡ್ತೀನಿ. ಆಗ ಆ ಹುಡುಗ ನಿಮ್ಮ ಇನ್ನೊಬ್ಬ ಯಜಮಾನ್ರು ಹೇಳಿದ ಹಾಗೆ ನ್ಯೂಮೋನಿಯಾ ಜ್ವರದಿಂದ ಸತ್ತನೊ ಅಥವಾ ನನಗೆ ತಿಳಿದು ಬಂದಿರೊ ಹಾಗೆ ನೇಣು ಹಾಕ್ಕೊಂಡು ಪ್ರಾಣ ಬಿಟ್ಟನೊ ಅನ್ನೋದು ನಿಖರವಾಗಿ, ಎಳ್ಳಷ್ಟು ಅನುಮಾನಕ್ಕೂ ಆಸ್ಪದ ವಿಲ್ಲದೆ ಪ್ರಕಟವಾಗುತ್ತದೆ" ಎಂದು ಹೇಳಿ, ಗಂಗಪ್ಪನೂ ಸೇರಿದಂತೆ ಅಲ್ಲಿದ್ದ ಯಜಮಾನರೆಲ್ಲರಿಗೂ ಜಾಪಾಳದ ಮಾತ್ರೆ ಕೊಟ್ಟ, (ಪುಟ ೧೯೧-೯೩-ವೈಶಾಖ).

ಮೇಲಿನ ಸನ್ನಿವೇಶದಲ್ಲಿ ಬರುವ ಪಾತ್ರಗಳಲ್ಲಿ ಮೇಲ್ವರ್ಗ, ಮಧ್ಯಮವರ್ಗ ಮತ್ತು ಕೆಳವರ್ಗಗಳನ್ನು ಪ್ರತಿನಿಧಿಸುವ ಪಾತ್ರಗಳಿವೆ. ಸೀತಾರಾಮಯ್ಯ ಮೇಲ್ವರ್ಗವನ್ನು ಪ್ರತಿನಿದಿಸಿದರೆ, ನಂಜೇಗೌಡ ಮತ್ತು ಗಂಗಪ್ಪ ಮಧ್ಯಮವರ್ಗವನ್ನೂ, ಇನಸ್ಪೆಕ್ಟರ್ ಗೂಳಪ್ಪ ಕೆಳವರ್ಗವನ್ನು ಪ್ರತಿನಿಧಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸೀತಾರಾಮಯ್ಯನವರ ಮಾತುಗಳಲ್ಲಿ ಶುದ್ಧ ಹಾಗೂ ಸ್ಪಷ್ಟವಾದ ಉಚ್ಚಾರಣೆಯಿದ್ದರೆ ನಂಜೇಗೌಡ ಮತ್ತು ಗಂಗಪ್ಪನವರ ಮಾತುಗಳಲ್ಲಿ ಇದಕ್ಕೆ ವಿರುದ್ಧವಾದ ಪ್ರಯೋಗವಿದೆ. ಆದರೆ ಶಿಕ್ಷಿತನಾದ ಗೂಳಪ್ಪನ ಮಾತುಗಳಲ್ಲಿ ಶಿಕ್ಷಣದ ಫಲವಾಗಿ ಶುದ್ಧವಾದ ಕನ್ನಡಕ್ಕೆ ತೆರೆದುಕೊಂಡಿರುವುದು ಅವರಾಡುವ ಮಾತುಗಳಿಂದ ಗೋಚರಿಸುತ್ತದೆ. ಉದಾಹರಣೆಗೆ,

ಬೇರೆ-ಬ್ಯಾರೆ	ಔಷಧ-ಔಷದಿ
ಸ್ವಾಮಿ-ಸೋಮಿ	ಇಟ್ಟಿದ್ದೀನಿ-ಇಟ್ಟೀವ್ನಿ

ಇಂತಹ ಉಚ್ಚಾರಣೆಯಲ್ಲಿ ಶಿಕ್ಷಿತ ಮತ್ತು ಅಶಿಕ್ಷಿತರ ನಡುವಿನ ವ್ಯತ್ಯಾಸ ಒಡೆದು ಕಾಣುತ್ತದೆ.

೪.೪ ಅಧಿಕಾರ

ಸಾಮಾಜಿಕ ರಚನೆಯಲ್ಲಿ ವ್ಯಕ್ತಿಯು ಅಭಿವ್ಯಕ್ತಿಗೊಳಿಸುವ ಭಾಷೆಯ ನೆಲೆಯಿಂದಲೇ ಸಮಾಜದಲ್ಲಿ ಅವನಿಗಿರುವ ಸ್ಥಾನವನ್ನು ಗುರುತಿಸಬಹುದು. ಅಂದರೆ ಪ್ರತಿಯೊಂದು ಸ್ಥಾನಮಾನವು ಸಾಮಾಜಿಕವಾಗಿ ಕೆಲವು ಭಾಷಿಕ ಲಕ್ಷಣಗಳನ್ನು ಹೊಂದಿದ್ದು ಪ್ರತಿ ಪಾತ್ರಕ್ಕೂ ಅಥವಾ ವ್ಯಕ್ತಿಗೂ ಅವರದೇ ಆದ ವಿಶಿಷ್ಟ ವಾದ ಪದಕೋಶವನ್ನು, ಭಿನ್ನವಾದ ಸಂಬೋದನಾ ರೂಪಗಳನ್ನು ಹೊಂದಿರುತ್ತದೆ. ಅಲ್ಲದೆ ತನ್ನ ಸ್ಥಾನಕ್ಕಾಗಿ ವಿಶೇಷ ಹಾಗೂ ಭಿನ್ನವಾದ ಸಂಪೂರ್ಣ ಬೇರೆಯದೇ ಆದ ಭಾಷೆಯನ್ನು ಅಳವಡಿಸಿಕೊಂಡಿರುತ್ತದೆ.

ಇಂತಹ ಭಾಷಿಕ ನೆಲೆಯಿಂದಲೇ ಅಧಿಕಾರಿ ಮತ್ತು ಅಧಿಕಾರ ಹೀನ ವರ್ಗವನ್ನು ಗುರುತಿಸಬಹುದು. ಉದಾ:

ಹವಾಲ್ದಾರರು ಹಾಗೂ ಪೋಲೀಸರು ದಾದಾನನ್ನು ಹೊಲಗೇರಿಯ ಮನೆಗಳಲ್ಲಿ ಹುಡುಕುವ ಸಂದರ್ಭ

.....ಕಸಗುಡಿಸುವ ಒಬ್ಬ ಹೊಲೆಯನಿಗೆ "ಏ ಕತ್ತೆ ನಿಲ್ಲು ನಮ್ಮ ಮ್ಯಾಗ್ಯ ಕಸಾ ಹಾಕತಿ ಕಾಣೂದಲ್ಲ?" ಎಂದು ಗುಡುಗಿದರು.

ಬಗ್ಗಿ ಕಸಗುಡಿಸುತ್ತಿದ್ದ ಹೊಲೆಯರ ಕಂಟ್ಯಾ ಈ ಮಾತಿಗೆ ತಲೆಯೆತ್ತಿ ನೋಡುತ್ತಾನೆ; ಹವಾಲ್ದಾರರು, ಪೋಲಿಸರು! ಅವರ ಮಾತಿಗೆ ಉತ್ತರ ವೀಯುವ ಧೈರ್ಯವಿಲ್ಲದೆ ಅವನು ಹೆದರಿ ಓಡಿ ಮನೆ ಸೇರಿದ. ದಾರಿ ತೋರಿಸಲು ಬಂದ ಶಂಕರಪ್ಪನ ಆಳು "ಈಗ ಓಡಿ ಹೋದನಲ್ಲರೀ, ಅವನ್ಯ ಚಂದ್ರೀ ತಮ್ಮ ಕಂಟ್ಯಾ. ಅಂವಾ ಓಡಿ ಹೋದದ್ದು ಚಂದ್ರೀ ಮನೀರಿ. ಪಾದಳ್ಳೀ ಇಸಮು ಇರೊದು ಅದ ಮನ್ಯಾಗ್ಯ" (ಪು.೧೬೬ ಗ್ರಾಮಾಯಣ) ಎಂದು ಸಂಶೋಧನದ ತನ್ನ ಕರ್ತವ್ಯವನ್ನು ಪೂರೈಸಿದ.

ಹೊಲಗೇರಿಯಲ್ಲಿ ಪೋಲಿಸ್ ಅಧಿಕಾರಿಗಳು ಬಂದದ್ದನ್ನು ಆಗಲೇ ಕೆಲವರು ನೋಡಿ, ಸುದ್ದಿ ಹಬ್ಬಿಸಿದರು. ಅದರ ಫಲವಾಗಿ ಚಂದ್ರಿಯ ಮುಂದೆ ಹತ್ತೆಂಟು ಜನರು ಕೂಡಿದರು. ಹವಾಲ್ದಾರರಿಗೆ ಆ ಜನರ ಗುಂಪನ್ನು ನೋಡಿ ಮತ್ತೆ ತಲೆ ಕೆಟ್ಟಿತು. "ಒಂದು ಹೆಜ್ಜೆ ಮುಂದೆ ಇಟ್ಟರ ನೋಡ್ರಿ. ಆರೋಪಿ ಜನರನ್ನ ಪತ್ತೆ ಮಾಡೋ ಸರಕಾರಿ ಕೆಲಸದಾಗ ಹರಕತ್ತ ಮಾಡಿದ ಗುನ್ನೇದ ಮ್ಯಾಗಿಂದ ನಿಮಗೆಲ್ಲಾ ಸಾಲಬೆಡಿ ಹಾಕಿಸಬೇಕಾದೀತು" ಎಂದು ಜಬರಿಸಿ, "ಏ ಕಂಟ್ಯಾ ಹೊರಗೆ ಬಾ" ಎಂದು ಕೂಗಿದರು.

"ಲೇ ಕಂಟ್ಯಾ ಏನ ನೋಡ್ತೀಲೆ ಮಗನ್ಯ ಪಾದಳ್ಳಿ ಆರೋಪಿನ್ನ ತಂದು ಹೊರಗ ಹಾಕು" ಹವಾಲ್ದಾರರು ಆಜ್ಞೆ ಮಾಡಿದರು. "ಯಪ್ಪಾ ಅದೊಂದು ಮಾತ ಹೇಳಬ್ಯಾಡ್ರಿ ದೊಡ್ಡ ಮನೆತನದ ಜನಾ ಅವರು. ನಾ ಹ್ಯಾಂಗ ಮೈಮುಟ್ಟಿತರಲಾಕ ಬರತೈತಿ ಹೇಳ್ರಿ" ಕಂಟ್ಯಾ ವಿನಯವೇ ಮೈವೆತ್ತು ಬಂದಂತೆ ನುಡಿದ.

ಮೇಲಿನ ಉದಾಹರಣೆಯಲ್ಲಿ ಅಧಿಕಾರಿ ಮತ್ತು ಅಧಿಕಾರಹೀನ ವರ್ಗದ ನಡುವಿನ ತಾರತಮ್ಯ ಒಡೆದು ಕಾಣುತ್ತದೆ. ಹವಾಲ್ದಾರರು ತಮಗೆ ಇರುವ ಅಧಿಕಾರದ ಕಾರಣಕ್ಕಾಗಿಯೇ ಹೊಲಗೇರಿಯ ಜನರನ್ನು ಗದರಿಸುವ, ಗುಡುಗುವ, ಜಬರಿಸುವ, ಆಜ್ಞೆ ಮಾಡುವ ರೀತಿಯ ಮಾತುಗಳಿದ್ದರೆ. ಹೊಲಗೇರಿಯ ಜನರಲ್ಲಿ ಅವರನ್ನು ನೋಡಿಯೇ ಹೆದರಿ ಮನೆ ಸೇರುವ, ಅವರ ಮಾತಿಗೆ ವಿನಯದಿಂದಲೇ ಉತ್ತರಿಸುವ, ದೈನ್ಯತೆಯಿಂದ ಬೇಡಿಕೊಳ್ಳುವ ರೀತಿಯ ನಡೆ ನುಡಿಗಳು ಕಂಡುಬರುತ್ತವೆ. ಇವರ ಈ ಮಾತುಗಳಿಂದಲೇ ಇವರ ಸಾಮಾಜಿಕ ವಾಗಿ ಮೇಲ್ಮಟ್ಟದ ಸ್ಥಾನವನ್ನು ಪ್ರತಿನಿಧಿಸಿದರೆ, ಅಧಿಕಾರಹೀನ ಜನರು ಕೆಳಮಟ್ಟದ ಸ್ಥಾನವನ್ನು ಪ್ರತಿನಿಧಿಸುತ್ತಾರೆ. ಇಂತಹ ಮಾತುಗಳಿಂದಲೂ ಅಧಿಕಾರಿ ಮತ್ತು ಅಧಿಕಾರ ಹೀನ ನಡುವಿನ ತಾರತಮ್ಯ ದಿಂದಲೂ ಸಾಮಾಜಿಕ ಚಹರೆಯನ್ನು ಗುರುತಿಸಬಹುದು.

೪.೫ ಸಂಬೋಧನಾ ರೂಪಗಳು

ಭಾಷೆಯಲ್ಲಿ ಸಂಬೋಧನಾ ರೂಪಗಳಿಗೆ ಭಾಷಿಕ ಮೌಲ್ಯಗಳನ್ನು, ಹೊರತುಪಡಿಸಿ ವಿಶೇಷವಾದ ಸಾಮಾಜಿಕ ಸಾಂಸ್ಕೃತಿಕ ಮೌಲ್ಯವಿದೆ. ಸಾಮಾಜಿಕ ಸಂವಹನದ ಸಂದರ್ಭದಲ್ಲಿ ಸಂಬೋಧನಾ ರೂಪಗಳು ವ್ಯಕ್ತಿಗಳನ್ನು ಸಂಬೋಧಿಸುವ ಅಂಶಗಳಷ್ಟೇ ಆಗಿರದೇ ಬಳಸುವ ವ್ಯಕ್ತಿಗಳ ಮತ್ತು ಬಳಸಲ್ಪಡುವ ವ್ಯಕ್ತಿಗಳ ನಡುವಿನ ಸ್ಥಾನಮಾನ ಮತ್ತು ಸಂಬಂಧಗಳು ತಿಳಿಯುತ್ತವೆ. ಅಲ್ಲದೆ ಬಳಕೆಯಾಗುವ ಸಂಬೋಧನಾ ರೂಪಗಳನ್ನು ಸಮಾಜ ಹೇಗೆ ನಿಯಂತ್ರಿಸುತ್ತದೆ ಮತ್ತು ನಿರ್ದೇಶಿಸುತ್ತದೆ ಎಂಬುದೂ ತಿಳಿಯುತ್ತದೆ. ಆದುದರಿಂದಲೇ ಭಾಷೆಯಲ್ಲಿನ ಸಂಬೋಧನಾ ರೂಪಗಳು ಸಾಮಾಜಿಕ ರಚನೆಯನ್ನು ಪ್ರತಿನಿಧಿಸುವ ಅಂಶಗಳಾಗಿರುತ್ತವೆ. ಸಾಮಾಜಿಕ ಸ್ಥಿರವಾದ ಲಿಂಗ, ಜಾತಿಯಂತಹ ಅಂಶಗಳಲ್ಲಿ ಮತ್ತು ಚಲನೆಯುಳ್ಳ ಸಾಮಾಜಿಕ ಅಂಶಗಳಾದ ವಯಸ್ಸು ಸಾಮಾಜಿಕ ಸ್ಥಾನಮಾನದಂತಹ ಅಂಶಗಳಲ್ಲಿ ಭಿನ್ನವಾಗಿರುತ್ತವೆ" (ಭಾಷಾ ವಿಶ್ವಕೋಶ, ಪು.೫೦) ಎಂಬುದನ್ನು ಆಯ್ದು ಕಾದಂಬರಿಗಳಲ್ಲಿನ ನಿದರ್ಶನಗಳೊಂದಿಗೆ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಸಮಾಜದಲ್ಲಿನ ಜಾತಿಶ್ರೇಣಿಕರಣದಲ್ಲಿ ಸಾಮಾನ್ಯವಾಗಿ ಕೆಳವರ್ಗ ಮೇಲ್ವರ್ಗದವರನ್ನು ಸಂಬೋಧಿಸುವಾಗ ಗೌರವ ಸೂಚಕ ಬಹುವಚನ ಪ್ರತ್ಯಯವನ್ನು ಬಳಸಿದರೆ, ಮೇಲ್ವರ್ಗದವರು ಏಕವಚನವನ್ನು ಬಳಸುತ್ತಾರೆ. ಉದಾ:

* 'ಅವ್ವರ ಏಳಿಸ್ಲ ಅಳಿ'

"ಬ್ಯಾಡ ನಂದು ನಂಜಲಗೂಡ್ಲೆ ಊಟಾಯ್ತುಕಣ ನೀ ಮಲಿಕ

ಇನ್ನು......." (ಪು. ೧೧೪, ಕುಸುಮಬಾಲೆ)

* ಯಾನ್ರುಡ ಅದು?

"ಐ ಚರ್ಮಕನ್ನಿ ಬುದ್ಯೆ" (ಪು. ೧೪೧, ಕುಸುಮಬಾಲೆ)

* "ಅದ್ಯಾನ ಅಸ್ಟು ಮಾತಾಡೀರೀ ಕೇಳ್ರಮ್ಮೀ ಯಮ್ಕಗಳ"

(ಉತ್ತಮರ ಜಾತಿ ಜೋತಮ್ಮ)

"ಆಕ್ಕೈ ನಾ ಹೇಳ್ತೀನಿ ತಾಳಿ ಅದ" (ತೂರಾರ ಜೋತಮ್ಮ)

ಅದ್ಯಾಕ ಅವ್ವ ಬಾಯ್ ಮುಚ್ಚಿಸಿರಿ ನೀವು....? (ಹೊಲೆಯರ ಜೋತಮ್ಮ)

(ಪು.೧೦೨, ಕುಸುಮಬಾಲೆ)

* ವುರಗಯ್ಯನು "ಯವ್ವಾ ತಾಯೀ....." ಅಂದನು.

"ಯೇನಲೋ" ಆಂದಳು ರಾಜಮಾತೆ". (ಪು.೬೦, ಅರಮನೆ)

"ಮುಂದೆಂದಾದರ ನನ್‌ಮಗ ತೆಪ್ ಮಾಡಿದನಂದರ ವದ್ದು ಬುದ್ಧಿ ಹೇಳಿರವ್ವಾ ದೊರೆಸಾನಿ". (ಪುಟ ೧೪೩ ಅರಮನೆ)

* "ಒಡತಿಯರೆ, ಬಾಣಂತಿ ಸುತ್ತಿಕೊಳ್ಳುವುದಕ್ಕೆ ವಸ್ತ್ರವಿಲ್ಲ. ಒಂದು ವಚ್ಚಡಿಕೆ ತುಂಡು ಇದ್ದರೆ ಕೊಟ್ಟಿರಾಗುತ್ತಿತ್ತು".

"ನಿನ್ನದು ಆಯಿತು ಹೋಯಿತು ಅಂತ ಇಲ್ಲ. ಕೊಡುವ ನಾಳೆ ನಾಡಿದಿನ ಹಾಗೆ. ಈಗ ಅದಕ್ಕೆಲ್ಲ ಪುರುಸೋತ್ತಿಲ್ಲ".

"ಆಯಿತು, ಒಡತಿ, ಆಯಿತು" (ಪು.೮೩, ಅಸ್ಪಶ್ಯರು).

ಲಕ್ಕ ಶಾಸ್ತ್ರಿಗಳನ್ನು ಸಮೀಪಿಸಿದವನೆ, "ಯಾಕೆ ಸೋಮಿ ಇಂಗೆ ಕುಂತುಬುಟ್ರಿ? ಮದ್ದಿನ್ನ ಆಗ್ಲೆ ದಾಟೋಗದೆ" ಎಂದು ಕೇಳಿದನು ಕೇಸವಯ್ಯಾರ ತ್ವಾಟಕೋಗಿದ್ದೆ ಎಂದು ವಿವರಿಸಿ. ಅಡಿಕೆ ಸೊಸಿಗಳ್ಗೆ ನೀರ ಆಕ್ಲಾ? "ಕೇಳಿದ ಶಾಸ್ತ್ರಿಗಳು ತನ್ನ ಮಾತಿಗೆ ಉತ್ತರ ಕೊಡದಿರಲು ಲಕ್ಕ, ಮತ್ತೊಮ್ಮೆ ಅವರನ್ನು ಸಮೀಪಿಸಿ ಕೇಳಿದ.

"ಸೊಸಿಗಳ್ಗೆ ನೀರ ಆಕ್ಲಾ, ಅಯ್ಯಾರೆ"

"ಬೇಡ. ಎಲ್ಲಕ್ಕೂ ನಾನೇ ಹಾಕಿದ್ದೀನಿ" (ಪು.೧೬೦, ವೈಶಾಖ).

* "ಲೇ ಗುರುಪಾದಾ, ಆ ಗಾಂಜಿಬಡಕ ಕೆಂಚಗ ನಾ ಒಂದು ಕೆಲಸ ಹೇಳಿದ್ದೆ. ಮಾಡ್ಯಾನ ಏನ ಕೇಳಿ ಬಾರಲೇ" ಎಂದು ಆಜ್ಞಾಪಿಸಿದನು. (ಪು.೧೨, ಗ್ರಾಮಾಯಣ).

* ಗಾತ ಆಗೇತರಿ ಬುದ್ಧೀ, ಗಾತ ಪುತಳಾಬಾಯಿ!....." ಅರ್ಧಕ್ಕೆ ತಡೆದ.

"ಏನಾಗೇತಿ ಹೇಳಲೇ? ಹಿಂಗ್ಯಾಕ ನಾಲಗಿ ಸವರ್‍ಯಾಡತಿ?" ಪಡದಯ್ಯನವರು ಸಿಟ್ಟಿಗೆದ್ದವರಂತೆ ನಟಿಸಿದರು.

"ಆಗೋದೆಲ್ಲಾ ಆಗಿ ಹೋಗೇತಿ ಬುದ್ಧಿ, ಪುತಳಾಬಾಯಿ ರಾಮು ಅಂದಳು". (ಪು.೧೧೩, ಗ್ರಾಮಾಯಣ).

* ಓಲಕಾರ ಮಲ್ಲಪ್ಪ "ಅಮಲ್ದಾರ ಸಾಹೇಬರು ಊರಿಗೆ ಬರುತಾರಂತಲ್ಲರೀ? ನಿಮಗೇನಾದರ ಕಾಗದ ಬರದ ಬಂದೈತೇನರಿ ಯಪ್ಪಾ?"

"ಯಾರು ಹೇಳಿದರು? ಯಾರು ಬರುತಾರಂತಲೇ?" ಎನ್ನುತ್ತ ಗೌಡರು ಬತ್ತಿಯಲ್ಲಿಯ ತಂಬಾಕದ ಹೊಗೆಯನ್ನು ಜಗ್ಗಿಬಿಡುತ್ತಾ ಪ್ರಶ್ನೆಮಾಡಿದರು. (ಪು.೭೫, ಗ್ರಾಮಾಯಣ)

* "ಬಾರ್‍ಲ ಲಕ್ಕ. ರೊಟ್ಟಿ ತಿನ್ನೀವಂತೆ, ಬ್ಯಾಡಿ ಬುಂಡಮ್ಮಾರೆ" (ಪು.೨೬, ವೈಶಾಖ).

ಕೊಟ್ಟಿರುವ ನಿದರ್ಶನಗಳಲ್ಲಿ ಕೆಳವರ್ಗದವರು ಮೇಲ್ವರ್ಗದವರನ್ನು ಸಂಬೋಧಿಸಬೇಕಾದರೆ, ಅಳಿ, ಗೌಡ್ರೇ, ಬುದ್ಧಿ, ಸ್ವಾಮಿ, ಅವ್ವ, ತಾಯಿ, ಒಡತಿಯರೆ, ಅಮ್ಮಾರೆ ಎಂಬಂಥ ಸಂಬೋಧನಾ ರೂಪಗಳನ್ನು ಬಹುವಚನ ಪ್ರತ್ಯಯಗಳೊಂದಿಗೆ ಬಳಸಿದರೆ, ಮೇಲ್ವರ್ಗದವರು ಕೆಳವರ್ಗದವರನ್ನು ಸಂಭೋದಿಸುವಾಗ ಏಕವಚನ ಪ್ರತ್ಯಯವನ್ನೂ ಲೇ ಲೋ.. ಅಮ್ಮಿ ಎಂಬಂಥ ಸಂಬೋಧನಾ ರೂಪಗಳನ್ನು, ಅವರ ಅರ್ಧ ಹೆಸರಿನಿಂದಲೋ ಅಡ್ಡಹೆಸರಿನಿಂದಲೋ ಕರೆಯುವುದನ್ನು ನೋಡಬಹುದು.

ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಸ್ತ್ರೀ-ಪುರುಷರ ಸ್ಥಾನಮಾನಗಳನ್ನು ಮತ್ತು ಸಾಮಾಜಿಕ ತಾರತಮ್ಯಗಳನ್ನು ಸೂಚಿಸುವ ಅನೇಕ ಭಾಷಿಕಾಂಶಗಳಿವೆ. ಭಾಷೆಯಲ್ಲಿ ಜಾತಿಭಿನ್ನತೆಯನ್ನು ಸೂಚಿಸಲಿರುವ ಸ್ಥಿರ ಲಕ್ಷಣಗಳಂತೆ ಲಿಂಗ ಭಿನ್ನತೆಯನ್ನು ಸೂಚಿಸುವ ಸ್ಥಿರಲಕ್ಷಣಗಳೂ ಇವೆ. ಸಮಾಜದಲ್ಲಿ ಗಂಡು ಮೇಲು-ಹೆಣ್ಣು ದ್ವಿತಿಯ ಎಂದು ಹೇಳುತ್ತಿದ್ದಾಗಲೂ ಕೂಡ ಎಲ್ಲ ಗಂಡಸರು ಮೇಲ? ಎಲ್ಲ ಹೆಂಗಸರು ದ್ವಿತೀಯರ? ಎಂಬುದನ್ನು ಪ್ರಶ್ನಿಸಿಕೊಂಡಾಗ ಶ್ರೇಣಿಯಾಧಾರಿತ ಮತ್ತು ಜಾತಿಯಾಧಾರಿತ ಈ ಸಮಾಜದಲ್ಲಿ ಸಿಗುವ ಉತ್ತರ ಭಿನ್ನವಾದುದಾಗಿದೆ. ಅಧಿಕಾರ, ಅಂತಸ್ತು, ಜಾತಿಯ ಕಾರಣಕ್ಕಾಗಿ ಉನ್ನತ ಸ್ಥಾನಮಾನದಲ್ಲಿರುವ ಮೇಲ್ವರ್ಗದ ಗಂಡು-ಹೆಣ್ಣುಗಳಿಗೆ ಸಿಗುವ ಗೌರವಾದರಗಳು, ಇವುಗಳಿಂದ ವಂಚಿತವಾದ ಕೆಳವರ್ಗದ ಗಂಡು-ಹೆಣ್ಣುಗಳಿಗೆ ಸಿಗುವುದಿಲ್ಲ. ಇದನ್ನು ಸಂಬೋಧನಾ ವಾಚಿಗಳಲ್ಲಿ ನೋಡುವುದಾದರೆ, ಮೇಲ್ವರ್ಗದ ಗಂಡು ಮೇಲ್ವರ್ಗದ ಹೆಣ್ಣು, ಕೆಳವರ್ಗದ ಗಂಡು-ಹೆಣ್ಣುಗಳೊಂದಿಗಿನ ಸಂವಹನಕ್ಕಾಗಿ, ಏಕವಚನ ಸಂಬೋಧನಾ ರೂಪಗಳನ್ನು ಬಳಸಿದರೆ, ಮೇಲ್ವರ್ಗದ ಹೆಣ್ಣು ಮೇಲ್ವರ್ಗದ ಗಂಡಿನೊಂದಿಗೆ ಸಂವಹನಕ್ಕಾಗಿ ಗೌರವಪೂರ್ವಕ ಬಹುವಚನ ಸಂಬೋಧನಾ ವಾಚಿಯನ್ನೂ, ಕೆಳವರ್ಗದ ಗಂಡು-ಹೆಣ್ಣಿನ ನಡುವಿನ ಸಂವಹಕ್ಕಾಗಿ ಏಕವಚನ ಸಂಬೋಧನಾ ರೂಪಗಳನ್ನು ಬಳಸುತ್ತಾರೆ. ಕಾದಂಬರಿಗಳಿಂದಲೇ ಇದಕ್ಕೆ ನಿದರ್ಶನಗಳನ್ನು ನೋಡುವುದಾದರೆ,

* ಮೇಲ್ವರ್ಗದ ಕೌಟುಂಬಿಕ ವಲಯದಲ್ಲಿ ಗಂಡ-ಹೆಂಡಿರರ ನಡುವಿನ ಮಾತುಕತೆಗಳಲ್ಲಿ ಗಂಡ-ಹೆಂಡತಿಯನ್ನು ಏಕವಚನದಲ್ಲಿ ಹೆಸರಿನೊಂದಿಗೆ ಕರೆದರೆ ಹೆಂಡತಿ ಬಹುವಚನದಲ್ಲಿ ಗೌರವ ಪೂರ್ವಕವಾಗಿ ಸಂಬೋಧಿಸುತ್ತಾಳೆ. ಉದಾ:

* "ಇಲ್ನೋಡಿ ಅಂದ್ರೆ, ನೀವು ರುಕ್ಕೂಗೆ ಕಾಯಿ ನಡೆಸಿಕೊಟ್ಟು ಬೇಕಾದ ಹಾಗೆ ಸಹಾಯ ಮಾಡಿ- ನಾನೇನು ಬೇಡ ಅನ್ನಲ್ಲ. ಆದ್ರೆ ನಾನು ದಾಳ ಬಿಡುವಾಗಲೆಲ್ಲ ಹೀಗೆ ಏನಾದರೂ ನಾಶಬಾಯಿ ನುಡಿದು ಬೇಸರಪಡಿಸಿದರೆ ನಾನು ಸಹಿಸಿ ಸುಮ್ಮನೆ ಕೂರಲ್ಲ" ಎಂದಳು.

ಕೇಶವಯ್ಯ ತನ್ನ ಎರಡೂ ಕೆನ್ನೆಗಳಿಗೆ ಹೊಡೆದುಕೊಳ್ಳುತ್ತ "ಶಾಂತಂ ಪಾಪಂ, ತಪ್ಪಾಯ್ತು.... ಇನ್ನು ಮುಂದೆ ಬಾಯಿ ಬಿಚ್ಚಲ್ಲ" ಪಶ್ಚಾತ್ತಾಪದ ಶಾಂತಂ ಪಾಪಂ ನಟಿಸಿದ....

"ಅಯ್ಯೋ... ಅಯ್ಯೋ ಈ ಹಸಿರು ಕಾಯಿ ಯಾವಾಗ ಹಣ್ಣಾಯ್ತೂ? ಮೋಸ, ಮೋಸ" ಎಂದು ಕಿರುಚಿದಳು.

“ಸುಮ್ಮನೆ ಅಡೆ. ಅದನ್ನಾರು ಈಗ ಮಲಗಿಸಕ್ಕೆ ಬಂದಿದ್ದರು?” ಎಂದುಬಿಟ್ಟ. (ಪು.೧೩೯, ವೈಶಾಖ).

* ಯಾಕೆ ರುಕ್ಕು? ಏನಾಯಿತು ನಿನ್ನ ಕಣ್ಣಲ್ಲಿ ಯಾಕೆ ನೀರು ಯಜಮಾನರು ಏನೂ ಅರಿಯದವರಂತೆ ಕೇಳಿದರು.

“ನೀವು ಗಂಡಸರು ಇದ್ದೀರಲ್ಲಾ. ನೀವೆಲ್ಲಾರು ಶುದ್ಧಾಂಗ ಮೋಸಗಾರರು” ಅಲ್ಲರೀ ಈ ಮಾತನ್ನ ನನ್ನ ಸಂಗಡ ಹೇಳಲಿಕ್ಕೆ ನಿಮಗೆ ಕೊಂಚವೂ ನಾಚಿಕೆಯ ಆಗಲಿಲ್ಲವೆ?”

“ಯಾಕೆ?”

“ಯಾಕಂತೆ ಯಾಕೆ? ರಾಜಾರೋಷವಾಗಿ ಎಲ್ಲರೆದುರೂ ಒಂದು ಪ್ರಾಯದ ಹೆಣ್ಣಿನ ಸೊಂಟ ಬಳಸಿ ತೊಡೆಯ ಮೇಲೆ ಮಲಗಿಸಿ ಉಪಚರಿಸಿದೆ ಅಂತ ನನ್ನ ಮುಂದೆಯೂ ನಿಸ್ಸಂಕೋಚವಾಗಿ ಹೇಳ್ತೀದೀರಲ್ಲ...”

“ಪ್ರಾಯದ ಹೆಣ್ಣು?”

“ಇದೇನು ಸಣ್ಣ ಪ್ರಾಯದ ಹೆಣ್ಣಲ್ಲವೆ? ಯಾಕ್ರೀ ಸುಮ್ಮನೆ ನನ್ನನ್ನ ಸತಾಯಿಸ್ತೀರ”? (ಪುಟ ೪೭-ವೈಶಾಖ).

* ಅಶ್ವತ್ಥ ಪಾತುವಿನ ಕಡೆ ತಿರುಗಿ “ನೀನಾದರೂ ಬಾಮ್ಮ ನೀನೂ ನಿನ್ನ ಯಜಮಾನರೂ ನಮ್ಮ ಊರಿಗೆ ಬಂದು ಬಹಳ ಕಾಲವೇ ಸಂದಿವೆ. ನೀವೆಲ್ಲಾ ಈಗಲಾದರೂ ಬನ್ನಿ. ಹಾಯಾಗಿ ಒಂದೆರಡು ತಿಂಗಳವರೆಗೆ ಇದ್ದು ಬೇಸರ ಕಳೆದು ಹೋಗುವಿರಂತೆ” ಎಂದು ಆಹ್ವಾನಿಸಿದ. (ಪು.೮೮ ವೈಶಾಖ).

* ಬರೋಗ ಮನ್ಯಾಗ ಅವರಿಗಿ ಓದುತ್ಯಾನಂತೆ ಹೇಳಿ ಪುಸ್ತಕ ತಗೊಂಡ ಬಂದ್ಮಾನ, ಇಲ್ಲಿ ಬಂದ ಮ್ಯಾಲಿ, ಒಂದಿನಾರ ಪುಸ್ತಕ ಕೈಯಾಗ ಹಿಡಿಬೇಕು? ಇಲ್ಲ....! ಬರೇ ಹುಡದಿ ಹುಡದಿ.... ಈ ಸಾರೆ ನಾಪಾಸರ ಆಗಲ್ಲಾ..... ಸಾಲೀ ಬಿಡಿಸಿ ದನಾಕಾಯ್ಕ ಹಚ್ಚುತ್ಯಾನು” (ಪುಟ-೨೫ ನಿಸರ್ಗ).

* “ನೀವ ಒಂದ ರೊಟ್ಟೀ ತಿಂದ ಹೋಗರೆಲ್ಲ! ಅಲ್ಲಿ ಹೋಗಿ ಯಾವಾಗ ಕೂಳ್ ಗಾಣತೀರೋ ಯಾನೋ?” ಎಂದು ಬಾಗಿಲವರೆಗೆ ಸುಂದರಾ ಹೋದಳು.

“ಈಗ್ಯಾಗ ಒಲ್ಲಿ; ಈಗ ಹೋಗತ್ಯಾನ ಸಾಯಕಲ್ಲಮ್ಯಾಲಿಂದ; ಬೆನ್ನ ಗಾಳಿ ಏತಿ” ಎಂದು ಸ್ವಲ್ಪ ಮುಂದೆ ಹೋಗಿ, ಹಿಂದೆ ಹೊರಳಿ ಮನೀ ಕಡೆ ಜೋಕೆ ಅ್ನ! ಸಂಜಿನಾಗ ಅನಂತಗ ಒಂದು ತಾಸ ಅಂಗಡಿ ತೆರಕೊಂಡ ಕೂಡನ್ನ” ಎಂದು ಹೇಳಿ ಹೋಗಿ ಬಿಟ್ಟ ರಾಮಣ್ಣ. (ಪುಟ-೧೭೭ ನಿಸರ್ಗ)

* “ಹೋಗೀಂದ್ರೆ. ಕೊತ್ತಿ ಸೀತಹಾಗೆ ನೀವು ಏನೇನೋ ಹೇಳಿ ನಮ್ಮ ಕೈಕಾಲು ಬಿಡಿಸಿದಿರಿ”. (ಪು.೭೮, ವೈಶಾಖ)

* “ಮೊದಲ ನದೀಗೆ ಹೊರಡೋ ವ್ಯವಸ್ಥಾ ಮಾಡಿರಿ. ನಮ್ಮಾಕಿ ಈಗ ಮುಕ್ತ ಆದಳು. ಅಂತ್ಯ ಸಂಸ್ಕಾರದ ವ್ಯವಸ್ಥಾ ಸಾಧ್ಯ ಆದಷ್ಟು ಲಗೂನೆ ಎಲ್ಲರೂ ಕೂಡಿ ಮಾಡಿಬಿಡಿರಿ”. (ಪುಟ-೩೮೭ ಗ್ರಾಮಾಯಣ)

* "ಬ್ಯಾಡಯ್ಯ ಯಾಕೋ ನನಗ ಬಲಗಣ್ಣು ಹಾರತಯ್ತೆ. ಯಾಕೋ ನನ್ನ ಬಲದೊಡೆಯು ಬಡಕಂತಯ್ತೆ... ದುಸೊಪುನಗಳನು ವಂದರ ಹಿಂದೊಂದರಂತೆ ಕಂಡಿರುವೆನು... ನೀನು ಮಾತ್ರ ನಾಗನಾಥ ತಾತನೋರ ಆರಾಧನೆಗೆ ಹೋಗೋದು ಬ್ಯಾಡ, ಯಂದು ಸ್ರೀಮತಿ ಕಮಲಮ್ಮ ತನ್ನ ಗಂಡನನ್ನು ಪರಿಪರಿಯಿಂದ...." (ಪು.೧೪೬, ಅರಮನೆ).

* "ನೀವ್ಯರ ಹಿಂಗ್ಯಾಕ ಮಾಡತೀರಿ? ಕಾರಣವಿಲ್ಲದ ನಮ್ಮ ಅವ್ವಗಾ ಅಪ್ಪಗಾ ಬಯ್ಸಿ ಇಡತೀರಿ." ನಿಜಸ್ಥಿತಿಯನ್ನು ತಿಳಿಸ ಹೋದಳು ತಾರಕ್ಕ. "ಹೂಂ! ಯಾರ್‍ಯಾರ ಬೈಸಿಕೊಳ್ಳೋದ ಏತಿ ಅವರ ಬಯಸಕೋಕ್ಕ ಬೇಕಲ್ಲ! ಒಮ್ಮಿ ತಲೀ ತೆರೀದ ಹೊರತ ಬಗಿಹರೀದುಲ್ಲ. ನೀ ಆಕೀ ಬೈಗಳಿಗೆ ಅಂಜತೀಯಾನಾ?" (ಪುಟ-೧೨೮ ನಿಸರ್ಗ).

ಸಮಾಜದಲ್ಲಿ ಸ್ತ್ರೀ-ಪುರುಷರ ನಡುವಿನ ಸಂವಹನ ಮಾದರಿಗಳು ನಿರ್ದಿಷ್ಟಗೊಂಡಿರುತ್ತವೆ. ಎಂಬುದನ್ನು ಮೇಲಿನ ಉದಾಹರಣೆಗಳಲ್ಲಿನ ಕೆಲವು ಅಂಶಗಳು ಸ್ಪಷ್ಟಪಡಿಸುತ್ತವೆ. ಅವು ಹೀಗಿವೆ.

ಸ್ತ್ರೀಯರನ್ನು	ಪುರುಷರನ್ನು
ಇಲ್ನೋಡಿ ಅಂದ್ರೆ	ಸುಮ್ಮನೆ ಆಡೆ
ನಮ್ಮ ಯಾಜಮಾನರು	ನನ್ನ ಹೆಂಡತಿ
ಅಲ್ಲರೀ	ನಮ್ಮಾಕಿ
ಹೋಗಿಂದ್ರೆ	ಸಾತು (ಸಾವಿತ್ರಿ)

ಮೇಲಿನ ಸ್ತ್ರೀ-ಪುರುಷರ ಸಂಬೋಧನಾ ಮಾದರಿಗಳಲ್ಲಿ ಹೆಂಡತಿ-ಗಂಡನನ್ನು ಸಂಬೋಧಿಸುವ ಮತ್ತು ಉಲ್ಲೇಖಿಸುವ ಸಂದರ್ಭದಲ್ಲಿ ಗೌರವ ಸೂಚಕ ಬಹುವಚನವನ್ನು ಬಳಸಿದರೆ ಗಂಡ-ಹೆಂಡತಿಯನ್ನು ಸಂಬೋಧಿಸುವಾಗ, ಹೆಸರನ್ನು ಬಳಸಿಯೂ ಏಕವಚನದಲ್ಲಿಯೂ ಸಂಬೋಧಿಸುವುದು ಕಂಡುಬರುತ್ತದೆ. ಇದರಿಂದ ಸ್ತ್ರೀ-ಪುರುಷರ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ಸ್ಥಾನಮಾನಗಳು ಗೋಚರಿಸುತ್ತವೆ. ಅಲ್ಲದೆ ಮೇಲ್ವರ್ಗದ ಪುರುಷ ಮೇಲ್ವರ್ಗದ ಸ್ತ್ರೀಯರಿಗಿಂತ ಹೆಚ್ಚಿನ ಗೌರವ-ಸ್ಥಾನ-ಮಾನಗಳನ್ನು ಹೊಂದಿರುವವನು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಈ ಕಟ್ಟಳೆ ಕೆಳವರ್ಗದ ಸ್ತ್ರೀ-ಪುರುಷರ ನಡುವೆ ಇದ್ದಂತಿಲ್ಲ.

ಉದಾ: "ಯ್ಯೋಯ್ ವಳ್ಳೆ ಮದ್ಲಿಂಗನಂಗೆ ಅಲಂಕಾರ ಮಾಡ್ಕಂಡು ಕೂಕಂಡಿದ್ದೀಯಲ್ಲಾ.... ಒಂದು ಗಾವಾದ ಪಿಳ್ಳೇನ ತಗದು ನಾನೇ ನಿಂತಿದ್ದು ಲಗ್ಗುನ ಮಾಡಲೇನು?...."

"ಯ್ಯೇಯ್.... ವುಣವಂತಿ, ಕಯ್ಯಿಕಾಲು ಮಾರೀನ ತೊಳಕಂಡು ಬಾ".... (ಪು.೧೪ ಅರಮನೆ).

* "ಹಯ್ಯೊ..... ತೆಗಿ... ತೆಗಿ ಈ ಹಾಳು ಗಂಡಸಿನ ಜಾತ್ಯ ಅಣಾಬರಾವೆ ಅಸ್ಸುಕನ" ಅಂತ ತತ್ವ ಯೊಳೋಳಂಗೆ ಅದು "ಯೇನ ಮಾಡಾದು ಬ್ರಹ್ಮಗಂಟು ಬಿದ್ದಮ್ಯಾಲೆ ಯಲ್ಲಾನೂವೆ ಸೈಸಿಕನೆಬೇಕು. ಈಗ ನಿಮ್ಮಯ್ಯ ದುಡಿಯಾ ದುಡ್ನೆಲ್ಲಾ ಆ ರಾಚನ ಎಂಡದ ಬುಂಡೆಗೆ ಸುರುದು ಇಲ್ಲಿ ಬಂದು ನನ್ನ ಮ್ಯಾಲೆ ಮಾಡಾದಿಲ್ವ ವಾಂತ್ಯ" ಲೇ ಲೇ ಲೇ ಲೇ, ಅಂತ ಅಯ್ಯ ಗುರುಕಾಯಿಸ್ತಾನೆ ಇದ್ದ,

ಅವ್ವ ಗಂಟ್ಲು ದಪ್ಪ ಮಾಡಿ.

"ನೀಯಾಕೆ ಇಂಗೆ ಅರಚಾಡಿ? ಮೊದ್ಲೆ ಉಸಾರು ತೆಪ್ಪದೆ. ಗಮ್ಮನೋಗಿ ಮನಿಕ್ಕೊ" ಅಂದೋಳು..... (ಪು.೯೦ ವೈಶಾಖ).

* "ತಕ್ಕಣೆ. ವೈನಾದ ಕೋಳಿ ತಂದಿವ್ನಿ .... ನಾತ್ರೆಗೆ ಪೊಗುದಸ್ತಾಗಿ ಎಸರ ಮಾಡಿಕ್ಕು" ಅಂದ ಹುಚ್ಚಬೋರಿಗೆ (ಪು.೧೮೭ ವೈಶಾಖ).

* "ಕೂಡತಿ ಯಾಕ? ಕತ್ತಲಿ ಆಗೇತಿ... ಉಣ್ಣಲಾಕ ಏಳ....?" ಎಂದು ಊಟಕ್ಕೆ ಎಬ್ಬಿಸಿದಳು" (ಪು.೫೩ ನಿಸರ್ಗ).

* "ಯಾಕ ನಿದ್ದಿ ಬಂದಿಲ್ಲೇನು ನಿನಗ ಮಕ್ಕೊಂಡೆಂತ ಮಾಡಿದ್ದ ನಾನು".

"ನೀ ಅಂದ ಮಾತುಗೋಳೇ ನನ್ ನಿದ್ದೀಗಿ ತಡೀಲಕತ್ತಾವೇ ಮಲ್ಲಿ" (ಪುಟ-೬೭ ಬದುಕು).

* "ಅಮ್ಮಿ ಬಮ್ಮಿ ಹೆಣ್ಣಾ"

"ಐ ಬತ್ತೀನಿ ಕನ ನಡಾ" (ಪುಟ-೧೧೪ ಕುಸುಮಾಲೆ).

ಈ ಮೇಲಿನ ನಿದರ್ಶನಗಳಲ್ಲಿ ಕೆಳವರ್ಗದ ಕೌಟುಂಬಿಕ ವಲಯದಲ್ಲಿರುವ ಗಂಡ-ಹೆಂಡತಿಯರ ನಡುವಿನ ಸಂಭಾಷಣೆಯ ಸಂದರ್ಭದಲ್ಲಿ ಗಂಡು-ಹೆಣ್ಣು ಎಂಬ ಯಾವ ತಾರತಮ್ಯ ಇಲ್ಲದೆ ಏಕವಚನದಲ್ಲಿಯೇ ಸಂಬೋಧನೆಯಾಗುತ್ತಿರುವುದನ್ನು ನೋಡಬಹುದು. ಇದಕ್ಕೆ ಕಾರಣ ಕೆಳವರ್ಗದ ಹೆಣ್ಣು ಗಂಡಿನಷ್ಟೇ ಆರ್ಥಿಕವಾಗಿ ಸಬಲಳು ಅವನಂತೆ ಇವಳೂ ಕೂಲಿನಾಲಿ ಮಾಡಿ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಬಲ್ಲಳು. ಅವಶ್ಯವೆನಿಸಿದರೆ ತನ್ನ ಗಂಡ ಮತ್ತು ಮನೆಯ ಜವಾಬ್ದಾರಿಯನ್ನು ಹೊರಬಲ್ಲಳು. ಒಟ್ಟಿನಲ್ಲಿ ಇಲ್ಲಿ ಗಂಡು-ಹೆಣ್ಣಿನ ನಡುವೆ ತಾರತಮ್ಯವಿಲ್ಲದೆ ನಡೆಯುವ ಸಂಬೋಧನೆಯನ್ನು ನೋಡಬಹುದು.

* ಮೇಲ್ವರ್ಗದ ಸ್ತ್ರೀಯರು ಕೆಳವರ್ಗದ ಪುರುಷರನ್ನು ಮತ್ತು ಸ್ತ್ರೀಯರನ್ನು ಸಂಬೋಧಿಸುವಾಗ ಏಕವಚನದಲ್ಲಿಯೂ ಅರ್ಧ ಹೆಸರಿನಲ್ಲಿಯೂ ಸಂಬೋಧಿಸಿದರೆ, ಕೆಳವರ್ಗದ ಸ್ತ್ರೀಯರು ಮತ್ತು ಪುರುಷರು ಮೇಲ್ವರ್ಗದ ಸ್ತ್ರೀಯರನ್ನು ಸಂಬೋಧಿಸುವಾಗ ಬಹುವಚನದಲ್ಲಿ ಗೌರವಪೂರ್ವಕವಾಗಿ ಸಂಬೋಧಿಸುತ್ತಾರೆ. ಉದಾಹರಣೆ.

* "ಲಕ್ಕ ಲೋ... ಲೋ ಲಕ್ಕ.." ಅಂತ ಯಾರೋ ಕೂಗಿದಂಗಾಗಿಯ್ತು ತಿರುಗಿ ನ್ಯಾಡುತ್ರೆ ಶಿವಾಚಾರದ ಗಂಗಿ!

"ಇದ್ಯಾಕರವ್ವ ಇ ಗೊರಗು ತರಬಾರದಿತ್ತ, ಅಂತ ಅವಳ ಕ್ಯಾಳಿದ್ದೆ?"

ಅಯ್ಯೋ ನಮ್ಮಟ್ಟೀಲಿ ಇರಾದು ಒಂದೇ ಗೊರಗು. ಇನ್ನೊಂದು ಯಾರೂ ಕದ್ದುಕೊಂಡೋದ್ರಂತೆ. ನಿಂಗೋತ್ತದಲ್ಲ ನಮ್ಮವ್ವಂಗೆ ಗೂರ್ಲು. ಅದ್ಕೆ ನೀನೇ ತಕ್ಕೊಂಡೋಗು ಅಂದು, ಅಂಗೇ ಬಂದೆ ಕನೊ, ಲಕ್ಕ... (ಪು. ೧೧೨ ವೈಶಾಖ)

* "ಏಟು ಕ್ವಟ್ಕೆಣೆ ಮರೀಗೆ?" ಕೇಳಿ, ಅದಕ್ಕುತ್ತರವಾಗಿ ಸಿವುನಿ,

"ಎಂಟು ರೂಪಾಯಿ ಕ್ವಟ್ಟೆ, ಸಂಪಗವ್ವಾರೆ" ಎನ್ನುತ್ತಲೂ

"ಅದ್ಯಾಕಮ್ಮಿ ಈ ಬಡಕಲು ಮರೀಗೆ ವೋಟೊಂದು ಅಣ ಸುರುದೆ....?

ಯಾಕೆ, ನಮ್ಮ ತಾವು ಇರನಿಲ್ವ?.... ಇದೇ ಜಪಾತಿ ಮರ್‍ಯ, ನೀ ಕ್ಯಾಳಿದ್ರೆ, ಬಡವೂರೂಂತ ಒಂದು ರೂಪಾಯಿ ಕುಸಿ ಆಕೇ ಕ್ವಡುತಿದ್ದೆ". (ಪು. ೧೩೬ ವೈಶಾಖ)

* "ಮಂಜ ನೀನು ಬಂದದ್ದು ಒಳ್ಳೆಯದಾಯಿತು. ಕಾಣೀಗ
ಹೇಳಿ ಕಳಿಸಿದ ಹಾಗೆ ಬಂದೆ" ಎಂದರು. ಗೌರಮ್ಮ

"ಇಸ್ವಾಸ ಅಂದರೆ ಅದೇ ಅಲ್ಲವ ಅಮ್ಮ? ನನ್ನಿಂದೇನಾಗಬೇಕು ಹೇಳಿ" (ಪು. ೨೩ ಅಸ್ಪೃಶ್ಯರು)

* "ಯಾಕ ಯವ್ವಾ, ನಿದ್ದಿ ಹತ್ತಿಲ್ಲ, ಯಾವ ಚಿಂತಿ ಹಿಡಿದೈತಿ?" ಎಂದು ಪ್ರೀತಿಯಿಂದ ಕೇಳಿದಳು.

"ತೆಲಿನೋವು ಎದ್ವೈತಿ ಯಮುನಾ" ಈಗ ಹತ್ತೀತು ಮತ್ತ ನಸುಕಿನ್ಯಾಗ ಬಂದ ಎಬ್ಬಿಸಬ್ಯಾಡ.

"ನೀವು ಎದ್ದಾಗ ಏಳ್ರಿಯವ್ವಾ, ನಾ ಯಾಕ ಎಬ್ಬಿಸಲಿ?....." (ಪು.೯೨ ಗ್ರಾಮಾಯಣ)

* "ಯಾಕ್ರೀ ಜಮಾದಾರ್‍ರ್ತೀ..... ತ್ವಾಟಕ್ಕ ಬಂದ್ರೆಲ್ಲ? ಹಸಿ ಹುಣಸಿಕಾಯಿ ಒಯ್ತಿರೇನು ಒಂದೀಸೂ... ಬುಟ್ಟಿ ತಂದೀರೀ.... ಕೇಳಿದನು.

"ಇಲ್ಲೋ ಗುರಪ್ಪ ನಿನ್ ಹುಣಸಿಕಾಯಿ ನೀನೇ ಇಟಗೋರೋ ಯಪ್ಪಾ....
ಪುಂಡಿಪಲ್ಲ್ಯಾ ಹರ್‍ಕೋಲಕ್ಕ ಬಂದಿದೀನಿ ನಾನು" (ಪು.೭೫ ಬದುಕು)

* ಯವ್ವಾ ಸಾವ್ಕಾರ್‍ರ್ತೀ..... ಸಾವ್ಕಾರ ಆ ಕಾಶಮ್ಮಾಗ ಕರ್‍ಕೊಂಡು ಬಂದು ತ್ವಾಟದ ಮನ್ಯಾಗಿಟ್ಟುಗೊಂಡಾನವ್ವೋ.... ನಿನ್ನೀ ಮದ್ಯಾಣದಾಗೇ ಕರಕೊಂಡು ಬಂದಾನ...."

"ಏನು ಹೇಳ್ತೋ ಚಂಬುಸ್ಸಪ್ಪ.... ನಗೆಚಾಟಕಿ ಮಾಡ್ಲಿಕ್ಕಿ ಬ್ಯಾರೇ ಮಾತ ಸಿಗಲಿಲ್ಲೇನು ನಿನಗ? ಹಿಂತಾ ಮಾತ ಆಡ್ತಾರೇನು ಕೋಡಿ.... ಏನು ಮಾತಂತ ಆಡ್ತಿ ಬಿಡು...." ಅಂದಳು. (ಪು.೩೦೧ ಬದುಕು)

* "ಸೋಮಿ ಕೆಂಗಣಪ್ಪಾರೆ....." ಅಂತ ಅವರ ಅಟ್ಟಿ ಆಚ್ಗೇ.... ನಿಂತು ಕರೆದಾಗ,

"ಯಾಕೆ ಬಂದ್ಯೋ, ನಿಂಗ?" ಅಂತ ವೊರೀಕೆ ಬಂದೋಳು ಅವ್ನ ಎಡತಿ ಸಿದ್ಧಮ್ಮ.

"ಇಂಗೇ ಬಂದೆ, ಸಿದ್ಧಮ್ಮಾರೆ....."

"ಯಾರೂ ಕೇಮಿಲ್ದೆ ಸುಮ್‌ಸುಮ್ಕೆ ಬರಕ್ಕಿಲ್ಲ ಕನ. ಅದೇನು ಗಂಡಸರತ್ರ ಯೇಳಬೇಕೂಂತ ಬಂದ್ಯೋ, ಅದ್ನ ನನ್ನ ಕುಂಟೇ ಯೇಳು, ಪರವಿಲ್ಲ" ಅಂದ್ಲು (ಪು.೧೧೩ ವೈಶಾಖ).

* ದಳವಾಯಿ "ಯವ್ವಾ, ಈಗ ವಾಡೇದ ನೆಪ್ಪಾತೇನು ನಿಮಗ? ಹಬ್ಬದಾಗ ವಾಡೆ ಹಾಳಗೆಡವಿ

ಹೋಗಿ ಈಗ ಬಂದರೆ ಯಾರು ಕೇಳಬೇಕು? ದೇವರು ನಮ್ಮಮ್ಮ್ಯಾಗ ಇದ್ವಾ ಅಂದ ಚಿಕ್ಕ ಅಪ್ವಾ ಅವರು ನಾವು ಕರ್‍ರ್ಯಾಣಾ ಬಂದರು. ದೊಡ್ಡ ಹಬ್ಬದಾಗ ವಾಡೆದಾಗ ದೀಪಕ್ಕ ದಿಕ್ಕಿಲ್ಲಧಾಂಗ ಮಾಡಿದವರಿಗೆ ಇಲ್ಲೇನ್ ದಗದ? ಎಲ್ಲಿಗೆ ಹೋಗಿದ್ದಿರೋ ಅಲ್ಲಿಗೆ ಹೋಗೂದಿನ್ನ" ಎಂದು ನಾಟಕೀಯವಾಗಿ ಮರ್ಯಾದೆ ಮೀರಿ ಮಾತನಾಡಿದನು.

"ಅಲ್ಲೋ ತಿಪ್ಪ, ನೀನು ಹುಲಿಬ್ಯಾಟಿ ಹಳಬರ ದಳವಾಯಿ, ನಮ್ಮ ಉಪ್ಪು ಉಂಡು ನಿಮ್ಮ ಇಡೀ ವಂಶ ಬೆಳದದ್ದು. ಅಂಥಾದ್ದು ನೀನ ಎದುರು ನಿಲ್ಲತೀಯಾ?" ಎಂದು ಲಕ್ಷ್ಮಿಬಾಯಿ ತಿಪ್ಪನ ಅಂತರಂಗವನ್ನು ಮಾತಾಡಿಸಿದಳು. (ಪು.೫ ಗ್ರಾಮಾಯಣ)

ಈ ನಿದರ್ಶನಗಳಲ್ಲಿ ಮೇಲ್ವರ್ಗದ ಸ್ತ್ರೀಯರು ಕೆಳವರ್ಗದ ಪುರುಷರನ್ನು ಏಕವಚನದಲ್ಲಿ ಲೇ. ಲೋ, ಎಂಬಂತಹ ರೂಪಗಳನ್ನೋ ಹೆಸರುಗೊಂಡ ಸಂಬೋಧನಾ ರೂಪಗಳನ್ನೋ ಬಳಸಿದರೆ. ಕೆಳವರ್ಗದ ಪುರುಷರು ಮೇಲ್ವರ್ಗದ ಸ್ತ್ರೀಯರನ್ನು ಸಂಬೋಧಿಸಲು ಅಮ್ಮಾರೆ, ಅವ್ವಾರೆ, ಅಮ್ಮ, ಯವ್ವಾ... ಎಂಬಂತಹ ಗೌರವ ಸೂಚಕ ಬಹುವಚನ ರೂಪಗಳನ್ನು ಬಳಸಿದ್ದಾರೆ. ಇಂತಹ ಸಂಬೋಧನಾ ರೂಪಗಳಿಗೆ ಕಾರಣವಾಗುವುದು ಲಿಂಗ ತಾರತಮ್ಯವಲ್ಲ. ಬದಲಿಗೆ ಸಮಾಜದಲ್ಲಿನ ಜಾತಿಯಾಧಾರಿತ ಶ್ರೇಣೀಕರಣ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಚಿಕ್ಕವರು ದೊಡ್ಡವರನ್ನು ಗೌರವಯುತವಾಗಿ ಮಾತನಾಡಿಸಬೇಕು ಎಂಬ ನಿಯಮವಿರುವಂತೆ ಸಮಾಜದಲ್ಲಿ ಕೆಳವರ್ಗದವರು ಮೇಲ್ವರ್ಗದವರನ್ನು ಗೌರವಯುತವಾಗಿಯೇ ಮಾತನಾಡಿಸ ಬೇಕು ಎಂಬ ಕಟ್ಟಳೆಯೂ ಇದೆ. ಆದುದರಿಂದಲೇ ಮೇಲ್ವರ್ಗದಲ್ಲಿರುವ ಹಿರಿಯರಷ್ಟೇ ಅಲ್ಲದೆ ಕಿರಿಯರೂ ಕೂಡ ಕೆಳವರ್ಗದ ಕಿರಿಯರನ್ನಷ್ಟೇ ಅಲ್ಲದೆ ಹಿರಿಯರನ್ನೂ ಏಕವಚನದಲ್ಲಿ ಸಂಬೋಧಿಸಿದರೆ ಕೆಳವರ್ಗದವರು ಮೇಲ್ವರ್ಗದ ಹಿರಿಯರನ್ನಷ್ಟೇ ಅಲ್ಲದೆ, ಕಿರಿಯರನ್ನೂ ಸಂಬೋಧಿಸಲು ಗೌರವಸೂಚಕ ಬಹುವಚನ ಪ್ರತ್ಯಯವನ್ನೇ ಹಚ್ಚುತ್ತಾರೆ. ನಿರ್ದಶನಕ್ಕೆ ಕಾದಂಬರಿಯಿಂದಾಯ್ದ ಕೆಲವು ಉದಾಹರಣೆಗಳನ್ನು ನೋಡುವು ದಾದರೆ.

"ರುಕ್ಕು, ಗುಡಿಸಬೇಡನ, ಎಷ್ಟು ಚೆಂದ ಉಂಟು!"

"ಅಮ್ಮ ಬೈಯ್ದರೆ?"

"ಅಮ್ಮ ಬೈಯ್ದರೆ ನಾನು ಹೇಳಿದ್ದೆಂತ ಹೇಳು" ಕನವರಿಕೆಯಂತೆ ನುಡಿದಳು ಶಾಮಿ.

"ಹಾಗಾದರೆ ಹೋಗಿ ಹೇಳುವುದಾ ಈಗಲೇ?" ಎಂದು ರುಕ್ಕು ಹೊರಟದ್ದೇ ಎಚ್ಚರಗೊಂಡಂತಾಗಿ ದಡಬಡನೆ ಎದ್ದುನಿಂತು ಮೈ ಕೊಡವಿಕೊಂಡಳು ಶಾಮಿ.

"ಚಂದವೆಂತದು ಅಮ್ಮ? ಬಿಸಿಲು ಮೇಲೆ ಬರಲಿ, ಎಲ್ಲ ಮುದ್ದೆಯಾಗಿ ವಾಸನೆ ಬರುತ್ತದೆ. ಬಿಸಿಲು ಬಿದ್ದ ಮೇಲೆ ಗುಡಿಸಲೂ ನನ್ನ ಕೈಯಿಂದ ಆಗಲಿಕ್ಕಿಲ್ಲ". (ಪು. ೧೧೧ ಅಸ್ಪೃಶ್ಯರು)

* "ಯೋಯ್ ಮಂಜ, ನನ್ನದೊಂದು ಗೋಲಿ ಬಿದ್ದಿತ್ತು. ಉಂಟಾ ಹುಡುಕು ಕಾಂಬ" ಎಂದ ಪುಟ್ಟ. "ಹೌದ ಸಣ್ಣಯ್ಯ, ಹುಡುಕುತ್ತೇನೆ ತಡೆಯಿರಿ...." ಎಂದು ಮಂಜ ಹುಡುಕಿದಂತೆ ಮಾಡಿದ. "ಅದರ ಎಡ್ರೆಸಿಲ್ಲವಲ್ಲ ಅಯ್ಯ" ಎಂದ (ಪು. ೪೬ ಅಸ್ಪೃಶ್ಯರು).

* "ಸುಮ್ಮಕಿರದೆ ನಮ್ಮಾಟದಲ್ಲಿ ನೀಯಾಕೋ ತಲೆ ಆಕೀಯಾ" ಸಿಟ್ಟು ಮಾಡಿದೋ ಹೈಕಳು (ಪು. ೧೧ ವೈಶಾಖ)

ಈ ನಿದರ್ಶನಗಳಲ್ಲಿ ಮೇಲ್ವರ್ಗದ ಮಕ್ಕಳು ರುಕ್ಕು ಮಂಜ ಎಂಬಂತಹ ಅರ್ಧ ಹೆಸರನುಳ್ಳ ಏಕರೂಪದ ವಚನಗಳನ್ನು ಸಂಬೋಧನೆಗಾಗಿ ಬಳಸಿದರೆ ಕೆಳವರ್ಗದವರು ವಯಸ್ಸಿನಿಂದ ಹಿರಿಯರಾದರೂ ಕೂಡ ಅಮ್ಮ ಅಯ್ಯ... ಎಂಬಂತಹ ರೂಪಗಳನ್ನು ಬಳಸಿದ್ದಾರೆ. ಇದಕ್ಕೂ ಕೂಡ ಜಾತಿಯಾಧಾರಿತ ಸಮಾಜದ ಕಟ್ಟುಪಾಡುಗಳೇ ಕಾರಣವೆಂದು ಹೇಳಬಹುದು. ಆದರೆ ಇಂತಹ ಒಂದು ವ್ಯವಸ್ಥೆಯನ್ನು ಶಿಕ್ಷಣ ಮತ್ತು ಅಧಿಕಾರದಿಂದ ಹೋಗಲಾಡಿಸಬಹುದು ಎಂಬುದಕ್ಕೆ ಕಾದಂಬರಿಗಳಿಂದಲೇ ನಿದರ್ಶನಗಳನ್ನು ನೋಡಬಹುದು. ಸಮಾಜದಲ್ಲಿ ಒಂದು ಉನ್ನತ ಅಧಿಕಾರದಲ್ಲಿರುವವರಿಗೆ ಜಾತಿಯಭೇದವಿಲ್ಲದೆ ಒಂದು ವೇಳೆ ಇದ್ದಾಗ್ಯೂ ತೋರಿಸಿಕೊಳ್ಳದೆ ಗೌರವ ಸಿಗುತ್ತದೆ. ಅಲ್ಲದೆ ಅವರವರ ಸ್ಥಾನಕ್ಕೆ ತಕ್ಕಂತೆ ಮಾರ್ಯಾದೆಯನ್ನು ಮಾಡುತ್ತಾರೆ. ಅವರನ್ನು ಸಂಬೋಧಿಸುವಾಗಲೂ ಬಹುವಚನಯುಕ್ತ ಪ್ರತ್ಯಯಗಳನ್ನೇ ಬಳಸುತ್ತಾರೆ. ಉದಾಹರಣೆಗೆ,

ಶ್ಯಾನುಭೋಗರು ಬಂದವರೇ "ಇನ್‌ಸ್ಪೆಕ್ಟರ್ ಸಾಹೇಬರಿಗೆ ನಮಸ್ಕಾರ ಯಾವಾಗ ದಯಮಾಡಿಸೋಣವಾಯ್ತು?" ಎಂದು ಕೈ ಜೋಡಿಸುತ್ತಾ ದೇಶಾವರಿ ನಗುನಕ್ಕ, "ಅಯ್ಯಯ್ಯೋ ಇದೇನು ಸಾಹೇಬರನ್ನ ಚಾಪೆ ಮೇಲೆ ಕೂರಿಸಿದ್ದೀರಲ್ಲ?" ಎನ್ನುತ್ತ, ಗೂಳಪ್ಪ ಬೇಡ ಬೇಡವೆಂದರೂ ಕೇಳದೆ ಮನೆಯ ಒಳಗಿನಿಂದ ತಾವೇ ಕುರ್ಚಿಯನ್ನೆತ್ತಿ ತಂದು, "ತಾವು ಇಲ್ಲಿ, ಇಲ್ಲಿ ಮುಹೂರ್ತ ಮಾಡಬೇಕು" ಎಂದು ಭಿನ್ನೈಸಿದರು.

"ಇದೇನು ಶ್ಯಾನುಭೋಗರೆ, ಊರ್ನಲ್ಲಿ ನೀವು, ಪಟೇಲರು, ಇಂಥಿಂಥ ಯಜಮಾನರು, ಎಲ್ಲರೂ ಇದ್ದು ಕೂಡ, ಇಂಥ ಅಚಾತುರ್ಯ ನಡೆಯೋಕೆ ಅವಕಾಶ ಕೊಟ್ಟರಿ?" ಪ್ರಶ್ನಿಸಿದ.

"ಅಚಾತುರ್ಯ?... ಏನು ಸ್ವಾಮಿ ತಾವು ಹೇಳ್ತಿರೋದು? ನನಗ ಅರ್ಥ ಆಗ್ತಿಲ್ಲ" ಎಂದು ಯಜಮಾರ ಕಡೆ ನೋಡುತ್ತಾ ಹೇಳಿದರು (ಪು. ೧೯೧ ವೈಶಾಖ)

* "ಕ್ಯಾ ಬಾತ್ ಪಟೇಲ!" ಚಾವಡಿಯ ಒಳಗಿನಿಂದ ಗುಡುಗು ಕೇಳಿಬಂತು

"ಗಾಂವಮೇ ಗರೀಬೋಕ ಜೀಂದಾ ನಹೀ ರಹಸಕತಾ, ಔರ್ ತುಮ್ ಜುಲುಮ್ ಚಲಾತೇ ಹೋ? ಕಹಾಂ ಹೈ ರಿಪೋರ್ಟ್?"

"ಇಲ್ಲ ರಾವಸಾಬ ಅಂತಾದ್ದೇನು ಗಡಿಬಿಡಿ ಆಗಿಲ್ಲ ತಗೀರಿ".

ಗೌಡರು ಹಲ್ಲು ಕಿರುದು ವಿನಯದಿಂದ ಹೇಳುತ್ತಿರುವಾಗಲೇ

"ಚುಪ್ ರಹೋಜೀ, ಹಮ್ ಕು ಸಬ್ ಕುಛ್ ಮಾಲುಮ್ ಹೈ" ಎಂದು ಮತ್ತೊಮ್ಮೆ ಗುಡುಗು ಕೇಳಿಬಂತು.

"ರಾವಸಾಬ, ದಣಿದು ಬಂದಿದೀರಿ ಕಾಣತ್ಯತಿ, ಓಟು ದಣಿವಾರಿಸಿಗೋ ಬೇಕು. ಬೆಳಗಾದ ಮ್ಯಾಗ ಇಲ್ಲೆ ಬರತೀನು". (ಪು. ೮೦ ಗ್ರಾಮಾಯಣ)

* "ನಿಮ್ಮಲ್ಲಿಂದ ದೊಡ್ಡ ಉಪಕಾರ ಆಯ್ತು ಸಾಬ್ರೇ.... ಎಂದ ಬಿಡ್ತಾರ್ರೀ ಅಂವಗ?" ಹಾಲಪ್ಪ ವಿನಯದಿಂದ ಕೇಳಿದನು.

ನೀ ಇನ್ನೊಮ್ಮಿ ಬಂದಾಗ ತಾರೀಖ ತಿಳಿಸ್ತೀನೆಂತ ಫೈಲ್ ನೋಡ್ಬೇಕು.... ಅಂದನು

"ಆಗಲಿ ಸಾಬ್ರೇ..... ನಮಸ್ಕಾರ್ರೀ" ಅಂತೇಳಿ ಹಾಲಪ್ಪ ಹೊರಬಂದನು. (ಪು. ೪೫೪ ಬದುಕು)

"ಅಲ್ಲಕಯ್ಯ ಮೇಸ್ತ್ರ ಒಂದ್ ಕೂದ್ಲ ಎಳ ಅಸ್ಟು ನಮ್‌ಕಡ ತಪ್ಪಿದ್ರ, ಅದ ಒಪ್ಕತ್ತಿವಿಕಯ್ಯ ನಾವು. ಇವ ಈ ಗಾರಸಿದ್ದ ಅವ್ನಲ್ಲಾ, ಅವ ಕಿತ್ತಿರ ಎಳ್ನೀರು ನೋಡುದ್ರ ಹದ್ನಾರು ಹದ್ನಾರು.

ಕಯ್ಯ! ಅದ್ಕ ತಪ್‌ಕೊಡ್ನ ಅಂದ್ರಾ.... ಅದ್ನಿಗ ಕುಡಿಯಾಕ ಕಿತ್ತಿ ಅಂತಾನಲ್ಲಾ...! ಯಾವ್ ಲಾಯರ್ ತಾನೀಯ ಒಪ್ಪಿನು ಇದ?

"ಈ ಥರ್ರಾಗಿ ಈ ಗಾರಸಿದ್ಧ ಎಸ್ಟ್ ಊರ ಹಾಳ್ಮಾಡಿರಬೌದು ಮೇಸ್ತ್ರ ಇವ?" (ಪು.೧೪೫ ಕುಸುಮಬಾಲೆ)

ಕೊಟ್ಟಿರುವ ನಿದರ್ಶನಗಳಲ್ಲಿ ಅಧಿಕಾರಕ್ಕಾಗಿಯೇ ಸಲ್ಲಿಸುವ ಗೌರವ ಬಳಕೆಯಾಗುತ್ತಿರುವ ಬಹುವಚನ ಯುಕ್ತ ಸಂಭೋದನಾ ರೂಪಗಳನ್ನು ಗಮನಿಸಬಹುದು.

೪.೬ ಗಾದೆಗಳು

'ನಾಣ್ನುಡಿ' ಎಂದು ಕರೆಯುವ ನುಡಿಗಳಿಗೆ ಗಾದೆ ಎಂದೂ ಕರೆಯುತ್ತಾರೆ. ಇದಕ್ಕೆ ಗಾದೆಯ ಮಾತು ಎಂದೂ ಹೆಸರಿದೆ. ಇದನ್ನೇ ಕೆಲವರು ಲೋಕೋಕ್ತಿ (ಲೋಕ+ಉಕ್ತಿ) ಎಂದು ಕರೆಯುವುದುಂಟು. ಲೋಕೋಕ್ತಿ ಎಂಬುದು ನಾಣ್ನುಡಿ ಎಂಬುದಕ್ಕೆ ಸಮಾನಾರ್ಥಕ ಸಂಸ್ಕೃತ ಶಬ್ದ ನಾಣ್ನುಡಿಗಳು ಅನುಭವದ ಮಾತುಗಳೇ ಆದುದರಿಂದ ಗಾದೆ ಎಂದರೆ ಅನುಭವದ ಮಾತು ಎಂದೇ ಪ್ರಸಿದ್ಧವಾಗಿದೆ.

"ರೂಢಿಯ ಮಾತೆ ಗಾದೆ ನಾಡಿನ ನಡತೆಯೇ ನಿಯಮ" ಎಂಬ ನಾಣ್ನುಡಿಯಂತೆ ಗಾದೆಗಳಿಗೆ ನಿಯಮಬದ್ಧವಾದ ಯಾವ ಲಕ್ಷಣಗಳೂ ಇಲ್ಲವಾದರೂ ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ಅಂಶಗಳು ಗೋಚರಿಸುತ್ತವೆ. ಇವುಗಳ ಲಕ್ಷಣಗಳನ್ನು ಕುರಿತು ಹಲವು ವಿದ್ವಾಂಸರು ಹಲವಾರು ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಇವುಗಳಲ್ಲಿ ಜೇಮ್ಸ್ ಎ. ಕೆಲ್ಲೊಸರವರು ಹೇಳುವಂತೆ "ಸಂಕ್ಷಿಪ್ತತೆ, ಸಾರವತ್ತತೆ, ತೀಕ್ಷ್ಮತೆ ಮತ್ತು ಜನಪ್ರಿಯತೆಗಳೆ" ಗಾದೆಯ ಲಕ್ಷಣಗಳೆಂದು ಒಪ್ಪಬಹುದು.

ಗಾದೆಗಳ ಆಕರ ಸಂಕ್ಷಿಪ್ತತೆಯಿಂದ ಕೂಡಿದ್ದು ಸಾವಿರ ಮಾತಿನಲ್ಲಿ ಹೇಳಬಹುದಾದ್ದನ್ನು ನಾಲ್ಕು ಮಾತು ಒಳಗೊಳ್ಳುತ್ತದೆ. ಜನರ ಜೀವನಾನುಭವಗಳೇ ಅವುಗಳ ಉಸಿರು. ಕಲಾತ್ಮಕತೆ ಅವುಗಳ ಜೀವಾಳ. ಸಂಜೀವನ ಶಕ್ತಿ ಮತ್ತು ಲೋಕಪ್ರಿಯತೆ ಅವುಗಳ ಚಿರಂತನತೆಯ ಮರ್ಮವೆಂದು ಹೇಳಬಹುದಾಗಿದೆ. ನೂರಾರು ಜ್ಞಾನವೃದ್ಧರ ವಿವೇಕಿಗಳ ಅನುಭವಿಗಳ ಅನುಭವಾಮೃತದ ರಸಾಯನವೇ ಗಾದೆ ಅದು ಬಹುಕಾಲದ ಪರಂಪರೆಯ ರಸಪಾಕ. ಹಲವು ತಿಳುವಳಿಕಸ್ತರ ಜೀವಸಾರ. ಅವು ಹಠಾತ್ತನೆ ಅನೈಚ್ಛಿಕವಾಗಿ ಚಿಮ್ಮಿದರೂ ಅವುಗಳ ಹಿಂದೆ ನೂರಾರು ಜನ್ಮಗಳ, ನೂರಾರು ಹಿರಿಯರ ಸಂಸ್ಕಾರ ಪರಂಪರೆಯಿದೆ. ಅನುಭವ ವೀಕ್ಷಣೆ ಮತ್ತು ಪ್ರಯೋಗಗಳೇ ಅದರ ಉಗಮಕ್ಕೆ ಕಾರಣವಾದುದರಿಂದ ಗಾದೆ ಎಲ್ಲ ಜ್ಞಾನ ವಿಜ್ಞಾನಗಳ ತವರು ಎಂದು ಹೇಳಿದರೆ ತಪ್ಪಾಗಲಾರದು.

'ಗಾದೆಯ ಮಾತು ವೇದಕ್ಕೆ ಸಮಾನ', 'ಮಾತಿಗೆ ಮೊದಲು ಗಾದೆ; ಊಟಕ್ಕೆ ಮೊದಲು ಉಪ್ಪಿನಕಾಯಿ'. ಎಂಬ ನಾಣ್ಣುಡಿಯಂತೆ ಯಾವ ಅಂತಸ್ತಿನ ಜನರೇ ಆಗಲಿ ಅವರ ದಿನಬಳಕೆಯ ಸಹಜ ಮಾತುಗಳಿಂದ ಹಿಡಿದು ಉಪದೇಶಗಳಲ್ಲಿ ಬೋಧನೆಗಳಲ್ಲಿ ಚರ್ಚೆಗಳಲ್ಲಿ, ಬರಹಗಳಲ್ಲಿ, ಭಾಷಣಗಳಲ್ಲಿ ಒಟ್ಟಿನಲ್ಲಿ ಭಾಷೆ ಬಳಸುವೆಡೆಯಲ್ಲೆಲ್ಲ ಗಾದೆಗಳು ಅನೈಚ್ಛಿಕವಾಗಿ ಸಹಜಾಭಿವ್ಯಕ್ತಿಯ ಮಾಧ್ಯಮಗಳೋ ಎನ್ನುವಂತೆ ಮಾತಿನ ಅನಿವಾರ್ಯ ಅಂಶ ಎನ್ನುವಂತೆ ನುಗ್ಗಿ ಬರುತ್ತವೆ. ದಿನ ಬೆಳಗದಾರೆ ಅವುಗಳನ್ನು ಬಳಸದ ಜನರಿಲ್ಲ. ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಮೊದಲಾದ ವ್ಯಂಜನಗಳು ಊಟದ ಸ್ವಾದವನ್ನು ಹೆಚ್ಚಿಸುವಂತೆ ಗಾದೆಗಳು ಮಾತಿನ ಮಹತ್ವವನ್ನು ಹಿರಿದು ಮಾಡಿ ಸಾಂದರ್ಭಿಕ ಮಹತ್ವವನ್ನು ವೃದ್ಧಿಗೊಳಿಸುತ್ತವೆ.

ಭಾವಾರ್ಥಗಳ ಸ್ಫುಟತ್ವಕ್ಕೆ ಶೀಘ್ರ ಬೋಧೆಗೆ ಪರಿಣಾಮ ಸಾಧನೆಗೆ ಗಾದೆಗಳಿಂದ ಲಾಭವಾಗುವಂತೆ ಒಂದು ಜನಾಂಗದ ಅನುಭವ ಸಂಪತ್ತಿಗೆ, ಒಂದು ಭಾಷೆಯ ಕಸುವು ಮತ್ತು ಸಾರಸತ್ವಗಳಿಗೆ ಅವುಗಳಲ್ಲಿ ಸಂಗ್ರಹಗೊಂಡಿರುವ ಗಾದೆಗಳ ನಿಧಿಯೇ ಸಾಕ್ಷಿಯಾಗಿರುತ್ತದೆ. ಇಂತಹ ಮಹತ್ವವನ್ನು ಹೊಂದಿರುವ ಗಾದೆಗಳು, ಆಯಾ ಜನರ ಸಂಸ್ಕೃತಿಯ ಪಾರ್ಶ್ವಭೂಮಿಕೆಯನ್ನು ಪ್ರತಿಬಿಂಬಿಸುತ್ತದೆ. ಎಂದ ಮೇಲೆ ಜನಜೀವನದ ಸಂಸ್ಕೃತಿಯ ಅಂತರಂಗವನ್ನು ಗಾದೆಗಳ ಮಾತಿನಲ್ಲಿ ಕಾಣಬಹುದು ಎಂದಾಯಿತು. ಅಲ್ಲಿಗೆ ಗಾದೆಗಳೂ ಕೂಡ ಸಾಮಾಜಿಕ ಚಹರೆಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದನ್ನು ಇನ್ನೂ ಸ್ವಲ್ಪ ವಿಸ್ತರಿಸುವುದಾದರೆ ಒಂದು ಸಾಮಾಜಿಕ ಮೌಲ್ಯಗಳು ಅತ್ಯಂತ ಸಾಂದ್ರವಾಗಿ, ಸುಲಭವಾಗಿ, ಸಹಜವಾಗಿ, ಭಾಷಿಕ ನೆಲೆಯನ್ನಾಧರಿಸಿ ಬರುವುದನ್ನು ಗಾದೆಗಳಲ್ಲಿಯಂತೆ ಇನ್ಯಾವುದಾದರೂ ಸಂಸ್ಕೃತಿ ವಾಹಕಗಳಲ್ಲಿ ಹರಳುಗಟ್ಟಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟಸಾಧ್ಯ. ಗಾದೆಗಳು ಒಂದು ಸಮಾಜದ ಪ್ರತಿಮೆಗಳಾಗಿರುವಂತೆ ಜಾತಿ ವ್ಯವಸ್ಥೆಗೆ ಸಂಬಂಧಿಸಿದ ಮೌಲ್ಯಗಳು ಕೂಡ ಆಗಿವೆ. ಹಾಗಾಗಿ ಗಾದೆಗಳು ಒಂದು ಸಮಾಜದ ಅತ್ಯುತ್ತಮ ನಿದರ್ಶನಗಳಾಗಿವೆ.

ಗಾದೆಗಳ ಪ್ರತಿಮಾತ್ಮಕತೆ, ಸಂಕ್ಷಿಪ್ತತೆ, ಪ್ರಾಸ, ಲಯಬದ್ಧತೆಗಳೆಲ್ಲವೂ ಸೇರಿ ಗಾದೆಗಳನ್ನು ಪರಿಣಾಮಕಾರಿ ಯಾಗಿಸುತ್ತವೆ. ಜನರ ನೆನಪಿನಲ್ಲಿ ಉಳಿದು ಮುಂದುವರಿಯುವುದನ್ನು ಸುಲಭವಾಗಿಸುತ್ತವೆ. ಗಾದೆಗಳು

ಕಲಾತ್ಮಕವಾಗಿರುವುದರಿಂದ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಅವುಗಳ ಮೂಲಕ ರೂಢಿಸುವುದು ಅನಾಯಾಸವಾಗಿರುತ್ತದೆ.

ಗಾದೆಗಳು ಭಾಷೆಯ ಒಂದು ಭಾಗವೇ ಆಗಿರುವುದರಿಂದ ಯಾವ ಸಾಹಿತ್ಯಕ ರಚನೆಗಳನ್ನು ತಿಳಿಯದವರೂ ಕೂಡ ಭಾಷೆಯೊಡನೆ ಗಾದೆಗಳನ್ನು ಸಹಜವಾಗಿ ಕಲಿತು ಬಳಸುತ್ತಿರುತ್ತಾರೆ. ಅವರವರ ಭಾಷಾಜ್ಞಾನ, ಆಸಕ್ತಿಗೆ ಅನುಗುಣವಾಗಿ ತಿಳಿಯುವ ಗಾದೆಗಳ ಪ್ರಮಾಣ ಮತ್ತು ಗಾದೆಗಳ ರೀತಿಗಳು ಬೇರೆಯಾಗಿರಬಹುದು. ಆದರೆ ಎಂಥವರ ಭಾಷಾ ಕಲಿಕೆಯಲ್ಲೂ ಕೆಲವಾದರೂ ಗಾದೆಗಳು ಸೇರಿ ಹೋಗಿರುತ್ತವೆ. ಆಗ ಕೇವಲ ಹೊಸ ಶಬ್ದ ವಾಕ್ಯಗಳು ಮಾತ್ರ ನಮ್ಮ ಭಾಷಾ ಭಂಡಾರವನ್ನು ಸೇರುವುದಿಲ್ಲ. ಅದರ ಜೊತೆ ಜೊತೆಯಲ್ಲೇ ಸಾಂಸ್ಕೃತಿಕ ಮೌಲ್ಯಗಳನ್ನು ಅಂತರ್ಗತವಾಗಿಸಿಕೊಳ್ಳುತ್ತೇವೆ. ಎಷ್ಟೋ ಸಾರಿ ನಿಮಗೆ ಗೊತ್ತಿರುವ ಗಾದೆಗಳನ್ನು ಹೇಳಿ ಎಂದರೆ ನಾವೇ ಬಳಸುವ ಗಾದೆಗಳು ಕೂಡ ನೆರವಾಗುವುದಿಲ್ಲ. ಆದರೆ ಸಂದರ್ಭಕ್ಕೆ ತಕ್ಕಂತೆ ಅವು ಅಪ್ರಯತ್ನಾಪೂರ್ವಕವಾಗಿ ಹೊರಬರುತ್ತವೆ. ಅಷ್ಟು ಸಹಜವಾಗಿ ಅವು ನಮ್ಮೊಳಗೆ ಸೇರಿರುತ್ತವೆ. ಆದ್ದರಿಂದಲೇ ಜಾತಿ ಸೂಚಕ ವಾಹಕಗಳಾಗಿ ಗಾದೆಗಳು ತೀರಾ ಮುಖ್ಯವಾಗುತ್ತವೆ.

"ನಮ್ಮ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ನಾವು ಪಡೆಯುವ ಜಾತಿ ಮತ್ತು ಲಿಂಗ ವ್ಯವಸ್ಥೆಯ ಮೌಲ್ಯಗಳು ನಾವು ಕಲಿಯುವ ಗಾದೆಗಳ ಜೊತೆಯಲ್ಲೆ ನಮ್ಮೊಳಗನ್ನು ಸೇರಿರುತ್ತವೆ. ಜನಸಾಮಾನ್ಯರ ಅಪ್ರಜ್ಞಾಪೂರ್ವಕ ನೆಲೆಗಳಲ್ಲಿ ಕುಳಿತ ಈ ಗಾದೆಗಳೊಳಗೆ ಜಾತಿವ್ಯವಸ್ಥೆಯ ಮೌಲ್ಯಗಳು ಕುಳಿತಿರುವುದರಿಂದ ಅವು ಅತ್ಯಂತ ಸುಭದ್ರವಾಗಿದ್ದು ರೂಢಿಗೊಳ್ಳುತ್ತ ಹೋಗುತ್ತವೆ. ಜೀವನ ಸ್ವರೂಪ ಬದಲಾದಂತೆ ನಾಗರೀಕತೆಯ ವಿನ್ಯಾಸ ವ್ಯತ್ಯಾಸಗೊಂಡಂತೆ ವಿಚಾರ ದೃಷ್ಟಿ ಹೊಸದಾದಂತೆ ಕ್ರಮೇಣ ಕೆಲವು ಗಾದೆಗಳು ಒಂದು ಭಾಷಾ ಸಂಸ್ಕೃತಿಯಿಂದ ಕಳಚಿಕೊಂಡು ಬಿಡಬಹುದು. ಇಲ್ಲವೆ ಪಳೆಯುಳಿಕೆಗಳಾಗಿ ಬಿಡಬಹುದು. ಆದರೆ ಈ ಪ್ರಕ್ರಿಯೆ ಬಹಳ ನಿಧಾನ ಆದಾಗ್ಯೂ ಗಾದೆಗಳು ಬಳಸುವ ಹೊರ ಚೌಕಟ್ಟು ಒಂದು ಜೀವನ ವಿಧಾನದಿಂದ ಹೊರಗುಳಿದಾಗಲೂ ಅದರ ಒಳ ಅರ್ಥ ಪ್ರಸ್ತುತತೆಯನ್ನು ಕಳೆದುಕೊಳ್ಳದೆ ಇರಬಹುದು". (ವಿಜಯಾದಬ್ಬೆ, ಜಾನಪದ ಆನ್ವಯಿಕತೆ, ಪು. ೪೪) ಉದಾಹರಣೆ ಅತ್ತೆ ಸೊಸೆಯರು ಮಡಿಕೆ ಬಳಸುವುದನ್ನು ಬಿಟ್ಟಿರಬಹುದು. ಆದರೆ "ಅತ್ತೆ ಒಡೆದ ಮಡಿಕೆ ಅಟ್ಟಸೇರಿತು; ಸೊಸೆ ಒಡೆದ ಮಡಿಕೆ ಬೀದಿ ಸೇರಿತು". ಎಂಬ ಗಾದೆಯ ಮೂಲಾರ್ಥ ಇಂದಿನ ಸಮಾಜ ರಚನೆಯಲ್ಲೂ ಅಷ್ಟೇ ಅರ್ಥಪೂರ್ಣವಾದ ಸ್ಥಾನವನ್ನು ಉಳಿಸಿಕೊಂಡಿದೆ.

ಒಟ್ಟಿನಲ್ಲಿ ಒಂದು ಭಾಷೆಯ ಗಾದೆಯನ್ನು ನೋಡದೆ ಆ ಸಂಸ್ಕೃತಿಯ ಜಾತಿವ್ಯವಸ್ಥೆಯನ್ನು ತಿಳಿದರೆ ಆ ತಿಳುವಳಿಕೆ ಅಪೂರ್ಣ. ಗಾದೆಗಳು ಅತ್ಯಂತ ಸೂಚ್ಯವಾಗಿ ಜಾತಿವ್ಯವಸ್ಥೆಯ ಹಿಂದಿನ ಕೆಲಮಟ್ಟಿಗೆ ಇಂದಿನ ಮೌಲ್ಯಗಳನ್ನು ಬಿಂಬಿಸುತ್ತವೆ. ಅಂದರೆ ಗಾದೆಗಳೂ ಕೂಡ ಸಾಮಾಜಿಕ ಚಹರೆಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಕಾದಂಬರಿಗಳಲ್ಲಿ ಆಯ್ದ ಜಾತಿಸೂಚಕ ಗಾದೆಗಳ ಸಹಾಯದಿಂದ ಈ ಅಧ್ಯಯನದಲ್ಲಿ ಚರ್ಚಿಸಲಾಗುತ್ತದೆ.

೧ "ಕುರಿ ಮೇದರೆ ಕುರುಬಗ ಲಾಭಲ್ಲ" (ಪು.೬೩ ನಿಸರ್ಗ)

ಈ ಗಾದೆಯನ್ನು ಕುರುಬ ಜಾತಿಗೆ ಸಂಬಂಧಿಸಿದಂತೆ ಬಳಸಲಾಗುತ್ತದೆ. ಇವರ ಕುಲಕಸುಬು ಕುರಿ ಸಾಕಾಣಿಕೆ ಕುರಿಗಳನ್ನು ಸಾಕಿ ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಜೀವನ ಸಾಗಿಸುತ್ತಾರೆ. ಕುರಿ ಚಿಕ್ಕದಿದ್ದಾಗ ಕಡಿಮೆ ಬೆಲೆಗೆ ಮಾರಾಟವಾಗುವಂತೆ ಕುರಿ ಚೆನ್ನಾಗಿ ಮೇದು ಬೆಳದರೆ ಹೆಚ್ಚು ಮಾಂಸ ಮತ್ತು ಉಣ್ಣೆ ಕೊಡುತ್ತದೆ. ಇಂತಹ ಕುರಿಯನ್ನು ಮಾರಾಟ ಮಾಡಿದಾಗ ಅದನ್ನು ಸಾಕಿದ ಕುರುಬನಿಗೆ ಹೆಚ್ಚೆಚ್ಚು ಆದಾಯ ಸಿಗುತ್ತದೆ. ಈ ಲಾಭಕ್ಕಾಗಿಯೇ ಅವರು ಕುರಿಗಳನ್ನು ಚೆನ್ನಾಗಿ ಮೇಯಿಸುತ್ತಾರೆ. ಆಡುಮಾತಿನ ಪ್ರಸಂಗದಲ್ಲಿ 'ಲಾಭ' ಎಂಬ ಅಂಶವನ್ನು ಸೂಚಿಸುವ ಸಲುವಾಗಿ ಈ ಗಾದೆಯನ್ನು ಬಳಸಲಾಗುತ್ತದೆ.

ಭರಮ ತನ್ನ ತಾಯಿಯ ಗಮನಕ್ಕೆ ತರದೆ ಅತ್ತೆಯ ಮನೆಗೆ ಹೋಗಿ ಊಟ ಮಾಡಿ ಬಂದಾಗ ಚಿಮ್ಮವ್ವನಿಗೆ ಯಾರೋ ಬಂದು ಭರಮ ಅತ್ತೆಯ ಮನೆಗೆ ಫಲಹಾರಕ್ಕೆ ಹೋಗಿದ್ದನೆಂದು ಹೇಳುತ್ತಾಳೆ. ತನ್ನ ಒಂದು ಮಾತನ್ನು ದಾಟದ ತಾಯಿಯ ಅಪ್ಪಣೆಯಿಲ್ಲದೆ ಏನನ್ನೂ ಮಾಡದ ಭರಮ ಹೀಗೆ ಹೇಳದೆ ಕೇಳದೆ ಅತ್ತೆಯ ಮನೆಗೆ ಹೋಗಿದ್ದು ಚಿಮ್ಮವ್ವನಿಗೆ ಮೊದಲು ಅಸಹನೀಯವೇ ಆದರೂ ಬಂದವಳ ಮುಂದೆ ಅದನ್ನು ತೋರಗೊಡದೆ "ಕುರಿಮೇದರ ಕುರುಬಗ ಲಾಭಲ್ಲ" ಎಂದೇಳಿ ಬಂದಾಕೆಯನ್ನು ಕಳಿಸುತ್ತಾಳೆ. ಈ ಮಾತಿನ ಹಿಂದಿನ ಅರ್ಥ. ರತ್ನವ್ವ ಮತ್ತು ಮಲ್ಲಪ್ಪನಿಗೆ ಗಂಡು ಸಂತಾನವಿರುವುದಿಲ್ಲ. ಆದುದರಿಂದ ಮಗ ಅತ್ತೆಯ ಮನೆಗೆ ಹೋಗಿ ಬಂದು ಮಾಡುತ್ತಿದ್ದರೆ ಅವರಲ್ಲಿರುವ ಆಸ್ತಿಯಲ್ಲ ಮುಂದೊಂದು ದಿನ ಮಗನಿಗೆ ಆಗುತ್ತದೆ. ಅಲ್ಲಿಗೆ ಅವರ ಮನೆಗೆ ಹೋಗುವುದರಿಂದ ಲಾಭವೇ ಹೊರತು ನಷ್ಟವೇನಲ್ಲ ಎಂಬರ್ಥದ ಮಾತನ್ನು ಹೇಳುತ್ತಾಳೆ.

೨ "ಸೆಟ್ಟಿ ಉಳಕೊಂಡಲ್ಲಿ ಪಟ್ಟಣ ಅಂಬುತಾರಲ್ಲ ಹಂಗೆ" (ಪು. ೪೬೫ ಅರಮನೆ)

ಶೆಟ್ಟರ ಮೂಲವೃತ್ತಿ ವ್ಯಾಪಾರ. ಜೀವನದ ಅವಶ್ಯ ವಸ್ತುಗಳು ದೊರೆಯುವಲ್ಲಿಯೇ ಜನ ನೆಲೆನಿಲ್ಲುವುದರಿಂದ ವ್ಯಾಪಾರ ವಹಿವಾಟು ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೆಚ್ಚೆಚ್ಚು ಜನರು ವಾಸವಾಗತೊಡಗುತ್ತಾರೆ. ಕ್ರಮೇಣ ಈ ಪ್ರದೇಶವೇ ಪಟ್ಟಣವಾಗಿ ಪರಿಣಮಿಸುತ್ತದೆ. ಈ ಗಾದೆಯನ್ನು ಮನ್ರೋ ಸಾಹೇಬನು ತಾನು ಹೋದ ಕಡೆಯಲ್ಲೆಲ್ಲ. ಜನರಿಗಾಗಿ ಮಾಡುತ್ತಿದ್ದ ಕೆಲಸಕಾರ್ಯಕಗಳನ್ನು ಗುರುತಿಸುವ ಸಲುವಾಗಿ ಬಳಸಲಾಗಿದೆ.

"ವಂದು ವೂರು ವಂದು ಗ್ರಾಮವನ್ನೂ ಬಿಡದೆ, ಮನ್ರೋ ಸಾಹೇಬನು ತನ್ನ ಶರೀರದ ವಂದರ್ಥ ಭಾಗವನ್ನು ವೋಣಿ ವೋಣಿಗಳಿಗೆ, ಸಂಧು ಸಂದುಗಳಿಗೆ, ಬೆವರು ವಾಸನೆಗೆ ಬೆನ್ನಿಂಗಟ್ಟಿದ್ದ ಹೊಟ್ಟೆಗಳಿಗೆ, ಆಳಕ್ಕಿಳಿದ ಕಣ್ಣುಗಳಿಗೆ, ತರಾವರಿ ವಿಸ್ಮಯಗಳಿಗಾಗಿ ಮೀಸಲಿಟ್ಟಿದ್ದನು. ಕಲಿಯೂತ, ಕಲಿಸೂತ ಮನ್ರೋ ಸಾಹೇಬನು ಅಗೋ ಅಲ್ಲಿ ಅಂದರೆ ಯಿಲ್ಲಿರುತ್ತಲಿದ್ದನು. ಯಿಗೋ ಯಿಲ್ಲಿ ಎಂದರೆ ಅಲ್ಲಿರುತ್ತಿದ್ದನು. ಸೆಟ್ಟಿ ವುಳಕೊಂಡಲ್ಲಿ ಪಟ್ಟಣ ಅಂಬುತಾರಲ್ಲ ಹಂಗೆ ಥಾಮಸು ಮನ್ರೋಯಲ್ಲಿ ವುಳಕೊಳತಲಿದ್ದನೋ ಅಲ್ಲೇ ವಂದು ಪಟ್ಟಣ ಯೇರುಪಡುತಲಿದ್ದಿತು. ಯೀ ಪ್ರಕಾರವಾಗಿ ಯೇರುಪಡುತಲಿದ್ದ ಪಟ್ಟಣದೊಳಗ ಸ್ಥಳೀಕರೊಂದೇ ಅಲ್ಲದೆ ಅಕ್ಕಪಕ್ಕದ ಗ್ರಾಮಸ್ಥರೂ ನಾ ಮುಂದು ತಾ ಮುಂದು ಅಂತ ಬಂದು ತಮ ತಮ್ಮ ಕಷ್ಟಸುಖಗಳನ್ನು ಯೇಕ ಪ್ರಕಾರವಾಗಿ ತೊಡಿಕೊಳ್ಳುತ್ತಲಿದ್ದರು. ತಮ ತಮ್ಮ ಅಂತಸ್ತುಗಳ ಪ್ರಕಾರ

ದೂರ ನಿಲ್ಲುತ್ತಿದ್ದವರಷ್ಟೋ? ಹತ್ತಿರ ಹೋಗುತಲಿದ್ದರೆಷ್ಟೋ? ಯಿಲ್ಲದ ಕಾರಣಕ್ಕೆ ಸೇಕೆಂಡೂ ಸೇಕೆಂಡೂ ಅನುತ ತಮ ತಮ್ಮ ಕಯ್ಯಿಗಳನ್ನು ಚಾಚುತ್ತಿದ್ದವರೆಷ್ಟೋ? ಆತನು ತನ್ನಂಗಯ್ಯ ಧನರೇಖೆಯು ಸವೆಯುತ್ತ ದೆಂಬ ಖಬುರಿಲ್ಲದೆ ಹಸ್ತಾಲಾಘವ ಮಾಡಿ ಪ್ರಜೆಗಳ ಆಸೆ ಪೂರೈಸುತಲಿದ್ದನು. ಎಂಬಲ್ಲಿ ಮನ್ರೋ ಇದ್ದಲ್ಲೇ ಹೆಚ್ಚೆಚ್ಚು ಜನ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದಕ್ಕಾಗಿ ಸೇರುತ್ತಿದ್ದರು ಎಂಬುದನ್ನು ತಿಳಿಸುವಲ್ಲಿ ಆ ಗಾದೆ ಬಳಸಲಾಗಿದೆ.

೩. "ಹೊಟ್ಟೆ ಹೊಲ್ಯಾರ ಮನೀ ಹೋಗಿಸಿತಂತೆ" (ಪು. ೫೫ ಗ್ರಾಮಾಯಣ)

ಹೊಟ್ಟೆ ಹಸಿದ ವ್ಯಕ್ತಿಗೆ ಹೇಗಾದರೂ ಮಾಡಿ ಹೊಟ್ಟೆ ತುಂಬಿಸಿ ಕೊಳ್ಳಬೇಕೆಂಬುದೊಂದೆ ಗುರಿಯಿರುತ್ತದೆ. ಇದಕ್ಕಾಗಿ ಸಾಮಾಜಿಕ ಶ್ರೇಣಿಯಲ್ಲಿ ಕೆಳಸಮುದಾಯದವರಾದ ಅಸ್ಪೃಶ್ಯರು ಹೊಲೆಯರ ಮನೆಯಾದರೂ ಅಡ್ಡಿಯಿಲ್ಲ. ಅವನ ಮನೆಯಲ್ಲಿ ಸಿಗುವ ಆಹಾರವನ್ನೇ ಸ್ವೀಕರಿಸುತ್ತಾನೆ. ಈ ಗಾದೆಯು ಅನಿವಾರ್ಯ ಸಂದರ್ಭದ ಅಗತ್ಯತೆಯನ್ನು ತಿಳಿಸುತ್ತದೆ.

ತನಗೆ ಇಷ್ಟವಿದ್ದೋ ಇಲ್ಲದೆಯೋ ಅನಿವಾರ್ಯವಾಗಿ, ದೀಪಾವಳಿಯ ಹಬ್ಬ ಮುಗಿಸಿಕೊಂಡು ಒಂದು ಸಂಜೆ ಲಕ್ಷ್ಮೀಬಾಯಿ ಮರಳಿ ಊರಿಗೆ ಬಂದಾಗ ವಾಡೆಯ ಹೆಬ್ಬಾಗಿಲನ್ನು ದಾಟುತ್ತಿರುವಾಗಲೇ ಹುಲಿಬ್ಯಾಟಿ ಹಳಬರ ದಳವಾಯಿ ಲಕ್ಷ್ಮೀಬಾಯಿಯ ಮುಂದೆ ಬಂದು ಮುಜುರೆ ಮಾಡಿ "ಯವ್ವಾ, ಈಗ ವಾಡೇದ ನೆಪ್ಪಾತೇನು ನಿಮಗ? ಹಬ್ಬದಾಗ ವಾಡೆ ಹಾಳಗೆಡವಿ ಹೋಗಿ ಈಗ ಬಂದರ ಯಾರ ಕೇಳಬೇಕು? ದೇವರು ನಮ್ಮ ಮ್ಯಾಗ ಇದ್ದ ಅಂತ ಚಿಕ್ಕ ಅವ್ವಾ ಅವರು ನಾವು ಕರ‍್ಯಾಣ ಬಂದರು. ದೊಡ್ಡ ಹಬ್ಬದಾಗ ವಾಡೆದಾಗ ದೀಪಕ್ಕ ದಿಕ್ಕಿಲ್ಲಧಾಂಗ ಮಾಡಿದವರಿಗೆ ಇಲ್ಲೇನ್ ದಗದ? ಎಲ್ಲಿಗೆ ಹೋಗಿದ್ದಿರೋ ಅಲ್ಲೇ ಹೋಗುದಿನ್ನ" ಎಂದು ನಾಟಕೀಯವಾಗಿ ಮರ್ಯಾದೆ ಮೀರಿ ಮಾತನಾಡಿದನು.... "ಅಲ್ಲೋ ತಿಪ್ಪ, ನೀನು ಹುಲಿಬ್ಯಾಟಿ ಹಳಬರ ದಳವಾಯಿ, ನಮ್ಮ ಉಪ್ಪು ಉಂಡು ನಿಮ್ಮ ಇಡೀ ವಂಶ ಬೆಳದದ್ದು. ಅಂಥಾದ್ದು ನೀನ್ಯ ಎದುರು ನಿಲ್ಲತೀಯಾ?" ಎಂದು ಲಕ್ಷ್ಮೀಬಾಯಿ ತಿಪ್ಪನ ಅಂತರಂಗವನ್ನು ಮಾತಾಡಿಸಿದಳು.

ದಳವಾಯಿ ತಿಪ್ಪ ಈ ಮಾತುಗಳಿಂದ ಕರಗಿ ಹೋದ.... ವಲ್ಲಿಯ ಸೆರಗಿನಿಂದ ಕಣ್ಣೀರೊರಸಿಕೊಳ್ಳುತ್ತ "ಯವ್ವಾ ಹೊಟ್ಟಿ ಹೊಲ್ಯಾರ ಮನಿ ಹೋಗಿಸಿತಂತ ಅನ್ನದ ರಿಣಾ ಕೆಟ್ಟದು. ನೀವಿಲ್ಲಿಗೆ ಬರಾಕಿಲ್ಲ ಅಂತ ತಿಳಿದು, ಎಲ್ಲೆ ಆಸರ ತಪ್ಪೀತೋ ಅಂತ ಚಿಕ್ಕ ಅವ್ವಾ ಅವರ ಕಾಲಿಗಿ ಬಿದ್ದಿ. ನನ್ನ ಪರೀಕ್ಷಾ ಮಾಡಬ್ಯಾಡ ಯವ್ವಾ" ಎಂದವನೇ ಮುಂದೆ ಮಾತು ಹೊರಡದೆ ಅಲ್ಲಿಯೇ ಕಟ್ಟೆಗೆ ಆತು ಕುಸಿದು ಕುಳಿತ.

ಹುಲಿಬ್ಯಾಟಿ ಹಳಬರು, ಜಾಗೀರುದಾರರೊಡನೆ ಹುಲಿ ಬೇಟೆಗೆ ಹೋಗುವ ಹಳಬರು ಸಾಮಾನ್ಯವಾಗಿ ಇವರು ಜಾಗೀರುದಾರರ ವಾಡೆಯ ಹಿತ ಸಂಬಂಧ ನೋಡಿಕೊಳ್ಳುವ, ಅವರು ಹೇಳಿದ ಕೆಲಸ ಮಾಡುವ ಅವರ ಸಿಬ್ಬಂದಿಯವರಾಗಿದ್ದರು. ರಾಣೋಜಿರಾಯರ ಮರಣದ ನಂತರ ವಾಡೆಯ ಉಸ್ತುವಾರಿಯನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಲಕ್ಷ್ಮೀಬಾಯಿಯವರು ಪರ ಊರಿನಲ್ಲಿಯೇ ದೀಪಾವಳಿಯನ್ನು ಆಚರಿಸುವ ಸಲುವಾಗಿ ನಿಲ್ಲುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ವಾಡೆಯಲ್ಲಿ ದೀಪ ಹಚ್ಚಲು ಬಂದವರು ಲಕ್ಷ್ಮೀಬಾಯಿ

ಯವರ ತಂಗಿ ಪುತಳಾಬಾಯಿ. ಲಕ್ಷ್ಮೀಬಾಯಿಯವರ ಸುಳಿವೆಯಿರದಿದ್ದ ಸಂದರ್ಭದಲ್ಲಿ ಎಲ್ಲಿ ನಾವು ವಾಡೆಯ ಆಸರೆಯನ್ನು ಕಳೆದುಕೊಳ್ಳುತ್ತೇವೋ ಎಂದು ಪರಿತಪಿಸುತ್ತಿದ್ದ ಹುಲಿಬ್ಯಾಟಿ ಹಳಬರು. ಪುತಳಿಬಾಯಿ ಯವರಿಂದ ಪುನಃ ವಾಡೆಯ ಆಶ್ರಯವನ್ನು ಪಡೆಯುತ್ತಾರೆ. ಹೀಗೆ ತೀರ ಅನಿವಾರ್ಯ ಪರಿಸ್ಥಿತಿಯಲ್ಲಿ ಪುತಳಾ ಬಾಯಿಯವರನ್ನು ಆಶ್ರಯಿಸಿದ ಸಂಗತಿಯನ್ನು ಹುಲಿಬ್ಯಾಟಿ ದಳವಾಯಿ ಈ ಗಾದೆಯ ಮೂಲಕ ಸ್ಪಷ್ಟ ಪಡಿಸುತ್ತಾನೆ.

೪ "ಹಸದ ಹಾರವನನ್ನು ತಡವಬಾರದು" (ಪು. ೩೨೩ ಗ್ರಾಮಾಯಣ)

ಸಮಾಜದಲ್ಲಿ ಬ್ರಾಹ್ಮಣರಿಗೆ ಉನ್ನತವಾದ ಸ್ಥಾನವಿದ್ದು. ಅವರನ್ನು ದೈವಕ್ಕೆ ಸಮಾನವಾಗಿ ಕಾಣ ಲಾಗುತ್ತದೆ. ಆದುದರಿಂದ ಅವರ ಬಾಯಿಯಿಂದ ಬರುವ ವಾಕ್ಯಗಳು ದೈವ ವಾಕ್ಯಗಳೇ ಆಗಿರುತ್ತವೆ. ಅವರು ಪ್ರಸನ್ನರಾಗಿದ್ದಾಗ ಹರಸಿದ ಹಾರೈಕೆಗಳು ಶುಭವಾಗುವಂತೆ. ಸಿಟ್ಟಿಗೆದ್ದು ಶಪಿಸಿದಾಗಲೂ ಅದೇ ಸಂಭವಿಸುತ್ತದೆಂಬ ನಂಬಿಕೆಯಿದೆ. ಹೀಗಿರುವಾಗ ಹಸಿದ ಹಾರವನನ್ನು ತಡವಿಕೊಂಡಾಗ ಅವನು ಸಿಟ್ಟಿಗೆದ್ದು ಶಪಿಸಿದರೆ ಅದೇ ನಡೆಯುತ್ತದೆಂಬ ನಂಬಿಕೆಯಿಂದ ಅವರನ್ನು ತಡವಬಾರದು ಎಂಬುದಕ್ಕೆ ಈ ಗಾದೆ ಹುಟ್ಟಿಕೊಂಡಿದೆ.

ಲಿಂಗಪ್ಪನಿಗೆ ಗೌಡಿಕೆ ಖಾಯಂ ಆದ ಸಂತೋಷಕ್ಕೆ ಅವನ ಜೊತೆಗಿದ್ದವರು ಊರಲ್ಲಿ ಮೆರವಣಿಗೆಯನ್ನು ತೆಗೆಯುತ್ತಾರೆ. ಗ್ರಾಮಪ್ರದಕ್ಷಿಣೆ ಮಾಡಿಕೊಂಡು ಗೋಪಾಲಕೃಷ್ಣನ ಗುಡಿಗೆ ಬಂದಾಗ. ಅಲ್ಲಿಯೇ ಇದ್ದ ಬಾಳಾಚಾರ್ಯರಿಗೆ ಮಾಯಪ್ಪ "ದೇವರಿಗೆ ಕಾಯೀ ಒಡೀಬೇಕು. ಆಚಾರೆಪ್ಪ. ಕುಂತೀರ್‍ಯಾಕ ಏಳ್ರೀ" ಎಂದು ಒರಟಾಗಿ ಹೇಳಿದಾಗ "ಇವೋತ್ತು ಏಕಾದಶಿ. ದೇವರಿಗೆ ಕಾಯಿ ಒಡದು ನೈವೇದ್ಯ ಕೊಡಲಿಕ್ಕೆ ಬರೂದುಲ್ಲ. ಅದು ನಿಷಿದ್ಧ" ಎಂದು ಹೇಳುತ್ತಾರೆ. "ನಿಮಗ ಬ್ಯಾಡದರ ಬಿಡರಿ. ಕಾಯಿ ಒಡೆದು ಕಪ್ಪುರಾ ಹಚ್ಚಿದರ ದೇವರೇನು ಒಲ್ಲೇ ಅಂತಾನ್ರ?" ಎಂದು ಲಿಂಗಪ್ಪ ಕೆಣಕುತ್ತಾನೆ.

ಆಚಾರ್ಯರು ಅವನ ಮಾತಿಗೆ ನಕ್ಕು ಚೇಷ್ಟೆಗೆಂಬಂತೆಯೇ ಹೇಳಿದರು; "ಅಲ್ಲೋ ಲಿಂಗಪ್ಪ, ಮಾಯಪ್ಪ ನಂತೂ ಜಾತ್ಯಾ ಕುರುಬ, ನಾ ಹೇಳಿದ್ದು ಅವನಿಗೆ ತಿಳಿಯೂದಿಲ್ಲ. ಅಂತ ಅವಗ ತಿಳಿಸಿ ಹೇಳಬೇಕಾತು. ಆದರೆ ನೀನೂ ಹೀಂಗ ಮಾತಾಡತೀ ಅಂತಂದಮ್ಯಾಲೆ ಅವನಕಿಂತಾ ಹೆಚ್ಚಿನ ಕುರುಬ ನೀನ್ರ ಅದೆಲ್ಲಾ!" ಎಂದು ಮಾತನ್ನು ಹಾಸ್ಯದಲ್ಲಿ ತೇಲಿಸಿದರೂ.... ಮುದುಕ ತನ್ನ ಹುಟ್ಟನ್ನೇ ಬಯಲಿಗೆಳೆದನೆಂದು ಲಿಂಗಪ್ಪನಿಗೆ ಸಿಟ್ಟು ಬಂದರೂ ಅದನ್ನು ತೋರಗೊಡದೆ "ನಿಮ್ಮಂತವರ ಮುಂದ ಎಲ್ಲಾರೂ ಕುರುಬರ್‍ರ ಅಲ್ಲರೇ?" ಎಂದು ನಕ್ಕು 'ಆಚಾರಪ್ಪಗ ಸಕ್ಕರಿ ಕೊಡರಲೇ' ಎಂದು ಆಜ್ಞಾಪಿಸಿದ.

"ಇಲ್ಲ ನೋಡು ಲಿಂಗಪ್ಪ, ಇಂದ ಏಕಾದಶಿ, ದಾನ ಪರಿಗ್ರಹ ವರ್ಜ್ಯ. ಎಂದು ಆಚಾರ್ಯರು ಹೇಳಿ ಕೈಸನ್ನೆಯಿಂದಲೇ ಸಕ್ಕರೆಯನ್ನು ಬೇಡವೆಂದರು. "ಆಚಾರೆಪ್ಪ, ಇನ್ನಮ್ಯಾಗ ಹಿಂದಿನವರನ್ನೆಲ್ಲ ಮರಿಬೇಕು. ಊರಗೌಡ ಆಗಿ ಬಂದೀನು, ನನ್ನ ಮಾತಿಗೆ ಬೆಲಿ ಕೊಡಬೇಕಾಕ್ಕೈತಿ" ಎಂದು ಲಿಂಗಪ್ಪ ದರ್ಪಯುತವಾಗಿಯೇ ಮಾತಾಡಿದ.

"ಈ ಮೆರವಣಿಗಿ, ಈ ಸಕ್ಕರಿ ಹಂಚೂದು ಇದನ್ನ ನೋಡೇ ನನಗ ಗೊತ್ತಾಗೇದ ಲಿಂಗಪ್ಪ, ಅದನ್ನೇನು ಬಾಯಿ ಬಿಚ್ಚಿ ಹೇಳೋ ಕಾರಣ ಇಲ್ಲ. ಆದರೂ, ಅಧಿಕಾರ ಬಂದರೂ ಸ್ವಲ್ಪ ತಗ್ಗಿಬಗ್ಗಿ ಮಾತಾಡಬೇಕಾಗತದ. ಹಾದೀ ಹಿಡಿದು ನೀತಿಸಮ್ಮತವಾಗಿ ಯಾರೂ ಮಾತಾಡಿದರೂ ಬೆಲಿ ಕೊಡಬೇಕಾಗತದ ಆದರ ಸಿಕ್ಕಸಿಕ್ಕಾಂಗ ಮಾತಾಡಿದರ ಗೌಡ ಇದ್ದರೂ ನಾ ಏನು ಬೆಲಿಕೊಡೂದುಲ್ಲ. ಇವೊತ್ತು ಏಕಾದಶಿ ಅಂತ ಹೇಳೀನಿ. ನಾ ಎರಡನೇ ಮಾತಾಡಲಿಕ್ಕೆ ತಯಾರಿಲ್ಲ?" ಆಚಾರ್ಯರು ಗಟ್ಟಿಯಾಗಿಯೇ ಹೇಳಿದರು.

ಲಿಂಗಪ್ಪಗೌಡನ ಮೂಲ ಜಾತಿಯನ್ನು ಬಯಲಿಗೆಳೆದಿದ್ದರಿಂದಲೂ ಗೌಡನಾಗಿ ಊರಿಗೆ ಬಂದರೂ ಅವನ ಗೌಡಿಕೆಯ ಮಾತಿಗೆ ಬೆಲೆ ಕೊಡದೆ ಗಟ್ಟಿಯಾಗಿ ಮಾತನಾಡಿದ್ದರಿಂದಲೂ ಮತ್ತೂ ಏನಾದರೂ ಆಪತ್ತು ಸಂಭವಿಸುತ್ತದೆಂಬ ಮುಂದಾಲೋಚನೆಯಿಂದ "ಆಚಾರೆಪ್ಪ ಏಕಾದೋಶಿ ಮಾಡ್ಯಾನಂತರೆಪ್ಪೋ, ಹಸದ ಹಾರವನನ್ನು ತಡವಬಾರದು ಅಂತಾರು ನಡೀರಲೆ" ಎಂದು ಲಿಂಗಪ್ಪ ಪರಿವಾರವನ್ನೆಲ್ಲ ಗುಡಿಯಿಂದ ತಿರುವಿಕೊಂಡು ನಡೆಯುತ್ತಾನೆ.

೫ "ಆಸ್ಯಾಡದಾಗ ಹೊಲ್ಯಾ ಸೀ ತೆನಿ ಬೇಡಿ ಅತ್ತನಂತ" (ಪು. ೬೨೩ ಗ್ರಾಮಾಯಣ)

ಆಷಾಢ ಮಾಸದಲ್ಲಿ ಹೊಲಗಳಲ್ಲಿ ಯಾವ ಬೆಳೆಯೂ ಇರುವುದಿಲ್ಲ. ಯಾಕೆಂದರೆ ಹೇಳಿ ಕೇಳಿ ಅದು ಬೇಸಿಗೆ ಕಾಲ. ಈ ಸಮಯದಲ್ಲಿ ಬಿತ್ತುವುದಕ್ಕಾಗಿ ಹೊಲವನ್ನು ಹಸನುಗೊಳಿಸುತ್ತಿರುತ್ತಾರೆ. ಇಂತಹ ಸಮಯದಲ್ಲಿ ಸಿಹಿ ತೆನೆಯನ್ನು ಬೇಡಿದರೆ ಎಲ್ಲಿಂದ ತರಬೇಕು. ಅದು ಅಸಾಧ್ಯವಾದ ಕೆಲಸ ಎಂಬುದನ್ನು ಸೂಚಿಸುವಂತೆ ಶೂದ್ರವರ್ಗದ ಬೆಪ್ಪುತನವನ್ನು ಅವರು ಅನೂಚಾನವಾಗಿ ಶೋಷಣೆಗೆ ತುತ್ತಾಗುತ್ತಾ ಬಂದಿರುವುದನ್ನು ಸೂಚಿಸುತ್ತದೆ.

ಲಿಂಗಪ್ಪ ಗೌಡ ತಾನು ಗೌಡಿಕೆಯನ್ನು ಪಡೆದುದರ ಸಂಬಂಧ ಊರು ಮಂದಿಗೆಲ್ಲ ಸಕ್ಕರೆ ಹಂಚಿ ಮಠಕ್ಕೆ ಬಂದು ಕುಳಿತಾಗ, ಹೊಲೆಯರ ರುದ್ರಾ "ಯಪ್ಪಾ ಮಧ್ಯಾನದಿಂದ ಓಡಾಡಿ ಓಡಾಡಿ ಜನ ಕೈಕಾಲು ಸರವುಗಟ್ಟಿ ಕುಂತೈತಿ. ಸೊಲಪ ತೀರ್ತಾ ಮಂಜೂರಿ ಮಾಡಿಸಿಬಿಟ್ಟರ ಮಜಾ ಆದೀತ ಯಪ್ಪಾ" ಎಂದು ನೆನಪು ಮಾಡಿಕೊಟ್ಟಾಗ.

ಆಗತಾನೆ ಅಧಿಕಾರದ ಗದ್ದುಗೆಯನ್ನೇರಿದ್ದ ಲಿಂಗಪ್ಪನ ಹತ್ತಿರ ಅಧಿಕಾರದ ಪತ್ರವೊಂದನ್ನು ಬಿಟ್ಟರೆ ಬೇರೇನು ಇರುವುದಿಲ್ಲ. ಆದರೆ ತನ್ನಿಂದೆ ಓಡಾಡಿದ ಜನರಿಗೆ ಅವರ ಬೇಡಿಕೆಯಂತೆ ತೀರ್ಥ(ಸೆರೆ)ವನ್ನು ತರಿಸಬೇಕಾಗಿ ಬಂದಾಗ ತನ್ನ ಹತ್ತಿರ ದುಡ್ಡ ಇಲ್ಲ ಎಂದು ಹೇಳಿಕೊಳ್ಳಲು ಅವಮಾನವೆನಿಸಿ, "ಅಪ್ಪನವರು ಇಲ್ಲದಾಗ ತೀರ್ತದ ನೆನಪು ತಗೂದಂದರೇನಲೆ ರುದ್ರ್ಯಾ? ಆಸ್ಯಾಡ(ಆಷಾಡ)ದಾಗ ಹೊಲ್ಯಾ ಸೀ ತೆನಿ ಬೇಡಿ ಅತ್ತನಂತ, ಕೇಳಿದಿಲ್ಲೋ?" ಮಾಯಪ್ಪ. ಪಡದಪ್ಪನವರಿಲ್ಲದಾಗ ತೀರ್ಥದ ನೆನಪೂ ಕೂಡ ಪಾಪ ವೆಂಬಂತೆ ರುದ್ರನನ್ನು ಜಬರಿಸುವ ಮೂಲಕ ತನ್ನ ಬಳಿ ಹಣವಿಲ್ಲ ಎಂಬ ವಿಷಯವನ್ನು ಮರೆಮಾಚಲು ಪ್ರಯತ್ನಿಸುತ್ತಾನೆ.

ಹೀಗೆ ಗಾದೆಗಳಲ್ಲಿ ಜಾತಿ ಸೂಚಕಾಂಶಗಳು ಇರುವಂತೆ ಲಿಂಗ ಸೂಚಕಾಂಶಗಳೂ ಇವೆ. ಇಂತಹ ಗಾದೆಗಳಲ್ಲಿ ಸ್ತ್ರೀ-ಪುರುಷರ ಜೀವನ ಸ್ವರೂಪ ಸ್ತ್ರೀ ಸಂಬಂಧಿ ಮೌಲ್ಯ ಮತ್ತು ದೃಷ್ಟಿಕೋನಗಳು ಸ್ತ್ರೀ ಪುರುಷರ ಪಾತ್ರ ಮೊದಲಾದವುಗಳೆಲ್ಲವು ವ್ಯಕ್ತಗೊಂಡಿವೆ. ಭಾರತದ ಸಂಕೀರ್ಣ ಸಾಂಸ್ಕೃತಿಕ ಹಿನ್ನೆಲೆ ಮತ್ತು ಪರಿಸರದಲ್ಲಿ ರೂಪಿತವಾಗಿರುವ ಲಿಂಗವ್ಯವಸ್ಥೆಯ ಸ್ವರೂಪವನ್ನು ಹೇಗೆ ತಿಳಿಯಬೇಕೆಂಬ ಪ್ರಶ್ನೆಗೆ ಉತ್ತರವನ್ನು ಸಮಷ್ಠಿ ನೆಲೆಯಲ್ಲಿನ ಜೀವಂತವಾದ ಭಾವನೆ ವಿಚಾರಗಳನ್ನು ಗಾದೆಗಳಲ್ಲಿ ಕಂಡುಕೊಳ್ಳುತ್ತೇವೆ. ಹೀಗಾಗಿ ಲಿಂಗವ್ಯವಸ್ಥೆಯ ವಸ್ತುಸ್ಥಿತಿಯನ್ನು ತಿಳಿಯಲು ಗಾದೆಗಳ ಮೊರೆ ಹೋಗುವುದು ಅನಿವಾರ್ಯವಾಗಿದೆ. ಈ ಕುರಿತು ಲಿಂಗವ್ಯವಸ್ಥೆಯು ಗಾದೆಗಳಲ್ಲಿ ಹೇಗೆ ಮೂಡಿ ಬಂದಿವೆ ಮತ್ತು ಸಮಾಜದಲ್ಲಿ ಲಿಂಗವ್ಯವಸ್ಥೆಯ ಚಹರೆಗಳಾಗಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಕಾದಂಬರಿಗಳಲ್ಲಿ ಆಯ್ದ ಗಾದೆಗಳಿಂದ ಚರ್ಚಿಸಲಾಗುವುದು.

೧ "ವೃಥಾ ಕೆಚ್ಚಲು ಹೊತ್ತ ಗೊಡ್ಡ ಹಸು" (ಪು. ೭೦ ವೈಶಾಖ)

ಹೆಣ್ಣಿನ ಜೀವೋತ್ಪಾದಕ ಶಕ್ತಿಗೆ ಸಮಾಜ ಮನ್ನಣೆ ನೀಡುವ ಮೂಲಕ, ಆಕೆಗೆ ಗೌರವಯುತವಾದ ಸ್ಥಾನವನ್ನು ಕಲ್ಪಿಸಿದೆ. ಈ ಮನ್ನಣೆ ಗೌರವಗಳ ಹಿಂದೆ ಮಿತಿಗಳು ಇರುವುದು ನಿಜವಾದರೂ ಈ ಮಾನ್ಯತೆ ಸಮಾಜದಲ್ಲಿ ಆಳವಾಗಿ ಬೇರೂರಿರುವುದು ಅವಳ ಘನತೆಯನ್ನು ಹೆಚ್ಚಿಸುವಲ್ಲಿ ಸಹಾಯಕವಾದಂತೆ, ಇದೇ ಸಮಾಜದಲ್ಲಿ ಬಂಜೆತನ ಹೆಣ್ಣನ್ನು ಅಸ್ಪೃಶ್ಯವಾಗಿಸಿತು. ತಿರಸ್ಕೃತವಾಗಿ ಕಾಣಲಾರಂಭಿಸಿತು. ಈ ಅಂಶಗಳನ್ನು ಗಾದೆಗಳು ಸೂಚ್ಯವಾಗಿ ಪ್ರತಿನಿಧಿಸುತ್ತವೆ. ಮಗುವನ್ನು ಹೆರದ ಹೆಣ್ಣು ಜೀವಂತವಿದ್ದು ನಿರರ್ಥಕ ಎಂಬುದನ್ನು ಈ ಗಾದೆ ಆಕಳ ಪ್ರತಿಮೆಯ ಮೂಲಕ ಸೂಚಿಸುತ್ತದೆ.

ಗಂಡ ಸತ್ತ ನಂತರ ರುಕ್ಮಿಣಿ ತನ್ನ ಅಣ್ಣನ ಮನೆಯಲ್ಲಿರುತ್ತಾಳೆ. ಒಮ್ಮೆ ಅವಳ ಅತ್ತಿಗೆ ಪಕ್ಕದ ಮನೆಗೆ ಆಟಕ್ಕೆ ಹೋಗುವ ಅವಸರದಿಂದ ಮಗುವಿಗೆ ಅರೆ ಹೊಟ್ಟೆಗೆ ಕೊಟ್ಟು ಮಲಗಿಸಿ ಹೋಗಿರುತ್ತಾಳೆ. ಸ್ವಲ್ಪ ಸಮಯದಲ್ಲಿಯೇ ಮಗು ಅರೆ ನಿದ್ರೆಯಲ್ಲಿ ಎದ್ದು ಅಳತೊಡಗಿದಾಗ ರುಕ್ಮಿಣಿ ಮಗುವನ್ನೆತ್ತಿಕೊಂಡು ನಾನಾ ರೀತಿಯಲ್ಲಿ ಸಮಾಧಾನಿಸಿದಾಗಲೂ ಅಳು ನಿಲ್ಲಿಸದ ಮಗುವನ್ನು ತನ್ನ ಅತ್ತಿಗೆಯಿರುವಲ್ಲಿಗೆ ಹೊಯ್ದು ಕೊಟ್ಟಾಗ ಸಾತು ಹಾಲುಕೊಡುತ್ತಿದ್ದಂತೆ ಮಗು ಅಳುವುದನ್ನು ನಿಲ್ಲಿಸುತ್ತದೆ. ಮಗು ಅಳು ನಿಲ್ಲಿಸಿದ್ದು ರುಕ್ಮಿಣಿಗೆ ಸಂತೋಷವೇ ಆದರೂ, "ಎಂಥೆಂಥವರಿಗೋ ಕೂಸಿಗೆ ಮೊಲೆಯೂಡುವ ಭಾಗ್ಯವಿದೆ, ಈ ಕೊಳಕಿ ಸಾವಿತ್ರಿಯಂಥವರಿಗೂ!..... ನನಗೆ ಮಾತ್ರ ಯಾಕೆ ಈ ವಂಚನೆ? ಎನ್ನಿಸುತ್ತಿದಂತೆಯೇ, ವೃಥಾ ಕೆಚ್ಚಲು ಹೊತ್ತ ಗೊಡ್ಡು ಹಸು" ತಾನು ಎಂಬ ಭಾವನೆ ಸುಳಿದು ಕಣ್ಣುಗಳಲ್ಲಿ ನೀರಾಡುತ್ತದೆ.

ರುಕ್ಮಿಣಿ ಇನ್ನೂ ದಾಂಪತ್ಯದ ಜೀವನಕ್ಕೆ ಒಗ್ಗಿಕೊಳ್ಳುತ್ತಿರುವಾಗಲೇ, ಮಕ್ಕಳಾಗುವ ಮೊದಲೇ ಈಕೆಯ ಪತಿ ದುರ್ಮರಣಕ್ಕೀಡಾಗುತ್ತಾರೆ. ಇನ್ನೂ ಹರೆಯದ ಹೊಸ್ತಿಲಲ್ಲಿದ್ದ ರುಕ್ಮಿಣಿ ವಿಧವೆಯಾಗುತ್ತಾಳೆ. ಈಕೆಯನ್ನು ಬಂಜೆಯೆಂದು ಹೇಳಲು ಬಾರದಾದರೂ, ಪತಿಯೇ ಇರದುದರಿಂದ ತನ್ನನ್ನು ತಾನು ಹೀಗೆ ಹಳಿದು ಕೊಳ್ಳುತ್ತಾಳೆ.

೨. ಗಂಡ ಸೇರದ ಹೆಣ್ಣು ಗುಂಡಕಲ್ಲಿಗೆ ಸಮವಂತೆ (ಪು.೩೫ ಅರಮನೆ)

ಸಾಮರಸ್ಯವನ್ನು ರೂಪಿಸಿಕೊಳ್ಳಬೇಕೆಂಬುದು ಸಮಾಜದ ದೊಡ್ಡ ಆದರ್ಶವೇ ಆದರೂ. ನಾನಾ ಕಾರಣಗಳಿಗಾಗಿ ಗಂಡ ಹೆಂಡಿರ ನಡುವೆ ಬರುವ ವಿರಸಕ್ಕೇನು ಕಡಿಮೆಯಿಲ್ಲ. ಏನೇ ಆದರೂ ಕೊನೆಗೆ ಹೆಣ್ಣು ಹೊಂದಿಕೊಂಡು ಹೋಗಬೇಕೆಂಬ ನೀತಿ ಮಾತುಗಳಂತೆ, ಗಂಡ ಸೇರದ ಹೆಣ್ಣು ಗುಂಡಕಲ್ಲಿಗೆ ಸಮ ಅಂದರೆ ಅವಳು ಜನರ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾಳೆ ಎಂಬುದನ್ನು ಈ ಗಾದೆ ಸೂಚಿಸುತ್ತದೆ.

ತನ್ನ ಗಂಡನ ಮೈಯೊಳಗೆ ಶಾಂಭವಿಯು ವಸತಿ ಮಾಡಿದ ಮೇಲೆ ಗಂಡ ಓಬಯ್ಯನನ್ನು ಬಿಟ್ಟು ಬಂದು, ಒಂದು ಬೇವಿನ ಮರದಡಿಯಲ್ಲಿ ಆಶ್ರಯವನ್ನು ಪಡೆಯುವ ಜಗಲೂರೆವ್ವನಿಗೆ ಹೇಳುವವರು, ಕೇಳುವವರಿಲ್ಲದೆ ಗಂಡ-ಹೆಂಡಿರನು ಒಂದು ಮಾಡುವವರಿಲ್ಲದೆ, ನೀನು ಪಡಕೊಂಡು ಬಂದಿರೋದೇ ಯಿಷ್ಟು ಕನವ್ವಾ. ನೀನು ಹ್ವಾದ ಜೆಲುಮದಲ್ಲಿ ಮಾಡಿರೋ ಕರುಮವನ್ನು ಯೀ ಜಲುಮದಲ್ಲಿ ತೀರಿಸಬೇಕಯ್ತುವ್ವಾ, ನೀನು ಬಲ, ನಿನ ಗಂಡ ಬಲ ಕನವ್ವಾ, ವೂರೊಳಗಿದ್ದುಕೊಂಡು ವನವಾಸ ಅನುಬೋಸವ್ವಾ. ಮಂದಿ ನಡುವೆ ಯಿದ್ದುಕೊಂಡು ಅಗ್ನಾತವಾಸ ಅನುಬೋಸವ್ವಾ ನಿನ್ನ ಸರೀರದೊಳಗೆ ವೋಬಯ್ಯ ಅದಾನಂದರ ಅದಾನವ್ವಾ.... ಯಿಲ್ಲಾಂದರ ಯಿಲ್ಲಕನವ್ವಾ.... ನಿನಗೂ ಅವಗೂ ನಡುವೆ ಅಲವುಕಿಕ ಮಾಯ ಮುಸುಕಯ್ತುವ್ವಾ, ಅದು ಕರಗದ ಹೊರತು ನಿನ್ನ ಕಣ್ಣೊಳಗಿನ ವುದುಕ ಬತ್ತೋದಿಲ್ಲವ್ವಾ... ಮುಂದ ವಂದಲ್ಲಾ ವಂದಿವಸ ಗಂಡ ಹೆಂಡಿರು ವಂದಾಗುತೀರವ್ವಾ.... ಅಲ್ಲಿಗಂಟಾ ಜೀವ ಹಿಡಕಳ್ಳವ್ವಾ.... ಕಣ್ಣೀರು ಸುರಿಸಿ ಕಲ್ಲು ಕರಗಿಸಿವ್ವಾ... ಕರುಣೆ ಹುಟ್ಟಿಸವ್ವಾ ಹಿಂಗ ವಬ್ಬೊಬ್ಬರು ವಂದೊಂದು ಮಾತ.....

ಹೀಗೆ ಈ ಗಾದೆಯು ಗಂಡನನ್ನು ಬಿಟ್ಟ ಹೆಣ್ಣು ಊರ ಜನರ ನಿರ್ಲಕ್ಷಕ್ಕೊಳಗಾಗುವುದನ್ನು ಸೂಚಿಸುತ್ತದೆ.

೩. "ಆಳವನಿಗೆ ಅರವತ್ತ ಮಂದಿ ಹೆಂಡ್ರಂತ" (ಪು.೯ ಬದುಕು)

ಇದು ರಾಜಮಹಾರಾಜರ ಕಾಲದ ಗಾದೆಯೆನಿಸುತ್ತದೆ. ಬಲಿಷ್ಠನಾದ ರಾಜ, ಇನ್ನೊಂದು ದೇಶದ ಮೇಲೆ ದಂಡೆಯಾತ್ರೆ ಕೈಗೊಂಡಾಗ ಆ ರಾಜನನ್ನು ಗೆದ್ದು ಕಪ್ಪಕೊಂಡು ಬರುವಾಗ ಅಲ್ಲಿನ ಅಂತಃಪುರದ ರಾಣಿಯರು ಮತ್ತು ರಾಣಿವಾಸದವರು ಕಪ್ಪವಾಗಿ ಬಹುಮಾನವಾಗಿ ಲಭಿಸುತ್ತಿದ್ದರು. ಇನ್ನೂ ಕೆಲವು ರಾಜರು ಯುದ್ಧಕ್ಕೆ ಮೊದಲೇ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುವ ಸಲುವಾಗಿ ವಿವಾಹವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದರು. ಹೀಗಾಗಿ ಹೋದಲ್ಲೆಲ್ಲಾ ವಿವಾಹವಾಗಬೇಕಾಗಿ ಬರುತ್ತಿದ್ದ ರಾಜರುಗಳ ಹಿನ್ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ. ಆದರೆ ಇಂದಿನ ಸಮಾಜದಲ್ಲೂ ವಿವಾಹದ ವಿಷಯದಲ್ಲಿ ಗಂಡಸಿಗೆ ಕೊಟ್ಟಷ್ಟು ಸ್ವಾತಂತ್ರವನ್ನು ಹೆಂಗಸಿಗೆ ಎಂದೂ ಕೊಟ್ಟಿಲ್ಲ. ಪತಿವ್ರತೆಯಾದ ಹೆಂಗಸಿಗೆ ಜೊತೆಯಲ್ಲಿದ್ದರೂ ಬಿಟ್ಟರೂ ಗಂಡನೊಬ್ಬನೆ. ಒಂದು ವೇಳೆ ಅವಳು ಒಂದಕ್ಕಿಂತ ಹೆಚ್ಚು ಗಂಡಸರೊಡನೆ ಸಂಪರ್ಕ ಹೊಂದಿದ್ದಾಗ ಅವಳನ್ನು ಸಮಾಜ ನೋಡುವ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ಆದರೆ ಗಂಡಸಿಗೆ ಹಾಗಲ್ಲ, ಹೆಂಗಸಿಗೆ ಈ ವಿಷಯ ಕೆಟ್ಟ ನಡತೆಯವಳು ಎಂಬ ನಿಂದನೆಗೆ ಗುರಿ ಮಾಡಿದರೆ ಗಂಡಸಿಗೆ ಅವನ ಪ್ರತಿಷ್ಠೆಯ

ವಿಷಯವಾಗುತ್ತದೆ. ಒಂದಕ್ಕಿಂತ ಹೆಚ್ಚು ಹೆಂಗಸರ ಸಹವಾಸವಿದ್ದಾಗ್ಯೂ ಅದು ಅವನ ರಸಿಕತೆಗೆ ಅಥವಾ ಅವನ ಸಾಮರ್ಥ್ಯಕ್ಕೆ ಸಾಕ್ಷಿಯಾಗುತ್ತದೆ. ಈ ಹಿನ್ನೆಲೆಯಲ್ಲಿ "ಆಳುವವನಿಗೆ ಅರವತ್ತು ಮಂದಿ ಹೆಂಡ್ರಂತೆ" ಎಂಬ ಗಾದೆ ಇಂದಿಗೂ ಕೂಡ ಪ್ರಸ್ತುತವೆನಿಸುತ್ತದೆ.

ತನಗೆ ಯಾವ ರೀತಿಯಿಂದಲೂ ಸರಿ ಜೋಡಿಯಾಗದ ಹೆಂಡತಿ ಮಲ್ಲವ್ವನನ್ನು ಬಿಟ್ಟು, ಮಲ್ಲಪ್ಪ ಹೊರಗಿನ ಚಾಳಿಗೆ ಬೀಳುತ್ತಾನೆ. ಈ ವಿಷಯ ತಿಳಿದು ಹೆಂಡತಿ ಅತ್ತುಕರೆದು ಜಗಳವಾಡಿದಾಗಲೂ ಪ್ರಯೋಜನವಾಗದಿದ್ದಾಗ ತವರು ಮನೆಯವರಿಗೆ ಸುದ್ದಿ ಕಳಿಸುತ್ತಾಳೆ. ಸಾವಳಿಗಿ ಬಸಣ್ಣ ಮತ್ತು ಅವನ ಗೆಳೆಯ ಜಂಬಣ್ಣ ಬಂದು ಮಲ್ಲಪ್ಪನನ್ನು ತರಾಟೆಗೆ ತೆಗೆದುಕೊಂಡು ಮಾನ ಮರ್ರ್ಯಾದಿ ಇರೋರು ಮಾಡೋ ಕೆಲಸಾ ಅಲ್ಲಿದು. ಈ ಹಲ್‌ಕಟ್‌ಗಿರಿ ಬಿಟ್ಟುಬಿಡು, ಅಂತ ಬುದ್ಧಿ ಹೇಳಿ ಹೋಗುತ್ತಾರೆ. ಇದರಿಂದ ಸಿಟ್ಟುಗೊಂಡ ಮಲ್ಲಪ್ಪ ಹೆಂಡತಿಯೊಂದಿಗೆ ದಿನಾ ಜಗಳಾ ಕಾಯತೊಡಗುತ್ತಾನೆ. ಈ ಸಂದರ್ಭದಲ್ಲಿಯೇ ಆಳುವನಿಗೆ ಅರವತ್ತ ಮಂದಿ ಹೆಂಡ್ರಂತ! ನಾ ಖಂಬೀರ ಗಂಡಸಿದ್ದೀನಿ.... ನಿನ್ನಂತಾ ಪೀಚಿ ನನಗೆಲ್ಲಿ ಅಮರಬೇಕೇ ಛಿನಾಲೀ..... ನಮ್ಮಪ್ಪ ಭೋಸಡಿ ಮಗಾ ನನ್ನಂತಾ ಹುಲೀ ಜೋಡಿ ನಿನ್ನಂತಾ ಇಲಿಮರೀಗಿ ತಂದು ಗಂಟು ಹಾಕಿಹ್ವಾದ ಅವನವ್ವನಾ... ನಾ ಹೋಗಾವನೇ ನೋಡು. ಬ್ಯಾರೆ ಹೆಂಗಸರ ತೆಕ್ಯಾಗ ರಾತ್ರಿ ಕಳ್ದು ಬರಾಂವನೇ ನೋಡು..... ಎಂದು ಹೆಂಡತಿಗೆ ಬೈಯುತ್ತಾನೆ.

೪.೭ ಬೈಯ್ಗುಳಗಳು

ಸಾಮಾಜಿಕ ಚಹರೆಯನ್ನು ತಿಳಿದುಕೊಳ್ಳಲು ಸಹಾಯವಾಗುವ ಸಾಹಿತ್ಯ ಪ್ರಕಾರಗಲಲ್ಲಿ ಬೈಗುಳಗಳು ಪ್ರಮುಖ ಪಾತ್ರವಹಿಸುತ್ತವೆ. ವ್ಯಕ್ತಿಯನ್ನು ಅಂಕೆಯಲ್ಲಿಡಬಯಸಿದ ಸಮಾಜಕ್ಕೆ ಬೈಗುಳಗಳು ಪರಿಣಾಮಕಾರಿಯಾದ ಅಸ್ತ್ರಗಳಾಗಿವೆ. "ಇಬ್ಬರು ಸೇರಿ ಕುಶಲ ಪ್ರಶ್ನೆಯ ಮಾತುಗಳನ್ನಾಡುತ್ತಿದ್ದರೆ. ಅದನ್ನು ನಿಂತು ಯಾರೂ ಆಲಿಸಲು ಬಯಸುವುದಿಲ್ಲ. ಆದರೆ ಇಬ್ಬರು ಜಗಳವಾಡುತ್ತಾ ಪರಸ್ಪರ ಬೈಯುತ್ತಿದ್ದರೆ ಅಲ್ಲಿ ಜನ ಸೇರುತ್ತಾರೆ. ಹೀಗೆ ಬೈಗುಳಗಳಿಗೆ ಜನರ ಗಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯಿದೆ. ಬೈಗುಳಗಳು ಅಲ್ಲಿ ನೇರವಾಗಿ ಭಾಗಿಯಾಗುವ ಇಬ್ಬರು ಅಥವಾ ಹಲವರಿಂದ ತೀವ್ರ ತಕ್ಷಣದ ಪ್ರತಿಕ್ರಿಯೆಯನ್ನುಂಟು ಮಾಡುತ್ತವೆ". (ಡಾ. ಎಂ. ಚಿದಾನಂದಮೂರ್ತಿ, ಗ್ರಾಮೀಣ, ಪು.೯೦) ಒಂದರ್ಥದಲ್ಲಿ ಬೈಗಳಗಳನ್ನು ಶಾಬ್ದಿಕವಾದ ಹೊಡೆತ ಎನ್ನಬಹುದು. ಹಾಗೆ ನೋಡಿದರೆ ಹೊಡೆತವು ದೈಹಿಕವಾದುದು. ಎದುರಾಳಿಯನ್ನು ಹೊಡೆಯಲು ಯಾವುದಾದರೂ ಭೌತಿಕವಾದ (ಕೈ, ಕಾಲು, ಉಪಕರಣ) ವಸ್ತುಗಳನ್ನು ಬಳಸಬೇಕಾಗುತ್ತದೆ. ಆದರೆ ಬೈಗುಳಗಳಿಗೆ ಮಾತುಗಳೇ ಅಸ್ತ್ರವಾಗಿ ಪರಿಣಮಿಸುತ್ತದೆ. ತನಗೆ ಆಗದವರಿಗೆ ದೈಹಿಕವಾಗಿ ನೋವುಂಟು ಮಾಡುವುದು, ಹೊಡೆತದ ಉದ್ದೇಶವಾಗಿದ್ದರೆ, ಬೈಗುಳದ ಉದ್ದೇಶ ತನ್ನ ಶತ್ರುವಿಗೆ ಅಥವಾ ಎದುರಾಳಿಗೆ ಮಾನಸಿಕವಾಗಿ ನೋವುಂಟುಮಾಡುವುದೇ ಆಗಿದೆ.

ಆದರೆ ಬೈಗುಳವು ಹೊಡೆತಕ್ಕಿಂತಲೂ ಸೂಕ್ಷ್ಮವಾದುದು, ಸಂಕೀರ್ಣವಾದುದು, ನುಣುಚಿಕೊಳ್ಳಲು ಅವಕಾಶವಿರುವಂತದ್ದು. ಅಂದರೆ ಒಬ್ಬ ಇನ್ನೊಬ್ಬನನ್ನು ಬೈದರೂ ತಾನು ವಾಸ್ತವವಾಗಿ ಬೈಯಲಿಲ್ಲವೆಂದೂ

ತನ್ನ ಮಾತಿನ ಅರ್ಥ ಬೇರೊಂದೂ ವಾದಿಸಬಹುದು. ಮತ್ತು ವ್ಯಕ್ತಿ ಕಣ್ಣ ಮುಂದಿಲ್ಲದಿದ್ದರೂ ತನ್ನ ಬೈಗುಳದ ಏಟು ಅವನಿಗೆ ಮುಟ್ಟುವಂತೆ ಮಾಡಬಹುದು. ಹೊಡೆತದ ನೋವನ್ನು ಮನುಷ್ಯ ಮರೆಯಬಹುದು. ಆದರೆ ಬೈಗುಳದ ನೋವು ಅಷ್ಟು ಸುಲಭವಾಗಿ ಹೋಗುವಂತಹುದಲ್ಲ. ಒಮ್ಮೊಮ್ಮೆ ಜೀವನದ ಉದ್ದಕ್ಕೂ ಅಷ್ಟೇ ಯಾಕೆ ಜೀವನದ ಅಂತ್ಯದವರೆಗೂ ಹಿಂಬಾಲಿಸಿಕೊಂಡು ಬರಬಹುದು. ಆದರೂ ಬಯ್ಗಳನ್ನು ವ್ಯಾಚ್ಯಾರ್ಥಕ್ಕಿಂತ ಅದರ ಸಾಂದರ್ಭಿಕ ಮತ್ತು ನಿಯೋಗಾತ್ಮಕ ಅರ್ಥಗಳೇನೆಂದು ತಿಳಿಯುವಲ್ಲಿ ಅವುಗಳ ವಿಶೇಷತೆಯಿದೆ.

ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಬಯ್ಯುತ್ತಿದ್ದಾರೆಂಬುದನ್ನು ಆಧರಿಸಿ, ಅವುಗಳ ಸಾಂದರ್ಭಿಕ ಅರ್ಥ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ಯಾವುದೇ ಅಶ್ಲೀಲವಾದ ಪದ ಎದುರಾಳಿಯನ್ನು ಮಾನಸಿಕವಾಗಿ ದುರ್ಬಲಗೊಳಿಸುವ ಇಲ್ಲವೇ ನೋಯಿಸುವ ಅಸ್ತ್ರವಾಗಿ ಬಳಕೆಯಾದರೆ ಮತ್ತೊಂದು ಕಡೆ ಸ್ನೇಹ, ಆತ್ಮೀಯತೆ, ಪ್ರೀತಿ, ಮೆಚ್ಚುಗೆ, ವಿಶ್ವಾಸ ರೂಪದಲ್ಲಿ ಸ್ನೇಹಿತರಿಗೆ, ಮಕ್ಕಳಿಗೆ ಇಲ್ಲವೆ ಸಂಬಂಧಿಕರಿಗೆಲ್ಲ ಬಳಕೆಯಾಗುವುದನ್ನು ನೋಡಬಹುದು. ಹೀಗೆ ಬಳಕೆಯಾಗುವ ಬೈಗಳಗಳು ವೈಯಕ್ತಿಕವಾದರೂ ಸಾಮಾಜಿಕ ಒಪ್ಪಿಗೆ ಬೀಳದೆ ಅದಕ್ಕೆ ಬೈಗುಳದ ಸ್ಥಾನ ದೊರಕಲಾರದು. ಉದಾಹರಣೆಗೆ 'ಹಂದಿ' ಎಂದು ಒಬ್ಬ ವ್ಯಕ್ತಿಯನ್ನು ಕುರಿತು ಬೈಯ್ದಾಗ, ಅದು ಸಾಮಾನ್ಯವಾಗಿ ತಿನ್ನುವುದಕ್ಕಿಂತಲೂ ಹೆಚ್ಚಾಗಿ ತಿನ್ನುವವರನ್ನು ಸೂಚಿಸಲು ಈ ಬೈಗಳನ್ನು ಬಳಸಲಾಗುತ್ತದೆ. ಆದರೆ ಹಂದಿಯನ್ನು ವರಹಾಯೆಂದೂ, ಲಕ್ಷ್ಮೀ ಎಂದೂ ಪೂಜಿಸುವೆಡೆಗಳಲ್ಲಿ ಈ ಪದ ಅಷ್ಟು ಪರಿಣಾಮಕಾರಿಯಾಗಲಿಕ್ಕಿಲ್ಲವೇನೋ. ಒಟ್ಟಿನಲ್ಲಿ ಯಾವುದು ಬೈಗುಳ, ಯಾವುದು ಬೈಗುಳವಲ್ಲ ಎಂಬುದನ್ನು ನಿರ್ಧರಿಸುವುದು ಸಮಾಜ ಅಥವಾ ಆ ಸಮಾಜದ ಕಟ್ಟುಪಾಡು ಹಾಗೂ ರೀತಿ ನೀತಿಗಳು. ಇದು ಹೌದು ಎಂದಾದರೆ ಬೈಗುಳಗಳೂ ಕೂಡ ಆಯಾ ಸಮಾಜದ ಪ್ರತಿಬಿಂಬಗಳು ಎಂದಂತಾಯಿತು. ಹಾಗಾಗಿ ಬೈಗಳವೂ ಕೂಡ ಒಂದು ಸಮಾಜದ ಜನರ ಅಂತಸ್ತನ್ನು ಸೂಚಿಸುವ (ಮೇಲ್ವರ್ಗ-ಕೆಳವರ್ಗ, ಗಂಡು-ಹೆಣ್ಣು, ಅಧಿಕಾರಿ-ಅಧಿಕಾರಹೀನ) ಪೂರಕ ಅಂಶಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಕಾದಂಬರಿಗಳಲ್ಲಿ ಆಯ್ದ ಬೈಗುಳಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇದನ್ನು,

೧. ಎರಡು ಭಿನ್ನ ಸಾಮಾಜಿಕ ವರ್ಗಗಳಲ್ಲಿ ಬಳಕೆಯಾಗುವ ಬೈಗುಳಗಳು.

೨. ಒಂದೇ ಸಾಮಾಜಿಕ ವರ್ಗಗಳಲ್ಲಿ ಬಳಕೆಯಾಗುವ ಬೈಗುಳಗಳು.

ಎಂಬ ಎರಡು ಉಪಶೀರ್ಷಿಕೆಯಡಿಯಲ್ಲಿ ಚರ್ಚಿಸಲಾಗುವುದು.

೧. ಎರಡು ಭಿನ್ನ ಸಾಮಾಜಿಕ ವರ್ಗಗಳಲ್ಲಿ ಬಳಕೆಯಾಗುವ ಬೈಗುಳಗಳು

ಬೈಗುಳವು ಸಾಮಾಜಿಕ ಅಂತಸ್ತನ್ನು ಸೂಚಿಸುವ ಒಂದು ಅಂಶ. ಬೈದವರ ಹಾಗೂ ಬೈಸಿಕೊಂಡವರ ಸಮಯ, ಸಂದರ್ಭವನ್ನು ಗಮನಿಸಿ, ಸಮಾಜದಲ್ಲಿ ಅವರಿಗಿರುವ ಸ್ಥಾನವನ್ನು ಗುರುತಿಸಬಹುದು. ಬೈಗುಳವು ಸಾಮಾನ್ಯವಾಗಿ ಉಳ್ಳವರ ಅಸ್ತ್ರವಾಗಿ ಬಳಕೆಯಾಗುವುದರಿಂದ ಇದು ಎರಡು ಭಿನ್ನ ಸಾಮಾಜಿಕ ವರ್ಗ

(ಮೇಲ್ವರ್ಗ-ಕೆಳವರ್ಗ, ಅಧಿಕಾರಿ-ಅಧಿಕಾರಿಹೀನ, ಹೆಣ್ಣು-ಗಂಡು)ಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇದಕ್ಕೆ ಕಾದಂಬರಿಯಿಂದಲೇ ನಿದರ್ಶನಗಳನ್ನು ನೋಡುವುದಾದರೆ

* **ಮೇಲ್ವರ್ಗ ಮತ್ತು ಕೆಳವರ್ಗ** : ಉದಾ:

೧ "ಕುಡಿಯಾಕ ಅಂತ ಎಳ್ನೀರ ಕಿತ್ಗಂಡ್ರೂ ತಪ್ಪಪ್ಪ ಅದೂವಿ?"

"ಅಡಡೆ ಇದುಕುಡ ಮಾತು! ಕುಡಿಯಾಕ? ಯಾನುಡ ಯಾನುಡಾ? ಅದೂ

"ಕುಡಿಯಾಕ?

ಒಂದ್ ಕಿತ್ಗಯ್ಯ, ಸಾಲ್ನಿಲ್ಲ ಇನ್ನೂ ಒಂದು ಕಯ್ಯ.

ಅಮ್ಮಮ್ಮಾ ಅಂದ್ರ ಇನ್ನೂ ಒಂದು ಕಯ್ಯ. ನಿಮೌನ ಜಾತಿನ ಕೈಯ್ಯ

ಹದನಾರು ಕಿತ್ತರುಡ ಕುಡಿಯಾಕ? ಅದೂ ಹದ್ನಾರ?"

"ಎಲ್ಲನುವಿ ನಿಮ್ಮೆದ್ರುಗ ಕುಡುದ್ರ ಒಪ್ಪಗಂಡಿರ್‍ಯಪ್ಪ ಆಗ್ಲಾರುವಿ?"

ಗಾರಸಿದ್ ಮಾವನ ಈ ಸವಾಲು ಮೊಕಂಡನಿಗೆ ತಬ್ಬಿಬ್ಬುಮಾಡೀ

ಈಗೇನಾರ ಬಾಜಿಗ ಬಿದ್ದು ಇರ ಎಳ್ನೀರುವಿ ದಿಕ್ ತಪ್ಪಿದು

ಅಂತ ಮುಂದುಕ ತೋಟದವ ಮಾತು ತಗ್ದು ವರಸೆ ಬದಲಿಸಿದನು.

"ಅಯ್ ನಂ ತೋಟ ಎಳ್ನೀರು ಯಾರ್‍ಗಯ್ಯ

ಇರದು? ಇವ್ನಗ ಕುಡಿ

ಯಾಕಕನ ನಾವು ತೋಟ ಮಾಡಿರದು. ಅದ್ಯಾಕ ಹೇಳು?

ಇವರವ್ವಗ ಮಿಂಡ ನಾನು ಅದ್ಕ......"

ಅದುಕ ಗಾರಸಿದ್‌ಮಾವ "ಇದ್ಯಾನಪ್ಪ ನೀವು ಆಡ ಮಾತು?"

ಅಂದು ಅದುಕ ಗುಂಪಲ್ಲೊಬ್ಬ "ಐ ಪೆಚ್ ಬಡ್ಡೆತ್ತದೆ... ಎಲ್ಲಾಬುಟ್ಟು ಅವ್ರು ಅವ್ವನ ತವ್ಕ ಅದ್ಯಾಕ ಹೋದಯೀ.....

ಅದೂವಿ ಮುದ್ಕಿ ತವ್ಕ...." ಅಂದು ಇನ್ನೊಬ್ಬ ಅದುಕ "ಅದ್ಯ್ಕಾನು ತಕ್ಕ..." ಅಂದೂ ಅದುಕ ಆ ಗುಂಪು ಒಂದೇ ಬಾಯಾಗಿ ನಗ್ತಾ.... ಗಾರಸಿದ್‌ಮಾವನ ಸದಾ ಬುಟ್ಕಂಡಿರ್‍ತಿದ್ದ ಬಾಯಿ ಮುಚ್ಕೊಂಡಿರೊ ಕಾಲ್ಕ (ಪು.೧೪೪ ಕುಸುಮಬಾಲೆ).

೨ "ಯಪ್ಪಾ, ಬಡವರ ನಶೀಬನ್ನ ಕೆಟ್ಟದರೀ ಯಪ್ಪಾ; ಕರೇ ಹೇಳಿದರೂ ಕೇಳತೀರಿ; ಸುಳ್ಳು ಹೇಳಿದರೂ ಕೇಳತೀರಿ ಯಪ್ಪಾ; ನೀವು ಕೊಟ್ಟ ಜ್ವಾಳಾ ಗಾಳ್ಯಗ ಬಂತು; ಧೂಳ್ಯಾಗ ಹೋತು. ಹಾಗೆ ಆತರಿ" ಎಂದು ಕಣ್ಣೆರೊರಸಿಕೊಂಡ ಚೆನ್ನ.

"ಆದದ್ವೇನ ಹೇಳಬಾರದ್ಕ? ಹೆಣ್ಣರಂಡೀ ಹಾಗೆ ಮುಳು ಮುಳು ಅತಗೊಂತ ನಿಂತರೆ ಏನ ಮಾಡಿದ್ಹಾಗಾತ್ತಲೇ ಪ್ಯಾಲಿ? ಗೌಡ ಇರೂ ಮಟಾ ನೀವ್ಯಾಕ ಹೆದರತೀರಿ? ಹೇಳಬಾರದ ಗಡಾಗಡಾ? ಗೌಡರು ಒಂದೇ ಮಾತಿನಲ್ಲಿ ತಿರಸ್ಕಾರ, ದ್ವೇಷ, ಅಭಿಮಾನ, ಆಭಯ, ಕಾತರ ಮೊದಲಾದ ಭಾವ ಪರಂಪರೆಯನ್ನೆ ವ್ಯಕ್ತ ಪಡಿಸಿದರು.

"ಏನ ಹೇಳೂದೈತಿ ಯಪ್ಪಾ? ಬಡವನ ಹೊಟ್ಟಿ ತುಂಬಲಿ ಅಂತ ಜ್ವಾಳಾ ಕೊಟ್ಟಿದ್ದೆಲ್ಲ ಯಪ್ಪಾ ಮಟದ ಮುಂದ ಹೋಗುವಾಗ, ದಾರ್‍ಯಾಗ್ಕ ಬಡದು ಕಸಗೊಂಡು ಬಿಟ್ಟರಲ್ಲರಿ. ಊರಾಗ ದಾರೀ ಬಡೂದು ಸುರು ಆದ್ಹಾಂಗ ಆತಲ್ಲರಿ!" ಚನ್ನನ ಹೇಳಿಕೆ ಧ್ವನಿ ಪೂರ್ಣವಾಗಿತ್ತು.

"ಈಗ ಕರೆಸಿದ ಮ್ಯಾಗ, ಅಂತಗೊಂತ ಈ ಮಾತ ಹೇಳಾಕ ಸವಡು ಆತೇನ ಮಗನ್ಕ? ಆಗ್ಕ ಬಂದು ಹೀಗಿನ ಮಾತ ಹೀಗ್ಕ ಅಂತ ಹೇಳಾಕ ನಾಲಿಗ್ಗೇನ ಮುಳ್ಳ ಮುರದಿತ್ತ್ಕ?" ಎಂದು ಗೌಡರು ಸಿಟ್ಟಿನಿಂದ ಗದರಿಸಿದರು. (ಪು. ೭೭ ಗ್ರಾಮಾಯಣ)

೩ "ಮುಟ್ಟಿಸಿಕೊಂಡುಬಿಟ್ಟೆಯಲ್ಲೋ ರಂಡೆ-ಗಂಡ? ......ಮತ್ತೆ ಬಾವಿ ನೀರು ಸೇದಿ, ಮೈಮೇಲೆ ಸುರಿದು ಮಡಿಉಡೋಹಾಗೆ ಮಾಡಿದ್ಯಲ್ಲೋ, ಪಾಪಿ!" (ಪು. ೨ ವೈಶಾಖ)

೪. "ಯಾಕಲೆ ಮಲ್ಯಾ.... ಸೊಕ್ಕ ಬಂದಾದೇನ್ಲೇ ಕಬ್ಬಲಿಗ್ಯಾ?"..... ನಿಮ್ಮವ್ವನ ಸೂಳ್ಯಾ ಮಗನೇ.... ಕಡೀಗಿ ನಿಮ್ ಕಮಜಾತಿ ಹಲ್ಕಟ್ ಗುಣಾ ಎಲ್ಲಿ ಬಿಟ್ಟಿರೆಲೆ ನೀವು? ಏಟು ಸೊಕ್ಕಲೆ ಭೋಸಡಿ ಮಗನೇ ನಿನಗ......"

"ಯಾಕ್ರೀ ಸಾವ್ಕಾರಾ..... ಏನಾಯ್ತಂಬಾದು ಮದಲ ಹೇಳ್ರೀ...... ಹಿಂಗ್ ಸಿಕ್ಕಂಗೆಲ್ಲ ಬೈಯಲಕತ್ತರ ನನಗ್ಯಾಂಗ ತಿಳೀಬೇಕು? ಹಿಂಗೆಲ್ಲಾ ಸುಮ್ಮ ಸುಮ್ಮನೆ ಕೆಟ್ಟ ಕೆಟ್ಟ ಬೈಗುಳ ಬಯ್ಯಾದು ನಿಮಗ ತರವಲ್ಲ.... ನೀವು ಹತ್ತಂದದ್ದೂ ನಾನು ತಿರುಗಿ ಒಂದು ಅಂದದ್ದೂ ಸರಿ ಆಗ್ತದ! ದೇವರ ನನಗೂ ಅಭಿಮಾನ ಮತ್ತು ನಾಲಿಗಿ ಕೊಟ್ಟಾನಂಬಾದು ನೆನಪಿರಲಿ ನಿಮಗ.... ಏನಾಯ್ತಂತ ಬಿಡ್ಸಿ ಹೇಳ್ರಿ ಮದಲ...." ಅದಪ್ಪು ತಾಳ್ಮೆಯಿಂದ ಮೆತ್ತಗೇ ಕೇಳಿದ. (ಪು. ೧೦೪-೦೫ ಬದುಕು)

೫ "ಅರರೆ ಅಮ್ಮಾಸ, ಎಲ್ಲಿ ಹೋಗಿದ್ದೊ ಮಾದರಚೋತ್. ನಿನ್ದು ಮಾಲು ಯಾಕ್ಲ ಈಗೀಗ ಕಾಣ್ತಿಲ್ಲಾ ಬೊಸುಡಿಕೆ, ಬ್ಯಾರೆಯವರ್‍ಗೆ ಬಿಕರಿ ಮಾಡ್ತ ನಮಾಕ್‌ಹರಾಮ್‌ಗಿರಿ ಮಾಡ್ತಿದ್ದಿಯೇನ್ಲೆ ನಿನ್ನೌನ ಬೋಸುಡಿಕೆಯ. ನಮ್ದುಕೆ ಗೊತ್ತಗಲ್ಲ ಅಂದ್ಕಂಡಿದ್ದಿಯೇನ್ಲೆ ನಿನ್ನಕ್ಕನ್? ಈಗ ಅಡ್ವಾನ್ಸ್ ದುಡ್ಡ ಮಡ್ಗುಬುಟ್ಟು ಮುಂದ್ಕ ಇಸ್ಟೆಫ್ ಇಡು....."

ಅಂತಂತ ದಬಾಯುಸ್ತ ಸಾಬರೂ ಆ ಬಾಯಬುಡಲೂ ಅಮಾಸಗ ಬುಡದ ಸಾಬರೂ

"ಥತ್ ತೇರಿ ನಿಂಗ ಹೇಳೋದ ಮರ್‍ತಿದ್ದೆ ನೋಡು. ನಾನು ಬೊಂಬಾಯ್‌ಗೆ ಹೋಗಿದ್ದು ನಿಂಗೆ

ಗೊತ್ತಲ್ಲಾ! ಅಲ್ಲಿ ನಿಮ್ದು ಚೋಕ್ರ ಚನ್ನಂಗೆ ನೋಡ್ದೆ ಕಣ್ಲೇ. ಏನ್ ಅಂದ್ಕಂಡಿದ್ದೀಯಾ ಈಗ ನಿಮ್ದು ಚನ್ನನ್ನ ಅಲ್ಲಿ! ಇಡೀ ಬೊಂಬಾಯ್ ಮೇಲೇನೆ ಅವ್ನು ಏವನ್ ದಿಲ್‌ದಾರ್ ಅವ್ನೆ, ಅವ್ನು".

ಸಾಲದೊ ಅಮಾಸಗ, ಮುಂದ್ಕ ಹೇಳಲು ಸಾಬರೂ;

"ತಿಳ್ಕೋ...... ಈ ಬಂಚೊತ್ ನೆಲ್ದಮ್ಯಾಲ ಕಾಲು ಇಡಲ್ಲ ಅವ್ನು ಕಾರಲ್ಲೇ ಅವನು ಓಡಾಡದೆಲ್ಲಾ. ನಾನು ರಸ್ತೇಲಿ ನಿಂತಿದ್ದವನು, ಅರೇ ಬಯ್ಯಾ ಚೆನ್ನಾ!" ಅಂದೆ ನೋಡು. ಅಷ್ಟರೊಳಗೇನೆ ನನ್ಮಗಂದು ಬೇವರ್ಸಿ ಕಾರು ಒಂದ್‌ಮೈಲಿ ದೂರ ಹೊಂಟೋಗ್ ಬುಡಾದ!"

ಸಾಲದೊ ಅಮಾಸಗ, ಮುಂದ್ಕ ಉಸುರಾಡ್ತ ಸಾಬರೂ;

"ಕಾರು ನಿಂತಿದ್ರ ನಿನ್ ಇಚಾರಾನೂ ಮಾತಾಡ್ತಿದ್ದೆ ತಿಳ್ಕೊ. ಅದ್ಕೇನು ದುಡ್ಡುಕೊಡಬೇಕಿತ್ತೇನ್ಲೇ? ಎಸ್ಟೆ ಆದ್ರೂ ಚೆನ್ನ ನಮ್ದುಕಡೆ ಚೊಕ್ರ ತಾನೆ? ಅರೆಬಯ್ಯಾ ಅನ್ನುವಷ್ಟಕ್ಕೇನೆ ಆ ಬೆಂಚಕಾರ್ ಒಂದ್ ಮೈಲಿ ಹೊಂಟೋಯ್ತಲ್ಲಾ! ನೀನಾಗಿದ್ರೂ ತಾನೇ ಏನ್ಮಾಡ್ತಿದ್ದೆ?"

ಸಾಲದೊ ಅಮಾಸಗ ಏದುಸರಾಡ್ತ ಸಾಬರೂ;

"ಬೊಂಬಾಯ್‌ಮೆ ಚೆನ್ನ ಏನಾಗವ್ನೆ ಗೊತ್ತೇನ್ಲೇ ಬೋಸುಡಿಕೇ. ತ್ರಿ ಇಸ್ಟಾರ್ ಹೋಟಲ್‌ಮೆ ಮೇನೇಜರು ಗೊತ್ತ? ಅವನ್ದು ದಿಲ್‌ಗೆ ನಿಮ್ಮೂರ್ ಸಾವ್ಕಾರ ಒಂದು ಸ್ಯಾಟ ತಿಳ್ಕಾ.... (ಪು.೧೭೮-೭೯ ಕುಸುಮ ಬಾಲೆ)

ಕೊಟ್ಟಿರುವ ನಿದರ್ಶನಗಳಲ್ಲಿ ಎರಡು ವರ್ಗಗಳಲ್ಲಿನ ಭಿನ್ನತೆ ಒಡೆದು ಕಾಣುತ್ತದೆ. ಮೇಲ್ಜಾತಿಯವರು ತಮ್ಮ ಜಾತಿ ಅಧಿಕಾರ ಅಂತಸ್ತಿನ ಕಾರಣ ದರ್ಪಯುತವಾದಾಗ ಸಹಜವಾದ ಮಾತುಗಳಲ್ಲಿಯೂ ಕೂಡ ಕೆಳವರ್ಗದವರ ವ್ಯಕ್ತಿತ್ವ ಮತ್ತು ಜಾತಿಯನ್ನು ಕುರಿತಂತೆ ತುಚ್ಛವಾಗಿ ಬೈದರೂ ಅವರಿಗೆ ತಿರುಗಿ ಬೀಳದೆ ಅನುಸರಿಸಿಕೊಂಡು ಹೋಗುವುದನ್ನು ನೋಡಬಹುದು. ಹೀಗೆ ಅನುಸರಿಸಿಕೊಂಡು ಹೋಗುವಿಕೆಯ ಹಿಂದೆಯೂ ಒಂದು ಕಾರಣವಿದೆ. ಅದು ಕೇವಲ ಕೆಳಜಾತಿಯವರು ಎಂಬುದೊಂದೆ ಆಗಿರದೆ ಬಡತನವೂ ಕೂಡ. ದಿನಬೆಳಗಾದರೆ ಮೇಲ್ಜಾತಿಯವರ ಹೊಲಗಳಲ್ಲಿ ದುಡಿಯಲು ಹೋಗುವ ಇವರು ಬೈದರೆಂಬ ಕಾರಣಕ್ಕಾಗಿಯೇ ಅವರನ್ನು ಎದುರು ಹಾಕಿಕೊಂಡರೆ. ಅವರು ಆ ಊರುಗಳಲ್ಲಿ ಜೀವನ ಮಾಡುವುದೇ ಕಷ್ಟವಾದೀತು. ಹಾಗೊಂದು ವೇಳೆ ಇವರಿಗೂ ಸಹನೆ ಮೀರಿ ಕೋಪಗೊಂಡು ಬೈದರೆಂದರೆ ಅದು ಮೇಲ್ವರ್ಗದವರ ಎದುರಿನಲ್ಲಿ ಅಲ್ಲ, ಅವರ ಅನುಪಸ್ಥಿತಿಯಲ್ಲಿ ಅದೂ ಕೂಡ ಇನ್ನೊಬ್ಬರ ಮುಂದೆಯಲ್ಲ ಅವರೊಬ್ಬರೇ ಗೊಣಕಿಕೊಳ್ಳಬಹುದು ಅಷ್ಟೇ. ಇದನ್ನು ಒಂದು ನಿದರ್ಶನದಿಂದ ಸ್ಪಷ್ಟಪಡಿಸುವುದಾದರೆ,

"ಬೊಡ್ಡಿಮಕ್ಕಳು ಉದ್ದಕ್ಕೂ ನಮ್ಮ ಲಗ್ಗೆ ಚಂಡು ಮಾಡ್ಕೊಂಡುಬುಟ್ರಲ್ಲ. ಆಂತ ಕ್ವಾಪದಿಂದ ಕ್ಯಾಕರ್ಸಿ ಪಕ್ಕದ ಬೇಲಿಗೆ ಉಗುಳ್ದ... ಪಂಚಾತಿಯೋರು ಮಾಡೋ ನ್ಯಾಯದ ದಾಳ ಉಳ್ಳೋದು ಕೊನೀಕೆ ಉತ್ತಮರ ಕಡೀಕೇಯ ತುಸು ಗಟ್ಯಾಗೆ ಗೊಣಗ್ದ". (ಪು.೧ ವೈಶಾಖ)

ಲಕ್ಕ ತನ್ನ ಊರಲ್ಲಿ ನಡೆಯುವ ಎಲ್ಲಾ ಘಟನೆಗಳ ಹಿಂದೆ ಪ್ರತ್ಯಕ್ಷ ಮೂಕಸಾಕ್ಷಿಯಾಗಿರುತ್ತಾನೆ. ಪಂಚಾಯಿತಿಯಲ್ಲಿ ನಡೆಯುವ ತೀರ್ಮಾನಗಳು ಅನ್ಯಾಯದವೆಂದು ಗೊತ್ತಿದ್ದರೂ ಏನೂ ಮಾಡದ ಸ್ಥಿತಿಯಲ್ಲಿರುತ್ತಾನೆ. ಆಗ ಆ ಪಂಚಾಯಿತಿ ಮುಖಂಡರ ಮುಂದೆ ಇದು ಅನ್ಯಾಯವೆಂದು ಹೇಳಲಾಗದೆ ಅಂತಹ ತೀರ್ಪುಗಳನ್ನು ನೋಡಲೂ ಆಗದೆ ಲಕ್ಕ ತನ್ನಷ್ಟಕ್ಕೆ ತಾನು ಗೊಣಗಿ ಕೊಳ್ಳುತ್ತಾನೆ.

ಈ ರೀತಿಯ ಸ್ಥಿತಿಯು ಕಾದಂಬರಿಯಲ್ಲಿ ಬರುವ ಎಲ್ಲಾ ಕೆಳವರ್ಗಗಳ ಸ್ಥಿತಿಯೂ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಅಧಿಕಾರಿ ಮತ್ತು ಅಧಿಕಾರ ಹೀನ

ಇನ್ಸ್‌ಪೆಕ್ಟರನು ನಾಕಾರು ಮಂದಿ ಕಾನಸಟೇಬಲ್ಲುಗಳಿಗೆ ಗತ್ತಿನಿಂದ "ಏ, ಎಲ್ಲಾ ಗುಡಿಸಿಗಳೊಳಗೆ ನುಗ್ಗರೋ.... ಮಗಾ ಆ ನಾಗ್ಯಾ ಎಲ್ಲಿ ಅಡಕ್ಕೊಂಡಾನ ನೋಡಿ ಒದ್ದು ಎಳ್ಕೊಂಡು ಬರ್ರೀ..... ಬೋಸಡಿ ಮಗಾ ಎಲ್ಲಿ ಹೋಗ್ತಾನ ನಮ್ಮ ಕಣ್ಣ ತಪ್ಪಿಸಿ ಹೂಂ.. ಹೋಗ್ರಿ...."

ಪೋಲಿಸರು ಆಟು ಕೇಳಿದ್ದೆ ತಡ.... ನಾಗ್ಯಾನನ್ನು ತಲಾಶ ಮಾಡತೊಡಗಿದರು. ಪೋಲಿಸ್ ಪೇದೆಯೊಬ್ಬ ಗುಡಿಸಲೊಳಗೆ ನುಗ್ಗಿದಾಗ, ಮಗುವಿಗೆ ಹಾಲೂಡುತ್ತಿದ್ದ ಬಸ್ಸಮ್ಮ ಗಸಕ್ಕನೆ ಎದ್ದು ನಿಂತು "ಯಾಕ್ರಿ..... ಯಾಪ್ಪಾ.... ಏನಾಯ್ತ್ರೀ?" ಎಂದು ಧೈರ್ಯಗೆಡದೆ ಕೇಳುತ್ತಾಳೆ. ಪೇದೆ ....ಹುಚ್ಚುಚ್ಚಾಗಿ ನಗುತ್ತಾ "ಎಲ್ಲಿ ಅಡಗ್ಯಾನ ಆ ನಾಗ್ಯ ಹೇಳಬೇ...... ಇಲ್ಲಂದ್ರ ಹೊಡ್ದು ನಿನ್ ಟೊಂಕಾಮುರೀತಿನಿ ನೋಡು" ಅನ್ನುತ್ತ ಅವಳ ಮೈಮೇಲೆ ಬರುತ್ತಾನೆ.....

......ಮತ್ತೊಂದು ಗುಡಿಸಲಲ್ಲಿದ್ದ ರಿಕ್ಷಾವಾಲ ಪಾಶವನ್ನು ಎಳೆದು ಅವನಿಗೆ ಲಾಠಿಯಿಂದೆರಡೇಟು ಕೊಟ್ಟೇ ಪೋಲೀಸ ಪೇದೆ ಅಬ್ಬರಿಸಿದ. "ಏ, ಸುವ್ವರ್ ನನ್ಮಗನೇ.... ಎಲ್ಲಿ ಮುಚ್ಚಿಟ್ಟೀರೀ ಆ ಕಳ್ಳ ನಾಗ್ಯಾನ ನೀವೆಲ್ಲೋರೂ? ಹೇಳಲಿಲ್ಲಂದ್ರ ನಿನ್ ಮೈ ಚಮಡಾ ಸುಲ್ದು ಬಿಡ್ತೀನೀ" ಅಂತ ಮತ್ತೆರಡು ಬಡಿದಾಗ ಏನೂ ತಿಳಿಯದ ಪಾಶ ತತ್ತರ ಬತ್ತರ ಮಾಡುತ್ತ ಕೈ ಜೋಡಿಸುತ್ತ ಅಳತೊಡಗಿದ. "ಏನಾಗ್ಯಾದ್ರೀ ಸಾಬ್ರೇ.... ನನಗೇನೂ ಗೊತ್ತಿಲ್ರೀ.... ನಾ ಈಗಿನ್ನಾ ರಿಕ್ಷಾ ನಡೆಸಿ ಮನೀಗಿ ಬಂದ್ರೀನ್ರೀ..... ಚಾವಲ್ ಪಕಾನಾ ಅಂತ ಒಲಿ ಉರಿ ಹಚ್ಚಲಕತ್ತೀನ್ರೀ.... ನನಗೇನೂ ಗೊತ್ತಿಲ್ರೀ.. ಯಾ ನಾಗ್ಯಾಯೇನು ಮಾಡ್ಯಾನ್ರೀ?" ಅಂದನು. ಪೋಲಿಸ್ ಪೇದೆಯ ತಲೆ ತಿರುಗಿತು. "ಭಾಂಚೋದ ನನ ಮಗನೇ... ಖರೇ ಬಗಳು... ಎಲ್ಲಿ ಆ ಕಳ್ಳನಾಗ್ಯಾ?" ಅನ್ನುತ್ತಲೇ ಮತ್ತೆ ಲಾಠಿ ಬೀಸಿದನು. ಪಾಶಾನ ಹಣೆಯೊಡೆದು ನೆತ್ತರು ಝಿಲ್ಲನೆ ಪುಟಿಯಿತು. "ಯಾ ಅಲ್ಲಾ" ಅಂತ ಚೀರಿ ಹಣೆಯೊತ್ತಿ ಹಿಡ್ಕೊಂಡು ನಿಂತಲ್ಲೇ ಅವನು ಕುಸಿದನು.

ಪೋಲಿಸರು ನಾಗ್ಯಾನ ಝೋಪಡಿಗೆ ನುಗ್ಗಿದರು. ಕೌದಿರಗಟಿಯ ಮೇಲೆ ಮಕ್ಕೊಂಡು ನೆಳ್ಳುತ್ತಿದ್ದ ಅವನ ಹೆಣ್ತಿ ಹೊಟ್ಟಿ ಹಿಡಿದುಕೊಂಡು ಮೆಲ್ಲಗೆ ಎದ್ದು ಕುಂತಳು. "ಏ, ನಾಗ್ಯಾಯೆಲ್ಲಿ?" ಅಂತ ಬೆದರಿ ಸುತ್ತಲೇ ನುಗ್ಗಿದ ಪೋಲಿಸರ ಲಾಠಿ ಅಲ್ಲಿ ಅಡಕಿಲೇರಿಸಿದ್ದ ಗಡಿಗೆ ಮಡಿಕೆಗಳನ್ನು ಒಡೆದವು.

"ನನಗ್ಗೊತ್ತಿಲ್ರೀ..... ಯಾಕ್ರೀ? ಗುಜ್ಜವ್ವ ನರಳುತ್ತಲೇ ಅಳುದನಿಯಲ್ಲಿ ಹೇಳಿದಳು. ಅವನಿಗೆ ಹಿಡ್ಕೊಂಡೊಯ್ದು ಒದ್ದು ಮೈಯಾಗಿನ ಎಲುಬು ಮುರಿತೀವಿ.... ಹಲ್ಕಟ್ ನಾಗ್ಯಾ.... ನಮಗೇ ಚಳ್ಳೆಕಾಯಿ ತಿನಸ್ತಾನಾ ಅಂವಾ? ಪೋಲಿಸರ ಕಣ್ಣುತಪ್ಪಿಸಿ ಯೆಲ್ಲಿಗೋಗ್ತಾನ... ಏ ನಡ್ಯೋ .... ಅಂತ ಹೊರಡುವಾಗ ಅಳುತ್ತ ಕುಂತಿದ್ದ ಗುಜ್ಜವನ ಬೆನ್ನಿಗೆ ಪಕ್ಕನೆ ಬೂಟುಗಾಲಿನಿಂದ ಒದ್ದನು. ಖರೇ ಹೇಳ.... ಎಲ್ಲಿ ಅಡಕ್ಕೊಂಡಾನ ನಿನ್ ಗಂಡಾ ಇಲ್ಲಂದ್ರ ಛಿನಾಲೀ ನಿನಗೆಳ್ಕೊಂಡು ಒಯ್ತೀವಿ ಠೇಸನ್ನಿಗೆ.... ಅಲ್ಲೋಯ್ದು ನಿನಗ ಒದೀಲಕ್ತರ ನಿನ ಗಂಡ ನಾಗ್ಯಾ ಎಲ್ಲಿದ್ದರನೂ ತಾನೇ ಓಡಿ ಬರ್ತಾನ ನಂಬಲ್ಲಿ..... ಹಿಡ್ಕೊಂಡು ನಡ್ರೆಲೇ ಇಕೀಗೇ..... ಅಂದನು. (ಪು.೨೪೧ ಬದುಕು)

ಈ ವಿವರಣೆಯಲ್ಲಿ ಪೋಲೀಸ್ ಅಧಿಕಾರಿಗಳು ಅಧಿಕಾರ ಹೀನ ಜನಸಾಮಾನ್ಯರನ್ನು ಹೊಡೆದು ಬೈದು ತಳಿಸುತ್ತಿರುವುದನ್ನು ನೋಡಬಹುದು. ತಪ್ಪು ಮಾಡಿದ ವ್ಯಕ್ತಿ ಒಬ್ಬನೇ ಆದರೂ ಅವನಿಗಾಗಿ ಶಿಕ್ಷೆ ಗೊಳಪಡುವವರು ಹಲವರು. ತಮಗೆ ಅಧಿಕಾರವಿದೆ ಎಂಬ ಕಾರಣಕ್ಕಾಗಿಯೇ ಝೋಪಡಿ ಮಂದಿಯನ್ನೆಲ್ಲ ತಮ್ಮ ಮನಸ್ಸಿಗೆ ಬಂದಂತೆ ನಡೆಸಿಕೊಳ್ಳುತ್ತಿರುವ ದೃಶ್ಯ ಕಂಡುಬಂದರೆ, ಅದೇ ಝೋಪಡಿಯ ಮಂದಿ ಪೋಲಿಸರು ಒದ್ದರೆ ಒದೆಸಿಕೊಂಡು ಬೈಯ್ದರೆ ಬೈಸಿಕೊಂಡು ಅತ್ತು ಕರೆಯುತ್ತ ಹಿಂಸೆಪಡುವುದನ್ನು ನೋಡ ಬಹುಹುದು.

ಗಂಡು - ಹೆಣ್ಣು

ನಂಜೇಗೌಡ್ರ ಎಡತಿ ಗೌರಮ್ಮ ಸಾದುಪ್ರಾಣಿ. ಮೂಗೆತ್ನಂಗೆ ದುಡಿಯೂದಂದೇ ಅವುಳಿಗೆ ಗ್ವತ್ತು. ಅವುಳ್ನ ಈ ಗೌಡ ಸಣ್ಣ-ಸಣ್ಣ ಇಚಾರಕೆಲ್ಲ ಕ್ಯಾತೆ ತಕ್ಕಂಡು ವೊಡದು ಫಜೀತಿ ಮಾಡಿ ಅಣ್ಣುಗಾಯಿ, ನೀರುಗಾಯಿ ಮಾಡ್ತಿದ್ದು ಊರಿಗೆಲ್ಲ ಗ್ವತ್ತಿದ್ದ ಇಸ್ಯಾನೆ....! ಗೌರಮ್ಮ ಏಡನೇ ಎಡತಿ. ಇನ್ನೂ ಚಿಕ್ಕ ಪ್ರಾಯ. ತಾನು ಬ್ಯಾರೆ ಎಂಗಸರ ಕುಟ್ಟೆ ಏಟೇ ಆಡಿದರೂವೆ ಗೌರಮ್ಮ ಮಾತ್ರ ಬಿಚ್ಚಾಲೆ ಗೌರಮ್ಮನಂಗೇ ಇರಬೇಕು ಅಂತ ಗೌಡ್ನ ಇರಾದೆ....! ಅವುಳು ಯಾವ ಗಂಡಸ್ನ ಕುಟ್ಟಾ ಮಾತಾಡಬ್ಯಾಡದು ಒಂದು ಪಕ್ಸ ಮಾತಾಡಬೇಕಾಗಿ ಬಂದ್ರೂವೆ ಮೊಕದಲ್ಲಿ ನಗ ಇರಬ್ಯಾಡದು. ಮೊಕ ಯಾವತ್ತೂವೆ ಸಿಣಿಸಿಣಿ ಅಂತಿರಬೇಕು. ವೋಟೆ ಅಲ್ಲ..... ಬಾವೀಲಿ ನೀರು ಸೇದಿ ಅಟ್ಟಿಗೆ ತತ್ತಾ ಇರ್‍ಬಾಗ, ಯಾರಾರು ಗಂಡುಸು ಎದುರ್‍ಗೆ ಬಂದ್ರೆ ಅವನ್ನ ಕತ್ತೆತ್ತಿ ಕೂಡ ನ್ಯಾಡಬ್ಯಾಡದು. ಅಪ್ಪಿತಪ್ಪಿ ನ್ಯಾಡಿದ್ರೆ, ಆಗ ಗೌಡ ಯಾರ ಜಗಲೀ ಮ್ಯಾಲಾರು ಕುಂತಿದ್ದು ಇದು ಕಣ್ಣಿಗೆ ಬಿದ್ದರೆ, ಆ ನಾತ್ರೆನಾಗ ಗೌರಮ್ಮನ ಗತಿ ಮುಗಿದಂಗೇಯ....

"ಏನೇ ಭೋಸಡಿ, ಮಿಂಡಾಟ ಆಡಕ್ಕೆ ಸುರು ಮಾಡಕಂಡ್ಯೇನೆ? ಅಂತ ಗುಡುಗಿ, ಅರಿಕಡ್ಡಿಯೊ, ಇಡಗಲು ಮುಂಡಿಯೊ ಕಯ್ಗೆ ಯೇನು ಸಿಕ್ತೋ ಅದರಲ್ಲಿ ಚೆಂದಾಗಿ ತರಿದು, ಅವಳ್ಗೆ ಉಟ್ಟಿದ ಜೀನವ ಕಾಣಿಸಿಬುಡ್ತಿದ್ದ!" (ಪು. ೨೯೬-೯೭ ವೈಶಾಖ)

೨. ತೋಪ್ಪೆಯ ಸಂಬಂಧ ನಡೆದ ಜಗಳದಲ್ಲಿ ಗಂಗಿ ಮತ್ತು ಅಡವಿಯನ್ನು ಪಂಚಾಯಿತಿಗೆ ಹಾಕಿದಾಗ.

ಗಂಗಿ "ನಾನು ಮುಟ್ಟಾಗಿರೊ ಎಂಗಸು. ನನ್ನ ಸ್ತಿತೀಲಿ ರಾಜಾರೋಸ ಊರ್‍ನೋರೆಲ್ಲಾರ ಮುಂದಗ ಡೂವೆ ಇಂಗೆ ತಂದು ನಿಲ್ಲುಸೋದು ದರುಮವ? ಇಮ್ಮ ಎಡುತಿ, ಎಣ್ಣು ಮಕ್ಕಳೂ ನನ್ನಂಗೆ ತೆಪ್ಪು ಮಾತಾಡಿದ್ರೆ ಅವರ್ನೂವೆ..... ನಾನೇನು ಅಂತಾ ಕತ್ತೆ ಹಾದರ ಮಾಡಿದ್ದು? ನನ್ನ ದಾಯಾದಿ ನನ್ನ ಪಾಲಿನ ತೊಪ್ಪ ಮ್ಯಾಸದಿಂದ ತನ್ನ ಕಡೀಕೆ ಅಕ್ಕತಿದ್ದ. ಅದ ಕಂಡೂ ಕಂಡೂ ಎಂಗೆ ಸುಮ್ಮಕಿರಾದು? ನಿಮ್ಮಟ್ಟಿ ತೊಪ್ಪ ಯಾರಾರು ಇಂಗೆತ್ತಿದ್ರೆ ನೀವು ಸುಮ್ಮಕಾಗಿವ್ರ? ....ಊ ಅವ್ನು ಏಟೇ ಆದ್ರೂ ಗಂಡಸು. ಒಬ್ಬ ನಿಮ್ಮಂತ ಮೀಸೆವೊತ್ತ ಗಂಡಸಿನ್ನ ಜಾಗದಲ್ಲಿ ಇದ್ರಿದ್ರೆ, ಅವನ್ಗೆ ನಾಕ ತದಕಿ, ಉಟ್ಟಿದ ಜಿನವ ಕಾಣಿಸಿರಾನು....! ಆದ್ರೆ ನಾನು ಎಣ್ಣೆಂಗಸು. ಅವ್ನ ಮ್ಯಾಲೆ ಕಯ್ಯಿ ಮಾಡೋವೋಟು ತಾಕತ್ತ ಕ್ಕೊಡ್ಡಿಲ್ಲ ದ್ವಾವರು....."

ಅಡವಿ ಮ್ಯಾಕೆದ್ದ.

"ಅವಳು ಯೋಳ್ತಿರಾದೆಲ್ಲ ಸುತರಾಂ ಸುಳ್ಳು. ನನ್ನಸ, ಎಮ್ಮೆ ಅವಳ ಪಾಲಿನ ಕ್ವಟ್ಟಿಗ್ಗೆ ಚಿಗಿದು ಅಲ್ಲಾಕಿದ್ದ ತೊಪ್ಪೆ ಎತ್ತಿಗಂಡಿದ್ದೆ ಇನಾಯ್ಸಿ, ಅವಳ ದನಕರೀನ ತೊಪ್ಪ ನಾ ಮುಟ್ಟೆ ಇಲ್ಲ". ಅಂದ....

"ಎಂತಾ ಹಾದರಕೆ ಉಟ್ಟ ಮಾತಾಡಿಯೊ? ನಿಮ್ಮಪ್ಪ ಬೀಜಕೆ ನೀ ಉಟ್ಟಿರಾದು ನಿಜವಾದ್ರೆ ಇದ್ದದ್ದು ಇದ್ದಂಗೆ ಬೊಗಳೋ ಬಾಡಕಾವು"

ಕೆಲವು ಯಜಮಾನ್ರು ಇಂತದೇ ಸನಗು ಸಿಕ್ಕಲೀಂತ ಕಾಯ್ತಿದ್ರು, ತನ್ನ ಬಾಯ್ನಿಂದ ತಾನೇ ಗಂಗಿ ಕೆಟ್ಟ ವಾಕಸ ಕಡಸಿ ಸಿಕ್ಕಾಕಂಡಿದ್ಲು.

...... ತಟಕ್ನೆ ಗಂಗಪ್ಪ ಎದ್ದು,

"ಎಂತಾ ಬಾಯಪ್ಪ ಇವಳ್ದು? ಲೇ ಗಂಗಿ, ಗ್ಯಾನ ಇಟ್ಕಂಡು ಮಾತಾಡು. ಅಡವಿಯಪ್ಪ ನಿನಗಿಂತ ಇರಿಯೋನು. ಅವನ್ನ ನಮ್ಮುಂದ್ಯೆ ಇಂಗೆ ಬಯ್ಯೋಳು, ಇನ್ನು ನಿಮ್ಮಟ್ಟೀಲಿ ಇನ್ನ್ಯಾಪಾಟಿ ಆಡಿರಬೇಕು?" ಎಂದು ಬೆದರಿಸುತ್ತ......

"ಗಂಗಪ್ಪ ಯೋಳದಂಗೆ ಮಾಡಾದೆ ಸರಿ. ಈತೋರ ಯಜಮಾನ್ರ ಮುಂದೆ ಎದೆ ಕ್ವಟ್ಟ ಈ ಗಯ್ಯಾಳಿ ಎಣ್ಣಿಗೆ ಸರ್‍ಯಾಗೆ ಪಾಟ ಕಲಿಸಬೇಕು. ಇವಳ್ಗೆ ಒಂದು ಸಣ್ಣ ಸಿಕ್ಸೆ ಮಾಡಿಬುಟ್ಟರೆ, ಊರು ಅಲ್ಲಂಡೆ ಆಯ್ತದೆ. ಚಿಕ್ಕಪುಟ್ಟ ಎಣ್ಣಮಕ್ಕಳೆಲ್ಲ ಇವಳ ಚೆಂಗೂಲಿ ಬುದ್ದೀನೆ ಕಲ್ತು, ಎಲ್ಲಾರ ಆಟ್ಟಿಗಳೂವೆ ಕುರುಕ್ಸೆತ್ರಾನೆ ಆಗೋಯ್ತವೆ" ಎಂದು ದೊಳ್ಳಪ್ಪ ಹೇಳಿದಾಗ.

ಇವಳನ್ನು ಪಾಂಡವರ ಕಂಬಕ್ಕೆ ಕಟ್ಟಿ ಹೊಡೆಯುವ ಶಿಕ್ಷೆ ವಿಧಿಸುತ್ತಾರೆ. ಆದರೆ ಗಂಗಿ ಮೈಲಿಗೆಯ ಹೆಂಗಸಾದುದರಿಂದ ನೀರಾದ ಮೇಲೆ ಶಿಕ್ಷೆಯೆಂದು ತೀರ್ಪಾಗುತ್ತದೆ. ಆದರೆ ಗಂಗಿ ನೀರಾದ ಮೇಲೆ ತಪ್ಪಾಯ್ತು ಎಂದು ಹೇಳಿ, "ಇನ್ನು ಮುಂದ್ಕೆ ಅಂಗೆ ನನ್ನ ಬಾಯ್ನಲ್ಲಿ ಕೆಟ್ಟ ವಾಕ್ಸ ಕಡಸಕ್ಕಿಲ್ಲ. ಅಂತ ಬಾಸೆ ಕ್ವಟ್ಟಂಗೇಳಿ, ತನ್ನ ಸ್ಯಾಲೆ ಸೆರುಗನ ಗಂಟು ಬಿಚ್ಚಿ, ಅತ್ತು ನಾಣ್ಯದ ರೂಪಾಯಿ ಸ್ಯಾನುಭೋಗರ ಮುಂದ್ಕೆ ಸುರಿಯುತ್ತಾಳೆ. (ಪು. ೨೩೭-೩೯)

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಗಂಡಿಗೆ ಹೀಗೆಯೇ ಇರಬೇಕು ಎಂಬ ಕೆಲವು ನಿಯಮಗಳಿವೆ. ಗಂಡಸು ಗಟ್ಟಿ ಧ್ವನಿಯಲ್ಲಿ ಮಾತಾಡುವ ಮೂಲಕ ಬೈಯುವ ಮೂಲಕ ಹೆಣ್ಣನ್ನು ಅಂಕಿಯಿಡಬಯಸುತ್ತಾನೆ. ಅದೇ ಹೆಣ್ಣು ಗಟ್ಟಿಯಾಗಿ ಮಾತನಾಡುವುದಾಗಲಿ ಬೈಯ್ಯುವುದಾಗಲಿ ನಿಷಿದ್ಧ ಹಾಗೊಂದು ವೇಳೆ ಬೈದ್ದರೆ 'ಗಯ್ಯಾಳಿ' ಎಂದು ಹೆಸರಾಗುತ್ತಾಳೆ. ಹೀಗಾಗಿ ಬೈಯ್ಗಳ ಹೆಣ್ಣನ್ನು ಅಂಕಿಯಲ್ಲಿಡಬಯಸಿದ ಸಮಾಜಕ್ಕೆ ಅಸ್ತ್ರವಾಗಿ ಪರಿಣಮಿಸುತ್ತದೆ.

೨. ಒಂದೇ ನಿರ್ದಿಷ್ಟ ಸಾಮಾಜಿಕ ವರ್ಗದವರೊಡನೆ ನಡೆಯುವ ಬೈಗಳು

* ಬೈಗಳವು ಒಂದೇ ಸಾಮಾಜಿಕ ವರ್ಗದವರೊಡನೆ ನಡೆದರೂ ಅದರಲ್ಲಿಯೂ ಒಂದು ಅಂತಸ್ತನ್ನು ಸೂಚಿಸುತ್ತಿರುತ್ತದೆ. ವಯಸ್ಸಿನಿಂದ ಹಿರಿಯರಾದವರು ಕಿರಿಯವರನ್ನು ಅಂಕೆಯಲ್ಲಿಡಲು ಬೈಯ್ಗಳನ್ನು ಬಳಸುತ್ತಾರೆ. ಉದಾಹರಣೆಗೆ,

"ಇಂದ ಯಾರಲ್ಲಿ ಹೋಗಿದ್ದಿ ಸೆ... ತಿನಕಾ.....? ಯಾನರ ಮಾಡಿ ನಿನ್ನ ನೆತ್ತಿಗಿ ಅಷ್ಟು ವರಸಿ ಬಿಡುತಾರು..... ಅಂದರ ಹೋಗಿ ಬೀಳಕ್ಕೆ ಅವರ ಬಾಗಲಾಗ.... ನಾಯಿ ಆಗಿ, ತಿಳಿದುಲ್ಲಾ .... ಅವರ ಅವ್ವಾ .... ಮಗಳಾ ಎಂಥಾವರ ಇದಾರ... ಕೌಸಲೇರ...." (ಪು.೯೪ ನಿಸರ್ಗ)

೨ "ಗಂಡಗ ಮಾಡಿಕುಡ್ತೀವಂದ್ರ ಹಳ್ಳಿ ಗಂಡ ನನಗ ಬ್ಯಾಡಂತಂದು ಈಗ ಆ ಶಾರಪಟ್ಟಣದ ಮಿಂಡಗಿಟ್ಕೊಂಡು ಹಾದರ ಮಾಡ್ಕೋತ ನಮ್ಮ ಮಾರೀಗಿ ಮಸೀ ಬಳೀಲಕ್ಕತ್ತಿದ್ದೇನೆ ಭೋಸಡಿ? ಹಡಸಿ ಹಾದರಗಿತ್ತಿ.... ನಿಮ್ಮಪ್ಪಗ ಈಗ ಆ ಸಾವ್ಕಾರ ನನ್ ಹಾಟ್ಯಾ ಯಾಕ ಕರ್ಸ್ಯಾನಂಬೋದು ನಿನಗ ಗೊತ್ತದಾಯೇನಗ ಕಾಶೀ.... ಒಂದೇ ನನ್ ಗಂಡನ ಕೂದಲೇಳಗಿ ಧಕ್ಕಿ ಆಗ್ಬೇಕು ನೋಡು.... ನಿನ್ನ ಜೀಂವಾನೇ ತಗೋತಿನಿ ನಾನು.....ಆ ಸಾವ್ಕಾರನ ಮಗನ ಜತಿ ಏನು ಚೆಲ್ಲಾಟಾ ನಡಸಿದ್ದೇ ರಂಡೀ?" (ಪು. ೧೯೮ ಬದುಕು)

* ಸಂಬಂಧಿಕರು, ಸ್ನೇಹಿತರುಗಳಲ್ಲಿ ಚಿಕ್ಕವರು, ದೊಡ್ಡವರು, ಹೆಣ್ಣು ಗಂಡು ಎಂಬ ಭೇದವಿಲ್ಲದೆ ಬೈಯ್ಗಳು ಬಳಕೆಯಾಗುತ್ತವೆ. ಉದಾಹರಣೆಗೆ,

"ಏ ಸುಮ್ಮನ ಕೂಡೇ ಮುದುಕೀ.... ನಮ್ಮಲ್ಲೋರ ಜೋಡಿ ಕುಂತು ಉಂಡು ಹೋಗೇ ಅಂದ್ರ ನಖರಾ ಮಾಡ್ತಾತಳ ಮಗಳು.. ಸುಮ್ಕಿರು..." ಅಂತೇಳಿ ಕಾಶಮ್ಮ ನಗುತ್ತ ಎದ್ದು ಹೋದಳು. "ಹೋಯಿಮಲ್ಲೀ. ಹೋಯೀಮಲ್ಲಿ. ಈ ಕಾಶೀ ನಿನ್ನಂಗ ಸಂಬಾಯಿತ ಹೆಣ್ಣಲ್ಲ ನೋಡೇ ಶಾಣೂ... ಭಾಳ ಬೆರಕೆದಾ ಈ ಹೆಣ್ಣು. ನನಗೇ ಬೆದರಸ್ತಿಯೇನೇ ದುರದುಂಡೀ.... ನಿನ್ನ ಗಲ್ಲಾ ನಾ ಕಡೀಲೀ...." ಮುದುಕಿ ಮಮತೆಯ ಬೈಗಳ ಸುರಿದಳು.

"ನನ್ನ ಗಲ್ಲಾಗೋಳು ನಿನ್ ಬಾಯಿಗೆ ಅಮರಂಗಿಲ್ಲೇ ಆಯಿ...." ಒಳಗಿನಿಂದ ಕಾಶಮ್ಮನ ನಗುದನಿ ಹಾದು ಬಂದಿತು. ಎಲ್ಲರೂ ಗೊಳ್ಳನೆ ನಕ್ಕರು.

"ಆಕಿ ನಿನಗೆ ಮಣೆಂಗಿಲ್ಲ ಬಿಡೇ ಚಿಗವ್ವಾ...." ಮಲ್ಲಪ್ಪನೂ ನಗುತ್ತ ನುಡಿದನು. ....ಫತರೂ ಒಳಗಿನಿಂದ ಬರುತ್ತ ಏನೇ ಆಯೀ... "ಏನು ಗಡಬಡ ನಡಸೀದೀ?" ಕೇಳಿದನು. "ನಂದೆಲ್ಲಾ ಗಡಬಡ ಮುಗೀತೋ ನನ ಹಾಟ್ಯಾ... ನಿಂದೇನು ಗಡಬಡ ನಡದಾದ್ವೇಳು?" ನಾಗವ್ವಾಯಿ ನಗುತ್ತ ದನಿಯೆತ್ತರಿಸಿ ಕೇಳಿದಳು. "ಏನಿಲ್ಲೆ ಮುದ್ಕೀ.... ಸುಮ್ಕಿರು ನಿನ್ನವ್ವನಾ....." ಅಂದನು. (ಪು. ೩೨ ಬದುಕು)

ಇಲ್ಲಿ ಬಳಕೆಗೊಂಡಿರುವ ಬೈಗಳಗಳು ಪ್ರೀತಿಯ ಸಂಕೇತವಾಗಿರುವುದನ್ನು ನೋಡಬಹುದು.

* ಬೈಯ್ಗಳು ಸ್ವನಿಂದೆಗಾಗಿ ಬಳಕೆಗೊಳ್ಳುವುದನ್ನೂ ಸಹ ಈ ಭಾಗದಲ್ಲಿ ನೋಡಬಹುದು. ಉದಾಹರಣೆಗೆ ಆಗಲೀಗ, ಅಕ್ಕಮದೇವಮ್ಮಗ, ಮದೂಗ ಬಂದಂಥ ತನ್ನ ಮಗನಿಗೆ ತನ್ನ ಹಾಳಾದ ಕಯ್ಗಳಿಂದಾ ಕಣ್ಣು ಗ್ಗಾಣದೆ ಹೊಡೆದುದುಕಾಗಿ ದುಕ್ಕಾವು ಉಕ್ತಾ "ಅಯ್ಯಯ್ಯೋ ನನಕಂದಾ... ನಿಂಗ ಮೊಕಮೊರ ಮಯ್ಯಿ ಅಂತ ನೋಡ್ದೀಯಾ ಹೊಡೀತಲ್ಲಪ್ಪಾ ಈನನ್ ಹಾಳಾದ ಕಯ್ಗಳೂ... ಇವು ಎಂದ್ಗಪ್ಪಾ ಸೋದೋಗದೂ... ಇವೂ..." ಅಂತಳೂತ (ಪು.೧೨೫ ಕುಸುಮಬಾಲೆ)

ಇಲ್ಲಿ ತನ್ನ ಮಗನನ್ನು ಬಡಿದು, ಅದು ತಪ್ಪು ಎನಿಸಿದಾಗ ಪಶ್ಚಾತ್ತಪಕ್ಕಾಗಿ ತನ್ನಷ್ಟಕ್ಕೆ ತಾನೇ ಶಪಿಸಿ ಕೊಳ್ಳುತ್ತಿರುವಲ್ಲಿ ಬೈಗಳು ಬಳಕೆಯಾಗಿರುವುದನ್ನು ನೋಡಬಹುದು.

೪.೮ ವ್ಯಕ್ತಿ ನಾಮಗಳು

ಸಾಮಾಜಿಕ ಸ್ತರವಿನ್ಯಾಸದಲ್ಲಿ ಸ್ತ್ರೀ-ಪುರುಷರ ಸ್ಥಾನ-ಮಾನಗಳನ್ನು ಸಾಮಾಜಿಕ ಅನನ್ಯತೆಯ ಚಹರೆಗಳನ್ನು ಮತ್ತು ಸಾಮಾಜಿಕ ತಾರತಮ್ಯಗಳನ್ನು ಸೂಚಿಸುವ ಅನೇಕ ಭಾಷಿಕಾಂಶಗಳಿರುವಂತೆ ಲಿಂಗ ಭಿನ್ನತೆಯನ್ನು ಸೂಚಿಸಲು ಕೂಡ ಕೆಲವು ಸ್ಥಿರ ಲಕ್ಷಣಗಳಿವೆ, ಅವುಗಳಲ್ಲಿ ಹೆಸರುಗಳು ಮುಖ್ಯವಾದವುಗಳು.

ಅಶಾಬ್ದಿಕ ಸಂವಹನ ಸಮುದಾಯವನ್ನು ಕಲ್ಪಿಸಿಕೊಳ್ಳಬಹುದೇನೋ ಆದರೆ ವ್ಯಕ್ತಿನಾಮಗಳಿಲ್ಲದ ಸಮುದಾಯವನ್ನು ಊಹಿಸಿಕೊಳ್ಳುವುದಕ್ಕೂ ಅಸಾಧ್ಯ. ವಾಸ್ತವವಾಗಿ ವ್ಯಕ್ತಿ ಹಾಗೂ ಆತನ ಹೆಸರು ಪರಸ್ಪರ ಯಾದೃಚ್ಛಿಕವಾದುದು. ಅಂದರೆ ಪರಸ್ಪರ ಇವೆರಡರ ನಡುವೆ ಯಾವ ಸಂಬಂಧವೂ ಇಲ್ಲ. ಸಮೂಹದಿಂದ ವ್ಯಕ್ತಿಯನ್ನು ಸಂಬೋಧಿಸುವ ಸಲುವಾಗಿ, ಗುರುತಿಸುವಿಕೆಯ ಸಲುವಾಗಿ ಇದೆಯೇ ಹೊರತು ಅದರಿಂದಾಚೆಗೆ ಏನೂ ಇರುವುದಿಲ್ಲ. ಉದಾ: ಗಿಡ್ಡಪ್ಪ ಎಂಬ ಹೆಸರುಳ್ಳ ವ್ಯಕ್ತಿ ಎತ್ತರವಾಗಿರಬಹುದು. ನಾಗವೇಣಿ ಎಂಬುವ ಹೆಸರುಳ್ಳವಳಿಗೆ ಸ್ವಲ್ಪವೇ ಕೂದಲಿರಬಹುದು. ಅಂದರೆ ವ್ಯಕ್ತಿಗೆ ತಕ್ಕಂತೆ ಹೆಸರಾಗಲಿ, ಹೆಸರಿಗೆ ತಕ್ಕಂತೆ ವ್ಯಕ್ತಿಯಾಗಲಿ ಇರುವುದಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಹಾಗಾಗಿ ವ್ಯಕ್ತಿನಾಮಗಳು, ವ್ಯಕ್ತಿಯನ್ನು ಹೆಸರಿಸುತ್ತವೆಯೋ ಅಥವಾ ವರ್ಣಿಸುತ್ತವೆಯೋ ಎಂಬುದು ಚರ್ಚಾಸ್ಪದವಾದ ವಿಷಯವೇ ಆದರೂ ವ್ಯಕ್ತಿನಾಮಗಳು ಸಂದರ್ಭಕ್ಕೆ ತಕ್ಕಂತೆ ಹೆಸರಿಸುವ ವರ್ಣಿಸುವ ಕೆಲಸವೆರಡನ್ನೂ ಮಾಡುತ್ತಿರುತ್ತವೆ.

ವ್ಯಕ್ತಿಯ ಹುಟ್ಟಿನಿಂದ ಸಾಯುವವರೆಗೆ ಆ ವ್ಯಕ್ತಿಗೆ ಅಂಟಿಕೊಂಡಿರುವ ನಾಮವು ಅವರ ಜೀವನ ದುದ್ದಕ್ಕೂ ಹೇಗೆ ಅನಿವಾರ್ಯವಾದ ಭಾಗವಾಗಿ ಬೆಸೆದುಕೊಂಡಿದೆಯೆಂದರೆ ವ್ಯಕ್ತಿಯ ವ್ಯಕ್ತಿತ್ವದ ಸಂಕೇತವಾಗಿರುವ

ಇದು, ಅವರ ಭವಿಷ್ಯವನ್ನು ಸಮಾಜದಲ್ಲಿ ಸ್ಥಾನ-ಮಾನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದದೆ. ವ್ಯಕ್ತಿಯು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನವನ್ನು ಪಡೆದುಕೊಂಡು ನಾಲ್ಕು ಜನರಿಂದ ಗುರುತಿಸಿಕೊಳ್ಳುವಂತಾದರೆ "ಹೆಸರನ್ನು ಗಳಿಸಿಕೊಂಡರು" ಕೆಟ್ಟ ಕಾರ್ಯಗಳಿಂದಾಗಿ ಎಲ್ಲರ ಅವಹೇಳನಕ್ಕೆ ಒಳಗಾಗುವ ವ್ಯಕ್ತಿ "ಹೆಸರನ್ನು ಕೆಡಿಸಿಕೊಂಡ"ರೆಂದು ಹೇಳುವ ಮಾತುಗಳಿಂದಲೇ ವ್ಯಕ್ತಿಗೂ ಅವರ ವ್ಯಕ್ತಿತ್ವಕ್ಕೂ ಇರುವ ಬೆಲೆಯನ್ನು ಹೆಸರಿನಿಂದಲೇ ತಿಳಿಯಬಹುದು ಎಂಬುದು ಸ್ಪಷ್ಟವಾಗುತ್ತದೆ.

ಹೀಗೆ ವ್ಯಕ್ತಿಯ ವ್ಯಕ್ತಿತ್ವವನ್ನು ಸೂಚಿಸಲು ನಾಮಪದವು ಸಹಾಯಕವಾದಂತೆ ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ವ್ಯಕ್ತಿನಾಮಗಳು ಸಹಾಯಕವಾಗುತ್ತವೆ. ವ್ಯಕ್ತಿನಾಮಗಳು ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತವೆ. ಬರೀ ಹೆಸರಿನಿಂದಲೇ ವ್ಯಕ್ತಿಯ ಧರ್ಮ, ಜಾತಿ, ವರ್ಗ, ವೃತ್ತಿಗಳಂತಹ ವಿವಿಧ ಸಾಮಾಜಿಕ ಸ್ತರಗಳನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ಇದಕ್ಕೆ ಆಯ್ದಕಾದಂಬರಿಗಳಿಂದ ನಿದರ್ಶನಗಳನ್ನು ನೋಡುವುದಾದರೆ:

ಹೆಸರಿನಿಂದಲೇ ಗುರುತಿಸಬಹುದಾದ ಧರ್ಮಗಳು.

೧. ಕೃಷ್ಣಾಶಾಸ್ತ್ರಿ, ಬಾಳಾಚಾರ್ಯ, ರತ್ನಮ್ಮ, ಲಿಂಗಪ್ಪಗೌಡ, ಸಾವಿತ್ರಿ, ರುಕ್ಮಿಣಿ, ಕೆಂಚಪ್ಪ, ಗಂಗಿ, ನಿಂಗಯ್ಯ ಮೊದಲಾದವು. ಹಿಂದೂ ಧರ್ಮವನ್ನು ಸೂಚಿಸಿದರೆ,

೨. ಗೋಸುಸಾಬು, ಫತರೂ, ನಜಮಾ, ಫಕರುದ್ದೀನಸಾಹೇಬ ಲಾಳೇಸಾಬ, ರುಕ್ಮಣ್ಣ ಮೊದಲಾದವು ಮುಸ್ಲಿಂ ಧರ್ಮವನ್ನೂ,

೩. ಲೂಸಿ, ಸೂಸಾನಮ್ಮ, ರೋಸಯ್ಯ, ಐರಿನ್, ಮೇರಿ ಮೊದಲಾದವು. ಕ್ರೈಸ್ತಧರ್ಮವನ್ನೂ,

೪. ಅನಂತ, ಜಿನ್ನಪ್ಪ ಎಂಬಂತಹವು ಜೈನರ ಧರ್ಮವನ್ನೂ ಸೂಚಿಸುತ್ತವೆ.

ಈ ನಾಮಪದಗಳು ಆಯಾ ಧರ್ಮದವರಿಗೆ ವಿಶಿಷ್ಟವಾಗಿದ್ದು, ಇಂತಹ ವ್ಯಕ್ತಿನಾಮಗಳನ್ನು ಕೇಳಿದ ತಕ್ಷಣ ಧರ್ಮವನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ಅದೇ ರೀತಿ ಹೆಸರಿಗೂ ಸಮಾಜಕ್ಕೂ ಸಂಬಂಧವಿದೆ. ಹೆಸರಿನ ನಿರ್ದಿಷ್ಟ ಭಾಗದಿಂದ ವ್ಯಕ್ತಿಯ ಜಾತಿ ಹಾಗೂ ಸಾಮಾಜಿಕ ಸ್ತರಗಳನ್ನು ಗುರುತಿಸಬಹುದು. ಉದಾ: ಕಾದಂಬರಿಯಗಳಲ್ಲಿ ಜಾತಿ ಸೂಚಕವಾಗಿ ಬಂದಿರುವ ವ್ಯಕ್ತಿಗಳ ಅದರಲ್ಲೂ ಗಂಡಸರ ಹೆಸರುಗಳು ಹೀಗಿವೆ.

ಪಡದಯ್ಯ	ಪಡದ	+ ಅಯ್ಯ
ಕಾಟಯ್ಯನಾಯಕ	ಕಾಟಯ್ಯ	+ ನಾಯಕ
ನಾಗಿರೆಡ್ಡಿ	ನಾಗಿ	+ ರೆಡ್ಡಿ
ಕೃಷ್ಣಾಶಾಸ್ತ್ರೀ	ಕೃಷ್ಣಾ	+ ಶಾಸ್ತ್ರಿ
ಬಾಳಾಚಾರ್ಯ	ಬಾಳಾ	+ ಆಚಾರ್ಯ

ಶಂಕರಪ್ಪಗೌಡ	ಶಂಕರಪ್ಪ	+ ಗೌಡ
ವಾಸುದೇವರಾಯ	ವಾಸುದೇವ	+ ರಾಯ
ನಾಟೀಕಾರ ರುಕ್ಮಣ್ಣ	ರುಕ್ಮಣ್ಣ	+ ನಾಟೀಕಾರ
ಪಿಂಜಾರ ಲಾಡ	ಲಾಡ	+ ಪಿಂಜಾರ
ಮಾದಾರ ಚನ್ನಾ	ಚನ್ನಾ	+ ಮಾದಾರ
ಮಡಿವಾಳ ಬಾಳರಾಮ	ಬಾಳರಾಮ	+ ಮಡಿವಾಳ
ತಳವಾರ ಕೆಂಚ	ಕೆಂಚ	+ ತಳವಾರ
ಜೈನರ ಜಿನ್ನಪ್ಪ	ಜಿನ್ನಪ್ಪ	+ ಜೈನರ

ವಿದ್ವಾಂಸರು ವ್ಯಕ್ತಿನಾಮಗಳನ್ನು ಹೀಗಾಗಲೇ ನಿರ್ದಿಷ್ಟ ಮತ್ತು ವಾರ್ಗಿಕ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಮೊದಲ ಭಾಗವಾದ ನಿರ್ದಿಷ್ಟವೇ ವ್ಯಕ್ತಿಯ ನಿಜನಾಮ. ಎರಡನೆಯ ಭಾಗವಾದ ವಾರ್ಗಿಕವು ಜಾತಿಸೂಚಕವಾದುದಾಗಿದೆ.[೧] ನಿರ್ದಿಷ್ಟ ಭಾಗದಲ್ಲಿ ಬರುವ ಕಾಟಯ್ಯ, ನಾಗಿ, ಕೃಷ್ಣಾ, ಬಾಳಾ, ಶಂಕರಪ್ಪ, ವಾಸುದೇವ, ರುಕ್ಮಣ್ಣ, ಲಾಡ, ಚನ್ನಾ, ಬಾಳರಾಮ, ಕೆಂಚ, ಜಿನ್ನಪ್ಪ ಎಂಬುದಕ್ಕೆ ನಾಯಕ ರೆಡ್ಡಿ, ಶಾಸ್ತ್ರೀ, ಆಚಾರ್ಯ, ಗೌಡ, ರಾಯ, ನಾಟೀಕಾರ, ಪಿಂಜಾರ, ಮಾದಾರ, ಮಡಿವಾಳ, ತಳವಾರ, ಜೈನರ ಎಂಬಂತಹ ಬೇರೆ ಬೇರೆ ವಾರ್ಗಿಕಗಳು ಸೇರಿಕೊಂಡು ಜಾತಿಸೂಚಕ ನಾಮಪದಗಳು ರೂಪುಗೊಂಡಿವೆ. ಅಲ್ಲದೆ ವಾರ್ಗಿಕ ಭಾಗದ ಸಹಾಯದಿಂದ ಸಾಮಾಜಿಕ ಸ್ಥಾನ-ಮಾನವನ್ನು . ತಿಳಿಯಬಹುದು. ಉದಾ. ನಾಯಕ, ರೆಡ್ಡಿ, ಶಾಸ್ತ್ರೀ, ಆಚಾರ್ಯ, ಗೌಡ, ರಾಯ ಎಂಬಂತಹ ವಾರ್ಗಿಕಗಳು ಸಮಾಜದ ಉನ್ನತ ವರ್ಗಗಳನ್ನು ಸೂಚಿಸಿದರೆ ನಾಟೀಕಾರ, ಪಿಂಜಾರ, ಮಾದಾರ, ಮಡಿವಾಳ, ತಳವಾರ, ಎಂಬಂತಹ ವಾರ್ಗಿಕಗಳು ಕೆಳವರ್ಗಗಳನ್ನು ಸೂಚಿಸುತ್ತದೆ. ಹೀಗೆ ವಾರ್ಗಿಕ ಭಾಗದ ಸಹಾಯದಿಂದ ಸಾಮಾಜಿಕತೆಯನ್ನು ತಿಳಿಯಬಹುದಾಗಿದೆ. ಈ ವರ್ಗೀಕರಣವನ್ನು ಪುರುಷರಿಗೆ ಅನ್ವಯಿಸಿ ಹೇಳಿದಂತೆ ಸ್ತ್ರೀಯರಿಗೆ ಅನ್ವಯಿಸಿ ಹೇಳುವುದಾದರೆ, ನಮ್ಮ ಸಾಮಾಜಿಕ ನಡಾವಳಿಗಳಲ್ಲಿ ಸ್ತ್ರೀಯರಿಗೆ ಅವರದೇ ಆದ ಪ್ರತ್ಯೇಕವಾದ ಜಾತಿಸೂಚಕ ನಾಮಪದಗಳಿಲ್ಲ. ಬದಲಿಗೆ ಅವಳು ಯಾರ (ತಂದೆ / ಗಂಡ) ಆಶ್ರಯದಲ್ಲಿರುತ್ತಾಳೋ ಅವರ ಜಾತಿಯೇ ಇವಳದಾಗಿರುತ್ತದೆ. ಇದಕ್ಕೆ ಕಾದಂಬರಿಯಿಂದ ನಿದರ್ಶನಗಳನ್ನು ನೋಡುವುದಾದರೆ:

ಶಿವಾಚಾರದ ಗಂಗಿ	ಗಂಗಿ	+ ಶಿವಾಚಾರ
ಹೀರೇ ಕುರುಬರ ನಿಂಬೆವ್ವ	ನಿಂಬೆವ್ವ	+ ಕುರುಬರ
ಕೊರವರ ಈರವ್ವ	ಈರವ್ವ	+ ಕೊರವರ
ಮಾದಾರ ಗಂಗಿ	ಗಂಗಿ	+ ಮಾದಾರ
ಮಲ್ಲವ್ವ ಜಮಾದಾರ್ತಿ	ಮಲ್ಲವ್ವ	+ ಜಮಾದರ್ತಿ

೧. ಡಾ. ಪಿ. ಮಹಾದೇವಯ್ಯ, ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ, ಪು.೭೪

ನೀಲವ್ವ ಸಾವ್ಕಾರ್ತಿ — ನೀಲವ್ವ + ಸಾವ್ಕಾರ್ತಿ

ಪಾರ್ವತೆವ್ವ ಗೌಡತಿ — ಪಾರ್ವತೆವ್ವ + ಗೌಡತಿ

ಮೇಲಿನ ಉದಾಹರಣೆಗಳಲ್ಲಿ ನಿರ್ದಿಷ್ಟ ನಾಮಪದಗಳಾದ ಗಂಗಿ, ನಿಂಬೆವ್ವ, ಈರವ್ವ, ಗಂಗಿ, ಮಲ್ಲವ್ವ, ನೀಲವ್ವ, ಪಾರ್ವತೆವ್ವ, ಎಂಬುದರ ಜೊತೆಗೆ ವಾರ್ಗಿಕಾಂಶಗಳಲ್ಲಿ ಶಿವಚಾರ, ಕುರುಬರ, ಕೊರವರ, ಮಾದಾರ, ಗೌಡತಿ, ಎಂಬಂತಹ ಜಾತಿಸೂಚಕಾಂಶಗಳು ಬಂದಿವೆಯಾದರೂ ಅವು ಗಂಡನ ಅಥವಾ ತಂದೆಯ ಜಾತಿ ಹೆಸರುಗಳ ಸೂಚಕವಾಗಿ ಮಾತ್ರ ರೂಢಿಯಲ್ಲಿ ಬಳಕೆಯಾಗುತ್ತಿರುತ್ತವೆ ಎಂಬುದು ಗಮನಾರ್ಹವಾದ ವಿಷಯವಾಗಿದೆ.

ನಾಮಪದಗಳು ಜಾತಿಸೂಚಕಗಳಾಗಿ ಕೆಲಸ ನಿರ್ವಹಿಸುವಂತೆ ವೃತ್ತಿಸೂಚಕಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಉದಾ:

ಜಾಗೀರುದಾರ ರಾಣೋಜಿರಾಯ

ಶಿಲೇದಾರ ನಾನಾ

ಕುಲಕರ್ಣಿ ಶೇಷಪ್ಪ

ಶಂಕರಪ್ಪ ಗೌಡ

ಓಲೇಕಾರ ಮಲ್ಲ

ತಳವಾರ ಕೆಂಚ

ಇನ್‌ಸ್ಪೆಕ್ಟರ್ ಗೂಳಪ್ಪ

ಜಮಾದಾರ ಮಲ್ಲಪ್ಪ

ಮೇಲ್ಕಾಣಿಸಿದ ಉದಾಹರಣೆಗಳಲ್ಲಿ ಬಂದಿರುವ ಜಾಗೀರುದಾರ, ಕುಲಕರ್ಣಿ, ಶಿಲೇದಾರ, ಗೌಡ, ಓಲೇಕಾರ, ತಳವಾರ, ಜಮಾದಾರ, ಇನ್‌ಸ್ಪೆಪೆಕ್ಟರ್ ಎಂಬಂತಹ ವೃತ್ತಿವಾಚಕಗಳು ರಾಣೋಜಿರಾಯ ಶೇಷಪ್ಪ, ನಾನಾ, ಶಂಕರಪ್ಪ, ಮಲ್ಲ, ಕೆಂಚ, ಮಲ್ಲಪ್ಪ, ಗೂಳಪ್ಪ, ಎಂಬ ನಾಮಪದಗಳೊಂದಿಗೆ ಸೇರಿಕೊಂಡು ಬಂದಿರುವುದನ್ನು ನೋಡಬಹುದು. ಈ ಹೆಸರುಗಳು ವ್ಯಕ್ತಿಯ ವೃತ್ತಿಯ ಜೊತೆಗೆ ಸಮಾಜದಲ್ಲಿ ಅವನಿಗೆ ಇರಬಹುದಾದ ಸ್ಥಾನವನ್ನು ತಿಳಿಸುತ್ತವೆ. ಇನ್ನೂ ಸ್ತ್ರೀಯರಿಗೆ ಸಂಬಂಧಿಸಿದಂತೆ ವೃತ್ತಿಸೂಚಕಗಳನ್ನು ಕುರಿತು ಹೇಳುವುದಾದರೆ ಇವು ಕೂಡ ಜಾತಿ ಸೂಚಕಗಳಂತೆ ತಂದೆ ಅಥವಾ ಗಂಡನ ವೃತ್ತಿಯಾನ್ನಾದರಿಸಿಯೇ ಬಳಕೆಗೊಳ್ಳುತ್ತವೆ.

ಮಲ್ಲವ್ವ ಜಮಾದಾರ್ತಿ

ನೀಲವ್ವ ಸಾವ್ಕಾರ್ತಿ

ಪಾರ್ವತೆವ್ವ ಗೌಡತಿ

ಕೊರವರ ಈರವ್ವ

ಮೇಲ್ಕಾಣಿಸಿದ ಉದಾಹರಣೆಗಳಲ್ಲಿ ಮಲ್ಲವ್ವ, ನೀಲವ್ವ, ಪಾರ್ವತೆವ್ವ, ಈರವ್ವ, ಎಂಬಂತಹ ನಾಮಪದಗಳ ಜೊತೆಗೆ ಜಮಾದಾರ್‍ತಿ, ಸಾವ್ಕಾರ್‍ತಿ, ಗೌಡತಿ, ಕೊರವರ ಎಂಬಂತಹ ವೃತ್ತಿಸೂಚಕ ನಾಮ ಪದಗಳು ಬಂದಿವೆಯಾದರೂ, ಜಮಾದಾರ್‍ತಿ, ಸಾವ್ಕಾರ್‍ತಿ, ಗೌಡತಿ, ಎಂಬುವುದು ಮಲ್ಲವ್ವ, ನೀಲವ್ವ, ಪಾರ್ವತೆವ್ವನವರು ನಿರ್ವಹಿಸುತ್ತಿರುವ ವೃತ್ತಿಯಲ್ಲ ಬದಲಿಗೆ ಅವರ ಗಂಡಂದಿರಿಗಿರುವ ವೃತ್ತಿಸೂಚಕವೇ ಇವರಿಗೂ ಗೌರವ ಸೂಚಕವಾಗಿ ಬಳಕೆಯಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತ ಉದಾಹರಣೆ 'ಕೊರವರ ಈರವ್ವ' ಎಂಬುದು, ಇವರ ಜಾತಿಯೇ ಸೂಚಿಸುವಂತೆ ಬುಟ್ಟಿ ಮಾಡಿ, ಮಾರಿ ಜೀವನ ನಡೆಸುವುದು ಇವರ ಕುಲಕಸುಬು ಅದನ್ನು ಈ ಪಾತ್ರ ಕಾದಂಬರಿಯಲ್ಲಿ ನಿರ್ವಹಿಸುತ್ತಾದರೂ, ಇದು ಅವಳಿಗೆ ಸೀಮಿತವಾದ ವೃತ್ತಿಸೂಚಕವಲ್ಲ. ಬದಲಿಗೆ ಇವಳ ಗಂಡನ ಅಥವಾ ತಂದೆಯ ವೃತ್ತಿಯ ಸೂಚಕವೇ ಇವಳಿಗೂ ಅನ್ವಯ ವಾಗಿದೆ. ಒಟ್ಟಿನಲ್ಲಿ ಸ್ತ್ರೀಯರ ಹೆಸರುಗಳಲ್ಲಿ ಜಾತಿಸೂಚಕವಾಗಲಿ ವೃತ್ತಿ ಸೂಚಕವಾಗಲಿ ಬಳಕೆಯಾಗುತ್ತವೆ ಯಾದರೂ, ಅವು ಗಂಡನ ಅಥವಾ ತಂದೆಯ ವೃತ್ತಿ ಜಾತಿಯ ಅನ್ವಯವಾಗಿರುತ್ತವೆಯೇ ಹೊರತು ಅವಳ ಅನನ್ಯತೆಯ ಸಂಕೇತವಾಗಿ ಅಲ್ಲ.

ಸಂಬೋಧನಾ ನೆಲೆಯಿಂದ ಬಳಕೆಯಾಗುವ ವ್ಯಕ್ತಿನಾಮಗಳ ಸಹಾಯದಿಂದ ಸಾಮಾಜಿಕ ವರ್ಗವನ್ನು ನಿರ್ಧರಿಸಬಹುದಾಗಿದೆ. ಇದಕ್ಕೆ ಕಾದಂಬರಿಯಿಂದ ಒಂದು ಉದಾಹರಣೆಯನ್ನು ಕೊಡುವುದಾದರೆ,

ಲಿಂಗಯ್ಯ ಎಂಬ ಹೆಸರುಳ್ಳ ಕೆಳವರ್ಗದ ವ್ಯಕ್ತಿಯನ್ನು ಮೇಲ್ವರ್ಗದವರು 'ನಿಂಗ' ಎಂದಷ್ಟೇ ಸಂಬೋಧಿಸಿದರೆ, ಮೇಲ್ವರ್ಗದ ವ್ಯಕ್ತಿಯಾದ 'ಕೆಂಗಣ್ಣಪ್ಪ'ನನ್ನು ಕೆಂಗಣ್ಣಪ್ಪನವರೆ ಎಂದೂ, ಸ್ವಾಮಿ, ಎಂದೂ ಸಂಬೋಧಿಸಬೇಕಾಗುತ್ತದೆ. ಅಂದರೆ ವ್ಯಕ್ತಿನಾಮಗಳು ಸಂಬೋಧನೆಯಲ್ಲಿ ಸಾಮಾಜಿಕ ವರ್ಗಕ್ಕನು ಗುಣವಾಗಿ ಬಳಕೆಗೊಳ್ಳುತ್ತವೆ. ಅಂದರೆ ಉನ್ನತವರ್ಗದವರ ವ್ಯಕ್ತಿನಾಮಗಳನ್ನು ಸಂಬೋಧನೆ ಮಾಡುವಾಗ ಗೌರವ ಸೂಚಕವಾಗಿಯೂ ಕೆಳವರ್ಗದವರ ವ್ಯಕ್ತಿನಾಮಗಳನ್ನು ಕೆಳಮಟ್ಟದ ಸಂಬೋಧನೆಯಲ್ಲಿ ಸಂಬೋಧಿಸುವುದು ಕಂಡುಬರುತ್ತದೆ. ಮುಂದುವರೆದು ಹೇಳುವುದಾದರೆ ಮೇಲ್ವರ್ಗದವರು ಕೆಳವರ್ಗದವರನ್ನು ಸಂಬೋಧಿಸಲು ಅರ್ಧಹೆಸರನ್ನೋ, ಅಡ್ಡಹೆಸರನ್ನೋ ಬಳಸಿದರೆ, ಉದಾ. ನಿಂಗ, ಕೆಂಚ, ಮಲ್ಲ ಇತ್ಯಾದಿ. ಕೆಳವರ್ಗದವರು ಮೇಲ್ವರ್ಗದವರನ್ನು ಸಂಬೋಧಿಸಲು ಬಹುವಚನಯುಕ್ತ ಪೂರ್ಣ ಹೆಸರನ್ನು ಬಳಸುತ್ತಾರೆ. ಉದಾ: ಶಂಕರಪ್ಪಗೌಡರು, ಇತ್ಯಾದಿ. ಹೀಗೆ ಸಂಬೋಧನಾ ನೆಲೆಯಿಂದಲೇ ಸಾಮಾಜಿಕ ವರ್ಗವನ್ನು ನಿರ್ಧರಿಸಬಹುದು.

ಅಧ್ಯಾಯ ಐದು

ಕಾದಂಬರಿಗಳಲ್ಲಿ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟ

೫.೧. ಸ್ವೀಕರಣ

೫.೨. ನುಡಿಬೆರಕೆ

೫.೩. ನುಡಿಪಲ್ಲಟ

ಅಧ್ಯಾಯ ೫

ಕಾದಂಬರಿಗಳಲ್ಲಿ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟ

ಜಗತ್ತಿನಲ್ಲಿ ಒಂದೇ ಭಾಷೆಯನ್ನು ಬಳಸುವ ಮಾನವ ಸಮುದಾಯವನ್ನು ಕಾಣುವುದು ಅಸಾಧ್ಯ. ಅಂದರೆ ಒಂದು ಭಾಷೆಯನ್ನು ಆಡುವ ಜನರು ಒಂದಕ್ಕಿಂತ ಹೆಚ್ಚು ಸಮುದಾಯಗಳಲ್ಲಿ, ಭೂಪ್ರದೇಶಗಳಲ್ಲಿ ಕಾಣಸಿಗುವಂತೆ ಒಂದೇ ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣಗಳು ಹಲವು. ರಾಜಕೀಯ ಕಾರಣಗಳಿಂದಾಗಿ ನಡೆಯುವ ಆಡಳಿತವಲಯ ವಿಸ್ತರಣೆಗಳು. ಸಮುದಾಯಗಳ ಜನರು ಬೇರೆ-ಬೇರೆ ಕಾರಣಗಳಿಗಾಗಿ (ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ) ಬೇರೆ-ಬೇರೆ ಭೂ ಪ್ರದೇಶಗಳಿಗೆ ಹೋಗಿ ನೆಲೆಸುವುದು. ರಾಷ್ಟ್ರೀಯತೆ ಮತ್ತು ದೇಶಕೂಟಗಳು. ವಿದ್ಯೆ, ಸಂಸ್ಕೃತಿ, ವ್ಯಾಪಾರ, ಅಂತರ್ವಿವಾಹ. ಇತ್ಯಾದಿ ಕಾರಣಗಳಿಗಾಗಿ ಭಾಷಾಸಮುದಾಯಗಳು ಒಂದು ಮತ್ತೊಂದರೊಡನೆ ಬೆರೆಯುವುದು ಅನಿವಾರ್ಯವಾಗುತ್ತದೆ. ಆಗ ಇಂತಹ ಸಮುದಾಯಗಳಲ್ಲಿ ಭಾಷಾಮಿಶ್ರಣದ ಪ್ರಕ್ರಿಯೆಗಳು ಕಂಡುಬರುತ್ತವೆ.

ಆದರೆ, ಬಹಳ ಹಿಂದಿನಿಂದಲೂ ಈ ರೀತಿಯ ಭಾಷಾಮಿಶ್ರಣ ಅಥವಾ ನುಡಿಬೆರಕೆ ಪಂಡಿತರ ಕೋಪ, ಅವಹೇಳನ, ತಿರಸ್ಕಾರಗಳಿಗೆ ಗುರಿಯಾಗಿದೆ. ಈ ಪರಿಪಾಠವನ್ನು ಅನೇಕ ರೀತಿಯಲ್ಲಿ ಖಂಡಿಸಲಾಗಿದೆ. ಇದನ್ನು ಕಲಸು ಮೇಲೋಗರವೆಂದು, ಇದೂ ಅಲ್ಲ, ಅದೂ ಅಲ್ಲದ ಎಡಬಿಡಂಗಿ ಮಾತು ಎಂದೂ ಕರೆಯುವವರಿದ್ದಾರೆ. ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯನ್ನು ಮಾತನಾಡುವುದು ಅಥವಾ ಬೆರೆಸುವುದು ತಮ್ಮ ಭಾಷೆಯ ಅಜ್ಞಾನದ ಲಕ್ಷಣ ಅಥವಾ ಭಾಷಿಗರ ಸೋಮಾರಿತನದ ಲಕ್ಷಣ ಎಂದೂ ಹೇಳಲಾಗುತ್ತದೆ. ಈ ರೀತಿ ಮಾತನಾಡುವುದು ಭಾಷೆ ಹಾಳಾಗುವುದರ ಸ್ಪಷ್ಟ ಸಂಕೇತವೆಂದೂ,

ಇದು ಭಾಷೆಯ ಬೆಳವಣಿಗೆಗೆ ಅಡ್ಡಿಯೆಂದೂ ಹೇಳುವುದು. ಪಾಂಡಿತ್ಯ ಪ್ರದರ್ಶನವೆಂದೂ, ಆಡಂಬರದ ಮಾತುಗಾರಿಕೆಯೆಂದೂ, ಕೊಬ್ಬು, ರೋಪು, ಜಮಾಯಿಸುವುದು ಎಂದೂ ಪರಿಗಣಿಸಲಾಗುತ್ತದೆ. ಒಟ್ಟಿನಲ್ಲಿ ಈ ಪ್ರಕ್ರಿಯೆಗೆ ತಾತ್ಸಾರ, ಅಸಮ್ಮತಿ, ಕೀಳಿರಿಮೆಯ ಭಾವನೆಗಳೇ ಹೆಚ್ಚು.

ಆದರೆ ಈ ನುಡಿಬೆರಕೆ ಯಾವುದೋ ಅಶಿಕ್ಷಿತ, ಅಪ್ರಮುಖ, ಅಜ್ಞಾನಿ ಗುಂಪು ಅಥವಾ ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ಸುಶಿಕ್ಷಿತರ ಜ್ಞಾನಿಗಳಲ್ಲಿ ಎದ್ದುಕಾಣುವ ಅಂಶವೆಂದೇ ಹೇಳಬಹುದು. ಅಲ್ಲದೆ ಇದು ಫ್ಯಾಶನ್ನಿನಂತೆ ಬಂದು ಹೋಗುವ ತಾತ್ಕಾಲಿಕ ಅಲೆಯೂ ಅಲ್ಲ ಅಥವಾ ಕೇವಲ ಕನ್ನಡಕ್ಕೆ ಸೀಮಿತವಾದುದು ಅಲ್ಲ. ದಿನಗಳೆದಂತೆ ಇಂತಹ ಭಾಷೆಯನ್ನು ಮಾತನಾಡುವವರ ಮಾತು ಗಟ್ಟಿಗೊಂಡು ಹೊಸದೊಂದು ಭಾಷೆಯೇ ರೂಪುಗೊಳ್ಳುತ್ತದೆ. ಅಲ್ಲದೆ. ಪ್ರಪಂಚದಲ್ಲಿರುವ ಎಲ್ಲಾ ಭಾಷೆಗಳಲ್ಲಿಯೂ ಈ ಪ್ರಕ್ರಿಯೆ ಕಂಡುಬರುತ್ತದೆ.

ಜಗತ್ತಿನ ಯಾವುದೇ ಜೀವಂತ ಭಾಷೆಯೂ ಅನ್ಯಭಾಷೆಯ ಪ್ರಭಾವಕ್ಕೆ ಒಳಗಾಗದೆ ಉಳಿದಿಲ್ಲ. ಪ್ರತಿಯೊಂದು ಭಾಷೆ ಮತ್ತು ಉಪಭಾಷೆಗಳು ಒಂದಲ್ಲಾ ಒಂದು ಭಾಷೆಯ ಪ್ರಭಾವಕ್ಕೆ ಒಳಗಾಗಲೇಬೇಕು. ಸ್ವೀಕರಣವಿಲ್ಲದೆ ಸ್ವಭಾಷಾ ಶಬ್ದ ಭಂಡಾರ ಒಂದರಿಂದಲೇ ಸಂವೃದ್ಧಿಯಾಗಿ ಬೆಳೆದು ಬಂದಿರುವ ಭಾಷೆಗಳು ಜಗತ್ತಿನಲ್ಲಿ ಬಹಳ ಕಡಿಮೆ. ಇಂತಹ ಭಾಷೆಗಳು ಜನರಾಡುವ ಭಾಷೆಯಿಂದ ಅಳಿವಿನ ಕಡೆಗೆ ಮುಖ ಮಾಡುತ್ತವೆ. ಮುಂದೊಂದು ದಿನ ಅಳಿದೇ ಹೋಗುತ್ತವೆ ಎಂದರೆ ತಪ್ಪಾಗಲಾರದು. ಈ ಕಾರಣದಿಂದಲೇ ಒಟ್ಟೋ ಯಸ್ಪರ್ಸನ್ ಎಂಬಾತನು No language is entirly free from borrowed words ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಅಂದರೆ ಪ್ರತಿಯೊಂದು ಭಾಷೆಗೂ ಸ್ವೀಕರಣ ಪ್ರಕ್ರಿಯೆ ಅಗತ್ಯವಾದುದು ಮತ್ತು ಅಷ್ಟೇ ಸಹಜವಾದುದು ಕೂಡ. ಎಂಬುದು ಇದರಿಂದ ಮನವರಿಕೆಯಾಗುತ್ತದೆ.

ಭಾಷಾ ಮಿಶ್ರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಅಧ್ಯಯನಗಳು ನಡೆದಿವೆಯಾದರೂ, ಅವು ಕೇವಲ ಪಟ್ಟಿರೂಪದವು ಅಂದರೆ ಸ್ವೀಕರಣ ಯಾವ ಭಾಷೆಯಿಂದ ಆಗಿದೆಯೋ ಆ ಸ್ವೀಕರಣಗೊಂಡಿರುವ ಪದಗಳನ್ನು ಒಂದು ಪಟ್ಟಿಯ ರೂಪದಲ್ಲಿ ಕೊಡಲಾಗಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಭಾಷಾಮಿಶ್ರಣದ ಪ್ರಕ್ರಿಯೆಯನ್ನು ಇದಕ್ಕಿಂತಲೂ ಭಿನ್ನವಾಗಿ ನೋಡುವ ಪ್ರಯತ್ನ ಮಾಡಲಾಗಿದೆ. ಭಾಷಾ ಮಿಶ್ರಣದ ಬಗ್ಗೆ ವಿಶ್ಲೇಷಿಸುತ್ತ ಯಾವ ಕಾದಂಬರಿಯಲ್ಲಿ ಹೆಚ್ಚಾಗಿ ಸ್ವೀಕರಣ ನುಡಿಬೆರಕೆ ಮತ್ತು ನುಡಿಪಲ್ಲಟದಂತಹ ಪ್ರಕ್ರಿಯೆಗಳು ನಡೆದಿವೆ. ಅದರಲ್ಲೂ ಯಾವ ಸಾಮಾಜಿಕ ವರ್ಗ ಭಾಷಾಮಿಶ್ರಣಕ್ಕೆ ಹೆಚ್ಚಾಗಿ ತೆರೆದುಕೊಳ್ಳುತ್ತದೆ. ಹಾಗೂ ಇಂತಹ ಮಿಶ್ರಣಗಳ ಶೈಲಿಯ ಬಳಕೆಯಿಂದ ಕಾದಂಬರಿ ಹೆಚ್ಚು ಸಾಮಾಜಿಕ ಸಂವಹನ ಆಗುತ್ತಿದೆಯೇ ಎಂಬುದನ್ನು ಚರ್ಚಿಸುತ್ತ ಭಾಷಾಮಿಶ್ರಣದ ಹಲವು ಆಯಾಮಗಳಾದ ನುಡಿಬೆರಕೆ, ಸ್ವೀಕರಣ ನುಡಿಪಲ್ಲಟ ಗಳೆಂದರೇನು? ಪರಸ್ಪರ ಇವುಗಳೊಳಗಿನ ವ್ಯತ್ಯಾಸಗಳೇನು? ಭಾಷಾ ಮಿಶ್ರಣದ ರಚನಾತ್ಮಕ ಲಕ್ಷಣಗಳೇನು? ಮತ್ತು ಭಾಷಾ ಮಿಶ್ರಣದ ವಿವಿಧ ಆಯಾಮಗಳು ಕಾದಂಬರಿಗಳಲ್ಲಿ ಹೇಗೆ ಮೂಡಿಬಂದಿವೆ ಎಂಬುದನ್ನು ಕುರಿತು ನಿದರ್ಶನಗಳ ಸಹಿತ ವಿಶ್ಲೇಷಿಸಲಾಗಿದೆ.

ಮಹಾಪ್ರಬಂಧಕ್ಕೆ ಆಯ್ದುಕೊಂಡಿರುವ ಏಳು ಕಾದಂಬರಿಗಳೂ ಒಂದಿಲ್ಲೊಂದು ಅನ್ಯಭಾಷೆಯ ಪ್ರಭಾವಕ್ಕೆ ಒಳಗಾದವುಗಳೇ; ಅರಮನೆ, ಕಾದಂಬರಿಯಲ್ಲಿ ಕನ್ನಡ, ತೆಲುಗು, ಇಂಗ್ಲಿಶ್‌ಗಳ ಭಾಷಾ ಮಿಶ್ರಣವಿದ್ದರೆ, ಕುಸುಮಬಾಲೆಯಲ್ಲಿ ಶಿಷ್ಟ ಕನ್ನಡ, ಇಂಗ್ಲಿಷ್‌ಗಳ ಮಿಶ್ರಣವೂ, ನಿಸರ್ಗ ಕಾದಂಬರಿಯಲ್ಲಿ ಮರಾಠಿ ಮಿಶ್ರಣವೂ, ಗ್ರಾಮಾಯಣ ಕಾದಂಬರಿಯಲ್ಲಿ ಉರ್ದು, ಮರಾಠಿ ಮಿಶ್ರಣವೂ, ವೈಶಾಖ ಕಾದಂಬರಿಯಲ್ಲಿ ಸಂಸ್ಕೃತ ಮಿಶ್ರಣವೂ, ಬದುಕು ಕಾದಂಬರಿಯಲ್ಲಿ ಉರ್ದು ಮಿಶ್ರಣವೂ. ಅಸ್ಪೃಶ್ಯರು ಕಾದಂಬರಿಯಲ್ಲಿ ತುಳು ಮಿಶ್ರಿತ ಕನ್ನಡವೂ ಬಳಕೆಗೊಂಡಿರುವುದರ ಜೊತೆಗೆ ಎಲ್ಲ ಕಾದಂಬರಿಗಳಲ್ಲಿಯೂ ಇಂಗ್ಲಿಷ್, ಸಂಸ್ಕೃತ ಪದಗಳ ಮಿಶ್ರಣವು ಸಾಮಾನ್ಯವಾದುದಾಗಿದೆ.

ಅನ್ಯ ಭಾಷೆಗೆ ತೆರೆದುಕೊಳ್ಳುವ ಕಲಿಯುವ ಮತ್ತು ಬಳಸುವ ಅವಕಾಶಗಳು ಕೇವಲ ಮೇಲ್ವರ್ಗದವರಿಗೆ ಮಾತ್ರ ಎಂಬುದನ್ನು ವೈಶಾಖ, ಗ್ರಾಮಾಯಣ, ಅರಮನೆ ಕಾದಂಬರಿಗಳು ಪ್ರತಿನಿಧಿಸಿದರೆ. ನಿಸರ್ಗ, ಬದುಕು, ಅಸ್ಪೃಶ್ಯರು ಕಾದಂಬರಿಗಳಲ್ಲಿ ಕನ್ನಡದೊಂದಿಗೆ ಮಿಶ್ರಿತಗೊಂಡಿರುವ ಮರಾಠಿ, ಉರ್ದು, ಮತ್ತು ತುಳು ಪದಗಳು ಯಾವ ಭಿನ್ನತೆಯೂ ಇಲ್ಲದೇ ಕನ್ನಡ ಭಾಷೆಯೊಡನೆ ಸಂಪೂರ್ಣವಾಗಿ ಬೆರೆತು. ಕನ್ನಡ ಪದಗಳೇ ಎನ್ನುವಷ್ಟರಮಟ್ಟಿಗೆ ಎಲ್ಲ ಸಮುದಾಯಗಳಲ್ಲೂ ಬಳಕೆಗೊಂಡಿವೆ. ಇದಕ್ಕೆ ಹಿಂದೊಮ್ಮೆ ಈ ಪ್ರದೇಶಗಳು ಬಹಳಷ್ಟು ವರ್ಷಗಳ ಕಾಲ ಅನ್ಯ ಭಾಷಿಗರ ಆಳ್ವಿಕೆಗೆ ಒಳಗಾದ ಹಾಗೂ ರಾಜಕೀಯ ಕಾರಣಗಳಿಂದಾಗಿ ಗಡಿಯಲ್ಲಾದ ಬದಲಾವಣೆಗಳೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು.

ವೈಶಾಖ ಕಾದಂಬರಿಯಲ್ಲಿ ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುವ ಕೃಷ್ಣಾಶಾಸ್ತ್ರಿ, ಕೇಶವಯ್ಯ, ರುಕ್ಮಿಣಿ, ಸಾವಿತ್ರಿ, ಲಕ್ಷ್ಮಮ್ಮ ಮೊದಲಾದ ಪಾತ್ರಗಳು ಪೂಜಾವಿಧಿ ಮತ್ತು ಸಂಭಾಷಣೆಗಳಲ್ಲಿ ಸಂಸ್ಕೃತ ಹಾಗೂ ಸಂಸ್ಕೃತ ಮಿಶ್ರಿತ ಶಿಷ್ಟ ಕನ್ನಡವನ್ನು ಬಳಸಿದರೆ, ಬ್ರಾಹ್ಮಣೇತರ ಸಮುದಾಯವನ್ನು ಪ್ರತಿನಿಧಿಸುವ ಲಕ್ಕ, ನಿಂಗ, ನಂಜೇಗೌಡ, ಗಂಗಪ್ಪ ಮೊದಲಾದ ಪಾತ್ರಗಳು ಗ್ರಾಮ್ಯ ಭಾಷೆಗೆ ಸೀಮಿತಗೊಂಡಿವೆ. ಗ್ರಾಮಾಯಣ ಕಾದಂಬರಿಯಲ್ಲಿ ಬಾಳಾಚಾರ್ಯ, ಹನುಮಂತಾಚಾರ್ಯ, ನಾರಾಯಣಾಚಾರ್ಯರು ಬ್ರಾಹ್ಮಣ ಸಮುದಾಯವನ್ನು ಪ್ರತಿನಿಧಿಸುವ ಪಾತ್ರಗಳಾಗಿದ್ದು, ಪೂಜಾ ವಿಧಿ ಮತ್ತು ಸಂಭಾಷಣೆಗಳಲ್ಲಿ ಸಂಸ್ಕೃತ, ಸಂಸ್ಕೃತ ಮಿಶ್ರಿತ ಶಿಷ್ಟ ಕನ್ನಡವನ್ನು ಬಳಸಿಕೊಂಡರೆ. ಹವಾಲ್ದಾರರು, ಉಸ್ಮಾನ, ಇಸ್ಮಾಯಿಲ್, ಶೇಷಪ್ಪ, ಶಾಮರಾಯ ಮೊದಲಾದ ಪಾತ್ರಗಳು ಉರ್ದು ಮಿಶ್ರಿತ ಕನ್ನಡವನ್ನು ಅಧಿಕಾರಾವಧಿಯಲ್ಲಿ ಬಳಸಿವೆ. ಉಳಿದ ಕೆಳಸಮುದಾಯದ ಪಾತ್ರಗಳು ಕೇವಲ ಗ್ರಾಮ್ಯ ಭಾಷೆಗೆ ಮಾತ್ರ ಸೀಮಿತಗೊಂಡಿವೆ. ಹಾಗೆಯೇ ಅರಮನೆ ಕಾದಂಬರಿಯಲ್ಲಿ ಮನ್ರೋ, ಹೆನ್ರೀ, ಎಡ್‌ವರ್ಡ್, ಥಾಕರೆ, ರೆಬೇರೊ, ಪಾದ್ರಿಗಳು ಮೊದಲಾದವರು ಆಡಳಿತ ನಡೆಸುವುದಕ್ಕಾಗಿ ಇಂಗ್ಲೀಷ್, ತೆಲುಗು, ಕನ್ನಡ ಭಾಷೆಗಳನ್ನು ಬಳಸಿಕೊಂಡರೆ ಇನ್ನಿತರೆ ಪಾತ್ರಗಳು ಪ್ರದೇಶಕ್ಕನುಗುಣವಾಗಿ ಕನ್ನಡ ತೆಲುಗು ಭಾಷೆಗಳನ್ನು ಬಳಸಿಕೊಂಡಿರುವುದನ್ನು ನೋಡಬಹುದು.

ಹೀಗೆ ಈ ಮೂರು ಕಾದಂಬರಿಗಳಲ್ಲಿ ಪೂಜಾ ವಿಧಿಗಳು, ಆಡಳಿತ ಅನುಕೂಲಕ್ಕಾಗಿ ಅನ್ಯಭಾಷೆಯನ್ನು ಬಳಸಿಕೊಂಡಿರುವುದು ಮೇಲ್ವರ್ಗ ಅಥವಾ ಅಧಿಕಾರಿ ವರ್ಗವಾದರೆ, ಗ್ರಾಮ್ಯ ಭಾಷೆಯನ್ನು ಬಳಸಿ

ಕೊಂಡಿರುವುದು ಕೆಳವರ್ಗ ಅಥವಾ ಅಧಿಕಾರಹೀನವರ್ಗ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ಇದಕ್ಕಿಂತಲೂ ಭಿನ್ನವಾದ ಸ್ವರೂಪ ನಿಸರ್ಗ, ಬದುಕು, ಅಸ್ಪೃಶ್ಯರು ಕಾದಂಬರಿಗಳಲ್ಲಿ ಕಂಡುಬರುತ್ತದೆ. ಅಂದರೆ ಈ ಕಾದಂಬರಿಗಳಲ್ಲಿ ಬರುವ ಪ್ರತಿಯೊಂದು ಪಾತ್ರವೂ ಜಾತಿ, ಲಿಂಗ, ವಯಸ್ಸು, ಅಧಿಕಾರ, ಶಿಕ್ಷಣದ ಯಾವ ತಾರತಮ್ಯವೂ ಇಲ್ಲದೆ ಅನ್ಯ ಭಾಷೆಯ ಪದಗಳನ್ನೂ ತಮ್ಮದೇ ಎನ್ನುವಷ್ಟರ ಮಟ್ಟಿಗೆ ಸಹಜವಾಗಿ ಬಳಕೆಗೊಂಡಿರುವುದನ್ನು ನೋಡಬಹುದು.

ಇವೆರಡಕ್ಕೂ ಭಿನ್ನವಾದ ಭಾಷಾ ಪ್ರಯೋಗ ಕಂಡುಬರುವುದು ಕುಸುಮಬಾಲೆ ಕಾದಂಬರಿಯಲ್ಲಿ ಅಂದರೆ ಈ ಕಾದಂಬರಿಯಲ್ಲಿ ಮಿಶ್ರಗೊಂಡಿರುವ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಮಿಶ್ರಪ್ರಯೋಗವನ್ನು ಲೇಖಕರು ಉದ್ದೇಶಪೂರ್ವಕವಾಗಿ ಲೇವಡಿಗೊಳಿಸುವುದುಕ್ಕಾಗಿಯೇ ಬಳಸಿಕೊಂಡಿದ್ದಾರೆ.

ಒಟ್ಟಿನಲ್ಲಿ ಸ್ವೀಕರಣ ಮತ್ತು ನುಡಿಮಿಶ್ರಣದಂತಹ ಪ್ರಕ್ರಿಯೆ ಬದುಕು ಕಾದಂಬರಿಯಲ್ಲಿ ಹೆಚ್ಚಾಗಿ ಕಂಡುಬಂದರೆ. ನುಡಿಪಲ್ಲಟದ ಪ್ರಕ್ರಿಯೆ ಹೆಚ್ಚಾಗಿ ಕಂಡುಬರುವುದು ಗ್ರಾಮಾಯಣ ಕಾದಂಬರಿಯಲ್ಲಿ. ಲೇಖಕರು ನುಡಿ ಬೆರಕೆಯನ್ನೇಕೆ ಬಳಸುತ್ತಾರೆ ನುಡಿಬೆರಕೆಯನ್ನು ಉಪಯೋಗಿಸಲು ಎರಡು ಅಥವಾ ಹೆಚ್ಚು ಭಾಷೆಗಳ ಉತ್ತಮ ಪರಿಜ್ಞಾನ ಇರಬೇಕಾಗುತ್ತದೆ. ಹಾಗಿದ್ದಲ್ಲಿ ಒಬ್ಬ ಭಾಷಿಗ ಒಂದು ವಿಶಿಷ್ಟ ಸಂದರ್ಭದಲ್ಲಿ ತನ್ನ ಯಾವುದೇ ಒಂದು ಭಾಷೆಯನ್ನು ನುಡಿ ಬೆರಸದೆ ಯಾಕೆ ಉಪಯೋಗಿಸಬಾರದು ಒಂದು ಅಥವಾ ಇನ್ನೊಂದು ಭಾಷೆಯನ್ನು ಬೆರಕೆಯಿಲ್ಲದೆ ಉಪಯೋಗಿಸುವುದರಿಂದ ಸಾಧಿಸಲಾಗದ ಪ್ರಯೋಜನಗಳು ನುಡಿ ಬೆರಕೆಯಿಂದ ಸಾಧಿತವಾಗುತ್ತವೆಯೇ ಭಾಷಾ ಮಿಶ್ರಣದ ಬಳಕೆಯಿಂದ ಕಾದಂಬರಿ ಹೆಚ್ಚು ಸಾಮಾಜಿಕ ಸಂವಹನ ಆಗುತ್ತದೆಯೇ ಎಂಬುದನ್ನು ಪ್ರಶ್ನಿಸಿಕೊಂಡಾಗ ದೊರೆಯುವ ಉತ್ತರ ಹೀಗಿದೆ.

ಪ್ರತಿಯೊಬ್ಬ ಲೇಖಕರಿಗೂ ತಮ್ಮ ಬರವಣಿಗೆ ಪ್ರತಿಯೊಬ್ಬ ಓದುಗರಿಗೂ ತಲುಪಬೇಕೆಂಬ ಬಯಕೆ ಇದ್ದೇ ಇರುತ್ತದೆ. ಹಾಗಾಗಿ ಒಬ್ಬ ಸೃಜನಶೀಲ ಲೇಖಕ, ಸಹೃದಯರಿಗೆ ಸಂವಹನವಾಗುವ ಯಾವ ಭಾಷೆಯನ್ನಾದರೂ ಸರಿ ಅದನ್ನು ಮಾಧ್ಯಮವನ್ನಾಗಿಸಿಕೊಳ್ಳುವ ಮೂಲಕ ಸಾಮಾನ್ಯ ಜನರಿಗೂ ಅರ್ಥವಾಗುವ ಭಾಷೆಯಲ್ಲಿ ಬರವಣಿಗೆ ಮಾಡುತ್ತಾನೆ. ಹಾಗೊಂದು ವೇಳೆ ಲೇಖಕ ಹೊಸ ಪದಗಳನ್ನು ಸೃಷ್ಟಿಸಿಕೊಂಡು ಬರವಣಿಗೆ ಮಾಡಿದರೆ ಅವು ಓದುಗರಿಗೆ ಸರಿಯಾದ ರೀತಿಯಲ್ಲಿ ಅರ್ಥವಾಗದೇ ಇರಬಹುದು. ಅಷ್ಟೇ ಯಾಕೆ ದಿನಬಳಕೆಯಲ್ಲಿಲ್ಲದ ಕನ್ನಡದ್ದೇ ಆದ ಒಂದು ಪದವನ್ನು ಬಳಸಿದಾಗಲೂ ಇಂತಹ ಪರಿಸ್ಥಿತಿ ಎದುರಾಗುತ್ತದೆ. ಉದಾಹರಣೆಗೆ:

ಹೊತ್ತಿಗೆ - ಅಚ್ಚಗನ್ನಡ ಪದ

ಪುಸ್ತಕ/ಬುಕ್ - ಇಂಗ್ಲಿಷ್ ಪದ

ಓದುಗರಿಗೆ ಬುಕ್ ಅಥವಾ ಪುಸ್ತಕ ಎಂಬುದು ಸಲೀಸಾಗಿ ಅರ್ಥವಾದಷ್ಟು, ಹೊತ್ತಿಗೆ ಎಂಬುದು ಅರ್ಥವಾಗಲಾರದು. ಹೀಗಾಗಿ ಯಾವ ಭಾಷೆಯ ಪದವಾದರೂ ಸರಿ, ತನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ

ಈಗಾಗಲೇ ರೂಢಿಯಲ್ಲಿರುವ ಪದವನ್ನು ಬಳಸುವುದರಿಂದ ಓದುಗರಿಗೆ ತಟಕ್ಕನೆ ತೊಂದರೆ ಅಥವಾ ಗೊಂದಲವಿಲ್ಲದೆ ಅರ್ಥವಾಗುತ್ತದೆ. ಆದುದರಿಂದ ಲೇಖಕರು ಆಯಾ ಪ್ರದೇಶದಲ್ಲಿ ಪ್ರಸಿದ್ಧವಿರುವ ಹಾಗೂ ಬಳಕೆಯಲ್ಲಿರುವ ಭಾಷೆಯನ್ನೇ ಬರವಣಿಗೆಯಲ್ಲಿ ಬಳಸಿಕೊಳ್ಳುತ್ತಾರೆ.

ಒಬ್ಬ ಸೃಜನಶೀಲ ಲೇಖಕ ತನ್ನ ಬರವಣಿಗೆಯಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಚಹರೆಯಾಗಿ ಭಾಷೆಯನ್ನು ಪ್ರತಿಬಿಂಬಿಸುವಲ್ಲಿ ಆಯಾ ಪ್ರದೇಶ ಹಾಗೂ ಸಾಮಾಜಿಕ ವರ್ಗಗಳಿಗನುಗುಣವಾಗಿ ಭಾಷೆಯನ್ನು ನಿರೂಪಿಸಬೇಕಾಗುತ್ತದೆ. ಹೀಗಾಗಿ ವಿವಿಧ ಸಾಮಾಜಿಕ ವರ್ಗಗಳ ಭಾಷೆಯನ್ನು ನಿರೂಪಿಸುವಲ್ಲಿ ನುಡಿಬೆರಕೆಗೆ ಮೊರೆ ಹೋಗಬೇಕಾಗುತ್ತದೆ. ಒಂದು ಪಾತ್ರ ಭಾಷೆಯೊಂದನ್ನು ಬಳಸುತ್ತಿದ್ದಂತೆ ಅದು ಇಂತಹ ಪ್ರದೇಶಕ್ಕೆ ಹಾಗೂ ಸಾಮಾಜಿಕ ವರ್ಗಕ್ಕೆ ಸೇರಿದ್ದು ಎಂದು ಸಲೀಸಾಗಿ ಹೇಳಲು ಸಾಧ್ಯವಾದಂತೆ, ಒಂದೇ ಭಾಷೆಯಿಂದ ನಿರೂಪಿತಗೊಂಡ ಪಾತ್ರಗಳಿಂದ ಇದನ್ನು ನಿರ್ವಹಿಸುವುದು ಕಷ್ಟಸಾಧ್ಯ.

ಸಂಸ್ಕೃತ, ಮರಾಠಿ, ಉರ್ದು, ಇಂಗ್ಲಿಷ್ ಮಿಶ್ರಣದ ಸಲುವಾಗಿ ಕನ್ನಡದಲ್ಲಿ ಹಲವಾರು ಶೈಲಿಸ್ತರಗಳು ಬಳಕೆಯಲ್ಲಿವೆ. ಶಿಷ್ಟ ಕನ್ನಡದ ಲಿಖಿತ ಶೈಲಿಯಲ್ಲಿ ಸಂಸ್ಕೃತದ ಅಂಶಗಳು ಹೇರಳವಾಗಿ ಕಂಡುಬರುತ್ತವಾದರೂ ಅದನ್ನು ಯಾವುದೇ ಪ್ರಾಂತ್ಯಕ್ಕಾಗಲೀ ಅಥವಾ ಸಮುದಾಯಕ್ಕಾಗಲೀ ಸೀಮಿತಗೊಳಸಲಾಗುವುದಿಲ್ಲ. ಆದರೆ ಉರ್ದು ಮಿಶ್ರಿತ (ಉರ್ದುವಿನಂತೆ ಮರಾಠಿ, ಇಂಗ್ಲಿಷ್, ತೆಲುಗು, ತುಳು ಮೊದಲಾದವು) ಲಿಖಿತ ಶೈಲಿ ಕನ್ನಡದ ಒಂದು ಸಾಂದರ್ಭಿಕ ಪ್ರಭೇದವಾಗಿ ಕೆಲಸಮಾಡುತ್ತದೆ. ಇದಕ್ಕೆ ಕಾದಂಬರಿಯಿಂದಲೇ ಉದಾಹರಣೆಗಳನ್ನು ನೋಡುವುದಾದರೆ, ಗ್ರಾಮಾಯಣ ಕಾದಂಬರಿಯಲ್ಲಿ ಬಳಕೆಗೊಂಡಿರುವ ಉರ್ದು, ಕಾನೂನು, ನ್ಯಾಯಾಲಯಗಳಿಗಾಗಿ ಬಳಸುವ ಉರ್ದು ಮಿಶ್ರಿತ ಕನ್ನಡವಾದರೆ, ಬದುಕು ಕಾದಂಬರಿಯಲ್ಲಿ ಬಳಕೆಗೊಂಡಿರುವ ಉರ್ದು ಕನ್ನಡದ ಒಂದು ಪ್ರಾದೇಶಿಕ ಪ್ರಭೇದದ ಉರ್ದುವಾಗಿದೆ. ಹಾಗೆಯೇ ಕುಸುಮಬಾಲೆ ಕಾದಂಬರಿಯಲ್ಲಿ ಬರುವ ಹಳೇ ಪೈಕದ ಮುಸ್ಲಿಮರು, ವೈಶಾಖ ಕಾದಂಬರಿಯಲ್ಲಿ ಬರುವ ಗೋಸುಸಾಬಿ ಮೊದಲಾದ ಮುಸ್ಲಿಂ ಪಾತ್ರಗಳು ಬಳಸುವ ಉರ್ದು ಮಿಶ್ರಿತ ಕನ್ನಡ ಜಾತಿಸೂಚಕವಾದುದಾಗಿದೆ.

ಸ್ವೀಕರಣ ಮತ್ತು ನುಡಿಬೆರಕೆ

ಎರಡು ಸ್ವತಂತ್ರ ಭಾಷೆಗಳ ನಡುವೆ ಹಾಗೂ ಎರಡು ಬೇರೆ ಬೇರೆ ಉಪಭಾಷೆಗಳ ನಡುವೆ ನಡೆಯುವ ಶಬ್ದ ಸ್ವೀಕಾರ ಮತ್ತು ಶಬ್ದ ಸ್ವೀಕೃತ ಪ್ರಕ್ರಿಯೆಗೆ ಭಾಷಾ ಸ್ವೀಕರಣ ಎಂದು ಕರೆಯುತ್ತಾರೆ. ಈ ಬಗೆಯ ಭಾಷಾ ಸ್ವೀಕರಣದಲ್ಲಿ ಶಬ್ದಗಳನ್ನು ಕೊಡುವ ಭಾಷೆಯನ್ನು 'ಕೊಡುಗೆ' ಭಾಷೆಯೆಂದೂ, ಸ್ವೀಕರಿಸುವ ಭಾಷೆಯನ್ನು 'ಪಡೆಯುವ' ಭಾಷೆಯೆಂದೂ ಕರೆಯಲಾಗುತ್ತದೆ. ಕೊಡುವ ಭಾಷೆಯಿಂದ ಪಡೆಯುವ ಭಾಷೆಗೆ ಬರುವ ಶಬ್ದಗಳು ಪಡೆಯುವ ಭಾಷೆಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತವೆ. ಭಾಷಾ ಸ್ವೀಕರಣದಲ್ಲಿ ಶಬ್ದಗಳು ಭಾಷೆಯಿಂದ ಭಾಷೆಗೆ ಅಥವಾ ಉಪಭಾಷೆಯಿಂದ ಉಪಭಾಷೆಗೆ ಯಾವ ವ್ಯತ್ಯಾಸವನ್ನು ಹೊಂದದೆ ಯಥಾವತ್ತಾಗಿ ಹಾಗೆಯೇ ಬಂದು ಸೇರಬಹುದು ಅಥವಾ ಅವರ ಶಬ್ದಗಳಿಗೆ ಸಂವಾದಿಯಾಗಿ ನಮ್ಮ ಶಬ್ದಗಳನ್ನು ಬಳಸಿಕೊಳ್ಳಬಹುದು. ಇಲ್ಲದೆ ಶಬ್ದಗಳ ಅರ್ಧಭಾಗವನ್ನು ಸ್ವೀಕರಿಸಿ ಉಳಿದರ್ಧ ಭಾಗವನ್ನು ಪಡೆಯುವ ಭಾಷೆಯಿಂದಲೇ ಪೂರೈಸಿಕೊಳ್ಳಬಹುದು.

ಹೀಗೆ ಯಾವುದಾದರೂ ಎರಡು ಭಾಷೆ ಅಥವಾ ಒಂದೇ ಭಾಷೆಯ ಎರಡು ಉಪಭಾಷೆಗಳ ನಡುವೆ ನಡೆಯುವ ಶಬ್ದಗಳ ವ್ಯಾಕರಣಾಂಶಗಳ ಕೊಡು ಕೊಳೆಯನ್ನು ಸ್ವೀಕರಣ ಎಂದು ಕರೆಯುವರು. ಆದರೆ ನುಡಿಬೆರಕೆ ಇದಕ್ಕಿಂತಲೂ ಸ್ವಲ್ಪ ಭಿನ್ನ ಪ್ರಕ್ರಿಯೆ. ಒಂದು ಭಾಷೆಯ ಪದ ಮತ್ತು ವಾಕ್ಯಗಳನ್ನು ಆಡುವ, ಬರೆಯುವ, ಪ್ರತಿಕ್ರಿಯಿಸುವ ಸಂದರ್ಭಗಳಲ್ಲಿ ಬೇರೆ ಭಾಷೆಯ ಪದಗಳನ್ನು ಸೇರಿಸುವ ಒಂದು ಪ್ರಕ್ರಿಯೆಯನ್ನು ನುಡಿಬೆರಕೆ ಎಂದು ಕರೆಯುತ್ತೇವೆ. ಇದನ್ನು ಆಯ್ಕೆ ಮಾಡಿಕೊಂಡಿರುವ ಕಾದಂಬರಿಗಳಿಂದ ಉದಾಹರಿಸುವುದಾದರೆ,

"ಆಚಾರೆಪ್ಪ ಗಾತ ಅಗೇತರಿ. ದಾದಾನ್ನ ಮಾಮಲೇದಾರರು ಜೇಲಿಗೆ ಕಳಿಸಾಕ ಹುಕುಂ ಕೊಟ್ಟಾರ್ರೀ!" ಎಂದು ಗಾಬರಿಯ ದನಿಯಲ್ಲಿಯೇ ಹೇಳಿದ.

"ಯಾಕೋ? ಹಾವನೂರಿನವರು ಖಟ್ಲೆ ನಡೆಸಿ ಸಾಕ್ಷಿ ಪುರಾವೆ ಮಾಡಿಸಿದರೇನು?" ಆಚಾರ್ಯರಿಗೆ ಇದೆಲ್ಲ ಅನಿರೀಕ್ಷಿತವಾಗಿದ್ದರಿಂದ ಆಶ್ಚರ್ಯಗೊಂಡು ಕೇಳಿದರು.

"ಇಲ್ಲರಿ, ಖಟ್ಲೆ ಪುಕಾರಿಸಿದಾಗ ಅವರೊಬ್ಬರೂ ಚಾವಡಿ ಸನ್ಯಾಕಸೈತ ಇದ್ದಿಲ್ಲರಿ. ದಾದ, ಜಿನ್ನಪ್ಪ ಮಾತ್ರ ಹಾಜರ ಇದ್ದರರಿ. ಮಾಮಲೇದಾರರು ಏನೇನೋ ಕೇಳಾಣಾ, ಜಿನ್ನಪ್ಪ ತಾ ದಾದಾಗ ಜಾಮೀನ ಆದದ್ದನ್ನ ರದ್ದು ಮಾಡ್ರಿ ಅಂತ ಹೇಳಿದನಂತರಿ. ಜಾಮೀನ ರದ್ದು ಮಾಡೇತಿ ಆರೋಪಿನ್ನ ಜೇಲಿಗೆ ಕಳಸಿರಿ, ಅಂತ ಮಾಮಲೇದಾರರು ಹೇಳಿ ದಾದನ್ನ ಪೋಲಿಸರ ತ್ಯಾಬೇ ಮಾಡ್ಯಾರಂತರಿ". (ಪು. ೨೫೬ ಗ್ರಾಮಾಯಣ)

ಮೇಲಿನ ನಿದರ್ಶನದಲ್ಲಿ ಜೇಲು, ಹುಕುಂ, ಖಟ್ಲೆ, ಜಾಮೀನು, ಪೋಲೀಸು, ತ್ಯಾಬೇ ಎಂಬಂತಹ ಅನ್ಯ ಭಾಷೆಯ ಪದಗಳು ಕನ್ನಡಕ್ಕೆ ಸ್ವೀಕರಿಸಿರುವುದರ ಜೊತೆಗೆ ಅವುಗಳನ್ನು ಕನ್ನಡದೊಂದಿಗೆ ಸಹಜ ಪದಗಳೆಂಬಂತೆ ಬಳಸಲಾಗಿದೆ. ವಾಕ್ಯಗಳಲ್ಲಿ ಅನ್ಯ ದೇಶೀಯ ಪದಗಳ ಬಳಕೆಯಾಗಿದೆಯೇ ಹೊರತು. ವಾಕ್ಯಗಳ ನಿಯಮ ಅಥವಾ ವ್ಯಾಕರಣಾತ್ಮಕ ನಿಯಮ ಬೇರೆಯಾಗಿಲ್ಲ ಎಂಬುದು ಗಮನಾರ್ಹ ಅಂಶ.

ಮೇಲ್ನೋಟಕ್ಕೆ ಭಾಷಾ ಮಿಶ್ರಣ ಸ್ವೀಕರಣದ ಒಂದು ಪ್ರಭೇದದಂತೆ ಕಾಣುತ್ತದೆ. ಆದರೆ ಸ್ವೀಕರಣಕ್ಕೂ ಮತ್ತು ನುಡಿ ಬೆರಕೆಗೂ ಹಲವು ಮಾರ್ಮಿಕವಾದ ವ್ಯತ್ಯಾಸಗಳಿವೆ. ಅವುಗಳನ್ನು ಹೀಗೆ ಗುರುತಿಸಬಹುದು.

ಸ್ವೀಕರಣ ಸಾಮಾನ್ಯವಾಗಿ ಒಂದು ಭಾಷೆಯ ಅರ್ಥದ ತೆರಪುಗಳನ್ನು ತುಂಬಲು ಬರುತ್ತದೆ. ಉದಾಹರಣೆಗೆ:

"ವಂದು ಸ್ಕೆಲಟನನ್ನು ತರಿಸಿ ಅದಕ್ಕೆ ನಾಗಿರೆಡ್ಡಿಯ ವುಡುಪನ್ನು ತೊಡಿಸಿ ಯದುರಿಗೆ ಮುರುಕು ಕುರುಚಿಯ ಮ್ಯಾಲ ಕುಂಡರಿಸಿಟ್ಟುಕೊಂಡನು. ಕೂಡಲೆ ಕೇಂದ್ರ ಕಾರಾಗೃಹಕ್ಕೆ ಹೋಗಿ ನಾಗಿರೆಡ್ಡಿಯ ಸಹಚರರನ್ನು ಕಂಡು ರೆಡ್ಡಿಯ ಗುಣಗಾನ ಮಾಡಿ ಬಿಡುಗಡೆ ಮಾಡಿದನು". (ಪು. ೨೧೮ ಅರಮನೆ)

"ಮಾಮಲೇದಾರ ಕೃಷ್ಣಾರಾಯರು ಅವನೆಡೆಗೆ ಒಂದು ಬಿರುನೋಟವನ್ನು ಬೀರಿದರು. ಮೇಜಿನ ಮೇಲಿಂದ ಒಂದು ಹಾಳೆಯನ್ನು ಮುಂದೆ ಸರಿಸುತ್ತ, "ಶೇಷಪ್ಪ ನಿನ್ನ ಕೆಲಸದಿಂದ ಸಸ್ಪೆಂಡ ಮಾಡೇದ ಅಂತ

ಪ್ರಾಂತ ಸಾಹೇಬರು ಆರ್ಡರ ಮಾಡ್ಯಾರ. ತಗಾಯಿ ಸಾಲ ಊರ ಜನರಿಗೆ ಸರಿಯಾಗಿ ಮುಟ್ಟಿಸಿಲ್ಲ, ಮತ್ತೆ ಬರಗಾಲ ಪರಿಹಾರಕ್ಕಂತ ಅರ್ಜಿ ಬರೆಸಿ, ಊರ ಜನರಿಂದ ಅದರ ಮ್ಯಾಲೆ ಸಹಿ ತಗೊಂಡು, ಆ ಅರ್ಜೀ ಒಳಗ ಶ್ಯಾಮರಾಯರ ನೇಮಣೂಕಿ ಆಗಬಾರದೂ ಅಂದ ಬರೆಸೀದಿ ಅಂತ ನಿನ್ನ ಮ್ಯಾಲೆ ಆರೋಪ ಅದ. ಖಟ್ಲೆ ಹಾಕಬೇಕೂ ಅಂತ ಆರ್ಡರ ಮಾಡ್ಯಾರ. ದಪ್ತರ ತರಿಸಿ, ಈಗಿಂದೀಗ ಶ್ಯಾಮರಾಯರಿಗೆ ಚಾರ್ಜು ಕೊಡಿಸಬೇಕು ಅಂತ ನಮಗೆ ತಿಳಿಸ್ಯಾರ. ಅದಕ ಈಗ್ಗ ದಪ್ತರ ತರಿಸಬೇಕಾಗೇದ" ಎಂದು ಬಿರುಸಿನ ದನಿಯಲ್ಲಿ ಶೇಷಪ್ಪನ ಹೃದಯ ಭೇದವಾಗುವಂತೆ ನುಡಿದರು. (ಪು. ೨೮೮ ಗ್ರಾಮಾಯಣ)

ಕೊಟ್ಟಿರುವ ಎರಡೂ ನಿದರ್ಶನಗಳಲ್ಲಿ ಸ್ಕೆಲಟನ್ನು, ಕುರ್ಚಿ, ಕೇಂದ್ರ ಕಾರಾಗೃಹ, ಬಿಡುಗಡೆ, ಮೇಜು, ಸಸ್ಪೆಂಡ, ಆರ್ಡರ್, ಅರ್ಜಿ, ಎಂಬ ಸ್ವೀಕರಣದ ಪದಗಳು ಕನ್ನಡ ಭಾಷೆಯಲ್ಲಿ ಅರ್ಥದ ತೆರಪಗಳನ್ನು ತುಂಬುವ ಕೆಲಸ ಮಾಡಿವೆ.

ಆದರೆ, "ನುಡಿಬೆರಕೆಯಲ್ಲಾದರೆ ಮಿಶ್ರಮಾಡಿದ ಪದ, ಪದಪುಂಜಗಳಿಗೆ ಸಂವಾದಿಯಾದ ಸಮರ್ಪಕವಾದ ಸಮಾನಾರ್ಥ ಪದಗಳು ಭಾಷೆಯಲ್ಲಿ ಇದ್ದರೂ ಮತ್ತೊಂದು ಭಾಷೆಯ ತುಣುಕುಗಳನ್ನು ಅವುಗಳ ಸ್ಥಾನದಲ್ಲಿ ಉಪಯೋಗಿಸಲಾಗುತ್ತದೆ". (ಡಾ. ಎಸ್.ಎಸ್. ಶ್ರೀಧರ, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪು. ೪) ಇದಕ್ಕೆ ಕಾದಂಬರಿಯಿಂದಲೇ ಉದಾಹರಣೆ ನೋಡುವುದಾದರೆ;

* "ಸೆರೆಮನೇಲಿದ್ದ ನಾಗಿರೆಡ್ಡಿಯನ್ನು ಕಲವಡಾನಿಕಿ ಥಾಮಸು ಮನ್ರೋ ಸಾಹೇಬನು ಕಡಪಾದಿಂದ ಬಳ್ಳಾರಿ ಪಟ್ಟಣದ ಕಡೇಕ ಬಯಲ್ದೇರಿದ್ದನೆಂಬಲ್ಲಿಗೆ ಸಿವಸಂಕರ ಮಾದೇವ್ಸ... (ಪು. ೨೨೯ ಅರಮನೆ)

* "....ಕೂಸ ಹೋಯಿತಂತೆ"

"ಹ್ದಾಂ! ಯಂತದು. ನೀನು ಹೇಳುವುದು! ಎಂದರು ಗೌರಮ್ಮ. ನಂಗೆ ಸುಳ್ಳು ಹೇಳಲಿಕ್ಕೆ ಮರುಳ ಸೋಂಕ?"

ಕೂಸ ಸತ್ತ ಸುದ್ದಿ ಕೇಳಿ ಮಕ್ಕಳು, ಪಾರ್ತಕ್ಕ, ಎಲ್ಲರೂ ಹೊರಗೆ ಬಂದರು. ಹೊಟ್ಟೆಯೊಳಗೆ ಎರಡು ಮಕ್ಕಳಿದ್ದುವಂತೆ. ಎರಡೂ ಮಕ್ಕಳೂ ತೋರ - ತೋರ. ಅಮ್ಮ ಕೂಸ ತಿಂದದ್ದು ಯಂತದ್ದು? ತಣುವು ತಂಪು ಮಾಡಿಕೊಂಡವರ ಮಕ್ಕಳೆಲ್ಲ ಇಲಿಮರಿಯ ಹಾಂಗೆ ಹೊಟ್ಟೆಗಿಲ್ಲದವರು ಹೆರುವುದು ಹೆರಲಿಕ್ಕಾಗದಂತಹ ಮಕ್ಕಳನ್ನು ಏನಂತೀರಿ?"

"ನಿನ್ನ ರಾಗ ಸಾಕು ಆದದ್ದೆಂತದು ಹೇಳು"

"ಇನ್ನು ಆದದ್ದು ಹೇಳಿ ಫಲವುಂಟೇ? ಎರಡು ಮಕ್ಕಳೂ ಭೂಮಿಗೆ ಬಿದ್ದ ಮೇಲೆ ಕೂಸಂಗೆ ಕೊಡಪಾನಗಟ್ಟಲೆ ಮೈಯಿಂದ ಹೋಗಲಿಕ್ಕೆ ಸುರುವಾಯಿತಂತೆ. ಆ ಅವಸ್ಥೆಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರೆ ಎಷ್ಟು ಹೊತ್ತಾದರೂ ಡಾಕ್ಟರು ಬರಲಿಲ್ಲವಂತೆ. ಕಡೆಗೆ ಮಿಡಬಾಯಿ ಹೋಗಿ ನೋಡಿದಾಗ ಎಲ್ಲ ಮುಗಿದಿತ್ತಂತೆ....."

ಶಿವ "ಅದು ಯಾಕಂತೆ ಡಾಕ್ಟರು ಬರಲಿಲ್ಲ? ಅವರು ಧರ್ಮಾಸ್ಪತ್ರೆಯ ಡಾಕ್ಟರಲ್ಲವೆ? ಬರಲೇಬೇಕು. ಇಲ್ಲವಾದರೆ ಅವರ ಮೇಲೆ ನಂಬ್ರ ಮಾಡಬಹುದು. ಎಂದ ಆವೇಶದಿಂದ.

"ಶಿವಯ್ಯ ನೀವು ಹೇಳುತ್ತೀರಿ. ಕಾಸು ಕೈಯಲಿಲ್ಲದೆ ಆಸ್ಪತ್ರೆ ಸೇರಿದವರು ಅಲ್ಲಿಂದ ವಾಪಸು ಬರುವುದೆಂತ ಉಂಟ? ಕೋರ್ಟಿಗೆ ಹೋಗಿ ನಂಬ್ರ ಮಾಡುವುದೆಂತ ಉಂಟ? ಯಾವ ಅಪ್ಪ ಸತ್ತ ವಕೀಲ ಇವರ ನಂಬ್ರ ತೆಗೆದುಕೊಳ್ಳುತ್ತಾನೆ ಅಂತ ಬೇಡವ?" ಎಂದವಳು. ತುಸು ತಡೆದು "ಆ ಡಾಕ್ಟರಿಗೆ ಬೆಳಿಗ್ಗೆ ಎದ್ದು ಪಾರಾಯಣ, ಜಪ ಜೋರಂತೆ. ಹೇಳಿ-ಕೇಳಿ ಇದು ಕೂಸ. ಇದನ್ನು ಮುಟ್ಟಿಯೇ ಬಿಟ್ಟಾರ ಅವರು? ಬೈಸರಿಯ (ಸಂಜೆಯ) ಮೇಲೆ ಆಸ್ಪತ್ರೆ ಕಸಗುಡಿಸುವ ಕೊರಾತಿಯಾದರೂ ಆದೀತು ಅವರಿಗೆ ಅಂತ ಇಟ್ಟುಕೊಳ್ಳಿ" ಎಂದಳು. (ಪು. ೯೧-೯೨ ಅಸ್ಪೃಶ್ಯರು)

ಮೇಲಿನ ಎರಡು ಉದಾಹರಣೆಗಳಲ್ಲಿನ ಕಲವಡಾನಿಕಿ, ಬಯಲ್ದೇರಿದನು, ನಂಬ್ರ, ಧರ್ಮಾಸ್ಪತ್ರೆ ಎಂಬಂತಹ ಅನ್ಯ ಭಾಷೆಯ ಪದಗಳಿವೆಯಾದರೂ ಈ ಪದಗಳು ಕನ್ನಡದಲ್ಲಿ ಅಭಿವ್ಯಕ್ತಿ ಪಡಿಸಲಾಗದ ಅರ್ಥವೇನನ್ನೂ ಹೇಳುವುದಿಲ್ಲ ಬದಲಿಗೆ, "ಮಿಶ್ರಗೊಂಡ ಅಂಶಗಳು, ಸ್ವೀಕರಿಸುವ ಭಾಷೆಯಲ್ಲಿನ ಅರ್ಥದ ತೆರಪುಗಳನ್ನು ತುಂಬುವ ಕೆಲಸವನ್ನು ಮಾಡುವುದರ ಜೊತೆಗೆ ಅದೇ ಭಾಷೆಯಲ್ಲಿರುವ ಸಾಮಾನ್ಯವಾಗಿ ಬಳಕೆಯಲ್ಲಿರುವ ಪದಗಳೊಂದಿಗೆ ಸಹ ಅಸ್ತಿತ್ವವನ್ನು ಸಾಧಿಸಿಕೊಳ್ಳುವ ಮೂಲಕ ಒಂದು ಹೆಚ್ಚುವರಿ ಅರ್ಥವನ್ನು ರೂಪಿಸಿಕೊಡುತ್ತವೆ" ಎಂಬ ಡಾ. ಕೆ.ವಿ. ನಾರಾಯಣರ (ಡಾ. ಕೆ.ವಿ. ನಾರಾಯಣ, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪು. ೩೦) ಅಭಿಪ್ರಾಯವು ಉಲ್ಲೇಖನೀಯವಾದುದಾಗಿದೆ.

ಒಂದು ಭಾಷೆಯು ಸ್ವೀಕರಿಸುವ ಪರಿಭಾಷೆಯ ಅಂಶಗಳು ಸಾಮಾನ್ಯವಾಗಿ ಪದದ ಸ್ತರದಲ್ಲಿ ಇರುತ್ತವೆಯೇ ಹೊರತು, ಪದಕ್ಕಿಂತ ಹೆಚ್ಚು ದೀರ್ಘವಾದ ಅಥವಾ ಸಂಕೀರ್ಣವಾದ ರಚನೆಯುಳ್ಳ ಘಟಕ ಗಳಾಗಿರುವುದಿಲ್ಲ. ಉದಾಹರಣೆಗೆ,

* "......ಇವ ನನ್ನೂ ಅಲ್ಲ; ನಮ್ಮ ಅಬಚೇವ ಇದಾವ. ಈಗ ಕಿವ್ಯಾಗ ಯಾವ ಇಲ್ಲಂತ ನಾಲ್ಕ ದಿನಾ ಕೊಟ್ಟಿದಾಳು..." (ಪು. ೨೮೦ ನಿಸರ್ಗ)

* ರತ್ನವ್ವ "ಅ್ಹಾ? ಹುಜರು ಕಳೆದಳು....?" ತಾರಕ್ಕನ ಕಡೆಗೆ ಹೊರಳಿ

  "ಹೋಂದ ಯಾನ್ಕ? ಎಲ್ಲಿ ಕಳದಿ?" ಎಂದು ಕೇಳಿದಳು. (ಪು. ೧೭ ನಿಸರ್ಗ)

* "ಸೀತು ಗೆಂಡಕ್ಕೆ ಕರೆದುಕೊಂಡು ಹೋಗುತ್ತೇನೆಂತೆ ಹೇಳಿದ್ದಾಳೆ. ಅಮ್ಮ ಹೋಗುವುದ ನಾನು....?" (ಪು.೧೦೧ ಅಸ್ಪೃಶ್ಯರು)

* ಶೇಷಪ್ಪನಿಗೆ ಸಿಟ್ಟು ಬಂತು, ಜಿನ್ನಪ್ಪನನ್ನು ದುರುದುರು ನೋಡುತ್ತ ಎಡಗಡೆಗೆ ಕೈ ಬೀಸುತ್ತ

"ಜಾಮೀನಿನ ಮ್ಯಾಲೆ ಬಿಡಲಿಕ್ಕೆ ಅರ್ಜಿ ಬರದದ. ಅದಕ್ಕ ಎಂಟಾಣೆ ತಿಕೀಟ ಹಚ್ಚಬೇಕು. ಸಾಗಸರಿ ಅಂದರ ಏನ ನನ್ನ ತಲಿ ಸಾಗಸಲಿ?" ಎಂದು ಅಕ್ಕಸದಿಂದಲೇ ನುಡಿದ. (ಪು. ೧೯೪ ಗ್ರಾಮಾಯಣ)

ಮೇಲಿನ ಉದಾಹರಣೆಗಳಲ್ಲಿ ಬಂದಿರುವ ಅನ್ಯ ಭಾಷೆಯ ಪದಗಳಾದ ಅಬಚೇವ ಹುಜರು, ಗೆಂಡ, ಜಾಮೀನು, ಅರ್ಜಿ, ತಿಕೀಟು, ಮೊದಲಾದವು ಪದದ ಸ್ತರದಲ್ಲಿರುವುದು ಸ್ಪಷ್ಟವಾಗುತ್ತದೆ. ಆದರೆ ಭಾಷಾ ಮಿಶ್ರಣದಲ್ಲಿ ಕೇವಲ ಪದವಷ್ಟೇ ಅಲ್ಲ ಪದಪುಂಜಗಳೂ ಬಳಕೆಯಾಗುತ್ತವೆ. ಉದಾಹರಣೆಗೆ,

"....ಇಕೀಗಿ ಯಾರೂ ಹೇಳವ್ರು ಕೇಳವ್ರು ಇಲ್ದಂಗಾಗ್ಯಾದೋ ಮಗಾ... ನಿಮ್ಮಪ್ಪನ ಲಾಡಕಿ ಭಾಳಾಗ್ಯಾದ ನೋಡು ಅಕೀಗೀ.... "ಲಾಡಕಿ ಬೇಟಿ ಭಿಕಾರಿ ಚೋಟಿ" ಅಂತ ಅದೇನೋ ಅಂತಾರಲ್ಲ ಆ ತುರುಕರ ಮಾತನ್ಯಾಗ. ಹಾಂಗ್ ಆಗ್ಯಾಳ ನೋಡು ನಿನ್ತಂಗಿ. ಅಕೀಗಿ ಒಂದೀಟು ತಾಕೀಜ ಮಾಡ್ರೀ ಅಂದಳು. ಫಾತರೂ ಗೊಳ್ಳನೆ ನಕ್ಕುಬಿಟ್ಟನು. "ನನ್ತಿಂಗಿ ಅಂದ್ರ ಏನಂತ ತಿಳ್ಕೊಂಡಿದ್ದೇಯವ್ವಾ? ರತನದ ಹಳ್ಳಾ, ಹವಳದ ಗುಡ್ಡಾ, ಮುತ್ತಿನ ಮಣಿ ಅದಾಳಕಿ. "ಲಾಖೋಮೆ ಏಕ್" ಅದಾಳ ನನ್ತಿಂಗಿ .....ನೀ ಅಕಿನ ಕಾಳಜಿ ಬಿಡು. ಇನ್ನಾ ಸಣ್ಣಕ್ಕಿ. ಹಕ್ಕಿಹಂಗ ಹಾರಾ, ಚಿಗರಿಯಂಗ ಓಡಾ, ನವಿಲಿನಂಗ ಕುಣ್ಯಾ, ಕೋಗಿಲದಂಗ ಹಾಡಾ ವಯಸ್ಸಿದೂ .....ಅಕಿನ ಮನಸಿಗೆ ಬಂದಂಗ ಇರ್ಲಿ ಬಿಡು....." ಅಂದನು.

ಹೊಂಯಿಂದಪಾ ಫತರೂ... ಅಕಿಯೇನೂ ರತ್ನದ ಹಳ್ಳನೇ ಖರೇ. ಆದರನೂ ರತನಕೊ ಜತನ ಕರೊ... ಅಂತಾರಲ್ಲ ಹಾಂಗ ಆಕೀಗಿ ಭಾಳ ಜತನದಿಂದ ನೋಡ್ಕೋಬೇಕಪ್ಪಾ ನೀವೂ.... ಇವತ್ತ ನಾಳಾ ದಿನಗೋಳು ಖರಾಬವಾನೋ ಮಗಾ" ಅಂದಳು. "ಏನಾಗಲ್ಲ ಬೀಡೇ ಯವ್ವಾ..... ನಮ್ಮ ಕಾಶಮ್ಮಂದ್ರ ಖರೇ ಭಂಗಾರಂತ ತಿಳ್ಕೋ. ಈಗ ನನಗ ಹೊಟ್ಟೆಗೀಟುನ್ಯಾರಿ ಕುಡ್ತ್ಯಾ ಇಲ್ಲಾ?" ಕೇಳಿದ (ಪು. ೯೦ ಬದುಕು)

ಮೇಲಿನ ಉದಾಹರಣೆಗಳ ಭಾಷಾ ಮಿಶ್ರಣದಲ್ಲಿ ಲಾಡಕಿ ಬೇಟಿ, ಬಿಕಾರಿ ಚೋಟಿ, ಲಾಕೋಮೆ ಏಕ, ರತನ್ ಕೋ ಜತನ ಕರೋ ಎಂಬಂತಹ ಪದ ಪುಂಜಗಳೂ ಬಳಕೆಯಾಗಿರುವುದನ್ನು ನೋಡಬಹುದು. ಅಂದರೆ ಭಾಷಾಮಿಶ್ರಣದಲ್ಲಿ ಕೇವಲ ಪದವಷ್ಟೇ ಮಿಶ್ರವಾಗುವುದಿಲ್ಲ. ಬದಲಿಗೆ ಪದಪುಂಜವೂ ಮಿಶ್ರಗೊಳ್ಳುತ್ತದೆ ಎಂಬುದು ಗಮನಾರ್ಹ ಅಂಶ.

ಸ್ವೀಕೃತ ಪದಗಳು ಒಂದು ಸೀಮಿತ ಪಟ್ಟಿಗೆ ಸೇರಿದವುಗಳಾಗಿರುತ್ತವೆ. ಅಂದರೆ, ಸ್ವೀಕರಣ ಪದಗಳು ಸಾಮಾನ್ಯವಾಗಿ ನಾಮಪದಗಳು, ಗುಣವಾಚಕಗಳು ಮತ್ತು ಕ್ರಿಯಾಪದ ಪುಜಂಗಳಾಗಿರುತ್ತವೆಯೇ ಹೊರತು ಸರ್ವನಾಮಗಳಾಗಲೀ, ಸಂಖ್ಯಾವಾಚಕಗಳಾಗಲೀ ಆಗಿರುವುದಿಲ್ಲ. ಉದಾಹರಣೆಗೆ

"ಏನ ಮಾಡೋದು ಆಚಾರಸ್ವಾಮೀ, ಅವರಿಲ್ಲೆ ಬಂದರ ವಾಡೇದೊಳಗ ಕಾಲಿಡದಂಥಾ ಪರಿಸ್ಥಿತಿ ಅದ. ಸ್ವಂತ ರೈತರೇ ಅವರ ಕೈಯಾಗಿಲ್ಲ. ಪಡದಪ್ಪನ ಭುಲತಾಪಿಯಿಂದ ಬಾಪುಸಾಹೇಬ ಅವರಿಗೆ ಭೂಮಿ ಮತ್ತು ವಾಡೇದ ಕಬಜಾ ಕೊಡಲಿಕ್ಕೆ ಸಾಫ ಒಲ್ಲೆಂದಾಗ, ಆ ಹೆಣ್ಣುಮಗಳು ಏನು ಮಾಡಬೇಕು? ಆಗ ನಾ ಮಹಾರಾಜರ ಜೋಡಿನ್ಯ ಮಾತಾಡಿದೆ. ಅವರ್‍ಯ ಅದಕ್ಕೊಂದು ಹಾದಿ ಹೇಳಿದರು. ಈಗ ಲಕ್ಷ್ಮೀ ಬಾಯಿ ಹೆಸರಿಗೆ ಪಾದಳ್ಳೀ ಭೂಮಿ ಎಷ್ಟವ್ಯ ನೋಡ್ರಿ, ಅವೆಲ್ಲ ರಾಜೀನಾಮೆ ಕಬಲಾಯುತ ಆಗಿ

ಮಹಾರಾಜರ ಹೆಸರ್ಲೇ ಹಚ್ಚಬೇಕು. ಮಹಾರಾಜರಿಗೆ ಭೂಮೀ ಕಬಜಾ ಪಡೆಯೋದು ಹಗರಾಗತದ. ಅವರ ಹೆಸರಿಗೆ ಖಾತೆ ಆದ ಮ್ಯಾಲ. ಅವರು ಅದರ ಲಾವಣಿ ಸಾಗಿಸಿ ಬಂದ ದುಡ್ಡು ಲಕ್ಷ್ಮೀಬಾಯಿಗೆ ಕೊಡಬೇಕು. ಲಕ್ಷ್ಮೀಬಾಯಿ ಕಡಿಂದ ರಾಜೀನಾಮೆ ಕಬಲಾಯಿತಿ ಕಲೆಕ್ಟರ ಕಡೆಗೆ ಕಳಿಸೇ ನಾ ಇತ್ತಾಗೆ ಬಂದೆ" ಯಶವಂತರಾಯರು ಸಾದ್ಯಂತವಾಗಿ ತಮ್ಮ ಕೆಲಸವನ್ನು ವಿವರಿಸಿದರು. (ಪು. ೨೧೧ ಗ್ರಾಮಾಯಣ)

ಮೇಲಿನ ಉದಾಹರಣೆಯಲ್ಲಿ ಬಂದಿರುವ ರಾಜೀನಾಮೆ. ವಾಡೇ, ಕಬಜಾ, ಖಾತೆ, ಲಾವಣಿ, ಕಬಲಾಯುತ, ಕಲೆಕ್ಟರ್ ಎಂಬ ಮೊದಲಾದ ಪದಗಳು ನಾಮಪದಗಳಾಗಿವೆ.

* ....ರಾತ್ರಿ ಅಖಂಡವಾಗಿ ಮಳೆ ಸುರಿದಿದ್ದರ ಪರಿಣಾಮವಾಗಿ ಮನೆಗಳೆಲ್ಲ ಜಂಪಲಿಕ್ಕಿದವು. (ಪು. ೩೮೩ ಗ್ರಾಮಾಯಣ)

* "ನೀ ಆಕಿನ್ನ ಲಗ್ನ ಆಗತೀನಿ ಅಂತ ಭೂಲತಾಪಿ ತುಂಬಿ, ಮಠಕ್ಕ ಕರೆಸಿಕೊಂಡು ಆ ತ್ಯಾಳನ ಕೈಯಾಗ ಕೊಟ್ಟು, ಬಂಗಾರದಂತಾ ಹುಡುಗಿನ್ನ ಹಾಳಗೆಡವಿಟ್ಟೆ. (ಪು. ೧೪ ಗ್ರಾಮಾಯಣ)

* "ಊರಾಗ ಕಾಲರಾ ಪಿಡಗು ಫೈಲಾಸೇತಿ. ಪುತಳಾಬಾಯಿ ಕಾಲರಾಬಂದ್ಯಪೋತಿ ಅಂದಳು. ಮುಂದಿನ ವ್ಯವಸ್ಥಾ ಮಾಡಾಕ ಲಗೂನ ಬರಬೇಕು...." (ಪು. ೧೨೭ ಗ್ರಾಮಾಯಣ)

* "ಇದ್ನ ಅಂಗೆ ಮನಗಿಸವ್ವ. ನಾನು ವೋಟರಲ್ಲಿ ರಾಗಿ ಬೀಸಿ ಲಡಿ ಮಾಡ್ತೀನಿ". (ಪು.೯೧ ವೈಶಾಖ)

ಮೇಲಿನ ನಿದರ್ಶನಗಳಲ್ಲಿ ಬಂದಿರುವ ಜಂಪಲಿಕ್ಕು, ಭೂಲತಾಪಿ, ಪೋತಿ ಆಗು ರೆಡಿಮಾಡು ಪದಗಳು ಕ್ರಿಯಾಪದಗಳಿಗೆ ಉದಾಹರಣೆಗಳಾಗಿವೆ.

ಆದರೆ, ಮಿಶ್ರ ಭಾಷೆಯಲ್ಲಿ ಕಾಣಿಸಿಕೊಳ್ಳುವ ಪದಗಳು ದಾನಿ ಭಾಷೆಯ ಶಬ್ದಕೋಶದ ಯಾವುದೇ ಪದವಾಗಿರಬಹುದು. ಉದಾಹರಣೆಗೆ,

ಗೊಂಬಿಯನ್ನೆತ್ತಿ ಪರೀಕ್ಷಿಸಿ "ಏಟಪ್ಪಾ ರೊಕ್ಕಾ ಇದಕ್ಕ?" ಅಂಗಡಿಯವನಿಗೆ ಕೇಳಿದಳು. 'ಒಂದ್ರುಪೈ' ಹೇಳಿದನು ಅವನು. "ಒಂದು ಚೋಟಿನೂ ಇಲ್ಲ ಗೊಂಬಿ. ಒಂದು ಬಟ್ಟಿನೋಟು ಸಣ್ಣಗೊಂಬೀಗಿ ಒಂದ್ರುಪೈ ಅಂದ್ರೇನಪ್ಪ? ಆಠಾಣೆ ಕುಡ್ತೀನಿ ಕುಡು...." ಚೌಕಾಶಿಗೆ ಸುರು ಮಾಡಿದಳು ಕಾಶಮ್ಮ. "ಏ ಬರಂಗಿಲ್ಲದು ಆಠಾಣಿ ಅಂತ. ತೆಳಗಿಡುಗೊಂಬಿ. ಆಠಾಣೇದು ಅಳ್ಳು ಪುಟಾಣಿ ತಗೊಂಡು ತಿನು ಹೋಗು. ಆಠಾಣಿ ಅಂತ ಆಠಾಣೇ...." ದುಕಾನಿನ ಮಾಲಿಕ ಸಿಡುಕಿದ. ಕಾಶಮ್ಮನೇನು ಸುಮ್ಮನಿರುವ ಹೆಣ್ಣಲ್ಲ. ಅವನ ಮಾತಿನಿಂದ ಅವಳಿಗೆ ಅವಮಾನ ಆದಂಗಾಗಿ ಜೋರು ಮಾಡಿದಳು.

"ಮಾಪುರ ತಾಯಿ ಚಪ್ಪಲಿಯೋಟು ಸುದ್ದಾ ದೊಡ್ಡದಿಲ್ಲ ನಿನ್ ಗೊಂಬಿ.... ಕಡೀಗಿ ಬಾರಾಣೆ ಕುಡ್ತೀನಿ ನೋಡು. ಕುಡಂಗಿದ್ರ ಕುಡು.. ಒಲ್ಲಂದ್ರ ಬಿಡು. ನಡಿ ಬೆಳ್ಳಿ......" ಅಂತ ಹೆಜ್ಜೆ ಎತ್ತಿಟ್ಟಳು.

"ಹಾಂ... ಹಾಂ.... ತಗೋರವ್ವಾ ಪೂರಾ ಒಂದು ರೂಪ್ಯೆ ಕಿಮ್ಮತ್ತಿನ ಗೊಂಬಿ ಅದಾ ಇದೂ... ನಿನ್ನ ಮಾರಿ ನೋಡಿ ಚಾರಾಣೆ ಕಮ್ಮಿ ಮಾಡಿ ಕುಡ್ಲಕತ್ತೀನಿ. ತಗೋ ರೊಕ್ಕ ತಾ....." ಅಂದನು. ಕಾಶಮ್ಮ ಸರ್‍ರನೆ ಸೆಟೆದು ನಿಂತಳು. "ಏನೋ ನನ ಹಾಟ್ಯಾ? ಏನಂದಿ? ನನ್ ಮಾರಿ ನೋಡಿ ಚಾರಾಣೆ ರೊಕ್ಕ ಕಮ್ಮಿ ಮಾಡ್ತೀನಿ ಅಂತಿಯೇನೋ ಬಿಕನಾಸೀ..... ನನ್ ಮಾರಿ ಮ್ಯಾಲೇನು ನವಿಲ ಕುಣೇಲಕತ್ತಾದಾ? ನನ್ 'ಮಾರಿ ನೋಡಿ' ಅಂತ ಯಾಕಂದಿ ಹೇಳು? ನಿನ್ನಕ್ಕಾ ತಂಗಿ ಮಾರಿ ನೋಡೋ... ನಿನ್ನವ್ವನ ಮಾರಿ ನೋಡೋ ಏ ಭಾಡ್ಯಾ.... ನನ್ ಮಾರಿಗೀರಿ ಅಂತ ನನ್ ತಂಟ್ಯಾಕ ಬಂದ್ರ್ಯ ಖಬರದಾರ್. ನಿನ್ ದುಕಾನೆತ್ತಿ ಹಾರ್‍ಸ್ಬೋಡೀತಿನಿ ನೋಡು.... ಏನಂತ ತಿಳ್ಕೊಂಡೀ ನನಗ? ನಾ ಶಿವಳ್ಳಿ ಜಮಾದಾರ ಮಲ್ಲಪ್ಪನ ಮಗಳಿದ್ದಿನೋ ಸಾಬಿ!.... ಅವಡಾ ಸವಡಾ ಮಾತಾಡ್ದಿ ಅಂದ್ರ ಬಾಯಾಗಿನ ಹಲ್ಲು ಮುರಸ್ಗೊಂಡು ಹ್ವಾದಿ ಕಲಬುರ್ಗಿಗೀ... ಹುಷಾರ್!" ಅಂತಂದಳು.

ಗದ್ದಲ ಕೇಳಿ ಮಂದಿ ಜಮಾಯಿಸಿ ನಿಂತರು. ಏನು? ಏನು? ಅಂದರು. ಅಂಗಡಿಯ ಸಾಬಿ ಪ್ಯಾ ಪ್ಯಾ ಮಾಡಿದ. 'ತೋಬಾ..... ತೋಬಾ....' ಅಂತಂದು ಗಲ್ಲ ಗಲ್ಲ ಬಡಿದುಕೊಂಡ. "ನನಗೆ ಮಾಫ್ ಮಾಡು ಬಹೆನ್........ನಾ ಖರಾಬ್ ಮಾತಾಡಿರಲಿಲ್ಲ ನಿನಗ. ತಪ್ಪಾಯ್ತು. ಬೇಕಾದ್ರ ಈ ಗೊಂಬೀಗಿ ನೀ ರೊಕ್ಕಾನೇ ಕುಡಬ್ಯಾಡವ್ವ..... ಪುಕ್ಕಟಿ ಕುಡ್ತೀನೆಂತ ನಿನ್ ಮಗಳಿಗೆ ನನ್ ಗಡಿಂದ... ತಗೋ ಬೇಟೀ...." ಅಂತ ಗೊಂಬಿ ತೆಗೆದು ಬೆಳ್ಳಿಯ ಕೈಗಿಟ್ಟ.

"ಏ.... ಏ... ನಿನ್ ದಾನಾ ಬ್ಯಾಡ ನಮಗ... ಇಕಾ ತಗೋ...." ಅಂತ ತನ್ನ ಸೀರೆಯ ಬಾಳೆಗಂಟಿನಿಂದ ಒಂದು ರುಪ್ಯೆ ಬಂದಿ ಹೊರಗಳೆದು ಅವನೆಡೆಗೆ ಬಿಸಾಡಿದಳು. ಅವನು ತಿರುಗಿ ಕೊಟ್ಟ ನಾಲ್ಕಾಣೆಯ ಬಂದಿಯನ್ನು ತಗೊಂಡು "ನಡಿ ಮಗಾ... ಹೂಂ...." ಅಂತಂದು ಬೆಳ್ಳಿಯ ಕೈಹಿಡಿದುಕೊಂಡು ಮುಂದೆ ನಡೆದಳು. (ಪು. ೪೮-೪೯, ಬದುಕು)

ಈ ಚಿಕ್ಕ ಸಂಭಾಷಣೆಯಲ್ಲಿ ಬೇಟಿ, ದುಕಾನು ಎಂಬ ನಾಮಪದಗಳು ಆಠಾಣಿ, ಬಾರಾಣೆ ಎಂಬ ಸಂಖ್ಯಾವಾಚಕಗಳು, ಚೋಟಿ ಎಂಬ ಗುಣಪದ ಖಬರದಾರ್ ಎಂಬಂತ ಬೈಗುಳಗಳು ಮಿಶ್ರಗೊಂಡು ಬಂದಿರುವುದನ್ನು ನೋಡಬಹುದು.

* "ಸ್ವೀಕೃತ ಪದಗಳು ಸ್ವೀಕರಿಸುವ ಭಾಷೆಯ ಧ್ವನ್ಯಾತ್ಮಕ (Phonological) ರೂಪಾತ್ಮಕ (Morpological) ವ್ಯವಸ್ಥೆಗಳಿಗನುಗುಣವಾಗಿ ಅಳವಡಿಕೆಗೆ ಒಳಗಾಗುತ್ತವೆ ಅಥವಾ ಆಗುವ ಹಾದಿಯಲ್ಲಿರುತ್ತವೆ". (ಡಾ. ಎಸ್.ಎಸ್. ಶ್ರೀಧರ, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪು. ೪) ಉದಾಹರಣೆಗೆ;

೧ "ಆತನೆಂಜಲನು ವುಂಡಿರುವ ನನ್ನೊಳಗ ಆತನೋ, ನನ್ನೆಂಜಲನು ವುಂಡಿರುವ ಆತನೊಳಗ ನಾನೋ! ವಂದರ್ಥದಲ್ಲಿ ನಾನೇ ಸೆರೆಮನೆಯೊಳಗ ಯಿರುವುದು.... ಯಿನ್ನೊಂದರ್ಥದಲ್ಲಿ ಅವನೇ ಯಿಲ್ಲಿರುವುದು. ವೋ ಮಯ್ ಗಾಡ್..... ಕುಂಪಣಿ ಸರಕಾರದ ಸೇವೆಯಲ್ಲಿರುವವರ ಚರುಮ

ದಪ್ಪಯಿರಬೇಕೆಂದೂ, ತನ್ನ ಮೈಯೊಳ ಸೂಕ್ಷ್ಮ ಭಾವನೆಗಳನು ಬಿಟ್ಟುಕೊಳ್ಳಕೂಡದು ಯಂದೂ ಮೊದಲಾಗಿ ಗ್ರಹಾಂ ಹೇಳಿದ್ದ ಮಾತುಗಳನ್ನು ನೆನಪಿಸಿಕೊಳ್ಳುತ್ತ, ಯಾಕೆ ತಾನಿಷ್ಟು ಸೆಂಟಿಮೆಂಟಾಗುತ್ತಿರುವೆನು ತಂದೆಯೇ?...... (ಪು. ೨೪೦-೪೧ ಅರಮನೆ)

೨ "ಇಕೀದ ಯಾನ? ಇನ ಒಳಗೊಂದ ಕಾಲ ಹೊರಗೊಂದು ಕಾಲ... ಅಕೇದ ಹೇಳತ್ಯಾನ ನಾ... ಎಷ್ಟು ಧವಳಕ್ಕಿ ಆದರ ಯಾನಾಯ್ತು.... ರೀತಿ ರಿವಾಜಾ ಬ್ಯಾಡ...?" ಎಂದು ಸ್ವಲ್ಪ ಸುಧಾರಿಸಿಕೊಂಡು ನುಡಿದಳು. (ಪು. ೪೫ ನಿಸರ್ಗ)

ಮೇಲಿನ ಉದಾಹರಣೆಗಳಲ್ಲಿ ಸೆಂಟಿಮೆಂಟಾಗುತ್ತಿರುವೆನು. ರೀತಿ ರಿವಾಜಾ, ಧವಳಕ್ಕಿ ಮೊದಲಾದ ಪದಗಳು. ರೂಪತ್ಮಾಕ ಮತ್ತು ಧ್ವನ್ಯಾತ್ಮಕ ವ್ಯವಸ್ಥೆಗಳಿಗನುಗುಣವಾಗಿ ಬದಲಾಗಿವೆ. ಆದರೆ ಮಿಶ್ರಭಾಷೆಯಲ್ಲಿ ದಾನಿ ಭಾಷೆಯ ಪದಗಳು ತಮ್ಮ ಸ್ವಂತ ರೂಪದಲ್ಲಾಗಲಿ ಕನ್ನಡಕ್ಕೆ ಅಳವಡಿಸಿದ ರೂಪದಲ್ಲಾಗಲಿ ಬಳಕೆಯಾಗುತ್ತವೆ. ಉದಾಹರಣೆಗೆ,

"ಇವತ್ತ ಪೇಶಲ ಬಸ್ಸುಗೋಳಿಗಿ ಹೆಚ್ಚ ಹೆಚ್ಚಾಗಿ ಇಕಾಡಿ ಬಿಡ್ತಾದಂತಲ್ಲಪ್ಪ ಗೋರಮಿಂಟಿನವರೂ? ಹಂಗೇ ತಾಸಿಗೊಮ್ಮಿ ತಾಸಿಗೊಮ್ಮಿ ಬಸ್ಸುಗೋಳು ಹೊಂಟೀ ಹೊಂಟಾವ" ಮಲ್ಲಪ್ಪ ಕೇಳಿದ. "ಹೋಯಿಂದು ಮಾಮಾ.... ಆದರ ಮಂದೇನು ಕಮ್ಮಿ ಅದಾಯೇನು? ಏಸು ಮೋಟರ ಬಿಟ್ಟರನೂ ಹಂಗೇ ಮಂದಿ ತುಂಬಾದೆ ತುಂಬಲಕತ್ತಾರ. ಡೀಪೋದಿಂದ ಬರೇ ನಾಕು ಬಸ್ಸು ಹೆಚ್ಚಾಗಿ ಬಿಟ್ಟಾರಂತ... ಎಲ್ಲಿ ಸಾಕಾಗ್ತಾದೇಳು. ಅದರಾಗೇ ಮಂದೀಗಿ ಕುರಿ ಹಿಂಡು ತುಂಬಿದಂಗ ತುಂಬ್ತಾರೆ ನೋಡು. ಬಸ್ಸಿನ ಒಳಗೆ ಬಾಗಲದಾಗ ಮತ್ತ ಟಾಪಿನ ಮ್ಯಾಲನೂ ಮಂದಿ ಕುಂತು ಬರ್ಲಕತ್ತಾರ...."

"ಹೂ.... ಈ ಹಳ್ಳಿಹೊಂಬ ಮಂದೀಗಿ ಬುದ್ಧಿಯಿಲ್ಲ ಬಿಡು. ಟಾಪಿನ ಮ್ಯಾಲ ಕುಂತು ಬರ್ತಾರಲ್ಲ.... ಎಲ್ಲೆರೆ ಯಾಸಿಟೆಂಟಾಯ್ತು.... ಸಾಯ್ತಾರ! ತಾವಂತೂ ಸತ್ತು ನಿಚಿಂತಿ ಆಗ್ತಾರ ಖರೇ. ಹಿಂದಿದ್ದ ಹೆಂಡ್ರು ಮಕ್ಕಳು ಗೋಳ್ಯಾಡಂಗ ಮಾಡ್ತಾರ ಭಾಡ್ಯಾಗೋಳು....." (ಪು. ೪೪ ಬದುಕು)

ಕೊಟ್ಟಿರುವ ನಿದರ್ಶನದಲ್ಲಿ ಸ್ಪೇಶಲ್, ಗವರ್ನ್ಮೆಂಟ್, ಟಾಪ್, ಆ್ಯಕ್ಸಿಡೆಂಟ್ ಎಂಬ ಪದಗಳ ಜಾಗದಲ್ಲಿ ಪೇಶಲ, ಗೋರಮಿಂಟ, ಟಾರ್ಪಿ, ಯಾಸಿಡೆಂಟು ಎಂಬ ಪದಗಳು ಕನ್ನಡದ ಅದರಲ್ಲೂ ಗುಲಬರ್ಗಾ ಕನ್ನಡದ ಜಾಯಮಾನಕ್ಕನುಗುಣವಾಗಿ ಬದಲಾಗಿವೆ. ಮಿಶ್ರಭಾಷೆಯಲ್ಲಿ ದಾನಿಭಾಷೆಯ ಪದಗಳು ತಮ್ಮ ಸ್ವಂತ ರೂಪದಲ್ಲಾಗಲಿ, ಕನ್ನಡಕ್ಕೆ ಅಳವಡಿಸುವ ರೂಪದಲ್ಲಾಗಲಿ ಬಳಕೆಯಾಗುತ್ತವೆ ಎಂಬುದು ಈ ನಿದರ್ಶನದಿಂದ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಸ್ವೀಕೃತ ಪದಗಳ ಉಪಯೋಗಕ್ಕೆ ಏಕಭಾಷಾ ಸಾಮರ್ಥ್ಯ ಸಾಕು. ಆದರೆ ಭಾಷಾ ಮಿಶ್ರಣಕ್ಕೆ ದ್ವಿಭಾಷಿಕತೆ ಅನಿವಾರ್ಯ. ಪ್ರಸ್ತುತ ಅಧ್ಯಯನಕ್ಕೆ ತೆಗೆದುಕೊಂಡಿರುವ ಕಾದಂಬರಿಗಳೆಲ್ಲವೂ ಒಂದಿಲ್ಲೊಂದು ಭಾಷೆಯೊಂದಿಗೆ ಮಿಶ್ರಗೊಂಡಿರುವುದರಿಂದ ಲೇಖಕರು ಅಥವಾ ಕಾದಂಬರಿಕಾರರು. ತಮ್ಮ ಕಾದಂಬರಿಗಳಲ್ಲಿ

ಸ್ವೀಕರಣ ಪದಗಳಿಗಿಂತ ಮಿಶ್ರ ಪದಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಅಂದರೆ ಇವರೆಲ್ಲರೂ ದ್ವಿಭಾಷಿಕ ವಲಯದಲ್ಲಿ ಭಾಷಾ ಸಾಮರ್ಥ್ಯವನ್ನುಳ್ಳವರಾಗಿದ್ದಾರೆ.

ನುಡಿಪಲ್ಲಟ

ಭಾಷಾಪಲ್ಲಟ ಇವೆರಡಕ್ಕಿಂತಲೂ ಭಿನ್ನ ಸ್ವರೂಪದ್ದು ದ್ವಿಭಾಷಿಕರು ಒಂದು ಕ್ಷೇತ್ರದಲ್ಲಿ ಭಾಷೆಯನ್ನು ಬಳಸುವಾಗ ತನ್ನ ಮಾತೃಭಾಷೆಯನ್ನು ಹೊರತುಪಡಿಸಿ ಆಯಾ ಸಂದರ್ಭಕ್ಕೆ ತಕ್ಕಂತೆ ನಿರ್ದಿಷ್ಟ ಉದ್ದೇಶಗಳಿಗಾಗಿ ದ್ವಿತೀಯ ಭಾಷೆಯಲ್ಲಿ ವ್ಯವಹರಿಸುವ ಸನ್ನಿವೇಶವೇ ಭಾಷಾಪಲ್ಲಟ. ಇಲ್ಲಿ ಸಂದರ್ಭ ಮತ್ತು ವ್ಯಕ್ತಿ ಬದಲಾದಂತೆ ವ್ಯಾಕರಣ ಸಹಿತವಾಗಿ ಇಡೀ ಭಾಷಾ ಬಳಕೆಯೇ ಬೇರೆಯಾಗುತ್ತದೆ. ಉದಾಹರಣೆಗೆ;

* ದಾದಾ ಅದೇ ಆಗ ಗೌಡರ ಮನೆಯಿಂದ ಪೋಲೀಸರ ಸಂಗಡ ಬಂದು ಚಾವಡಿಯಲ್ಲಿ ಒಂದು ಬದಿಗೆ ಕುಳಿತಿದ್ದ ಅವನನ್ನು ನೋಡಿಯಂತೂ, ಫೌಜುದಾರರ ಮನಸ್ಸಿನ ತೂಕವೇ ತಪ್ಪಿತು. "ಅರೇ ಏ ಖೂನಿ ಆರೋಪಿಕೋ ಬೇಡಿ ಡಾಲೋ" ಎಂದು ಕುಳಿತಲ್ಲಿಯೇ ಪೋಲೀಸರಿಗೆ ಆಜ್ಞೆ ಮಾಡಿದರು.

ಪೋಲೀಸ ಇನ್ನೇನು ಅವರ ಆಜ್ಞೆ ನೆರವೇರಿಸುವುದರಲ್ಲಿ ಇದ್ದ. ಅಷ್ಟರಲ್ಲಿ ಗೌಡರು ಚಾವಡಿಗೆ ಬಂದರು. ಅವರನ್ನು ನೋಡಿದ ಫೌಜುದಾರರು ಬೇಟೆಯನ್ನು ಕಂಡ, ಹಸಿದ ಹುಲಿಯಂತಾದರು. "ಕೆಂಗಣ್ಣುಗಳಿಂದ ಅವರನ್ನು ನೋಡುತ್ತ "ನಮ್ಮ ಹುಕುಂ ಅಂದರ ಏನಂತ ತಿಳಿದೀರಿ ಗೌಡರ್ರ? ಖೊಟ್ಟಿ ಮರಣ ರಿಜಿಸ್ಟರ ಬರದು ಬರದು, ಯಾರೂ ಕೇಳಾವರಿಲ್ಲ ಅಂತ ತಿಳಿಕೊಂಡಿರೇನು? ತೋರಸತೀನಿ ನಿಮಗೂ ಒಂದ ಕೈ. ಅರೇ ಇಸ್ಮಾಯಿಲ್ ಪಾಟೀಲಕೋಅರೆಸ್ಟ್ ಕರೊ" ಎಂದು ಮುಖ ತಿರುಗಿಸಿ ಗುಡಾರದ ಕಡೆಗೆ ಹೋದರು.

ಇಸ್ಮಾಯಿಲನಿಗೆ ಏನು ಮಾಡಬೇಕೆಂದು ತಿಳಿಯದೆ ಸುಮ್ಮನೆ ಗೌಡರ ಮುಂದೆ ಬಂದು ನಿಂತ.

"ನಾನೂ ಪೋಲೀಸ ಪಾಟೀಲ ಅದೀನಿ. ಸರಕಾರಿ ನೌಕರಿ. ನನ್ನ ಕೆಲಸದಿಂದ ಸಸ್ಪೆಂಡ ಮಾಡೂತನಾ ನಿಮ್ಮ ಅಪ್ಪ ಬಂದರೂ ಬೇಡೀ ಹಾಕಗೊಡಾಕಿಲ್ಲ" ಅಪಮಾನ ತಡಯದಾಗಿ ಗೌಡರು ಸಿಟ್ಟಿನಿಂದ ಗರ್ಜಿಸಿದರು.

ಫೌಜುದಾರರು ಈ ಮಾತು ಕೇಳಿ ಕುಳಿತ ಸ್ಥಳದಿಂದಲೇ "ಉಸುಕೂ ಸಸ್ಪೆಂಡ್ ಹವಾನೆಕಿಯಾ ಹೈ; ಬೇಡೀ ಡಾಲೋ ಉಸುಕೂ" ಎಂದು ಚೀರಿಕೊಂಡರು. (ಪು. ೧೨೪ ಗ್ರಾಮಾಯಣ)

ಮೇಲಿನ ಉದಾಹರಣೆಯಲ್ಲಿ ಫೌಜುದಾರರು ಪೋಲೀಸ್ ಸಿಪಾಯಿಯೊಂದಿಗೆ ಉರ್ದುವಿನಲ್ಲಿಯೂ ಶಂಕರಪ್ಪಗೌಡರೊಂದಿಗೆ ಕನ್ನಡದಲ್ಲಿಯೂ ಮಾತನಾಡುತ್ತಿದ್ದಾರೆ. ಇಲ್ಲಿನ ಪ್ರಸಂಗ ಒಂದೇ ಆದರೂ ವ್ಯಕ್ತಿ ಭಿನ್ನವಾದಂತೆ ಭಾಷೆ ಬದಲಾಗಿರುವುದನ್ನು ಗಮನಿಸಬಹುದು.

* ನುಡಿಪಲ್ಲಟದಲ್ಲಿ ನೀಡುವ ಮತ್ತು ಪಡೆಯುವ ಭಾಷೆಗಳು ಪರಸ್ಪರ ಅಂತರಾಟಕ್ಕೊಳಗಾಗುತ್ತವೆ (Interaction). ಉದಾಹರಣೆಗೆ,

"ಹೂಂ..... ಕಲ್ಯಾಣೀ.... ಈಗ ನೀನೇ ದೊಡ್ಡಂವ ನೋಡು ನಿಮ್ಮನೀಗೆ. ನಮ್ಮ ಈ ರುಕ್ಮದ್ಧೀನನ ಹಿರೇ ಮಗಳು 'ನಜಮಾ'ಗ ನಿಮ್ಮ ಫತರೂಗ ಕೊಟ್ಟು 'ನಿಕಾ' ಮಾಡ್ಬೇಕಂತ ಇಚ್ಛಾ ಆಗ್ಯಾದ ನಮಗೆಲ್ಲಾ... ಅದಕೇ ನಿಮಗ ಕರೆಸಿದ್ದು. ಹಾಲಪ್ಪನೂ ಈ ಊರಿನ ಅಳ್ಯಾ. ಮ್ಯಾಲಾಗಿ ನಿಮ್ಮನಿ ಅಳ್ಯಾ. ಮಲ್ಲಪ್ಪ ಜಮಾದಾರ ಇದ್ದಾಗೆ ಫತರೂನ 'ನಿಕಾ' ಮಾಡಿ ಬಿಟ್ಟಿದ್ದರ ಛಲೋ ಆಗ್ತಿತ್ತು ಖರೇ. ಅದರ ನಡಬರಕ ಏನೇನೋ ಆಗಬಾರದ್ದೆಲ್ಲಾ ಆಗಿ ಅಂವಾ ಖುದಾನ ದುನಿಯಾ ಸೇರಿಬಿಟ್ಟ ನೋಡ್ರಿ .....ಈಗ ನೀವು ಏನಂತೀರಿ...?"

ಆಯ್ತು ಸಾಬರೇ.... ನಮ್ಮ ಫತರೂಗ ಒಪ್ಪಿಗೆ ಇದ್ದರ ಮುಗೀತು. ಮಾತುಕತೆ ಮುಗಿಸಿ 'ನಿಕಾ'ದ ತಾರೀಖು ಗೊತ್ತು ಮಾಡೇ ಬಿಡ್ರಿ... ಏನಪಾ ಫತರೂ?" ಕೇಳಿದ ಕಲ್ಯಾಣಿ. ಫತರೂನ ಮಾರಿಗೆ ಬಣ್ಣ ಮೆತ್ತಿತ್ತು. ಲಜ್ಜೆ ಅದುಮುತ್ತ "ನೀವೆಲ್ಲಾ ಹ್ಯಾಂಗತೀರಿ ಹಾಂಗಪಾ..... ಮಾಮಾಗ ನಿನಗ ಪಸಂದಿದ್ದ ರಾಯ್ತು...." ಅಂದು ಬಿಟ್ಟ. (ಪು. ೩೪೪-೪೫ ಬದುಕು).

ಮೇಲಿನ ಉದಾಹರಣೇಯಲ್ಲಿ ಕನ್ನಡ ಮತ್ತು ಉರ್ದುವಿನ ಪದಗಳು ಒಂದರೊಡನೊಂದು ಸೇರಿಕೊಂಡು ಅರ್ಥಸ್ಫುರಿಸುತ್ತಿವೆ. ಆದರೆ ನುಡಿಪಲ್ಲಟದಲ್ಲಾದರೆ. ನುಡಿಮಿಶ್ರಣದಂತೆ ಮಿಶ್ರಗೊಳ್ಳದೆ ಒಂದರ ಪಕ್ಕದಲ್ಲೊಂದು ಕೆಲಸ ಮಾಡುತ್ತವೆ. ಉದಾಹರಣೆಗೆ,

ಯಲ್ಲಾ ನೋಡೋದನು ನೋಡಿಯಾದ ಮ್ಯಾಲ ಕೇಳೋದನು ಕೆಳಿಯಾದ ಮ್ಯಾಲ, ಲೋಡಿಗಾತು ತಾಂಬೂಲ ನಮಲುತ್ತಿರುವಾಗ ಮನ್ರೋಸಾಹೇಬನು "ರೆಡ್ಡಿಗಾರು ಯಿಂಕೊಕ್ಕಟಿ ಯಿ ಯಾರತನು ಮಾಕುಚೂ ಪಿಂಚಲೇದು... ಅದೇಮಿಟಂಟೆ ಯಿಕ್ಕಡೆಕ್ಕಡೋ ಮರಣದಂಡನ ವಿಧಿಂಚೇ ವ್ಯವಸ್ಥ ವುಂದಂಟಿಗದಾ.... ಯೇಮಿ ಅನುಕೋಕ ಪೋತೆ ಮೀರು ಮಾ....ಯಂದಷ್ಟೇ ನುಡಿದು ತನ್ನ ಕಪೋಲ ರೋಮಗಳನ್ನು ಬಲಗಯ್ಯ ತುದಿಬೆರಳುಗಳಿಂದ ನೀವಿಕೊಳ್ಳುತ್ತಿರುವಾಗ್ಗೆ (ಪು.೪೦೬) "ಯಿಕ್ಕಡುಂದಿ ಕದಾ ರೆಡ್ಡಿಗಾರು. ಪ್ರಜಾಮೋದುಕಲಯ್ನ ಮೀರು ಚೂಚಂಡರೇಮೋ" ಎಂದು ಮಾತಿನಿಂದ ತಿವಿದೇ ಬಿಟ್ಟರು. (ಪು. ೪೧೪ ಅರಮನೆ)

"....ಜಲಜಲಾಂತ ಬೆವರ ತೊಡಗಿದ್ದ ರೆಡ್ಡಿಗೆ ಮನ್ರೋನು ಕಂಪನಿ ಸರಕಾರವು ನಿಮ್ಮ ಸುಪರ್ದಿಲಿರೋ ಯಿಪ್ಪತ್ತೆರಡು ಸಹಸ್ರ ಯಕರೆ ಜಮೀನನ್ನು ಭೂಹೀನರಿಗೆ ಹಂಚಬೇಕೆಂದು ನಿರ್ಧರಿಸಿದಲ್ಲಿ ನೀವೇನು ವುತ್ತರ ಕೊಡುತ್ತೀರಿ ರೆಡ್ಡಿಗಾರು.. ಯಂದು ಕೇಳಿದಕ್ಕೆ ಅರಿಭಯಂಕರನೂ.. ನಿರಂಕುಸಮತಿಯೂ ಅದುವರೆಗೆ ಆಗಿದ್ದ ಬುಡ್ಡವೆಂಗಳ ರೆಡ್ಡಿಯ ಸುಪುತ್ರ ಕೊರಡಾ ನರಸಿಮ್ಮಾ ರೆಡ್ಡಿಯು ಆರುಮೊಳಾವರೆ ಯಿದ್ದಾತ ಚೋಟುದ್ದ ಆದಾಗ್ಗೆ....." (ಪು.೪೧೫ ಅರಮನೆ)

ಮೇಲಿನ ಉದಾಹರಣೆಯಲ್ಲಿ ಮನ್ರೋ ಇಂಗ್ಲಿಶ್‌ನಿಂದ ತೆಲುಗು ಭಾಷೆಗೆ ಪಲ್ಲಟಗೊಂಡಿರುವುದು ತಿಳಿಯುತ್ತದೆ. ಮನ್ರೋ ಮೂಲತಃ ಇಂಗ್ಲೆಂಡ್ ದೇಶದವನು. ಕುಂಪಣಿಯ ಅಧಿಕಾರಿಯಾಗಿ ಭಾರತಕ್ಕೆ

ಬಂದ ಮೇಲೆ ಇಲ್ಲಿನ ಆಡಳಿತದ ಅನುಕೂಲಕ್ಕಾಗಿ ಆಯಾ ಸ್ಥಳೀಯ ಭಾಷೆಗಳನ್ನು ಕಲಿತು. ಅವರ ಭಾಷೆಯಲ್ಲಿಯೇ ವ್ಯವಹರಿಸುತ್ತಾ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದನು.

೨. ಇಷ್ಟು ದಿನ ಕೈಕಾಲು ತೊಳೆದು, ಮನೆಯಲ್ಲಿ ಒದ್ದೆಯಾದ ಬಟ್ಟೆಯನ್ನು ಕಳಚಿ, ಮಡಿಪಂಚೆಯನ್ನೊ ರೇಶಿಮೆ ಮಗುಟವನ್ನೊ ಉಡುತ್ತಿದ್ದ ಶಾಸ್ತ್ರಿಗಳು ಇಂದು ಒದ್ದೆ ಬಟ್ಟೆಯಲ್ಲೆ ದೇವರ ಪೂಜೆಗೆ ಕುಳಿತರು. ರುಕ್ಮಿಣಿ ಅಭಿಷೇಕದ ಹಾಲನ್ನು ತಂದಿಟ್ಟು ದೇವರ ಬಾಗಿಲಿನಲ್ಲೆ ವಾಡಿಕೆಯಂತೆ ಶ್ರೀಗಂಧ ತೇಯುತ್ತ ಕುಳಿತಳು. ಶಾಸ್ತ್ರಿಗಳು ಸಂಧ್ಯಾವಂದನೆ ಮಾಡಿ,

ಪರಸ್ತ್ರೀ ಸಂಗಜನಿತದೋಷವೃತ್ಯರ್ಥ್ಯಂ

ಮಯಾಚರಿತ ದುಷ್ಕರ್ಮದೋಷ ನಿವೃತ್ಯರ್ಥಂ

ಮಮ ಶರೀರಶುದ್ಧ್ಯರ್ಥಂ

ಸಹಸ್ರಗಾಯತ್ರೀಜಪಂ ಕರಿಷ್ಯೇ.....

ಎಂದು ಸಂಕಲ್ಪವನ್ನು ವಟಗುಟ್ಟಿ ಗಾಯತ್ರಿ ಜಪ ಮಾಡುತ್ತ ಕುಳಿತಾಗ, ರುಕ್ಮಿಣಿಯು ಮರ್ಮಾಹತಳಾಗಿ ಗಂಧ ತೇಯುವುದನ್ನು ಅರ್ಧಕ್ಕೇ ನಿಲ್ಲಿಸಿ, ಎದ್ದು ಹೋದಳು. ಶಾಸ್ತ್ರಿಗಳು ಪೂಜೆ ಮುಗಿಸಿಕೊಂಡು ಬಂದು.... ರುಕ್ಕು ಎಂದು ಕೂಗಿದರು. ರುಕ್ಮಿಣಿಯು ದಡಬಡ ಎದ್ದು ಕುಳಿತಳು. ಸೆರಗನ್ನು ಸರಿಪಿಡಿಸಿಕೊಳ್ಳುತ್ತ "ಬೆಳಿಗ್ಗೆ ಮಾಡಿದ ಉಪ್ಪಿಟ್ಟಿದೆ" ಎಂದು ತಡವರಿಸಿದಳು. ಶಾಸ್ತ್ರಿಗಳು ಶಾಂತ ಸ್ವರದಲ್ಲಿ,

"ಬೇಡ, ಬೇಡ. ಇನ್ನು ಮೇಲೆ ನಾನು ಬೆಳಗಿನ ಫಳಾರ ಮಾಡಲ್ಲ. ಮಧ್ಯಾಹ್ನ ಒಂದು ಊಟವಾದರೆ ಮುಗಿಯತು. ರಾತ್ರಿಯ ಊಟ ಬೇಕಿಲ್ಲ. ಕುಡಿಯಲು ತುಳಸೀದಳ ಹಾಕಿದ ನೀರಿದ್ದರೆ ತೀರಿತು" ಎಂದರು. (ಪು.೧೬೧-೬೨ ವೈಶಾಖ)

ಈ ಪ್ರಸಂಗದಲ್ಲಿ ಶಾಸ್ತ್ರಿಗಳು ದಿನನಿತ್ಯದ ಬಳಕೆ ಮಾತಿಗಾಗಿ ಶಿಷ್ಟ ಕನ್ನಡವನ್ನು ಉಪಯೋಗಿಸಿದರೆ, ತಮ್ಮ ಪೂಜಾ ವಿಧಿಗಳಿಗಾಗಿ ಪೂರ್ತಿಯಾಗಿ ಸಂಸ್ಕೃತವನ್ನು ಬಳಸಿರುವಲ್ಲಿ ನುಡಿಪಲ್ಲಟವಾಗಿದ್ದಾರೆ. ಹೀಗೆ ನುಡಿಬೆರಕೆ ಒಂದು ವಾಕ್ಯದೊಳಗೆ ನಡೆಯುವ ಕ್ರಿಯೆಯಾದರೆ ನುಡಿಪಲ್ಲಟ ವಾಕ್ಯಗಳ ನಡುವೆ ನಡೆಯುವ ಕ್ರಿಯೆಯಾಗಿದೆ.

ನುಡಿಪಲ್ಲಟ ಸಾಮಾನ್ಯವಾಗಿ ಭಾಷಾ (ಸಾಮಾಜಿಕ) ಸಂದರ್ಭದಲ್ಲಿ ಉಂಟಾದ ಬದಲಾವಣೆಗೆ ಸಂವಾದಿಯಾಗಿ ನಡೆಯುತ್ತದೆ. ನುಡಿಬೆರಕೆಯಾದರೋ ಸಂದರ್ಭ ಬದಲಾಗದಿದ್ದರೂ ನಡೆಯುತ್ತದೆ. ಈ ವ್ಯತ್ಯಾಸವನ್ನು ಕಾದಂಬರಿಯ ನಿದರ್ಶನಗಳಿಂದ ಸ್ಪಷ್ಟಪಡಿಸುವುದಾದರೆ.

"ಆಡ್ಲೀ, ದಾದಾ ಅನ್ನೋ ಹುಡುಗ ಇವನ ಏನು?" ಎಂದು ಪ್ರಶ್ನೆ ಮಾಡಿದರು. ಕೇಶವರಾಯ ಹೌದೆಂದು ಉತ್ತರಿಸಿದ.

"ಯಾಕೋ, ಯಾರ ಮುಂದ ನಿಂತಿ ಗೊತ್ತೈತೋ ಇಲ್ಲೋ?" ಎಂದು ಫೌಜುದಾರರು ಹೆದರಿಸುವ ರೀತಿಯಲ್ಲಿ ದಾದನನ್ನೇ ಕೆಣಕಿದರು.

"ಗೊತ್ತೈತಲ್ಲರಿ" ಎಂದು ದಾದಾ ನಿರ್ಲಕ್ಷ್ಯದಿಂದ ಹೇಳಿದ.

"ಇಲ್ಲೆ ಯಾಕ ಕರಕೊಂಡು ಬಂದಾರ ನಿನ್ನ ಅನ್ನೊದು ಗೊತ್ತದನೋ ಇಲ್ಲೋ?"

"ಗೊತ್ತಿಲ್ಲಾರಿ" ಅದೇ ನಿರ್ಲಕ್ಷ್ಯತನದಿಂದ ದಾದಾ ಉತ್ತರಿಸಿದ.

"ಅರೆ ಇಸ್ಮಾಯಿಲ್, ಇಸಕೊ ಸಮಜಾವ್" ಎಂದು ಫಕರುದ್ದೀನರು ಪೋಲೀಸನೊಬ್ಬನಿಗೆ ಆಜ್ಞೆ ಮಾಡಿದರು. (ಪು. ೮೬ ಗ್ರಾಮಾಯಣ)

ಮೇಲಿನ ಉದಾಹರಣೆಯಲ್ಲಿ ಫೌಜುದಾರರು, ದಾದಾ, ಕೇಶವರಾಯ, ಪೋಲೀಸ್‌ರ ನಡುವಿನ ಸಂದರ್ಭ ಒಂದೇ ಆದರೂ ವ್ಯಕ್ತಿಗಳು ಬದಲಾದಂತೆ ಭಾಷೆ ಪಲ್ಲಟಗೊಂಡಿರುವುದನ್ನು ನೋಡಬಹುದು. ಫೌಜುದಾರರು ಉರ್ದು ಭಾಷಿಕರೇ ಆಗಿದ್ದರೂ ದಾದಾ, ಕೇಶವರಾಯರೊಂದಿಗೆ ಕನ್ನಡದಲ್ಲಿಯೂ ಪೋಲಿಸ್‌ರೊಂದಿಗೆ ಉರ್ದುವಿನಲ್ಲಿ ವ್ಯವಹರಿಸುತ್ತಿರವಲ್ಲಿ ಕನ್ನಡದಿಂದ ಉರ್ದುವಿಗೂ ಉರ್ದುವಿನಿಂದ ಕನ್ನಡಕ್ಕೂ ಬದಲಾಗುತ್ತಿರುವುದನ್ನು ನೋಡಬಹುದು.

ಆದರೆ ನುಡಿಬೆರಕೆ ಒಂದು ವಾಕ್ಯದೊಳಗೆ ನಡೆಯುವ ಕ್ರಿಯೆ ಎಂಬುದಕ್ಕೆ ಉದಾಹರಣೆಯನ್ನು ನೋಡುವುದಾದರೆ,

...ಜೀಪಿನಿಂದಿಳಿದ ಇನ್ಸ್‌ಪೆಕ್ಟರನು ನಾಕಾರು ಮಂದಿ ಕಾನಸಟೇಬಲ್ಲುಗಳಿಗೆ ಗತ್ತಿನಿಂದ "ಏ, ಎಲ್ಲಾ ಗುಡಿಸಿಲಗಳೊಳಗೆ ನುಗ್ಗರೋ.... ಮಗಾ ಆ ನಾಗ್ಯಾ ಎಲ್ಲಿ ಅಡಕ್ಕೊಂಡಾನ ನೋಡಿ ಒದ್ದು ಎಳ್ಕೊಂಡು ಬರ್ರಿ. ಭೋಸಡಿ ಮಗಾ ಎಲ್ಲಿ ಹೋಗ್ತಾನ ನಮ್ಮ ಕಣ್ಣ ತಪ್ಪಿಸಿ. ಹೂಂ ಹೋಗ್ರೀ".

ಪೋಲೀಸರು ಆಟು ಕೇಳಿದ್ದೇ ತಡ ಬೂಟಗಾಲಿನಿಂದ ಆವಾಜು ಮಾಡುತ್ತ ಸೊಕ್ಕಿದ ಪರಾಣಿಗಳಂಗ ಸಿಕ್ಕ-ಸಿಕ್ಕ ಗುಡಿಸಲು ಹೊಕ್ಕು ನಾಗ್ಯಾನನ್ನು ತಲಾಶ್ ಮಾಡತೊಡಗಿದರು.

ಪೋಲೀಸ್ ಪೇದೆಯೊಬ್ಬ ಧಡಕ್ಕನೆ ಒಳನುಗ್ಗಿದಾಗ... ಬಸ್ಸಮ್ಮ ಗಾಬರಿಯಿಂದ ಕೂಸನೆತ್ತಿಕೊಂಡೇ ಗಸಕ್ಕನೆ ಎದ್ದು ನಿಂತಳು.

"ಯಾಕ್ರೀ.... ಯಪ್ಪಾ.... ಏನಾಯ್ತ್ರೀ?" ಧೈರ್ಯಗೆಡದೆ ಕೇಳಿದಳು. ಪೋಲೀಸ್ ಪೇದೆ... ಹುಚ್ಚುಚ್ಚಾಗಿ ನಗುತ್ತ "ಎಲ್ಲಿ ಅಡಗ್ಯಾನ ಆ ನಾಗ್ಯಾ ಹೇಳಬೇ..... ಇಲ್ಲಂದ್ರ ಹೊಡ್ದು ನಿನ್ ಟೊಂಕಾಮುರೀತಿನಿ ನೋಡು...." ಅನ್ನುತ್ತ ಅವಳ ಮೇಲೆ ಬಂದನು. ಇರುವ ಒಂದೇ ಖೊಲ್ಲಿಯೊಳಗೆ ಸುತ್ತ ಕಣ್ಣಾಡಿಸುತ್ತ ಅವಳು "ಏ, ಪೋಲಿಸಪ್ಪಾ... ಯಾ ನಾಗ್ಯಾನ ತಪಾಸ ಮಾಡ್ಲಕ್ಕ ಬಂದಿದ್ದಿ ನನ್ ಮನೀಗಿ? ಇದು ಶಾಣಪ್ಪ ಅಂದ್ರ ನನ್ ಗಂಡನ ಮನಿ ಅದಾ... ನಾಗ್ಯಾನ ಮನಿ ಅಲ್ಲ. ಇಲ್ಯಾಕ ಬರ್ತಾನಂವಾ? ಅವನ ಗುಡಸ್ಯಾಗ ಹುಡುಕಾದು ಬಿಟ್ಟು ಇಲ್ಲ್ಯಾಕ ಬಂದು ಗೂಳಿ ನುಗ್ಗಿದಂಗ ನುಗ್ಗಿದೆಲ್ಲ? ಏನೆರೆ ಒಂದೀಟು ಖಬರದಾನಾ ಖಬರಗೇಡಿ ನಿನಗ?" ಅಂತಂದು...... ಸೆರೆಗೆಳೆದುಕೊಂಡಳು.....

"ಯೆಲ್ಲಾ ಝೋಪಡಪಟ್ಟ್ಯಾಗ ಹುಡಕ್ಬೇಕಂದಾರ ನಮ್ಮ ಸಾಬ್ರು ....ಅವನ ಹುಕುಮಾಗ್ಯಾದೇ ನಿನ್ನವ್ವನಾ... ನಿಮ್ಮಂದೀ ಗುಣಾ ನಮಗೊತ್ತಿಲ್ಲೇನು? ಒಬ್ಬಾಂವ ಯಾಂವರೆ ಕಳತನ ಮಾಡಿ ಓಡಿ ಬಂದ್ರ ಪೂರಾ ಬಸ್ತ್ಯಾಗೆ ಯಾರ ಗುಡಸ್ಯಾಗರೇ ಮುಚ್ಚಿಡ್ತೀರಿ ಆ ಕಳ್ಳಗ, ಎಲ್ಲೋರದೂ ರೋಪಡಿ ತಲಾಶ್ ಮಾಡ್ತೀವಿ... ಹೂಂ ಸರಿ ಅಕಾಡಿ...." ಅನ್ನುತ ಜಬರದಸ್ತಿಯಿಂದ ಅವಳ ರಟ್ಟೆಗೆ ಕೈ ಹಾಕಿ ಎಳೆದ ರಭಸಕ್ಕೆ ಅವಳು ಅವನೆದೆಗೆ ಬಡಿದು ನಿಂತಳು. ಆ ರಬಸಕ್ಕೆ ನೆತ್ತಿಗೆ ಗೋಡೆ ಬಡಿದು ಅದು ಜೀಂವ ಹೋದಂತೆ ಅಳತೊಡಗಿತು. ಅವಳು ಗಸಕ್ಕನೆ ದೂರ ಸರಿದು ಚೀರುತ್ತ ಬೈಯ್ಯುತ್ತ ಹೊರಗೋಡಿದಳು. "ನಿನ್ ಬಾಯಾಗ ಮಣ್ಣ ಹಾಕಲೀ.. ನನ್ ಕೂಸಿಗಿ ಬಡಿತಲ್ಲೋ ಖಬರಗೇಡೀ".

ಪಕ್ಕದ ಗುಡಿಸಲಲ್ಲಿ ಒಲೆಯೂದುತ್ತ ಕುಂತಿದ್ದ ಸಕ್ಕೂಬಾಯಿಯ ರಟ್ಟೆ ಹಿಡಿದೆಳೆದು ಹೊರಗೆ ಜಗ್ಗಿದ ಪೋಲಿಸನಿಂದ ಬಿಡಿಸಿಕೊಳ್ಳುತ್ತ ಮುದುಕಿ ಎರಡೂ ಕೈಯತ್ತಿ ಲಬೋ ಲಬೋ ಅಂತ ಹೊಯ್ಕೊಳ್ಳುತ್ತ ಲಟಿಗೆ ಮುರಿಯುತ್ತ ಅಳುತ್ತ ಅವನಿಗೆ ಸರಾಪಿಸುತ್ತ

"ನಿನ್ ಬಾಯಾಗ ಹೆಂಡಿ ಹಾಕಲೀ ಭಾಡಕಾವೂ.... ನನ್ನ ರಟ್ಟಿ ಹಿಡ್ದು ನೂಕ್ತಿಯೇನೋ ಬದ್ಮಾಶ್.... ಮೀ ತುರ್ಝಾ ಆಯಿ ಸರಕ ಅಹೇರೇ....." ಅನ್ನುತ್ತ ಅಳತೊಡಗಿದಳು.

ಮತ್ತೊಂದು ಗುಡಿಸಲಲ್ಲಿದ್ದ ರಿಕ್ಷಾವಾಲ ಪಾಶುವನ್ನು ಎಳೆದು ಅವನಿಗೆ ಲಾಠಿಯಿಂದೆರಡೇಟು ಕೊಟ್ಟೀ ಪೋಲೀಸ ಪೇದೆ ಅಬ್ಬರಿಸಿದ. "ಏ ಸುವ್ವರ್ ನನ್ಮಗನೇ.... ಎಲ್ಲಿ ಮುಚ್ಚಿಟ್ಟಿದ್ದೀರಿ ಆ ಕಳ್ಳ ನಾಗ್ಯಾನ. ನೀವೆಲ್ಲೋರೂ? ಹೇಳಲಿಲ್ಲಂದ್ರ ನಿನ್ ಮೈ ಚಮಡಾ ಸುಲ್ದು ಬಿಡ್ತೀನೀ....." ಅಂತ ಮತ್ತೆರಡು ಬಡಿದಾಗ ಏನೂ ತಿಳಿಯದ ಪಾಶೂ ತತ್ತರ ಬತ್ತರ ಮಾಡುತ್ತ ಕೈ ಜೊಡಿಸುತ್ತ ಅಳತೊಡಗಿದ. "ಏನಾಗೇದ್ರಿ ಸಾಬ್ರೇ... ನನಗೇನೂ ಗೊತ್ತಿಲ್ರೀ.... ನಾ ಈಗಿನ್ನಾ ರಿಕ್ಷಾ ನಡಸಿ ಮನೀಗಿ ಬಂದೀನ್ರೀ... ನನಗೇನೂ ಗೊತ್ತಿಲ್ರೀ... ಯಾ ನಾಗ್ಯಾ ಯೇನು ಮಾಡ್ಯಾನ್ರೀ?" ಅಂದನು. ಪೋಲೀಸ್ ಪೇದೆ ತಲೆ ತಿರುಗಿತು.

"ಭಾಂಚೋದ ನನ್ ಮಗನೇ... ಖರೇ ಬಗಳು... ಎಲ್ಲಿ ಆ ಕಳ್ಳನಾಗ್ಯಾ?" ಅನ್ನುತ್ತಲೇ ಮತ್ತೆ ಲಾಠಿ ಬೀಸಿದನು. ಪಾಶಾನ ಹಣೆಯೊಡೆದು ನೆತ್ತರು ಝಿಲ್ಲನೆ ಪುಟಿಯಿತು. "ಯಾ ಅಲ್ಲಾ" ಅಂತ ಚೀರಿ ಹಣೆಯೊತ್ತಿ ಹಿಡ್ಕೊಂಡು ನಿಂತಲ್ಲೇ ಅವನು ಕುಸಿದನು. ಥೇ ಅನ್ನುತ್ತ ಪೋಲೀಸಪ್ಪ ಅಲ್ಲಿಂದ ಮುಂದೆ ನಡೆದನು.

ಪೋಲೀಸರು ನಾಗ್ಯಾನ ಝೋಪಡಿಗೆ ನುಗ್ಗಿದರು. ಕೌದಿರಗಟಿಯ ಮೇಲೆ ಮಕ್ಕೊಂಡು ನೆಳ್ಳುತ್ತಿದ್ದ ಅವನ ಹೆಡ್ತಿ ಹೊಟ್ಟೆ ಹಿಡಿದುಕೊಂಡು ಮೆಲ್ಲನೆ ಎದ್ದು ಕುಂತಳು.

"ಏ ನಾಗ್ಯಾಯೆಲ್ಲಿ?" ಅಂತ ಬೆದರಿಸುತ್ತಲೇ ನುಗ್ಗಿದ ಪೋಲೀಸರ ಲಾಠಿ ಅಲ್ಲಿ ಅಡಿಕಿಲೇರಿಸಿದ್ದ ಗಡಿಗೆ ಮಡಿಕೆಗಳನ್ನು ಒಡೆದವು. "ನನಗ್ಗೊತ್ತಿಲ್ರೀ... ಯಾಕ್ರೀ?" ಗುಜ್ಜವ್ವ ನರಳುತ್ತಲೇ ಆಳುದನಿಯಲ್ಲಿ ಹೇಳಿದಳು. "ಬಸ್ ಸ್ಟ್ಯಾಂಡಿಂದ ಪಾಕೆಟ್ ಹೊಟ್ಕೊಂಡು ಬಂದಾನ ಸುವ್ವರ ನನ್ಮಗಾ... ಇವತ್ತ ಅವನಿಗೆ

ಹಿಡ್ಕೊಂಡೊಯ್ದು ಒದ್ದು ಮೈಯಾಗಿನ ಎಲು ಮುರಿತೀನಿ.... ಹಲ್ಕಟ್ ನಾಗ್ಯಾ... ನಮಗೇ ಚಳ್ಳಿಕಾಯಿ ತಿನಸ್ತಾನಾ ಅಂವಾ? ಪೋಲೀಸರ ಕಣ್ಣು ತಪ್ಪಿಸಿ ಯೆಲ್ಲಿಗೋಗ್ತಾನ... ಏ, ನಡ್ಯೋ....." ಅಂತ ಹೊರಡುವಾಗ ಆಳುತ್ತ ಕುಂತಿದ್ದ ಗುಜ್ಜವ್ವನ ಬೆನ್ನಿಗೆ ಪಕ್ಕನೆ ಬೂಟುಗಾಲಿನಿಂದ ಒದ್ದನು. "ಖರೇ ಹೇಳು.... ಎಲ್ಲಿ ಅಡಕ್ಕೊಂಡಾನ ನಿನ್ ಗಂಡಾ? ಇಲ್ಲಂದ್ರ ಛಿನಾಲೀ ನಿನಗೆಳ್ಕೊಂಡು ಒಯ್ತೀವಿ ಠೇಸನ್ನೀಗೆ.... ಅಲ್ಲೊಯ್ದು ನಿನಗ ಒದೀಲಕ್ತರ ನಿನ್ ಗಂಡಾ ನಾಗ್ಯಾ ಎಲ್ಲಿದ್ದರನೂ ತಾನೇ ಓಡಿ ಬರ್ತಾನ ನಂಬಲ್ಲೀ..... ಹಿಯ್ಕೊಂಡು ನಡ್ರೆಲೇ ಇಕೀಗಿ...." ಅಂದನು. (ಪು. ೨೪೬-೪೧ ಬದುಕು)

ಮೇಲಿನ ನಿದರ್ಶನದಲ್ಲಿ ನುಡಿಮಿಶ್ರಣವು ವ್ಯಕ್ತಿ ಮತ್ತು ಸಂದರ್ಭ ಬದಲಾದರೂ ಆಗದಿದ್ದರೂ ನಡೆದಿರುವ ಪ್ರಕ್ರಿಯೆಯಾಗಿದೆ.

ಅಧ್ಯಾಯ ಆರು

ಕನ್ನಡ ಪ್ರಭೇದಗಳ ಗುರುತುಗಳು

೬.೧. ಧ್ವನಿ ಶೈಲಿ

೬.೨. ಪದ ಶೈಲಿ

೬.೩. ವಾಕ್ಯ ಶೈಲಿ

೬.೪. ವಿಶಿಷ್ಟ ಪದಕೋಶ ಶೈಲಿ

ಅಧ್ಯಾಯ ೬

ಕನ್ನಡ ಪ್ರಭೇದಗಳ ಗುರುತುಗಳು

ಭಾಷೆಯಿಲ್ಲದೆ ಸಾಹಿತ್ಯವಿಲ್ಲ, ಆದರೆ ಭಾಷೆಯೊಂದೇ ಸಾಹಿತ್ಯವಲ್ಲ. ಹಾಗೆಯೇ ಸಾಹಿತ್ಯವೆಲ್ಲ ಭಾಷೆಯಲ್ಲ, ಭಾಷೆ ಮತ್ತು ಸಾಹಿತ್ಯ ಪರಸ್ಪರ ಒಂದನ್ನೊಂದು ಅವಲಂಬಿಸಿವೆ. ಭಾಷಿಕ ಶೈಲಿ ಮತ್ತು ಸಾಹಿತ್ಯಿಕ ಶೈಲಿಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಇದಕ್ಕೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬಳಕೆಯಾಗುವ ಭಾಷಾ ವೈವಿಧ್ಯವೇ ಪ್ರಮುಖ ಕಾರಣವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಶೈಲಿಯನ್ನು ಪಡೆದುಕೊಂಡಿರುತ್ತಾನೆ. ಇದು ಅವನ ಸಂದರ್ಭ ಹಾಗೂ ಸನ್ನಿವೇಶಗಳಿಗೆ ಸಂಬಂಧಿಸಿದ ವಿಚಾರವಾಗಿದೆ.

ವ್ಯಕ್ತಿ ಸಾಹಿತ್ಯದಲ್ಲಿ ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಭಾಷೆಯನ್ನು ಬಳಸುವುದರಿಂದ ಭಾಷಿಕ ಹಾಗೂ ಸಾಹಿತ್ಯಿಕ ಶೈಲಿಗಳು ಬೇರೆ ಬೇರೆಯಾಗಿ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ವ್ಯಕ್ತಿ ಸಾಹಿತ್ಯದಲ್ಲಿ ಮಾತ್ರವಲ್ಲದೆ ತನ್ನ ದಿನಚರಿಯ ವ್ಯವಹಾರದಲ್ಲೂ ಸಂದರ್ಭ ಹಾಗೂ ಸನ್ನಿವೇಶಗಳಿಗೆ ಅನುಸಾರವಾಗಿ ಭಾಷೆಯನ್ನು ಬಗೆ ಬಗೆಯಾಗಿ ಬಳಸುತ್ತಾನೆ. ಆದ್ದರಿಂದ ಸಾಹಿತ್ಯದ ಆ ವಿವಿಧ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುವ ಭಾಷಾ ವೈವಿದ್ಯಕ್ಕೂ ದಿನಚರಿಯ ವ್ಯವಹಾರದಲ್ಲಿ ಬಳಕೆಯಾಗುವ ಭಾಷಾವೈವಿಧ್ಯಕ್ಕೂ ವ್ಯತ್ಯಾಸವಿದೆ. ಈ ಬಗೆಯ ಭಾಷಾವೈವಿಧ್ಯವೇ ಶೈಲಿಗಳು ಬೇರೆ ಬೇರೆಯಾಗಿ ಕಾಣಿಸಿಕೊಳ್ಳಲು ಕಾರಣವಾಗಿದೆ.

ಭಾಷಿಕ ಶೈಲಿಯಲ್ಲಿ ಮುಖ್ಯವಾಗಿ ಎರಡು ಬಗೆ, ಒಂದು ಬರಹದ ಭಾಷೆಗೆ ಸಂಬಂಧಿಸಿದ್ದು, ಇನ್ನೊಂದು ಆಡುಭಾಷೆಗೆ ಸಂಬಂಧಿಸಿದ್ದು, ಬರಹದ ಆಡುಮಾತಿನ ಶೈಲಿ, ಬರಹದ ಭಾಷೆಯ ಶೈಲಿಗಿಂತ ಭಿನ್ನವಾಗಿರುತ್ತದೆ. ಈ ಬಗೆಯ ವ್ಯತ್ಯಾಸಕ್ಕೆ ಆಡುಭಾಷೆ ಮತ್ತು ಬರಹದ ಭಾಷೆಗಳು ಮತ್ತು ಅವುಗಳ ಬಳಕೆ ಕಾರಣವಾಗಿದೆ. ಈ ಎರಡು ಬಗೆಯ ಸಾಹಿತ್ಯಿಕ ಶೈಲಿಗಳಿಗೆ ಅವುಗಳ ಬಳಕೆ ಕಾರಣವಾಗಿದೆ. ಈ

ಎರಡು ಬಗೆಯ ಸಾಹಿತ್ಯಿಕ ಶೈಲಿಗಳಿಗೆ ಅವುಗಳಲ್ಲಿ ಬಳಕೆಯಾಗುವ ಭಾಷೆ ಕಾರಣವಾಗಿದ್ದರೂ ಅವುಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಬಗೆಯಲ್ಲಿ ಬಳಸಲಾಗಿದೆ ಎಂಬುದನ್ನು ಪರಿಶೀಲಿಸುವುದು ಅತ್ಯಾವಶ್ಯಕ.

ಸಾಹಿತ್ಯ ರಚನೆಯಲ್ಲಿ ಭಾಷೆಯ ಧ್ವನಿ, ಪದ, ಅರ್ಥ, ಶಬ್ದ ವಾಕ್ಯ ಇವು ಬಹುಮುಖ್ಯ ಪಾತ್ರ ವಹಿಸುತ್ತವೆ. ಇದರಿಂದಾಗಿ ಸಾಹಿತ್ಯಕ್ಕೆ ಭಾಷೆಯೂ, ಭಾಷೆಗೆ ಸಾಹಿತ್ಯವೂ ಪರಸ್ಪರ ಪೂರಕವಾಗಿದೆ. ಇವು ಪರಸ್ಪರ ಹೊಂದಿಕೊಂಡು ಇರುವುದರಿಂದಲೇ ಸಾಹಿತ್ಯದಿಂದ ಭಾಷೆಯನ್ನು ಭಾಷೆಯಿಂದ ಸಾಹಿತ್ಯವನ್ನು ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಸಾಹಿತ್ಯವನ್ನು ರಚಿಸುವ ವ್ಯಕ್ತಿ ಸಾಮಾಜಿಕ ಪರಿಸರ ಹಾಗೂ ಪರಿಸ್ಥಿತಿಗಳಿಗೆ ತಕ್ಕಂತೆ ವಿವಿಧಸ್ತರಗಳಲ್ಲಿ ಭಾಷೆಯನ್ನು ಬಳಸುತ್ತಾನೆ. ಇದರಿಂದಾಗಿ ಸಾಮಾನ್ಯ ಭಾಷೆಗೂ ಸಾಹಿತ್ಯಕ ವ್ಯತ್ಯಾಸ ಕಾಣಿಸಿಕೊಳ್ಳುವುದು. ಭಾಷೆಯನ್ನು ಆದಷ್ಟು ಆಕರ್ಷಿಕವಾಗಿ ಬಳಸುವುದು ಸಾಹಿತಿಯ ಬಹುಮುಖ್ಯ ಉದ್ದೇಶವಾಗಿರುತ್ತದೆ. ಆದುದರಿಂದ ಸೃಜನಶೀಲ ಲೇಖಕರು ಸಾಹಿತ್ಯಿಕ ಭಾಷೆಯನ್ನು ದಿನನಿತ್ಯದ ಭಾಷೆಗಿಂತ ಭಿನ್ನವಾಗಿ ರಚಿಸುತ್ತಾರೆ.

ಒಟ್ಟಿನಲ್ಲಿ ಶೈಲಿ ಎಂಬುದು ಅದರ ಅಭಿವ್ಯಕ್ತಿಗೆ ಸಂಬಂಧಿಸಿದ್ದು ಎಂದು ಹೇಳಬಹುದು. ಪ್ರತಿಯೊಂದು ಭಾಷೆಯೂ ತನ್ನದೇ ಆದ ಧ್ವನಿ ರೂಪ, ಶಬ್ದ, ವಾಕ್ಯಗಳನ್ನು ಹೊಂದಿರುತ್ತದೆ. ಈ ಶಬ್ದ ಹಾಗೂ ಧ್ವನಿಸಮೂಹ ವಾಕ್ಯ ರಚನೆಗಳು ಬಹುಮುಖ್ಯವಾದ ಅಂಗಗಳು. ಇವುಗಳ ಮೂಲಕ ಭಾಷೆ ವ್ಯಕ್ತವಾಗುತ್ತದೆ. ಯಾವ ವ್ಯಕ್ತಿ ತನ್ನ ಬರಹದಲ್ಲಿ ಅಥವಾ ಮಾತಿನಲ್ಲಿ ತನ್ನತನವನ್ನು ಭಾಷೆಯ ಮೂಲಕ ಪ್ರತಿಬಿಂಬಿಸಬಲ್ಲನೋ ಅದು ಅವನ ಶೈಲಿಯಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಶೈಲಿಯನ್ನು ಹೊಂದಿರುತ್ತಾನೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿ ಕಾಣಿಸಿಕೊಳ್ಳುತ್ತದೆ. ಈ ವ್ಯಕ್ತಿಗತವಾದ ಶೈಲಿಯನ್ನು ಮುಖ್ಯವಾಗಿ ಸಾಮಾನ್ಯ ಶೈಲಿ ಮತ್ತು ವಿಶಿಷ್ಟ ಶೈಲಿ ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿ ಕೊಳ್ಳಬಹುದು. ಯಾವ ವ್ಯಕ್ತಿ ಭಾಷೆಯನ್ನು ಸಾಮಾನ್ಯ ರೀತಿಯಲ್ಲಿ ಬಳಸುತ್ತಾನೋ. ಅದು ಅವನ ಸಾಮಾನ್ಯ ಶೈಲಿಯೆನಿಸಿಕೊಳ್ಳುತ್ತದೆ. ಅಂತೆಯೇ ಯಾವ ವ್ಯಕ್ತಿ ಭಾಷೆಯನ್ನು ಸಾಮಾನ್ಯ ಶೈಲಿಗಿಂತ ಭಿನ್ನವಾಗಿ ಬಳಸುತ್ತಾನೋ ಅದು ವಿಶಿಷ್ಟ ಶೈಲಿಯಾಗಿರುತ್ತದೆ. ಸಾಮಾನ್ಯ ಶೈಲಿ ರೂಢಿಯಲ್ಲಿರುವ ಶೈಲಿ ಅದರಲ್ಲಿ ಸ್ವಂತಿಕೆ ಎಂಬುದೇನು ಇರುವುದಿಲ್ಲ. ವಿಶಿಷ್ಟ ಶೈಲಿ ವಿಶಿಷ್ಟವಾದದ್ದು. ಇದರಲ್ಲಿ ತನ್ನತನವಿರುತ್ತದೆ. ಸಾಮಾನ್ಯ ಭಾಷೆಯಲ್ಲಿ ಕಂಡುಬರುವ ಧ್ವನಿ, ರೂಪ, ಶಬ್ದ, ಅರ್ಥ, ವಾಕ್ಯ ಮುಂತಾದವುಗಳನ್ನು ಸಂದರ್ಭ ಹಾಗೂ ಸನ್ನಿವೇಶಗಳಿಗೆ ಅನುಗುಣವಾಗಿ ವಿಶಿಷ್ಟವಾದ ರೀತಿಯಲ್ಲಿ ಮಾರ್ಪಡಿಸಿಕೊಂಡು ಬಳಸುವುದು ಶೈಲಿಯ ವಿಶೇಷತೆಯಲ್ಲಿ ಕಂಡುಬರುವ ಮುಖ್ಯ ಅಂಶ.

ಇತ್ತೀಚಿನ ದಿನಗಳಲ್ಲಿ ಹಲವು ಕನ್ನಡಗಳ ರೂಪಗಳು ಆಧುನೀಕರಣದ ಪ್ರಭಾವದಿಂದಾಗಿ ನಾಶ ವಾಗುತ್ತಿವೆ ಎಂಬ ಕೂಗು ಅಲ್ಲಲ್ಲಿ ಕೇಳಿಬರುತ್ತಿದೆ. ಹಾಗಾದರೆ ಒಂದು ಭಾಷೆ ಅಥವಾ ಅದರ ಪ್ರಭೇದಗಳು ನಾಶವಾಗುವುದು ಎಂದರೇನು? ಭಾಷೆ ಯಾವಾಗಲೂ ನಾಶವಾಗುವುದಿಲ್ಲ. ಬದಲಿಗೆ ಜನ ಸಾಮಾನ್ಯರ

ಬಳಕೆಯಿಂದ ತಪ್ಪಿಹೋಗಿ ಅವುಗಳ ಬಳಕೆ ನಿರ್ದಿಷ್ಟವಾಗುತ್ತದೆ. ಈ ಪ್ರಕ್ರಿಯೆಯ ಮುಂದಿನ ಹೆಜ್ಜೆಯೇ ನಾಶವಾಗುವುದು.

ಈ ಪ್ರಕ್ರಿಯೆಗೆ ಕಾರಣವನ್ನು ನೋಡುವುದಾದರೆ; ವ್ಯಕ್ತಿ ಹಿಂದಿನಂತೆ ಕೇವಲ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಪ್ರಪಂಚವೇ ಒಂದು ಹಳ್ಳಿಯಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಅವನು ಪ್ರಪಂಚದೊಡನೆ ಒಡನಾಡಿಯಾಗಲು ಹಂಬಲಿಸುತ್ತಾನೆ. ಇದಕ್ಕೆ ಶಿಕ್ಷಣ, ಸಾರಿಗೆ ಸಂಪರ್ಕ, ಮಾಧ್ಯಮಗಳು, ವಲಸೆ, ಉದ್ಯೋಗ, ಶಿಷ್ಟೀಕರಣ, ಯಾಜಮಾನ್ಯ ಭಾಷೆಯ ದಟ್ಟ ಪ್ರಭಾವಗಳೂ ಕೂಡ ಕಾರಣವಾಗಿವೆ. ಇಂತಹ ಹಲವು ಕಾರಣಗಳಿಂದ ಪ್ರಭೇದಗಳ ನಡುವಿನ ವ್ಯತ್ಯಾಸ ಕಡಿಮೆಯಾಗುತ್ತಿರುವುದರ ಲಕ್ಷಣ ಕಂಡು ಬರುತ್ತದೆ. ಇದರಿಂದ ಪ್ರಭೇದಗಳಲ್ಲಿ ಬಳಕೆಯಲ್ಲಿದ್ದ ದೇಶೀ ಸೊಗಡಿನ ಅಪರೂಪದ ಶಬ್ದ ಸಂಪತ್ತು ಬಳಕೆಯಿಂದ ತಪ್ಪಿ ಹೋಗುತ್ತಿದೆ. ಈ ವಿಶಿಷ್ಟ ಪದಗಳು ಕೇವಲ ಕಣ್ಣಿನ ಭಾಷೆಯಾಗಿ ಉಳಿದಿವೆಯೇ ಹೊರತು. ಕಿವಿಯ ಭಾಷೆಯಾಗಿ ಉಳಿದಿಲ್ಲ ಎಂಬುದು ಗಮನಿಸುವಂತಹ ಅಂಶ. ಉದಾಹರಣೆಗೆ, ಚಾಮರಾಜನಗರ ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಮರಕೋತಿ ಆಟ, ಬೀರ್‌ಚೆಂಡಾಟ, ಗೋಲಿ ಆಟ, ಬುಗುರಿ ಆಟ ಇತ್ಯಾದಿ ನಾನಾ ಬಗೆಯ ಆಟಗಳಿವೆ. ಗೋಲಿ ಆಟದಲ್ಲಿ ಮತ್ತು ಒಳ ಬಗೆಗಳಿವೆ. ಉದಾಹರಣೆಗೆ ಪೆಂದ್ಯ, ಮೇರಿ, ಬದ, ತಿಕಾಟ ಮುಂತಾದ ನಮೂನೆಗಳಿವೆ. ಆದರೆ ಇವೆಲ್ಲವುಗಳ ಮೇಲೆ ಕ್ರಿಕೆಟ್, ಚೆಸ್, ಕಾಕ್‌ನಂತಹ ಆಟಗಳು ಸವಾರಿ ಮಾಡುತ್ತಿರುವುದುರಿಂದ ಈ ಆಟಗಳು ಕಿವಿಯಿಂದ ಮಾಯವಾಗುತ್ತಿದೆ.

ಹಾಗೆಯೇ ಜಗ್ಗಿ, ಭಾಳ, ತುಂಬಾ, ಶಾನೆ ಎಂಬ ರೂಪಗಳು ವಿವಿಧ ಪ್ರಭೇದಗಳಲ್ಲಿ ಬಳಕೆಯಲ್ಲಿವೆ. ಆದರೆ ಈ ಪದಗಳ ಕೆಲಸವನ್ನು 'ರಶ್ಯು' ಎಂಬ ಒಂದೇ ಪದನಿರ್ವಹಿಸುತ್ತದೆ. ಹೀಗಾಗಿ ವಿವಿಧ ವಲಯ ಗಳಲ್ಲಿದ್ದ ಅದಕ್ಕೆ ಸಮಾನಾರ್ಥಕವಾದ ಪದಗಳು ಮಾಯವಾಗುತ್ತಿವೆ. ಇವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಕೆಲಸವನ್ನು ಸಮೂಹ ಮಾಧ್ಯಮಗಳು, ಸಾಹಿತಿಗಳು, ಭಾಷಾ ಆಸಕ್ತರು ಮುಂತಾದವರು ಮಾಡಬೇಕಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಸೃಜನಶೀಲ ಲೇಖಕರು ಆಯಾ ಪ್ರದೇಶದ ಭಾಷಾ ಅನನ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಹಾಗೂ ಯಥಾವತ್ತಾಗಿ ಪ್ರತಿನಿಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಧ್ವನಿ, ಪದ, ವಾಕ್ಯ ಮತ್ತು ವಿಶಿಷ್ಟ ಪದಕೋಶಗಳ ಹಂತಗಳಲ್ಲಿ ಚರ್ಚಿಸಲಾಗಿದೆ.

'ಕುಸುಮಬಾಲೆ' ಕೃತಿಯಲ್ಲಿನ ದೇವನೂರು ಮಹಾದೇವರ ಬರವಣಿಗೆಯನ್ನು ಕುರಿತು ಡಾ. ಸಿ.ಎನ್. ರಾಮಚಂದ್ರನ್‌ರವರು "ಕುಸುಮಬಾಲೆಯ ಭಾಷೆ ಕನ್ನಡದ ಪ್ರಾದೇಶಿಕ ದಲಿತ ಕನ್ನಡ ಅತ್ಯಂತ ಗ್ರಾಂಥಿಕ ಕನ್ನಡ ಮತ್ತು ಕನ್ನಡದ ಪ್ರಸಿದ್ಧ ಮೌಖಿಕ ಮಹಾಕಾವ್ಯವಾದ ಮಲೆಯ ಮಹಾದೇಶ್ವರದ ಭಾಷೆ ಹಾಗೂ ಲಯ ಇವೆಲ್ಲವೂ ಅನಿರೀಕ್ಷಿತವಾಗಿ ಒಂದನ್ನೊಂದು ಕೃತಿಯಲ್ಲಿ ಹಿಂಬಾಲಿಸುತ್ತವೆ" (ಡಾ. ಸಿ.ಎನ್. ರಾಮಚಂದ್ರನ್, ಯಾರಜಪ್ತಿಗೂ ಸಿಗದ ನವಿಲುಗಳು, ಪು.೧೭೨) ಎಂಬುದಾಗಿ ಅಭಿಪ್ರಾಯಪಟ್ಟರೆ,

"ಕುಸುಮಬಾಲೆಯ ಕನ್ನಡ ಹಿಂದೆ ಯಾವ ಕಾದಂಬರಿಯಲ್ಲೂ ಕಾಣದ ನಂಜನಗೂಡು ಆಸುಪಾಸಿನ ಗ್ರಾಮ್ಯದಲಿತರ ಆಡುಭಾಷೆ, ಆ ದೀರ್ಘಗಳು, ಬಾಗು, ಬಳುಕುಗಳು ಕೆಲವು ಪದಗಳ ದ್ವಿರುಕ್ತಿಗಳೂ ಕೆಲವು ವಾಕ್ಯಗಳ ಸಡನ್ ಮುರಿತಗಳೂ ಇವೆಲ್ಲಾ ರೂಢಿಗತವಾದದ್ದನ್ನೇ ಓದಿಬಲ್ಲ ಓದುಗರಿಗೆ ಟಾಂಗ್ ಕೊಟ್ಟಂತೆ ಇದು ಕ್ಲಿಷ್ಟ ಹಾಗೂ ಕಷ್ಟ ಎನ್ನುವ ಭ್ರಮೆಯನ್ನು ಮೂಡಿಸುತ್ತವೆ. ಕುಸುಮಬಾಲೆ ಸುಮ್ಮನೆ ಓದುತ್ತಾ ಹೋದರೆ ಗಿಟ್ಟುವುದಿಲ್ಲ, ಓದು ಓದುತ್ತಲೇ ಕೇಳಿಸಿಕೊಳ್ಳಬೇಕು. ಮಹಾದೇವ ಕತೆ ಬರೆದಿದ್ದಾರೆ ಎನ್ನುವುದಕ್ಕಿಂತ ಕಥೆ ಹೇಳುತ್ತಿದ್ದಾರೆ. ಅದಕ್ಕೆ ಒಂದು ವಿಶಿಷ್ಟ ಧ್ವನಿ ತರಂಗವುಂಟು. ಸಾಹಿತ್ಯ ನುಡಿಗಟ್ಟಿನ ಧ್ವನಿ ಮಾತ್ರವಲ್ಲ. ಇಂದ್ರಿಯ ಗ್ರಾಹ್ಯವಾದ ಧ್ವನಿ ಅಂದರೆ ಕುಸುಮ ಬಾಲೆ ಪುಸ್ತಕ ಹೇಗೆಯೋ ಹಾಗೆ ಆಡಿಯೋ ಕ್ಯಾಸೆಟ್ಟು ಕೂಡಾ" (ಸಿ.ಆರ್. ಸಿಂಹ, ಯಾರಜಪ್ಪಿಗೂ ಸಿಗದ ನವಿಲುಗಳು, ಪು. ೯೦-೯೧) ಎಂಬುದಾಗಿ ಸಿ.ಆರ್.ಸಿಂಹ ಅವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಕಾದಂಬರಿಯಿಂದಲೇ ಕೆಲವು ನಿದರ್ಶನಗಳನ್ನು ನೋಡುವುದಾದರೆ,

* ಒಂದು ಆನ ನುಗ್ಗೂವಷ್ಟಿದ್ದ ಆ ದಾರಂದವು ಆ ಊರಾಗಿದ್ದ ಊರು ಒಂದ್ಸಲ ಆಕಳಿಸಿದಷ್ಟು ಸಬುದ ಮಾಡ್ತ ತಕ್ಕಂಡಿತು. ಆಗಲೀಗ ಹಟ್ಟೀಯ ಒಳಗಿದ್ದೂ ಇದ್ದೂ ಬೇಚಾರು ತುಂಬ್ಕಂಡಿದ್ದ ಕತ್ತಲು, ಬಾಗಲು ತೆಗೆಯುವುದನ್ನೆ ಕಾಯುತ್ತಿದ್ದು ಹೊರಬಂದುದೆ ಉಸುರು ಬುಡಲು, ಹಾಗೆಯೇ ಹಟ್ಟೀ ಹೊರಗಿದ್ದ ಕತ್ತಲೂಗ ತಾನೂ ಒಂದ್ಸಲ ಹಟ್ಟೀಯ ಒಳಚಂದ್ವ ನೋಡುವ ಅನ್ಸಿ ಅದೂ ಒಳಬಂತು. (ಪು.೧೦೫ ಕುಸುಮಬಾಲೆ)

* ದೇವಮಾನವರಂತೆ ರೆಪ್ಪ ಮಿಟುಕಿಸದ ಆ ಬೆರಗು ಕಣ್ಗಳ ಒಳುಕ್ಕ ಕಯ್ಯಣ್ಣ ಸೊಳ್ಳಿನ ತಂಪಾದ ಬೆಳೂಕು ಬಿದ್ದು ಅದು ಅಲ್ಲಿಂದ ಇನ್ನೂವಿ ತಂಪಾಗಿ ನೆಲಕ ಚೆಲ್ಲುತ್ತಿತ್ತು ಇನ್ನು ಅವನ ಬಾಯಳತೆಗೆ ಮೀರಿ ಸುರಿಯುತ್ತಿದ್ದ ಹೆಚ್ಚುವರಿ ಜೊಲ್ಲನ್ನು ಭೂಮಿತಾಯಿ ತನ್ನೆಡು ಕೈಗಳಿಂದಲು ಆತುಗೊಳ್ಳುತ್ತಿದ್ದಳು. (ಪು.೧೦೬ ಕುಸುಮಬಾಲೆ)

ಹೀಗೆ ಕುಸುಮಬಾಲೆ ಕಾದಂಬರಿಯಲ್ಲಿ ದೇವನೂರರ ರೂಪಕಶಕ್ತಿ ನವನವೀನವಾಗಿ ಮೂಡಿಬಂದಿದೆ.

ವೈಶಾಖ ಕಾದಂಬರಿಯಲ್ಲಿನ "ಚದುರಂಗ"ರ ಬರವಣಿಗೆಯನ್ನು ಕುರಿತು, ಡಾ. ಕೆ.ವಿ. ನಾರಾಯಣರವರು ಕಾದಂಬರಿಯ ನಿರೂಪಣಾ ವಿಧಾನದಲ್ಲಿ ಒಂದು ಪ್ರಯೋಗ ಮಾಡಲಾಗಿದೆ. ಸರ್ವಸಾಕ್ಷಿತ್ವ ನಿರೂಪಣೆಯೊಂದಿಗೆ ಲಕ್ಕನ ಮೂಲಕ ಪ್ರಥಮ ಪುರುಷ ನಿರೂಪಣೆಯನ್ನು ನಿರ್ವಹಿಸಲಾಗಿದೆ. ಆಗಾಗ ರುಕ್ಮಿಣಿಯ ಮನೋ ಲಹರಿಯ ಮೂಲಕವೂ ನಿರೂಪಣೆ ನಡೆದಿದೆ. ಇದನ್ನು ಬಿಟ್ಟರೆ ಅಂತರಂಗ ಪರಿವೀಕ್ಷಣೆಯ ಸೌಲಭ್ಯವಿರುವ ಇನ್ನೊಂದು ಪಾತ್ರವೆಂದರೆ ಕೃಷ್ಣಾಶಾಸ್ತ್ರೀಗಳದ್ದು, ಲಕ್ಕನ ಮೂಲಕ ಇಲ್ಲವೇ ಅವನ ಪರಿಸರವನ್ನೊಳಗೊಂಡ ನಿರೂಪಣೆ ನಡೆಯುವಾಗ ಅವನ ಸಾಮಾಜಿಕ ಉಪಭಾಷೆಯನ್ನು ಬಳಸಲಾಗಿದ್ದು, ಉಳಿದೆಡೆಗಳಲ್ಲಿ ಬಹು ಮಟ್ಟಿಗೆ ಶಿಷ್ಟ ಕನ್ನಡದ ರೂಪವನ್ನು ಉಪಯೋಗಿಸಿಕೊಳ್ಳಲಾಗಿದೆ. ಈ ವಿಭಜನೆ ಕಾದಂಬರಿಯ ಶೈಲಿಗೆ ಬಹುತ್ವವನ್ನು ತಂದಿದೆಯಲ್ಲದೆ, ಅದರ ಮುಖ್ಯ ಧಾಟಿಯನ್ನು ಗುರುತಿಸಲು ಯೋಜಿತವಾಗಿದೆ." (ಡಾ. ಕೆ.ವಿ.

ನಾರಾಯಣ ಬೇರು ಕಾಂಡ ಚಿಗುರು, ಪು.೩೩೦) ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಇದಕ್ಕೆ ಕಾದಂಬರಿಯಿಂದ ಉದಾಹರಣೆಗಳನ್ನು ನೋಡಬಹುದು.

" ...ಅಣೆ ಬರಾವು. ಏನು ಮಾಡಕ್ಕಾದಾತು? ನಿಟ್ಟುಸಿರುಬಿಟ್ಟು "ಸಮಾಸು, ಅಯ್ಯ ಎಂಗವ್ನೆ?" ಕೇಳಿದ.

"ಅಯ್ಯಂದು ಮೊದ್ಲೆ ರಂಪ ಆಗಿದ್ವದ್ದು, ಈಗ ಅಡರಂಪ ಆಗೋಗದೆ... ಅವ್ನ ಕತೆ ಅಮ್ಯಾಕೆಯೋಳಿ ಕ್ವಟ್ಟೀನಂತೆ, ನಿನ್ನ ಗುಡ್ಲಿಗೆ ನಡಿ."

ಲಕ್ಕ "ಅದೂ ಸರಿ, ನಿನ್ನ ನನ್ನ ಇಬ್ಬರ್ನೂವೆ ನಮ್ಮೂರೋರು ಯಾರಾರು ಇಲ್ಲಿ ನ್ವಾಡದ್ರೆ ನಮ್ಮ ಕತೇನೆ ಮುಗೀತು. ಬಾ, ಬಾ, ಗುಡ್ಲೋಳೀಕೆ ವೋಗವ" ಎಂದು ಎಚ್ಚೆಕಿತ್ತ.

ಗುಡ್ಲ ಬಾಗಿಲ ತೆಗೆದು ದೀಪ ಕತ್ತಿಸ್ವಾಗ, ಕಲ್ಯಾಣಿ,

"ಪರವಿಲ್ಲ, ವಾಸ ಮಾಡಬೈದು. ನೀನು ಗೋಸುಸಾಬರ ವೊಲದ ತೆವರೀಲಿ ಜೋಪಡಿ ಎತ್ತಿದ್ದೀ ಅಂತ ಕ್ಯಾಳಿ, ಏನೊ ಎಂತೊ ಅಂತಿದ್ದೆ... ಗೋಸುಸಾಬ್ರೇ ಆಸಿಕೊಟ್ರ?"

"ಗೋಸಸಾಬ್ರು ಈ ಜೋಪಡಿ ಆಕಕ್ಕೆ ಏನೇನು ಬೇಕೋ ಅದೆಲ್ಲಾನು ಕ್ವಟ್ಟರು. ಅವರ ಸೀನೇಯಿತ ಕರಿಯಪ್ಪನೂ ವಸಿ ಕ್ವಟ್ಟ ಅನ್ನು. ಮಡಿಕೆ ಮುಕ್ಕಸ ಆ ಸಾಬ್ರೇ ಕ್ವಟ್ಟರು".

ಈ ಜೋಪಡೀನೂ ಕಟ್ಟಿಸಿಕ್ವಟ್ರ?"

"ಇದೇನವ್ವ, ನೀ ಯೋಳಾದು ಇತ್ತತ್ತ ಬಾ ಅಂದ್ರೆ ಇದ್ದದ್ನೆಲ್ಲ ಕಿತ್ತುಗಂಡರು ಅಂದಂಗಾಯ್ತು ಅವರು ಸಾಮಾನು ಕ್ವಟ್ಟರು. ನಾ ಕಟ್ಟಿಕಂಡೆ (ಪು. ೨೭೯).

ಶಿಷ್ಟ ಭಾಷೆಗೆ

....ಬುಟ್ಟಿಯಲ್ಲಿದ್ದ ತಿನಿಸನ್ನೆಲ್ಲ ಅದರೊಳಗೆ ಸುರಿದು ತನ್ನ ಸ್ನೇಹಿತರಿಗೆಂದು ಕೊಂಡುಹೋಗುತ್ತಿರುವಾಗ ನಾನು ಅಡ್ಡ ನಿಂತು "ಹೀಗೆ ಮಾಡಬೇಡವೊ ಶೇಷಾ ನೀನಿದ್ದೂ ಈ ದಾಂದಲೆಗೆ ಹೇಗೆ ಅವಕಾಶ ಕೊಟ್ಟೆ? ಎಂದು ಅಮ್ಮ ಕೇಳಿದರೆ, ಆಗ ನಾನೇನು ಹೇಳಬೇಕು?" ಎಂದೆಲ್ಲ ಬೇಡಿದೆ. ಅವನು ಕುಪಿತನಾಗಿ ಅಡ್ಡನಿಂತ ನನ್ನನ್ನು ಜೋರಿನಿಂದ ತಳ್ಳಿ ಹೊರ ನಡೆದಿದ್ದ ಸಾತು ಬಂದಾಗ ನಡೆದುದನನೆಲ್ಲ ವಿವರಿಸಿದೆ. ಅವಳು ಅದಕ್ಕೆ ಏನು ಹೇಳಬೇಕು.

"ಏನೇ, ನನ್ನ ಮಗನ ಮೇಲೆ ಚಾಡಿ ಹೇಳಲಿಕ್ಕೆ ಶುರು ಮಾಡಿಬಿಟ್ಟಿಯೇನೆ? ಅವನೆಲ್ಲೊ ತನ್ನ ಸ್ನೇಹಿತರಿಗೆ ಎಂದು ಕೊಂಚ ತಗೊಂಡು ಹೋಗಿರಬಹುದು. ನಾ ಇಲ್ಲ ಅನ್ನಲ್ಲ, ಆದರೆ ಆ ನೆಪದಲ್ಲಿ ನೀನೇ ಎಷ್ಟು ಸ್ವಾಹಾ ಮಾಡಿರಬಹುದು? ಅದನ್ನೇಕೆ ಹೇಳಲ್ಲ?"

ಯಾರಾದರೂ ಅನ್ಯಾಯ ಮಾತಾಡಿವಾಗ ನನಗೆ ಯಾಕೆ ಹೀಗೆ ಕಣ್ಣಲ್ಲಿ ನೀರು ತುಂಬುತ್ತೋ, ಹಾಳು! ಗಟ್ಟಿಯಾಗಬೇಕು... ಸಮಾಧಾನ ಮಾಡಿಕೊಳ್ಳುತ್ತ, ಕಂಬನಿಯನ್ನು ಸೀರೆಯ ಸೆರಗಿನಿಂದ ಒತ್ತಿ,

"ಇಲ್ಲ, ಸಾತು ನಾನು ನಿನಗೆ ಹೇಳಿದ್ದರಲ್ಲಿ ರವೆಯಷ್ಟೂ ಸುಳ್ಳಿಲ್ಲ. ಬೇಕಾದರೆ ಗೋಡೆಗೆ ನೇತುಹಾಕಿರುವ ಆ ಕೋದಂಡರಾಮನ ಪಟ ತೆಗೊ. ಅದನ್ನು ಮುಟ್ಟಿ ಪ್ರಮಾಣ ಮಾಡ್ತೀನಿ" ಎಂದೆ.

"ಹೋಗೆ, ಹೋಗೆ. ದನ ತಿನ್ನೋನಿಗೆ ಗೊಬ್ಬರದ ಆಣೆ ಅನ್ನೋ ಹಾಗೆ, ನಿನ್ನ ಪ್ರಮಾಣ ಒಂದು ಕೇಡು" ಸಾತು ಹೀಗೆ ನನ್ನ ಮಾತನ್ನು ಒಪ್ಪಲೇ ಇಲ್ಲ.. (ಪು.೫೮).

ಚದುರಂಗ ಹಾಗೂ ದೇವನೂರು ಮಹಾದೇವರವರ ಕಾದಂಬರಿಗಳಲ್ಲಿನ ಭಾಷಾ ಬಳಕೆಯಲ್ಲಿ ನಂಜನಗೂಡು ಹಾಗೂ ಮೈಸೂರು ಪ್ರದೇಶಗಳಲ್ಲಿ ಕಂಡುಬರುವ ಧ್ವನಿ ರಚನಾ ಪ್ರಕ್ರಿಯೆ. ಆಕೃತಿ ಪದ ಮಾ ಪ್ರಕ್ರಿಯೆ, ವಾಕ್ಯ ರಚನೆಗಳು ಮತ್ತು ವಿಶಿಷ್ಟ ಪದ ಪ್ರಯೋಗಗಳು ಕಂಡುಬರುತ್ತವೆ. ಇವು ಕಾದಂಬರಿಗೆ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿವೆಯಲ್ಲದೆ, ಮೈಸೂರು ಪ್ರದೇಶವನ್ನು ವಿಶಿಷ್ಟಗೊಳಿಸುವಲ್ಲಿ ಹಾಗೂ ಭಿನ್ನಗೊಳಿಸುವಲ್ಲಿ ಸಹಾಯಕವಾಗಿವೆ. ಆದುದರಿಂದ ಮೈಸೂರು ಪ್ರದೇಶವನ್ನು ಪ್ರತಿನಿಧಿಸುವ ಕುಸುಮಬಾಲೆ ಮತ್ತು ವೈಶಾಖ ಕಾದಂಬರಿಗಳ ಧ್ವನಿ, ಪದ, ವಾಕ್ಯ, ವಿಶಿಷ್ಟಪದ ಕೋಶ ಹಂತದ ಶೈಲಿಯನ್ನು ವಿಶ್ಲೇಷಿಸುತ್ತ, ನಿದರ್ಶನಕ್ಕೆ ಈ ಎರಡು ಕಾದಂಬರಿಗಳಿಂದಲೇ ಉದಾಹರಣೆಗಳನ್ನು ನೀಡಲಾಗಿದೆ.

ಧ್ವನಿ ಶೈಲಿ

೧. ಕೆಲವು ಶಬ್ದಗಳ ಆದಿಯ ಒ ಓ ಕಾರಗಳು ವ ಕಾರವನ್ನು ಪಡೆಯುತ್ತವೆ.

ಉದಾಹರಣೆಗೆ : "ಈ ಮರಳು ದಿಣ್ಣೆ ಆಚ್ಗೆ ಇರೋದು ನದಿ. ಕಾವೇರಿ ನದಿ. ಈ ನದಿಯ ಆಚ್ಗೆ ದಡವಾಗಿರೋ ಊರೇ ಮಾಲಂಗಿ..."

ಪುರೋಯಿತರು ಇನ್ನೂವೆ ಮಾತ ಮುಗಿಸ್ನೇ ಇಲ್ಲ. ನದಿ ಅದೆ, ಅನ್ನಾ ಸುದ್ಧಿ ಕರ್ನಕೆ ತಲುಪ್ದ ಕೂಡ್ಲೆ, ಬಿದ್ದಂಬೀಳ ಅಲ್ಲಿಂದ ವಾಟವೋಡದ್ನಂತೆ ನಮ್ಮಣ್ಣ....! (ಪು. ೧೦೦, ವೈಶಾಖ)

ಓಟ - ವಾಟ

೨. ಕೆಲವು ಶಬ್ದಗಳ ಆದಿಯ ಇ, ಎ, ಏ, ಕಾರಗಳು ಯ ಕಾರವಾಗುತ್ತವೆ.

ಉದಾಹರಣೆಗೆ : "......ಗೋತ್ರ್ಯಯ್ಯಾ ನಿಮ್ಗ? ಸಾವಿರಾರು ಋತುಮಾನಗಳ ಹಿಂದ್ಲ ನಡೆನುಡಿ ಗೊತ್ತಾ ನಿಮ್ಗ? ಗೋತ್ತಾ? ಆಗ ನಂ ಜಾತಿ ಬಡ್ಡೆತ್ತವು ಮಡ್ತಿದ್ದ ಕೇಮಿ ಯಾನ ಅಂತ ಗೊತ್ರ್ಯಯ್ಯ". (ಪು. ೧೭೯ ಕುಸುಮಬಾಲೆ)

ಏನು - ಯಾನು

೩. ಕೆಲವು ವೇಳೆ ಎ ಕಾರಾಂತ ನಾಮಪದಗಳು ಅ ಕಾರಾಂತವಾಗುತ್ತವೆ.

ಉದಾ : "....ಮ್ಯಾಲ ಇದ್ನೆಲ್ಲಾ ನೋಡ್ತಾ ಇರೋ ಆ ದೇವೆಂದ್ರಾಯ ಅಪ್ಪಾರು ಸುಮ್ಗಿದ್ದಾ? ಸುಮ್ಕಿರ್ಲಾರ್ದೆ ಏನ್ಮಾಡ್ದ? "ನೋಡೌ, ಇದರ ದುಡ ಪರೀಕ್ಷವು" ಅಂದ್ಕಂಡು ಮಳ ಬರ್ಸಿದನಂತ ಮಳ್ಳ. (ಪು. ೧೭೭, ಕುಸುಮಬಾಲೆ)

ಮಳೆ - ಮಳ

೪. ಕೆಲವು ಶಬ್ದಗಳ ಸ್ವರವು ಬಿದ್ದು ಹೋಗುತ್ತವೆ.

ಉದಾ : "ನಾವು ಇಂಗೆ ಅಳ್ತಾ ಕುಂತರೆ, ಯಾವ ಸುಕವ? ...ನಾನು ಜೀತಕೆ ಇರಬೇಕಾಯ್ತಲ್ಲ ಅಂತಾನ ನಾ ಚಿಂತೆ ಮಾಡಕ್ಕಿಲ್ಲ. ಆದ್ರೆ ನಮ್ಮ ಲಕ್ಕನ ಇಂದ್ಕೆ ಆ ಮಟದ ಉಪಾದ್ಯ ಯಾನೋ ನೆಪ ತಕ್ಕಂಡು ಮಟ ಬುಡಸಿದ್ದ. ಈಗ ಪುನಾ ಮಟ್ಟಕ್ಕೆ ಸೇರುಸಾವ, ಬ್ಯಾರೆ ಉಪಾದ್ಯ ಬಂದವ್ನೆ ಅಂದರೆ ಈಗ ಅಣದ ಉಪಾದಿ ಆಗತುಕಂಡದೆ!... ಇದೇ ನನ್ನ ಮಿದ್ಲೆ ಕೆಡುಸ್ತಾ ಇರಾದು". (ಪು. ೧೦೭, ವೈಶಾಖ)

ಮೆದುಳು / ಮಿದುಲು - ಮಿದ್ಲೆ

೫. ಕೆಲವು ಶಬ್ದಗಳ ಆದಿಯ ಶ ಕಾರವು ಸ ಕಾರವಾಗಿ ಬದಲಾಗುತ್ತದೆ.

ಉದಾ : ಬುಂಡಮ್ಮ ನೆರೆಯಲ್ಲಿ ಕುಳಿತವರ ಸಂಗಡ, "ಸರಣ, ಸರಣ - ಇವ್ಳು ಬೋ ಸರಣ!" ಎಂದು ಎರಡು ಕೈಗಳಿಂದಲೂ ತನ್ನದೇ ಆದ ಅಭಿನಯವೈಖರಿಯಿಂದ ಆಣಕಿಸುತ್ತ, "ಅವ್ಳಿ, ಅವ್ಳಿ, ಅವ್ಳಿ ಒಂದಕಿಂತ ಒಂದೆಚ್ಚು ಇಲ್ಲಿ ಸೇರಿರೊ ಗುಬ್ಬಳಗಳು ಕನ್ರವ್ವ ...ಸೋ ಅಂದ್ರೆ ಸೋಬಾನೆ ಅನ್ನಾ ಜನ!" ಎಂದು ಕ್ರೋಧದಿಂದ ನುಡಿದು ಹೊಗೆ ಸೊಪ್ಪಿನ ಎಸಳನ್ನು ತಂಬುಲದ ಬಾಯಿಗೆ ಎಸೆದುಕೊಂಡಳು. (ಪು. ೨೫೭, ವೈಶಾಖ)

ಶರಣ - ಸರಣ

೬. ಕೆಲವು ಶಬ್ದಗಳ ಆದಿಯ ದ, ಗ ಕಾರಗಳು ಜ, ಕ ಕಾರಗಳಾಗಿ ಬದಲಾಗುತ್ತದೆ.

ಉದಾ : "ಅವ್ವೆ, ಇವ ಎಂಥಾ ಕೇಫ್‌ಮಾರಿ ಅಂತ ಗೊತ್ತವ್ವ. ಅಸ್ಟು ಊರೂರು ತಿರ್ಗತನಲ್ಲ... ಅಸ್ಟು ಓಟ್ಲು ರುಚ್ಯ ಕಂಡಿದ್ವಾನಲ್ಲ! ಆ್ನ! ಒಂಜಿನಾರು ನಂಗ ತಕ್ಕ ಬಂದು 'ಅಮ್ಮೇ ತಕ್ಕ.... ಮಸಾಲದೋಸ ತಂದೀನಿ ಕನ ತಿಂದ್ಕ...' ಅಂದಿಲ್ಲ. (ಪು. ೧೧೫ ಕುಸುಮಬಾಲೆ)

ದಿನ - ಜಿನ

೭. ಕೆಲವು ಶಬ್ದಗಲ್ಲಿ ಣ ಕಾರ ನ ಕಾರವಾಗುತ್ತದೆ.

ಉದಾ : ಪುಟ್ಟಾರಿಗೆ ಮಂಕು ಕವುದಂಗಾಗಿ, "ನಮ್ಮಯ್ಯಾ ಒಂದು ಮಾತ ಕ್ಯಾಳಬೇಕು" ಅಂತ ತೊವಲಿದ್ನಂತೆ. ಆದ್ರೆ. "ನಡಿ, ಅವುನ ತಾವಿಕೇ ವೋಗಾನ. ನಿಮ್ಮಯ್ಯಂಗೇ ನ್ಯಾಯ ಕ್ವಡಾನ" ರೋಸಯ್ಯ ಗುರು ಅನ್ನಾ ಇರೋನೂವೆ.... (ಪು. ೧೪೬ ವೈಶಾಖ)

ಹೋಗೋಣ - ವೋಗಾನ

೮. ಕೆಲವು ಶಬ್ದಗಳ ನಡುವಿನ ಅನುನಾಸಿಕ ಮ, ನ, ಣ ಕಾರಗಳಾಗುತ್ತವೆ.

ಉದಾ : ಕೇಶವಯ್ಯಾರು ಸಿಕ್ಕಿದ್ರು

"ಎತ್ತಾಗಿ ಹೊರಟೆಯೊ, ಲಕ್ಕ?" ಅಂದರು

"ಇಂಗೆ ವೊಂಟೆ ಕನ್ರಯ್ಯ..."

ತಾನು ವೊಂಟ ಕಾರಣವ ಈವಯ್ಯಂಗೆ ಯೋಳಕ್ಕೆ ಅದೇನ ಜರೂರು ಅಂದು ಲಕ್ಕ ತಾನು ಹೊಂಟ ಕಾರಣವ ಕೇಶವಯ್ಯಂಗೆ ತಿಳುಸ್ನಿಲ್ಲ. (ಪು. ೨೦೪, ವೈಶಾಖ)

ಹೊರಟು - ವೊಂಟ

ಹೀಗೆ - ಇಂಗೆ

೯. ಕೆಲವು ಶಬ್ದಗಳ ಹ ಕಾರ ಕೆಲವು ವೇಳೆ ಶೂನ್ಯವಾಗುತ್ತದೆ.

ಉದಾ : "ತಪ್ಪು ಮಡ್ಗಕ ನಾ ತಪ್ಪ ಮಾಡಿರದಾರುವಿ ಯಾನ್ನಪ್ಪ?" "ಪುನ ಅದ್ನೆ ಅಂದನು? ಆಗಾರ ನಿಮ್ಮಪ್ಪನ ತೋಟ್ದಲ್ಲುಡ ನೀನು ಎಳ್ನೀರ ಕಿತ್ತಿರದು ಆಗಾರ?" (ಪು. ೧೪೪ ಕುಸುಮಬಾಲೆ)

ಹಾಗಾದರೆ - ಆಗಾರ

೧೦. ಕೆಲವು ವೇಳೆ ಕೆಲವು ಶಬ್ದಗಳ ವ ಕಾರ ಬಿದ್ದು ಹೋಗುತ್ತದೆ.

ಉದಾ : .....ಟಗರೂರ ನನ್ನೆಡತಿಗೆ ಹುಚ್ಚು ಗ್ಯಾನ ಗೆಟ್ಟಂಗೆ ಯೇನೇನೂ ಮಾತಾಡಿಬುಡ್ತಾಳೆ... ಈ ಇಸ್ಯನಾ ಯೇನೇನೂ ಕಾಣನೇ ಕಾಣೆ. ನನ್ನ ಕಣ್ಣಾಣೆಗೂವೆ, ಇರಾ ನನ್ನೊಬ್ಬಳ ಮಗಳಾಣೆಗೂವೆ ಅಂತ ಬಟ್ಟಾಡಿದ ಪಂಚಾತಿಯೋರು ವಪ್ಪುನಿಲ್ಲ. ಇಪ್ಪತ್ತು ರೂಪಾಯಿ ದಂಡ ಆಕೇ ಆಕಿದ್ರು... (ಪು. ೧೮೮, ವೈಶಾಖ)

ವಿಷಯ - ಇಸ್ಯ

೧೧. ಶಬ್ದಗಳ ಸ ಕಾರವು ಕೆಲವು ವೇಳೆ ಚ ಕಾರವಾಗುತ್ತದೆ.

ಉದಾ: "....ಈ ಈಲಿ ಗುಂಡ್ಯಾಯ ತರ್ಸಿ ಅದ ಚೀಪ್ಗಂಡು ಆಮ್ಯಾಲ ಆಗ ಆ ಮೂಳಾಲೂ ಜೀವಾವು ಚಂಚಾರ ಕೈಗೊಂಡೂ ಮುಂದೇನು ತಿಂಬುವುದೋ ಮುಂದೇನೂ ಅರಿವಾಗದಿರಲಾಗ. (ಪು. ೧೫೩, ಕುಸುಮಬಾಲೆ)

ಸಂಚಾರ - ಚಂಚಾರ

೧೨. ಕೆಲವು ವೇಳೆ ಕೆಲವು ಶಬ್ದಗಳ ಒಂದು ಸ್ವರ ಅಥವಾ ಒಂದು ಅಕ್ಷರ ಬಿದ್ದು ಹೋಗುತ್ತದೆ.

ಉದಾ: "ನೀವು ಯೋಳಿದ್ದು ಸಾಜ" ಅಂತ ವಪ್ಪಿ, "ಇನ್ನೂ ವಸಿ ಕೇರಿಗಳು ಉಳಕಂಡವೆ. ಗಸ್ತು ಹ್ವಡೀಬೇಕು, ಬರ್ತಿನಿ" ಅಂದು ಲಕ್ಕ ಅಲ್ಲಿಂದ ಎಜ್ಜೆ ಕಿತ್ತ. (ಪು. ೨೧೨ ವೈಶಾಖ)

ಸಹಜ - ಸಾಜ

೧೩. ಕೆಲವು ಸ್ವರಗಳ ಅಂತ್ಯದ ಸ್ವರ ಪೂರ್ಣ ದೀರ್ಘವಾಗುವುದು ಉಂಟು. ಇದು ಸಂಬೋಧನೆಯಲ್ಲಿ ಸರ್ವೇಸಾಮಾನ್ಯ.

ಉದಾ: ಅತ್ಯಮ್ಮಗೆ, "ಇದ್ಯಾಕ ಇವ ಹಿಂಗಂತನ ಅಂದ್ಯಬ್ಯಾಡಿ ಅತ್ತಮ್ಮೋರೇ... ನಿಮ್ ಮಗಳ ಇನ್ನು ನೀವೇ ಮಡಿಕಳ್ಳಿ" ಅಂದು.... (ಪು. ೧೧೮, ಕುಸುಮಬಾಲೆ)

ಅತ್ತಮೋರೇ

೧೪. ಕೆಲವು ಶಬ್ದಗಳ ಕೆಲವು ಧ್ವನಿಗಳು ಸ್ಥಾನಪಲ್ಲಟವಾಗುತ್ತವೆ.

ಉದಾ: "......ಇಂಥ ದೇವ್ರಂಥ ನಿಮ್ ಬಾಯಿಂದ್ಲೂನು ಕೇಳ್ಬೇಕಾರ ವೋದ ಜಲ್ಮದಲ್ಲಿ ನಾನು ಎಂಥಾ ಘೋರಪಾಪ್ವ ಮಾಡಿದ್ನೋ......." (ಪು. ೧೧೧ ಕುಸುಮಬಾಲೆ)

ಜನುಮ - ಜಲ್ಮ

೧೫. ಕೆಲವು ಶಬ್ದಗಳ ಹ ಕಾರ ಕೆಲವು ವೇಳೆ ಶೂನ್ಯವಾಗುತ್ತದೆ.

ಉದಾ "ನಿನ್ನ ಅಣ ತಕ್ಕಂಡು ನಾಯೇನು ಮಾಡಿಕೊಳ್ಳಲೋ, ನಿಂಗ? ನಂಗೆ ಬೇಕಾಗಿರುದು ನಿನ್ನ ಹೈದ ಲಕ್ಕ". (ಪು. ೧೦೧, ವೈಶಾಖ)

ಹಣ - ಅಣ

ಪದ ಶೈಲಿ

ಧ್ವನಿ ಹಂತದಂತೆ ಪದದ ಹಂತದಲ್ಲಿ ಲೇಖಕರು ಮತ್ತು ಪ್ರದೇಶದ ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ ಎಂಬುದನ್ನು ವಚನ, ಲಿಂಗ, ವಿಭಕ್ತಿ, ಕಾಲಸೂಚಕ ಪ್ರತ್ಯಯ, ವಿದ್ಯಾರ್ಥ ಪ್ರತ್ಯಯ ಮತ್ತು ನಿಷೇದಾರ್ಥ ಗಳಲ್ಲಿ ಚರ್ಚಿಸಲಾಗಿದೆ. ಕುಸುಮಬಾಲೆ ಮತ್ತು ವೈಶಾಖ ಕಾದಂಬರಿಗಳು ಮೈಸೂರು ಕನ್ನಡವನ್ನೇ ಪ್ರತಿನಿಧಿಸು ತ್ತಿರುವುದರಿಂದ ಪದದ ಹಂತದ ಅನನ್ಯತೆಯನ್ನು ಮೈಸೂರು ಪ್ರಾದೇಶಿಕ ಭಾಷೆಯ ಅನನ್ಯತೆಯ ಹಿನ್ನೆಲೆ ಯಲ್ಲಿಯೇ ಚರ್ಚಿಸಲಾಗಿದೆ.

೧. ವಚನ

ವಚನಗಳಲ್ಲಿ ಏಕವಚನ ಸೂಚಿಸಲು ನಾಮ ಪ್ರಕೃತಿಗಳಲ್ಲಿ ಪ್ರತ್ಯೇಕವಾದ ಪ್ರತ್ಯಯಗಳಿಲ್ಲ. ಬಹುವಚನ ಸೂಚಿಸಲು ಪ್ರತ್ಯೇಕವಾದ ಪ್ರತ್ಯಯಗಳಿವೆ. ಈ ಬಹುವಚನ ಪ್ರತ್ಯಯಗಳು ನಾಮ ಮತ್ತು ಸರ್ವನಾಮ ಪ್ರಕೃತಿಗಳಿಗೆ ಹತ್ತುತ್ತವೆ. ಬಹುವಚನ ಪ್ರತ್ಯಯಗಳನ್ನು ಕಾದಂಬರಿಗಳಲ್ಲಿ ಗುರುತಿಸುತ್ತ ಅವುಗಳಿಗೆ ಸಂಬಂಧಿಸಿದ ನಿದರ್ಶನಗಳನ್ನು ಕಾದಂಬರಿಗಳಿಂದಲೇ ಉದಾಹರಿಸಲಾಗಿದೆ.

ಅರು - "ಊರ್ನಲ್ಲಿ ಇಂತೋರು ಕೆಲವು ಎಂಗಸರು ಅವರೆ. ಉತ್ತುಮರೆಲ್ಲೂ ಅವರೆ ಅಂತಾನು ಕ್ಯಾಳಿವ್ನಿ" ಇನ್ನೊಬ್ಬಂದ್ನು. (ಪು. ೧೧೭ ವೈಶಾಖ)

ಹೆಂಗಸರು - ಎಂಗಸರು

ಓರು - "ನ್ವಾಡೋ ಲಕ್ಕ, ನಮ್ಮ ಮಠದ ಅಯ್ಯನೋರ ಮಯ್ಯಿಗೆ ರವೋಟು ಚೆಂದಾಗಿಲ್ಲ. ನೀ ವೋಗಿ ಅವರ್ಗೆ ಔಸ್ದ ತಕ್ಕಂಬಂದು ಕ್ವಡಬೇಕಲ್ಲ". (ಪು ೧೪ ವೈಶಾಖ)

ಓರು - ಅಯ್ಯನೋರ

ಗೋಳು - "ಸಾಸ್ತ್ರೀಗೋಳು ತ್ಯಾಟದಿಂದ ಬರನಿಲ್ವ, ರುಕ್ಮಿಣವ್ವ?" ಕೇಳಿದ. ಅವ್ವ ಎಂದು ನಂಜೇಗೌಡ ತನ್ನನ್ನು ಸಂಬೋಧಿಸಿದ್ದು ರುಕ್ಮಿಣಿಯ ಕ್ರೋಧವನ್ನು ಇಮ್ಮಡಿಸಿತು. (ಪು. ೧೨೬ ವೈಶಾಖ)

ಗೋಳು - ಸಾಸ್ತಿಗೋಳು - ಶಾಸ್ತ್ರಿಗಳು

ಗೋಳು - ಒಳ್ಳಿ ಕತ್ಯಾಯ್ತು.... ಈ ಶಾಸ್ತ್ರಿಗೊಳು ಸಿವಪೂಜೇಲಿ ಕರಡಿ ಬುಟ್ಟಂಗೆ ಬಂದು, ನಮ್ಮ ಪಂಚಾತಿಗೇ ಅಡ್ಡಕಾಲು ಕ್ವಟ್ಟು ಕುಂತುಬುಟ್ಟಿದ್ನಲ್ಲ? ....ಸದ್ಯಕ್ಕೆ, ವಳುಗೆ ಕರಕಂಬಂದು ಕುಕ್ಕರಿಸಿದ್ವಾಯ್ತು. ಇನ್ನು ಅವರು ಯೇನಾರ ಬಾಯಿ ಮಾಡ್ತಿರ್ಲಿ...." ಎಂದು ಗೊಣಗಿದ. (ಪು. ೨೫ ವೈಶಾಖ)

ಗೊಳು - ಶಾಸ್ತ್ರಿಗೊಳು - ಶಾಸ್ತ್ರಿಗಳು

ಕಳು - "ಕತ್ತಲೆ ಮನೇಲೆ ಕರಿಯಪ್ಪ ಗುಟುರಾಕ್ತಾನೆ?" ಈ ಪ್ರಸ್ನೆ ಕೇಳಿದ್ದು ಕಟ್ಟೊ ಲಂಗದ ಒಂದು ಎಣ್ಣು. ಆ ಕ್ಷಣ ಏಡು ಹೈಕಳು "ರಾಗಿ ಕಲ್ಲು, ರಾಗಿಕಲ್ಲು..." ಅಂತ ಕೂಗ್ದೊ. (ಪು. ೧೧ ವೈಶಾಖ)

ಕಳ್ - ಹೈಕಳು

ಗಳ - "ಅದ್ಯಾನ ಅಷ್ಟು ಮಾತಾಡೀರೀ ಕೇಳ್ರಮ್ಮಿ ಯಮ್ಮಗಳ. ಇವತ್ತು ನಮ್ಮಟ್ಟಿ ಕುಸುಮ್ನ ಗಂಡ ಬಂದಿದ್ದ, ಬಂದವ ಕೂಸ್ನೂ ಹೆಡ್ತೀನೂ ಚಣೊತ್ತು ನೋಡ್ದನೋ ನೋಡ್ಲೇ ಇಲ್ವೊ! ನಿಲ್ದೆ ಹೊಂಟೇ ಬುಡಾದ ಪುಣ್ಣಾತ್ಮ....!" (ಪು. ೧೦೨, ಕುಸುಮಬಾಲೆ)

ಹೆಂಗುಸು - ಯಮ್ಮ

ದೀರು - ಲಕ್ಕ "ಯಾರ ಗಾಡಿಗಳು ಇವು? ....ಈಟು ನಾತ್ರೀಲೀ ಸವುದೆ ತಕ್ಕಂಬರ ಬಂಜರ ಯೇನ ಇದ್ದದ್ದು? ಯೇನ ಇದ್ದದ್ದು? ...ಇದರಾಗೆ ಯೇನಾರ ಇಕಮತ್ತು ಇರಬೈದ?" ....ತರ್ಕ ಮಾಡ್ಕತ್ತ, ಹಲಸಿನ ಮರದ ಮರೆಗೆ ಹೊಳ್ಳಿ ನಿಂತ. ಗಾಡಿಗಳು ಸಮೀಪಿಸ್ತ ಸಮೀಪಿಸ್ತ ಮಾರಿಗುಡಿ ಅಣ್ಣದೀರು, ಬೈಲಿಗರಂಗ, ಗುರುಮಲ್ಲು, ರುದ್ರ, ರಾಚೇವಾರದ ಕಾಳೂರ, ಕೊಪ್ಪಲು ಚೆನ್ನ ಒಬ್ಬೊಬ್ಬರೂವೆ ಒಂದೊಂದು ಗಾಳ ವೊಡೀತ ಇದ್ದದ್ದು ಕಾಣುಸ್ತು (ಪು. ೧೨೧ ವೈಶಾಖ)

ದೀರು - ಅಣ್ಣದೀರು

೨. ಲಿಂಗ

ಮೈಸೂರು ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ ಭೇದ ಕಾಣಿಸಿಕೊಳ್ಳುತ್ತದೆ ಆದರೂ ಇವುಗಳಲ್ಲಿ ಗಂಡನ್ನು ಸೂಚಿಸುವುದು ಪುಲ್ಲಿಂಗವೆನಿಸಿಕೊಂಡರೆ.ಸ್ತ್ರೀಯನ್ನು ಸೂಚಿಸುವುದು ಸ್ತ್ರೀಲಿಂಗ ವೆಂದೂ. ಗಂಡು ಮತ್ತು ಹೆಣ್ಣು ಎರಡು ಅಲ್ಲದ್ದು ನಪುಂಸಕ ಲಿಂಗವೆನಿಸಿಕೊಳ್ಳುತ್ತದೆ. ಕೆಲವು ವೇಳೆ ಲಿಂಗ ಭೇದ ಮಹತ್ - ಅಮಹತ್ ವರ್ಗ ಆಧಾರಿತಾಗಿದ್ದಾರೆ. ಮತ್ತೆ ಕೆಲವು ವೇಳೆ ಮಹತ್ ಮತ್ತು ಅಮಹತ್ ವರ್ಗ ಆಧಾರಿತವಾಗಿರುತ್ತವೆ. ಸ್ತ್ರೀಲಿಂಗ ಕೆಲವು ವೇಳೆ ನಪುಂಸಕ ಲಿಂಗವಾಗಿಯೂ ವ್ಯಕ್ತವಾಗುವುದು ಉಂಟು.

ವಿಭಕ್ತಿ ಪ್ರತ್ಯಯಗಳು

ಮೈಸೂರು ಕನ್ನಡದಲ್ಲಿ ಬಳಕೆಯಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿದಾಗ ಅವು ತಮ್ಮದೇ ಆದ ರೀತಿಯಲ್ಲಿರುವುದು ಕಂಡುಬರುತ್ತದೆ. ನಾಮ ಮತ್ತು ಸರ್ವನಾಮ ಪ್ರಕೃತಿಗಳು ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವುಗಳ ಮೂಲ ರೂಪದಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ. ಅವು ಹೀಗಿವೆ.

೧. **ಪ್ರಥಮ ವಿಭಕ್ತಿ :** ಈ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯ ಬಳಕೆಯಲಿಲ್ಲ. ಈ ಕೆಲಸವನ್ನು ನಾಮ ಪ್ರಕೃತಿಗಳೇ ನಿರ್ವಹಿಸುತ್ತವೆ.

೨. **ದ್ವಿತೀಯ ವಿಭಕ್ತಿ :** ನ, ನ್ನ ಎಂಬ ವಿಭಕ್ತಿ ಪ್ರತ್ಯಯ ಬಳಕೆಯಲ್ಲಿವೆ.

ನ - "ಸತ್ತ ಇಲೀನ ಕಾಗೆ, ಅದ್ನು ಯಾವ್ನು ಮುಟ್ಟನಿಲ್ಲ. ನಾನು ನ್ವಾಡ್ತಾನೆ ಇದ್ದೆ ಇದು ಪಳೇಗು...." ಎಂದಳು. (ಪು. ೨೮೭ ವೈಶಾಖ)

ನ - ಇಲಿಯನ್ನು - ಇಲೀನ

ನ್ನ - ಪೆದ್ದು ಮುಂಡೆಯೋವ ನಿಮಗೆ ಸಾಯಬೇಕು ಎಂದು ಆಸೆಯೇನು? ...ಇವು ಪ್ಲೇಗು ತಗಲಿರುವ ಇಲಿಗಳು? ಇವನ್ನ ಮುಟ್ಟಿದರೆ ನೀಮಗೂ ಪ್ಲೇಗ್ ಗೆಡ್ಡೆ ಬಂದು ಬಿಡುತ್ತೆ ಹುಶಾರಾಗಿರಿ ಎಂದು ಹೆದರಿಸಿದರಂತೆ! (ಪು. ೨೮೯ ವೈಶಾಖ)

ನ್ನ - ಇವನನ್ನು - ಇವನ್ನ

೩. **ತೃತೀಯ ವಿಭಕ್ತಿ ಪ್ರತ್ಯಯ :** ಇಂದ ಪ್ರತ್ಯಯ ಬಳಕೆಯಲ್ಲಿದೆ.

ಇಂದ - ನಿನ್ನಿಂದ ಬೊಲು ಪಕಾರಾಯ್ತು ಕನೋ ಲಕ್ಕ. ಬೆನ್ನುತಟ್ಟಿ ಮಾತ್ರ ಈಚಮಾಚಾರೈ ಯಾರ ಕುಟ್ಟೂವೆ ಕವ್‌ಕಿವ ಅನ್ನಬಾರ್ದು ಗ್ವತ್ತಾಯ್ತೆನ್ಲ? ಅಂದ್ರು (ಪು.೧೬ ವೈಶಾಖ)

ಇಂದ - ನಿನ್ನಂದ

೪. **ಚತುರ್ಥಿ ವಿಭಕ್ತಿ** ಪ್ರತ್ಯಯ ಇಗೆ, ಕ್ಕೆ, ಂಗೆ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

ಇಗೆ - "ಅರೆ ಅರೆ - ಏನೋ ನೀ ಮಾಡ್ತ ಹಿರೋದು, ಬೇಕೂಫ? ಖುದಾ ಒಬ್ಬಂಗೇ ಮಂಡಿ ಬಗ್ಗಿಸೋದು. ನರ ಮನುಸನಿಗೆ ಬೊಗ್ಗಿಸ್ತಾರೇನೋ?" (ಪು. ೨೬೨ ವೈಶಾಖ)

ಇಗೆ - ನರಮನುಸನಿಗೆ - ನರಮನುಷ್ಯನಿಗೆ

ಕ್ಕೆ - "ಒಂದೀಟು ಕೇಮೆ ಮಾಡಿಕೊಟ್ಟರೆ ನಿನ್ನ ಮಾನಕ್ಕೆ ಮುಕ್ಕಾದಾತ?" ಇದು ಅಯ್ಯನ ದಬಾವಣೆ. (ಪು. ೧೮ ವೈಶಾಖ)

ಕ್ಕೆ - ಮಾನಕ್ಕೆ

ಂಗೆ - "ಅದು ನೀರಿನ ಮಡು, ಅಲ್ಲಿ ಸೆಳುತ ಅದೆ ಆ ಕಡೀಕೆ ವೋಗಬ್ಯಾಡ ..... ಅವರು ಕೂಗೂ. ಆಕದ್ದು ಅಣ್ಣಂಗೆ ಕ್ಯಾಳಿತೊ ಇಲ್ಲವೊ ಗಾಚಾರ. ಅಂಗೇ ಮಯ್ಯಿಮ್ಯಾಲೆ ಗ್ಯಾನ ಇಲ್ದೆಲ್ಲದೇಯ

ಈಜುತ ಈಜುತ ಮಡು ಇದ್ದ ಜಾಕ್ಕೇ ವೋಗಿ ಅಲ್ಲಿ ನೀರಿನ ಸೆಳೆತಕ್ಕೆ ಸಿಕ್ಕಿ ಅದು ಅವನ್ನ ವಳೀಕೆ ಎಳಕಂಡಿತಂತೆ. (ಪು.೧೦೦ ವೈಶಾಖ)

ಗೆ - ಅಣ್ಣನಿಗೆ - ಅಣ್ಣಂಗೆ

೫. ಪಂಚಮಿ ವಿಭಕ್ತಿ : ದೆಸೆಯಿಂದ ಎಂಬ ಪ್ರತ್ಯಯ ಬಳಕೆಯಲ್ಲಿದೆ.

ದೆಸೆಯಿಂದ - "ಏನು ನಂಜೇಗೌಡರೆ, ಆ ರುದ್ರನ ದೆಸೆಯಿಂದ ನಮ್ಮ ತೋಟಕ್ಕೆ ಉಳಿಗಾಲವಿಲ್ಲವಲ್ಲ....?" (ಪು. ೯ ವೈಶಾಖ)

೬. ಷಷ್ಠಿ ವಿಭಕ್ತಿ : 'ಅ' ಪ್ರತ್ಯಯ ಬಳಕೆಯಲ್ಲಿದೆ.

ಅ - "ಬಂಗಾರದ ಜಿಂಕೆಯನ್ನು ಬಯಸಿದ ತೇತ್ರಾಯುಗದ ಸೀತಾದೇವಿಯ ಸಂತತಿ ಇನ್ನೂ ಜೀವಂತವಿದೆ!" ಎಂದು ನಗುತ್ತ .... (ಪು. ೧೬೪ ವೈಶಾಖ)

ಅ - ಬಂಗಾರದ

೭. ಸಪ್ತಮಿ ವಿಭಕ್ತಿ ಲಿ, ಆಗೆ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

ಲಿ - "ನಂಗ ಹೊಟ್ಟೆಕಳ್ತ ಬಂತು. ಜೀತಗಾರ ಐಕಳ್ಲ ನೋಡ್ಕಳಿ ಅಂದಿ. ನಾನು ಹಳ್ಳಕ ವೋದಿ. ಅದ್ಯಾಕಕನಿ ಸುಸ್ತಾದಂಗಾಯ್ತು. ಬಂದವ್ನೆ ಮುತ್ತುಗದ ಮರ್ದ ನೆರುಳಲಿ ಮಲಿಕಂದಿ. (ಪು. ೧೨೭ ಕುಸುಮಬಾಲೆ)

ಲಿ ನೆರಳಿನಲ್ಲಿ - ನೆರಳಲಿ

ಆಗೆ - "ಸುಳ್ಳು ತಟವಟ ನನ್ನ ಜಲ್ಮದಾಗೆ ಬರನಿಲ್ಲ. ನಡದದ್ದು ನಡದಂಗೆ ಯೋಳ್ತೀನಿ, ಅಯ್ಯನ ಕುಟ್ಟೆ.... ಮಾಡಿದ ತೆಪ್ಪಗೆ ಅಯ್ಯ ಬಯ್ಯಿದ್ರೆ ಬಯ್ಯಿಸ್ಕತ್ತೀನಿ". (ಪು. ೧೪೪ ವೈಶಾಖ)

ಆಗೆ - ಜನ್ಮದಾಗೆ - ಜಲ್ಮದಾಗೆ

ಸಂಭೋಧನಾ ರೂಪ : ಆ ಪ್ರತ್ಯಯ ಅಥವಾ ಅಂತ್ಯ ಸ್ವರವು ದೀರ್ಘವಾಗಿ ಕಂಡುಬರುತ್ತದೆ.

"ಕೂಸೂ ರಾಜಸೇಕರ ಮೂರ್‍ತೂ... ತೊಲಮ್ಯಾಲ ವಚ್ಚಾನ ಹೊಸ ಟೀ ಸೊಪ್ಪು ಮಡುಗಿವ್ನಿ. ಅದ್ರಲ್ಲಿ ಕಾಯ್ಸಕೊಡು ನನಕಂದಾ...." (ಪು. ೧೨೩ ಕುಸುಮಬಾಲೆ)

ಅಂತ್ಯ ಸ್ವರ ದೀರ್ಘ - ಕೂಸೂ

ಆ ಪ್ರತ್ಯಯ - ನನಕಂದಾ

ಕಾಲಸೂಚಕ ಪ್ರತ್ಯಯಗಳು

ಕಾಲ ವಾಚಕ ಪ್ರತ್ಯಯಗಳಲ್ಲಿ ಭೂತ ಮತ್ತು ಭೂತೇತರ ಎಂದು ಎರಡು ಬಗೆಯಲ್ಲಿ ಕಾಣಿಸಿ ಕೊಳ್ಳುತ್ತವೆ. ಭೂತೇತರ ಕಾಲದಲ್ಲಿ ವರ್ತಮಾನ ಮತ್ತು ಭವಿಷ್ಯತ್ ಕಾಲಗಳು ಎರಡು ಸೇರುತ್ತವೆ. ಭವಿಷ್ಯತ್ ಕಾಲದ ಕೆಲಸವನ್ನು ವರ್ತಮಾನ ಕಾಲವೇ ನಿರ್ವಹಿಸುತ್ತದೆ.

೧. ಭೂತಕಾಲ ವಾಚಕ ಪ್ರತ್ಯಯಗಳು ದ್ ಟ್ ಡ್ ತ್ ಇದ್ ಎಂಬ ಹಲವಾರು ರೂಪಗಳಿವೆ.

ದ್ - "......ಮಾರನೇ ದಿನ ಬಂದೋಳು ಎಲೆ ಕುಯ್ಯುವ ಹಂಬಿನ ಜಾಗಕ್ಕೆ ನಾನು ಬರುವ ವೇಳೆಗೆ ಜಾರಿ ಬಿದ್ದಿದ್ದಳು. ಸಮೀಪದಲ್ಲಿ ಯಾರೂ ಇರಲಿಲ್ಲ. ಪಾಪ, ಮುದುಕಿ ಎಂದು ಎತ್ತಿ ತೊಡೆಯ ಮೇಲಿರಿಸಿ ಉಪಚರಿಸಿದೆ, ಅಷ್ಟೇ". (ಪು. ೪೬ ವೈಶಾಖ)

ದ್ - ಬಿದ್ದಿದ್ದಳು

ಟ್ - "ಇದೇನೆ ರುಕ್ಕು, ಸುಮ್ಮನೆ ಇಲ್ಲಿ ನಿಂತುಬಿಟ್ಟೆ? ಮನೇಲಿ ಯಾರೂ ಇಲ್ಲ. ನಡಿ, ನಡಿ. ನಾನೂ ಕೂಸಿಗೆ ಹಾಲೂಡಿ ನಿನ್ನ ಹಿಂದೆಯೇ ಬಂದು ಬಿಡ್ತೇನೆ". (ಪು. ೬೦ ವೈಶಾಖ)

ಟ್ - ಬಿಟ್ಟೆ

ಡ್ - "ಬೇಸರ ಆಯಿತು, ನುಡಿಸೋಣ ಅಂತ ತಕ್ಕೊಂಡೆ". (ಪು. ೬೧ ವೈಶಾಖ)

ಡ್ - ತೆಗೆದುಕೊಂಡೆ - ತಕ್ಕೊಂಡೆ

ತ್ - "ವೊ ನಿನ್ನ ಸಾಸ್ಟ್ಯಾವ ನಾ ನೋಡನಾರಿ, ಸುಮ್ಕಿರೆ ಸಿವುನಿ.. ನಮ್ಮತ್ರ ಯಿದ್ದ ಏಡು ಆಡ, ಇಂದ್ಕೆ ನೀನೇ ಅಟ್ಟಿಕಂಡು ವೋಯ್ತಿದ್ಯಲ್ಲ? ಆಗ ಅವ್ರ ಸಿಂಡು ನಿಂಗೆ ಸೆಡೀತಿತ್ತೇನೋ?" ಅಂದ್ಲು ಅವ್ವ. (ಪು. ೩೬ ವೈಶಾಖ)

ತ್ ಸೇರುತ್ತಿತ್ತೇನೋ - ಸೆಡೀತಿತ್ತೇನೋ

ಬಿ. **ಭೂತೇತರ ಕಾಲದಲ್ಲಿ** ತ್ ಉತ್ತ್ ಎಂಬ ಪ್ರತ್ಯಯಗಳಿವೆ. ಇವು ಭವಿಷ್ಯತ್ಕಾಲದ ಕೆಲಸವನ್ನು ನಿರ್ವಹಿಸುತ್ತವೆ.

ತ್ - "ತಾಳು, ತಾಳು ನನಗೂ ನಿನ್ನ ಬೊಡ್ಡ ಮರೆತೇಹೋಯ್ತು. ಇನ್ನೊಂದು ಮುರುಕಲ ರೊಟ್ಟಿ ತರ್‍ತೀನಿ". (ಪು. ೫ ವೈಶಾಖ)

ತ್ - ತರುತ್ತೇನೆ - ತರ್‍ತೀನಿ

ಉತ್ತ್ - "ಅಚ್ಚೇರಿನಷ್ಟು ಇರಲಾರದು. ಇರುವಷ್ಟನ್ನು ಕೊಡ್ತೀನಿ, ಬನ್ನಿ".

"ಇನ್ನೇನು ಮಾಡುವುದು? ಲಭ್ಯ ಇದ್ದಷ್ಟು!..... ಹುಂ, ಹಾಗೆ ಮಾಡು" ಎನ್ನುತ್ತ ರುಕ್ಮಿಣಿಯನ್ನು ಹಿಂಬಾಲಿಸಿದಳು ಲಕ್ಷ್ಮಮ್ಮ. (ಪು. ೧೪೧ ವೈಶಾಖ)

ಉತ್ - ಕೊಡುತ್ತೇನೆ - ಕೊಡ್ತೀನಿ

ವಿಧ್ಯಾರ್ಥಕ ಕ್ರಿಯಾರೂಪಗಳು ಲಿ - ಳಿ ಎಂಬ ಪ್ರತ್ಯಯಗಳು ಕ್ರಿಯಾರೂಪಗಳಿಗೆ ಸೇರುವುದರಿಂದ ಸಿಗುತ್ತದೆ.

ಲಿ - "ಅಂಗೇ ಆಗ್ಲಿ, ನಾವಿನ್ನು ಬತ್ತೀವಿ ಕನ್ರಯ್ಯ" ಅಂದು ಮಾರಿಗುಡಿ ಅಣ್ಣಂದೀರು ಗಾಡಿಗಳ ದೌಡಾಯಿಸಿದ್ರು. (ಪು. ೧೨೨ ವೈಶಾಖ)

ಲಿ ಆಗಲಿ - ಆಗ್ಲಿ

ಳಿ - "ನೀನು ಹೇಳೂ ಅಂತಂದ್ರ ಅದ ನಾ ಹೆಂಗೇಳಲವ್ವಾ? ಅದ ಯಾವ ಬಾಯಿಂದ ಹೇಳ್ಳಿ...?"

(ಪು. ೧೧೭ ಕುಸುಮಬಾಲೆ)

ಳಿ - ಹೇಳಲಿ - ಹೇಳ್ಳಿ

ನಿಷೇದಾರ್ಥಕ ಪ್ರತ್ಯಯಗಳು ಇಲ್ಲ, ಕಿಲ್ಲ, ಬಾರದು, ಬೇಡ ಎಂಬ ರೂಪಗಳು ನಿಷೇದಾರ್ಥ ಕ್ರಿಯಾರೂಪಗಳನ್ನು ನಿರ್ಮಿಸುತ್ತವೆ.

ಇಲ್ಲ - "ಇವಳನ್ನು ಯಾಕೆ ಇಲ್ಲಿಗೆ ಕರೆದುಕೊಂಡು ಬಂದೆ?" ಎಂದು ರುಕ್ಮಿಣಿಯನ್ನು ಪ್ರಶ್ನಿಸಿದರು. ಹಟಮಾರಿ ಎಷ್ಟು ತಡೆದರೂ ಕೇಳಲಿಲ್ಲ ತಪ್ಪು ಮಾಡಿದವಳಂತೆ ರುಕ್ಮಿಣಿ ಮೆಲ್ಲಗೆ ಉಸಿರಿದಳು.

(ಪು. ೧೯ ವೈಶಾಖ)

ಇಲ್ಲ - ಕೇಳಲಿಲ್ಲ

ಕಿಲ್ಲ - ಪುನಾ ಅವರಟ್ಟಿಗೆ ಬಿಲ್‌ಕುಲ್ ನಾ ವೋಗಾಕಿಲ್ಲ ಜಲುಮೆ ಮಾಡಿದ್ರೆ ನ್ಯಾಣು ಆಕತ್ತೀನಿ ಮುಸ್ಕರ ಊಡ್ತು ಹೈದ .. (ಪು. ೧ ವೈಶಾಖ)

ಕಿಲ್ಲ - ಹೋಗುವುದಿಲ್ಲ - ವೋಗಾಕಿಲ್ಲ

ಬಾರದು - "ಅವಳ ಜಲ್ಮಾನ ಒದ್ದೆ ಬಟ್ಟೇಲು ಒರಸಬಾರದು. ಬರೆ ಬಟ್ಟೇಲಿ ಒರಸಬೇಕು" ಎಂದು ಔಡು ಕಚ್ಚುತ್ತ ಎದ್ದು ಹೋದರು. (ಪು. ೨೬೬ ವೈಶಾಖ)

ಬಾರದು - ಒರಸಬಾರದು

ಬೇಡ - "ಅದನ್ನು ರುಕ್ಮಿಣಮ್ಮನೋರಿಗೆ ಕೊಡಬೇಡ ತೆಗೆದುಕೊಂಡು ಹೋಗಿ ಎಲ್ಲಾದರೂ ಚೆಲ್ಲಿಬಿಡು".

(ಪು. ೨೦೫ ವೈಶಾಖ)

ಬೇಡ - ಕೊಡಬೇಡ

ವಾಕ್ಯ ಶೈಲಿ

ಸೃಜನಶೀಲ ಲೇಖಕರು ಧ್ವನಿ ಮತ್ತು ಪದಗಳಂತೆ ವಾಕ್ಯರಚನೆಯಲ್ಲಿಯೂ ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ. ಒಂದು ವಾಕ್ಯವನ್ನು ರಚನೆ ಮಾಡುವಾಗ ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾದ ಧ್ವನಿ ಮತ್ತು ಪದಗಳನ್ನು ಉಪಯೋಗಿಸಿ ವಾಕ್ಯರಚನೆ ಮಾಡುವುದರಿಂದ ಆ ವಾಕ್ಯವನ್ನು ನೋಡುತ್ತಿದ್ದಂತೆಯೇ ಅದು ಇಂತಹ ಪ್ರಾದೇಶಿಕ ಭಾಷೆಯೇ ಎಂಬುದನ್ನು ಕಂಡುಕೊಳ್ಳಬಹುದು. ಇದಕ್ಕೆ ಕಾದಂಬರಿಗಳಿಂದ ನಿದರ್ಶನಗಳನ್ನು ಹೀಗೆ ನೋಡಬಹುದು.

"ಯಪ್ಪಾ ಸಿವುನೇ..... ನಾ ರುಸ್ಯಂತಿ ಆದ್ ತಾವಿಂದ್ಲೂ ಒಂದು ಸಣ್ಣ ಕೂಸ್ನ ಕೈಲೂ ಬೆರುಳ ತೋರಸ್ಕಂಡು ಬಾಳಾಟ ಮಾಡ್ನಿಲ್ಲಾ. ಹಟ್ಟಿ ಒಳ್ಗ ಒಬ್ರು ತರಾವ್‌ರು ಇಲ್ಲ.,.. ಒಬ್ರು ಬರಾವರು ಇಲ್ಲಾ... ಇಂಥ ಕಡ ನಾನು ಒಂದು ದೂಪನಾರೂ ಆಕ್ಕಂಡೂ.. ಒಂದು ದೀಪನಾರೂ ಅಸ್ಸಗಂಡೂ ...

ಅವುರಾ ಹೆಸ್ರ ಹೇಳ್ಕಂಡು ಹೇಂಗೋ ಜೀವ್ವ ಹಿಡ್ಕಂಡಿರೊ ನಾನೀಗ ಈ ಮಗ್ನ ದೆಸಲೀ.... (ಪು. ೧೨೮ ಕುಸುಮಬಾಲೆ)

"ಇದ್ಯಾಕಪ್ಪಾ ಕಂದಾ ಇಂದು ಹೊಸ ಮಾತ ಆಡ್ತಾ ಇದ್ದಿ. ಇನ್ನೂ ಬ್ಯಾರೆ ಕೆಲಸ ಯಾನ್ ಮಾಡೀಯಪ್ಪ...." ಅಂದಳು (ಪು. ೧೨೩ ಕುಸುಮಬಾಲೆ)

"ಒಂದು ಕೋಳಿ ತರಕ್ಕೆ ಒಬ್ಬ ದೊರೆ ಮೊಮ್ಮಗನೆ ಆಗಬೇಕೆ? ನೀ ಕುಡಿಯಾ ದುಡ್ನಲ್ಲಿ ಉಳಿಕೆ ಮಾಡಿದ್ರೆ, ವಾರಕ್ಕೊಂದು ಜೀನ ಆದ್ರೂ ನಮ್ಮ ಗುಡ್ಲಲ್ಲೂವೆ ಕೋಳಿ ಕಾರ ಅರೀನೇಬೈದು ಅಂದ್ಲು (ಪು. ೧೮೭ ವೈಶಾಖ)

"ಆ ಎಂಗಸು ನಿದ್ದೆ ಮಾಡ್ತ ಇಲ್ಲಕನರ್ಲ ಅವಳು ಸತ್ತೋಗವಳೆ!.... ಅದು ಅವಳ ಹೆಣ. ಇಲ್ಲದಿದ್ರೆ ಈ ಪಾಟಿ ಸದ್ದುಗದ್ದಲದಲ್ಲಿ ಅವಳು ಎಚ್ಚಾರಾಗ್ದೆ ಇರ್ತಿದ್ಲ?.... ಅಲ್ಲದೇಯ ಆ ರಣದ್ದು ಅಂಗೆ ಮ್ಯಾಲೆ ಎಗರಿ ಬಿದ್ದರೂವೆ ಚಿಂಕರಾನು ಚೀರದೆ ಅಂಗೆ ಯಾರಾರು ಸುಮ್ಕೆ ಮಂಟಿಗಂಡಾರ?......" (ಪು. ೧೭೭ ವೈಶಾಖ)

ವಿಶಿಷ್ಟ ಪದಕೋಶ ಶೈಲಿ

ಧ್ವನಿ ಪದ ವಾಕ್ಯದಂತೆ ಲೇಖಕರು ಆಯಾ ಪ್ರದೇಶಕ್ಕೆ ಮಾತ್ರ ಸೀಮಿತವಾದ ವಿಶಿಷ್ಟ ಪದಗಳನ್ನು ಕಾದಂಬರಿಗಳಲ್ಲಿ ಬಳಸುವ ಮೂಲಕ ಆ ಕಾದಂಬರಿಗಳು ಇನ್ನೂ ಹೆಚ್ಚು ಆಯಾ ಪ್ರದೇಶಕ್ಕೆ ಮಾತ್ರ ಅಧಿಕೃತವಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಒಟ್ಟು ಎಲ್ಲಾ ಕಾದಂಬರಿಗಳ ವಿಸಿಷ್ಟ ಪದ ಕೋಶಗಳನ್ನು ಅನುಬಂಧದಲ್ಲಿ ಕೊಟ್ಟಿದೆ. ನಿದರ್ಶನಕ್ಕಾಗಿ ಕಾದಂಬರಿಗಳಿಂದಾಯ್ದ ಕೆಲವು ವಿಶಿಷ್ಟ ಪದಗಳನ್ನು ಹೀಗೆ ನೋಡಬಹುದು.

<u>**ಕುಸುಮಬಾಲೆ**</u>	<u>**ವೈಶಾಖ**</u>
ಕೇಮಿಲ್ದೆ - ಕೆಲಸವಿಲ್ಲದೆ	ಉತ್ಪತ್ತಗರು - ಕೇಡಿಗರು
ಸ್ಯಾಲ - ಸೀರೆ	ಜಟೆ - ರಚ್ಚೆ
ಯಮ್ಮಗಳ - ಹೆಂಗಸರು	ಕಿಸಾಂತರಾಗ - ಹಾಳಾಗ, ನಾಶವಾಗ
ಬಾಮ್ಮಿ - ಬಾ	ಎಕ್ಕಾಸ - ಪ್ರಯಾಸ, ಬಹಳ ಕಷ್ಟ.
ಚುಇ - ಚಿಹ್ನೆ	ತೊಪ್ಪೆ - ಸೆಗಣಿ
ಆಣಬಾಸ - ಪ್ರಮಾಣ	ನಿಪಾತ ಆದ - ಹಾಳಾದ
ಬೆಂಮನ್ಸಿ - ಗರ್ಭಿಣಿ	ಪುಟರಗುಟ್ಟು - ಗಡಗಡ ನಡುಗು
ಫೈನಾಗಿ - ಚೆನ್ನಾಗಿ	ಬೆಂಟಿ ಬೆಂಟಿ - ಚುಚ್ಚಿ ಚುಚ್ಚಿ
ಚೋಜುಗ - ಆಶ್ಚರ್ಯ	ಮಂಟಾಡಿಕೊಂಡು - ಸಾವಧಾನವಾಗಿ
ಕೊತ್ತಿ - ಬೆಕ್ಕು	ವಮನ - ವಾಂತಿ

"ಅರಮನೆ" ಕಾದಂಬರಿಯಲ್ಲಿನ ಕುಂ. ವೀರಭದ್ರಪ್ಪನವರ ಬರವಣಿಗೆಯನ್ನು ಕುರಿತು ಡಾ. ಸಿ.ಎನ್. ರಾಮಚಂದ್ರನ್‌ರವರು. "ಕೃತಿಯ ಯಶಸ್ಸಿನ ಬಹುದೊಡ್ಡ ಪಾಲು ಅದರ ಕಥನ ಶೈಲಿಗೆ ಸೇರಬೇಕು. ಈ ಮೊದಲೇ ಸೂಚಿಸಿದಂತೆ. ಸುಮಾರಾಗಿ ಗೊಂದಲಿಗರ ಕಥನ ಸಂಪ್ರದಾಯವನ್ನು ಆಧರಿಸಿರುವ ಅರಮನೆಯ ಕಥನಶೈಲಿಯ ಗಮನೀಯ ಅಂಶಗಳು ಎರಡು ಅದು ಕಾಲ ದೇಶಗಳನ್ನು ನಿರ್ವಹಿಸುವ ರೀತಿ ಮತ್ತು ಅದರ ರೂಪಕಾತ್ಮಕ ಭಾಷೆ" (ಡಾ. ಸಿ.ಎನ್. ರಾಮಚಂದ್ರನ್, ಅರಮನೆ, ಮುನ್ನುಡಿ) ಎಂಬುದಾಗಿ ಅಭಿಪ್ರಾಯಪಡುತ್ತಾರೆ.

ಕಾಲ ದೇಶಗಳ ನಿರ್ವಹಣೆಯೆಂದರೆ, ಈ ಎರಡು ಘಟಕಗಳಲ್ಲಿ ಒಂದನ್ನು ಸ್ಥಿರವಾಗಿಟ್ಟು ಮತ್ತೊಂದರ ಭಿನ್ನ ವಿನ್ಯಾಸಗಳನ್ನು ದರ್ಶಿಸುವುದು ಅಂದರೆ, ಒಂದು ಕಾಲವನ್ನು ಸ್ಥಿರವಾಗಿಟ್ಟು ಅದೇ ಕಾಲದಲ್ಲಿ ಭಿನ್ನ ಸ್ಥಳದಲ್ಲಿ ನಡೆಯುವ ಭಿನ್ನ ಭಿನ್ನ ಕಾರ್ಯಗಳನ್ನು ದಾಖಲಿಸುವುದು. ಈ ಹೇಳಿಕೆಯನ್ನು ಕಾದಂಬರಿ ಯಲ್ಲಿನ ನಿದರ್ಶನದಿಂದ ಸ್ಪಷ್ಟಪಡಿಸುವುದಾದರೆ

"ಯಿತ್ತ ಕರಗಲ್ಲಿಗಷ್ಟು ದೂರಯಿದ್ದ ಹಾಸು ಬಂಡೆಗಳ ಮ್ಯಾಲ ಕೆತ್ತಲಕಂತ ಸಿಲುಪಿ ಮಾಯಾಚಾರಿಯು ತಾಯಿಯ ಪಾದಗಳ ನಕ್ಷೆಯನ್ನು ಬಿಡಿಸುತಲಿರುವಾಗ್ಗೆ ಪಟ್ಟಣ ಸೋಮಿಗಳು ದಯವಸ್ತರು, ಹಿರೀಕರು, ಜಡೆತಾತನ ನೇತೃತ್ವದಲ್ಲಿ ತಾಯಿ ಹೊಳೆಗೆ ಹೊಂಡುವ ಕಾರ್ಯಕ್ರಮದ ರೂಪುರೇಷ ತಯಾರಿಸುತಲಿರುವಾಗ್ಗೆ, ತಾಯಿಯ ಕಿವಿಗಿಂಪು ಮಾಡಲಕಂತ ಪದ ಹಾಡುವವರೆಲ್ಲವರೆ? ತಾಯಿಗೆ ಸೆಕೆ ಆಗದಿರಲಂತ ಚಮರಿಯಿಂದ ಗಾಳಿ ಬೀಸುವವರು ಯಲ್ಲವರೆ? ತಾಯಿಯನು ಜುವ್ವಾಲಿಯೊಳಗ ಮಲಗ ಹಾಕಿ ಲೊಳ್ಳೊಳ್ಳಾಯಿ ಯಂದು ತೂಗಿ ಮಲಗಿಸುವವರು ಯಲ್ಲವರೆ? ಮಲಗಿರುವ ತಾಯಿಯನ್ನು ಯಚ್ಚರಿಸುವವರು ಯಲ್ಲವರೆ? ಕಾಚು ಸುಣ್ಣ ಹಚ್ಚಿದ ಯಲೆಯ ಮಡಚಿ ತಾಯ ಬಾಯೊಳಗಿಡ ಬಲ್ಲಂಥವರು ಯಲ್ಲವರೆ? ಕಥೆ ಹೇಳುತ ತಾಯಿ ಬ್ಯಾಸರ ಕಳೆಯುವವರು ಯಲ್ಲವರೆ? ತಾಯೀಗ ಹಾಸೀಗೆ ಆಗುವವರು ಯಲ್ಲವರೆ? ತಲೆದಿಂಬಾಗುವವ ರು ಯಲ್ಲವರೆ? ತಾಯಿ ಮುಂಗಯ್ಯಿಗೆ ಬಳೆ ಯೇರಿಸುವವರು ಯಲ್ಲವರೆ? ತಾಯ ನಯನಾಜೂಕಿನ ನಡುವಿಗೆ ವಡ್ಯಾಣ ಆಗಬಲ್ಲಂಥವರು ಯಲ್ಲವರೆ? ಯಿಂಥ ಅಂಥವರನ್ನು ಪಟ್ಟಣದೊಳಗೆ ಕಂದೀಲು ಹಿಡಕೊಂಡು ಹುಡುಕಾಡುತ್ತಿರುವಾಗ್ಗೆ... ಪಟ್ಟಣದ ತುಂಬೆಲ್ಲರು ತಮ ತಮ್ಮ ನಾಲಗೆಗಳೆಂಬುವ ಮೂರು ಕೂರಿಗೆ ಹೊಲದೊಳಗೆ ಸಾಂಬವಿ ಯೆಂಬುವ ಮೂರಕ್ಕರದ ಸೊಬಗ ಸಬುಧವನ್ನು ಬಿತ್ತಿ ಬೆಳೆಯುತ್ತಿರುವಾಗ್ಗೆ... ಸದರಿಪಟ್ಟಣದ ಅರಮನೆಯೊಳಗೆ ರಾಜಮಾತೆ ಭಯ್ರುಮಾಂಬೆಯು ಸಾಲಗುಂದಿ ಗುಂಡಯ್ಯ ಸಾಸ್ತಿರಿಯನ್ನು ಯದುರಿಗೆ ಕುಂಡಿರಿಸಿಕೊಂಡು "ಯೇಳೇಳು ಕೊಪ್ಪರಿಗೆ ಹೊನ್ನು ಅಲ್ಲಯ್ಯಾ... ಯಿಲ್ಲಯ್ಯಾ ಹೇಳು" ಯಂದು ತೂಕಡಿಕೆ ಮಾಡುತಲಿದ್ದಳು. (ಪು. ೧೩೯. ಅರಮನೆ).

ಈ ದೀರ್ಘವಾದ ವಿವರಣೆಯಲ್ಲಿ ಬಿಡಿಸುತಲಿರುವಾಗ್ಗೆ, ತಯಾರಿಸುತಲಿರುವಾಗ್ಗೆ, ಹುಡುಕಾಡುತಿರುವಾಗ್ಗೆ, ಬೆಳೆಯುತ್ತಿರುವಾಗ್ಗೆ. ಎಂಬಂತಹ ಅಪೂರ್ಣ ಕಾಲಸೂಚಕ ಕ್ರಿಯಾಪದಗಳ ಉಪಯೋಗದಿಂದ ಒಂದೆ ಕಾಲದಲ್ಲಿ ಐದು ಬೇರೆ ಬೇರೆ ಸ್ಥಳಗಳಲ್ಲಿ ನಡಯುತ್ತಿದ್ದ ಐದು ಭಿನ್ನ ಕ್ರಿಯೆಗಳನ್ನು ಈ ವಾಕ್ಯವು

ಚಿತ್ರಿಸುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಒಂದು ಸಂದರ್ಭದ ವರ್ಣನೆಯನ್ನು ಅಪೂರ್ಣವಾಗಿಯೇ ನಿಲ್ಲಿಸಿ, ಕಥನ ಕ್ರಿಯೆ ಮುಂದುವರೆಯುತ್ತದೆ. ಇಂತಹ ಕಥನ ತಂತ್ರ ಕಥಾನಕದ ಬಿಡಿಧಾರೆಗಳನ್ನು ಒಂದೆಡೆ ತರುತ್ತದಲ್ಲದೆ ಪ್ರಸ್ತುತ ವಿಷಯದ ಅನೇಕ ಮಗ್ಗುಲುಗಳನ್ನು ಒಟ್ಟಿಗೇ ನೋಡಲು ಅನುವು ಮಾಡಿಕೊಡುತ್ತದೆ.

ಎರಡನೆಯದಾಗಿ, ವ್ಯಂಗ್ಯ-ವಿಂಡಬನೆಗಳಿಂದ ಮುಕ್ತವಾದ ಸಮಾನ ಧೋರಣೆಯಿಂದ ಗಂಭೀರ ಹಾಗೂ ಕ್ಷುಲ್ಲಕ ಸಂಗತಿಗಳನ್ನು ವರ್ಣಿಸುವಾಗ, ಗಂಭೀರ-ಕ್ಷುಲ್ಲಕ, ಅಥವಾ 'ಮುಖ್ಯ-ಅಮುಖ್ಯ' ಎಂಬಂತಹ ದ್ವಿಮಾನ ಶ್ರೇಣೀಕರಣವೇ ಅಳಿಸಿ ಹೋಗಿ ಸಕಲ ಚರಾಚರ ವಸ್ತುಗಳನ್ನು, ಜೀವಿಗಳನ್ನು, ಘಟನೆಗಳನ್ನು ಸಮಾನವಾಗಿ ನೋಡಲು ಸಾಧ್ಯವಾಗುತ್ತದೆ ಮತ್ತು ಭಾಷೆ ಸಹಜವಾಗಿ ರೂಪಕಾತ್ಮಕವಾಗುತ್ತದೆ ಇದಕ್ಕೆ ಕಾದಂಬರಿಯಿಂದಲೇ ನಿದರ್ಶನವನ್ನು ನೋಡುವುದಾದರೆ,

೧ "ಆಕಾಸದ ಕರಿಗಂಬಳಿ ಮ್ಯಾಲ ಕಾಳು ಕಡಿ ವಣಹಾಕಿದಂಗಿದ್ದ ಚುಕ್ಕಿ ನಕ್ಷತ್ರಗಳು ಯಿದ್ದವು. ಅವುಗಳನ್ನು ಮಾಯಾದ ಪಕ್ಷಿಗಳು ಬಂದು ಗುಳುಂ ಗುಳುಂ ಅಂತ ನುಂಗಿಯಾವು ಯಂದು ಚಂದ್ರಾನು ತನ್ನ ಕಯ್ಯೊಳಗೆ ಬಡಿಗೆ ಹಿಡಿಕೊಂಡು ಕಾಯಕಂತ ಯಿದ್ದನು" (ಪು ೩೬ ಅರಮನೆ).

೨ "(ಚಿನ್ನಸಾನಿ), ಚಂದ್ರಾಮನ ಬೆಳದಿಂಗಳನ್ನು ಸರ್‍ರಂತ ಮಯ್ಯಿತುಂಬ ಹೀರಿಕೊಳ್ಳತ್ತಿದ್ದಳಷ್ಟೇ ಬಗೆಬಗೆಯ ಪುಷ್ಪಾರಾಜಿಯಿಂದ ವಲಸೆಬರುತಲಿದ್ದ ಪರಿಮಳ, ಸೌವುಂದರ್‍ಯಕ್ಕೆ ತಾನು ತನ್ನ ಸರೀರದ ತುಂಬೆಲ್ಲ ಆಸ್ರಯ ನೀಡುತ್ತಿದ್ದಳಷ್ಟೆ... ನೋಡೋರ ಕಣ್ಣೋಗಳೊಳ ಗೊಂಬಿಯಾಗಿದ್ದಳಷ್ಟೇ ಕಾರಿರುಳಿಗೆ ತನ್ನ ಮಾರುದ್ದ ತಲೆಗೂದಲ ಅರಮನೆಯೊಳಗೆ ಆಶ್ರಯ ನೀಡಿದ್ದಳಷ್ಟೆ. ಕಾಮನಬಿಲ್ಲುಗಳಿಗೆ ತನ್ನ ಕಣ್ಣುಗಳಲ್ಲಿ ಆಶ್ರಯ ನೀಡಿದ್ದಳಷ್ಟೇ; ತಾನೇ ಒಂದು ನಡೆದಾಡುವ ಹೂದೋಟವೆಂಬಂತೆ ದುಂಬಿ ಪತಂಗಗಳಿಗೆ ಭ್ರಮೆಯನ್ನುಂಟು ಮಾಡುತಲಿದ್ದಳಷ್ಟೇ....." (ಪು. ೯೧ ಅರಮನೆ).

'ನಿಸರ್ಗ' ಕಾದಂಬರಿಯಲ್ಲಿನ "ಮಿರ್ಜಿ ಅಣ್ಣಾರಾಯರ ಬರವಣಿಗೆಯನ್ನು ಕುರಿತು, ಬಾಳಾ ಸಾಹೇಬ ಲೋಕಾಪುರರವರು. "ಪ್ರಾದೇಶಿಕ ಕಾದಂಬರಿಯ ಮುಖ್ಯ ಲಕ್ಷಣವೇ ಅದರ ಭಾಷೆ ಇಲ್ಲಿ ಅಣ್ಣಾರಾಯರು ಬಹಳ ಸಮೃದ್ಧವಾಗಿ ತಮ್ಮ ಪ್ರದೇಶದ ಭಾಷೆಯನ್ನು ಸಮರ್ಪಕವಾಗಿ ಬಳಸಿದ್ದಾರೆ. ತುಂಬ ಶಕ್ತಿಯುತವಾದ ಸಂಭಾಷಣೆಗಳು ಕಾದಂಬರಿಗೆ ದಟ್ಟವಾದ ಸಾಹಿತ್ಯಿಕ ಮೆರುಗನ್ನು ನೀಡಿದೆ. ಅಣ್ಣಾರಾಯರು ಇಲ್ಲಿ ಶೇಡಬಾಳ, ಚಂದೂರು ಹೀಗೆ ಮಹಾರಾಷ್ಟ್ರಕ್ಕೆ ತೀರ ಸಮೀಪ ಇರುವ ಜೈನರು ಮಾತನಾಡುವ ಭಾಷೆಯನ್ನು ಬಳಸಿದ್ದಾರೆ. ಸಂಭಾಷಣೆಯ ಉದ್ದಕ್ಕೂ ಗಾದೆ ಮಾತುಗಳು, ಚಮತ್ಕಾರಿಕ ಚತುರೋಕ್ತಿಗಳು ಅನುಭವದ ಆಡುನುಡಿಗಳನ್ನು ಸೇರಿಸಿದ್ದರಿಂದ ಭಾಷೆ ಹೆಚ್ಚು ಶಕ್ತಿಯುತವಾಗಿದೆ" (ಬಾಳಾಸಾಹೇಬ ಲೋಕಾಪುರ, ಮಿರ್ಜಿ ಅಣ್ಣಾರಾಯರ ಸಾಹಿತ್ಯ ಪು. ೨೦) ಎಂಬುದಾಗಿ ಅಭಿಪ್ರಾಯಪಟ್ಟರೆ, "ಈ ಕಾದಂಬರಿಯ ಸಂವಾದ ಶೈಲಿ ಸುಲಭವಾಗಿ ಅರ್ಥವಾಗುವಂತಿಲ್ಲ. ವಾಸ್ತವ ಪ್ರಾದೇಶಿಕ ಕಾದಂಬರಿಯಲ್ಲಿ ಇಂಥ ದೇಸಿ ಬರುವುದು ಅಪರಿಹಾರ್ಯ ಅದರಿಂದ ಕಥೆ ಅರ್ಥವಾಗದೆ ಅದರ ಸ್ವಾರಸ್ಯ ತಿಳಿಯದೆ ವಾಚಕರು ಹಳಿದರೆ ಅದೂ ಅಪರಿಹಾರ್ಯ.

ಕೊನೆಗೆ ಕೆಲವು ಪದಗಳ ಮತ್ತು ಗಾದೆಮಾತಿನ ಕೋಶ ಕೊಟ್ಟಿದೆ. ಅಷ್ಟರಿಂದ ಎಲ್ಲ ಕಡೆ ಭೋಧೆಯಾಗಲಾರದು. ಉಚ್ಚಾರರೀತಿಯೂ ತಿಳಿಯದು. ಕೆಲವು ಶಬ್ದರೂಪಗಳು ವ್ಯಾಕರಣ ರೂಪಗಳು ವಿಶಿಷ್ಟವಾಗಿವೆ" (ರಂ.ಶ್ರೀ.ಮುಗಳಿ, ನಿಸರ್ಗ ಮುನ್ನುಡಿ) ಎಂಬುದಾಗಿ ರಂ.ಶ್ರೀ ಮುಗಳಿಯವರು ಅಭಿಪ್ರಾಯಪಡುತ್ತಾರೆ.

ಇವರುಗಳ ಅಭಿಪ್ರಾಯಕ್ಕೆ ಕಾದಂಬರಿಯಿಂದ ನಿದರ್ಶನಗಳನ್ನು ನೋಡುವುದಾದರೆ,

ತಾರಕ್ಕ ಒಬ್ಬಳೆ ಅಡುಗೆಯ ಮನೆಯಲ್ಲಿ ಮುಂಜಾನೆ ತಿಂದುಳಿದ ಹಾಲುಕಾಯಿಸುತ್ತಿದ್ದಳು. ಅನಂತ ನೀರು ಕುಡಿಯಲೆಂದು ಒಳಗೆ ಹೋಗಿ. "ಯಾನ ತಾರಾ, ಭರಮಗ ಕುಡಿಲಾಕ.... ಹಾಲ ಕಾಸಕಿ ಹತ್ತೀದಿ ಯಾನ?" ಸ್ವಲ್ಪ ಕೊಂಕುದನಿಯಿಂದ ನಸುನಗುತ್ತ ಕೇಳಿದ.

"ಹೂಂ! ನಾ ಯಾತಕ್ಕ ಹಾಲು ಕಾಯಿಸಲಿ? ಅವರಿಗಿ ಕಾಸಾವರಾ ಕುಡಸಾವರಾ ಬ್ಯಾರೇನ ಇದಾರಲ್ಲ; ಆ ಪದವಿ ನಂಗೆಲ್ಲಿ ಬಂದೋತು..?" ಸಹಜ ದನಿಯಲ್ಲಿ ಸಾವಕಾಶ ನುಡಿದಳು. ತಾರಕ್ಕ ಮಾತು ಹೃದಯದಿಂದ ಹೊರಟಂತಿತ್ತು.

"ನಿನಗ ಇನ್ನ ಆ ಪದವಿ ಸಿಕ್ಕಿಲ್ಲ... ಅನ್ನು!"

ತಾರಕ್ಕ ಸುಮ್ಮನಿದ್ದಳು.

"ಇಷ್ಟುದಿವಸ ಸರ್ವೀಸ ಆಯ್ತು... ಎಂದ ಸಿಗೋದ ಇನ್ನ?"

ಅನಂತನ ಮಾತಿನ ಭಾವ ಅರ್ಥವಾಗದ್ದಕ್ಕೆ... "ಆಂ?" ಎಂದಳು ತಾರಕ್ಕ.

"ಇಷ್ಟು ದಿನಾ ಚಾಕರಿ ಹಾಕಿದಿ, ಸಿಗೂ ಆಶಾ ಏತಿಲ್ಲಾ?"

"ಸಿಕ್ಕೋತಲ್ಲ! ಇಂದಿಲ್ಲ ನಾಳಿ..."

"ಓಗ ಹೇಳು 'ನಾ ಯಾತಕ್ಕ ಕಾಸಲಿ?' ಅಂತಾ ಯಾಕ ಅನ್ನತಿ?

- ಹುಲೀ ಅಂಥಾ ಅವ್ವ ಇದಾಳು ತಿನ್ನಸಾಕೀ ಉಣ್ಣಸಾಕೀ, ತಂಗಿ ಇದಾಳ ಮ್ಯಾಲಿ ..... ತಡೀ ತಪ್ಪದೀ ನೋಡಾಕೀ... ನಾ ಯಾತಕ ಬೇಕ ಅಂವಗ ನಾ ಊಟಕ ಹಾಕಿದರ ಮಾಡಿದರ ಕಣ್ಣ ಹತ್ಯಾವಲ್ಲಾ ನನ್ನೂ......"

"ಕಣ್ಣ ಬ್ಯಾರೆ ಹತ್ತತಾವ್ಯಾನ...? ಯಾರ ಹೇಳಿದರಿದನ್ನ ಒಳ್ಳೇ ಹಳ್ಳಿ ಸಮಜೂತಿ ಏತೆಲ್ಲ ಇದು.. ದಿನಾ ಹಟೇಲದಾಗ ಒಬ್ಬರ ಮುಂದ ಒಬ್ಬರ ಕೂತ ಬೇಕಾದ ತಿಂತಾರೂ... ಅವರಿಗ್ಯಾನ ಆಗುದಲ್ಲ.... ಮನಿಹೊಳಗ ಹ್ಯಾಂತಿ ಗಂಡನ ಇಕ್ಕಿದರ.... ಕಾಲಧೂಳಿ ಆಗುತೇತೀತಿ ಯಾನ?" ತಾರಕ್ಕನ ಮನದ ಇಂಗಿತವನ್ನು ಹೊರಗೆಡವಲೆಂದು ಅನಂತ ಕೇಳಿದ.

"ನಿಮ್ಮ ಶಹರದಾಗ ಕಾಲಧೂಳಿ ಆಗಲಾಕಿಲ್ಲ. ನಮ್ಮ ಹಳ್ಳ್ಯಾಗ ಎಲ್ಲಾ ಆಗತಾವ ನೋಡು.." ಸ್ವಲ್ಪ ತಡೆದು, "ಅದರಾಗ ನಮ್ಮ ಮನ್ಯಾಗ ಭಾಳ ಲಗೂ ಯಾನ ಐತಿ ಯಾನೋ, ಈ ಮನೀ ಕಾಲಗುಣಾನ" ಅನಂತನ ಕಡೆಗೆ ನೋಡುತ್ತ ನುಡಿದಳು ತಾರಾ.[1] (ಪು. ೧೧೮-೧೧೯)

ಕೊನೆಗೆ ಕೆಲವು ಪದಗಳ ಮತ್ತು ಗಾದೆಮಾತಿನ ಕೋಶ ಕೊಟ್ಟಿದೆ. ಅಷ್ಟರಿಂದ ಎಲ್ಲ ಕಡೆ ಭೋಧೆಯಾಗ ಲಾರದು. ಉಚ್ಚಾರರೀತಿಯೂ ತಿಳಿಯದು. ಕೆಲವು ಶಬ್ದರೂಪಗಳು ವ್ಯಾಕರಣ ರೂಪಗಳು ವಿಶಿಷ್ಟವಾಗಿವೆ" (ರಂ.ಶ್ರೀ.ಮುಗಳಿ, ನಿಸರ್ಗ ಮುನ್ನುಡಿ) ಎಂಬುದಾಗಿ ರಂ.ಶ್ರೀ ಮುಗಳಿಯವರು ಅಭಿಪ್ರಾಯಪಡುತ್ತಾರೆ.

ಇವರುಗಳ ಅಭಿಪ್ರಾಯಕ್ಕೆ ಕಾದಂಬರಿಯಿಂದ ನಿದರ್ಶನಗಳನ್ನು ನೋಡುವುದಾದರೆ,

ತಾರಕ್ಕ ಒಬ್ಬಳೆ ಅಡುಗೆಯ ಮನೆಯಲ್ಲಿ ಮುಂಜಾನೆ ತಿಂದುಳಿದ ಹಾಲುಕಾಯಿಸುತ್ತಿದ್ದಳು. ಅನಂತ ನೀರು ಕುಡಿಯಲೆಂದು ಒಳಗೆ ಹೋಗಿ. "ಯಾನ ತಾರಾ, ಭರಮಗ ಕುಡಿಲಾಕ.... ಹಾಲ ಕಾಸಕಿ ಹತ್ತೀದಿ ಯಾನ?" ಸ್ವಲ್ಪ ಕೊಂಕುದನಿಯಿಂದ ನಸುನಗುತ್ತ ಕೇಳಿದ.

"ಹೂಂ! ನಾ ಯಾತಕ್ಕ ಹಾಲು ಕಾಯಿಸಲಿ? ಅವರಿಗಿ ಕಾಸಾವರಾ ಕುಡಸಾವರಾ ಬ್ಯಾರೇನ ಇದಾರಲ್ಲ; ಆ ಪದವಿ ನಂಗೆಲ್ಲಿ ಬಂದೋತು..?" ಸಹಜ ದನಿಯಲ್ಲಿ ಸಾವಕಾಶ ನುಡಿದಳು. ತಾರಕ್ಕ ಮಾತು ಹೃದಯದಿಂದ ಹೊರಟಂತಿತ್ತು.

"ನಿನಗ ಇನ್ನ ಆ ಪದವಿ ಸಿಕ್ಕಿಲ್ಲ... ಅನ್ನು!"

ತಾರಕ್ಕ ಸುಮ್ಮನಿದ್ದಳು.

"ಇಷ್ಟುದಿವಸ ಸರ್ವೀಸ ಆಯ್ತು... ಎಂದ ಸಿಗೋದ ಇನ್ನ?"

ಅನಂತನ ಮಾತಿನ ಭಾವ ಅರ್ಥವಾಗದ್ದಕ್ಕೆ... "ಆಂ?" ಎಂದಳು ತಾರಕ್ಕ.

"ಇಷ್ಟು ದಿನಾ ಚಾಕರಿ ಹಾಕಿದಿ, ಸಿಗೂ ಆಶಾ ಏತಿಲ್ಲಾ?"

"ಸಿಕ್ಕೋತಲ್ಲ! ಇಂದಿಲ್ಲ ನಾಳಿ..."

"ಹೀಗ ಹೇಳು 'ನಾ ಯಾತಕ್ಕ ಕಾಸಲಿ?' ಅಂತಾ ಯಾಕ ಅನ್ನತಿ?

- ಹುಲೀ ಅಂಥಾ ಅವ್ವ ಇದಾಳು ತಿನ್ನಸಾಕೀ ಉಣ್ಣಸಾಕೀ, ತಂಗಿ ಇದಾಳ ಮ್ಯಾಲಿ ..... ತಡೀ ತಪ್ಪದೀ ನೋಡಾಕೀ... ನಾ ಯಾತಕ ಬೇಕ ಅಂವಗ ನಾ ಊಟಕ ಹಾಕಿದರ ಮಾಡಿದರ ಕಣ್ಣ ಹತ್ಯಾವಲ್ಲಾ ನನ್ನೂ......"

"ಕಣ್ಣ ಬ್ಯಾರೆ ಹತ್ತತಾವ್ಯಾನ...? ಯಾರ ಹೇಳಿದರಿದನ್ನ ಒಳ್ಳೇ ಹಳ್ಳಿ ಸಮಜೂತಿ ಏತೆಲ್ಲ ಇದು.. ದಿನಾ ಹಟೇಲದಾಗ ಒಬ್ಬರ ಮುಂದ ಒಬ್ಬರ ಕೂತ ಬೇಕಾದ ತಿಂತಾರೂ... ಅವರಿಗ್ಯಾನ ಆಗುದಲ್ಲ.... ಮನಿಹೊಳಗ ಹ್ಯಾಂತಿ ಗಂಡನ ಇಕ್ಕಿದರ.... ಕಾಲಧೂಳಿ ಆಗುತೇತೀತಿ ಯಾನ?" ತಾರಕ್ಕನ ಮನದ ಇಂಗಿತವನ್ನು ಹೊರಗೆಡವಲೆಂದು ಅನಂತ ಕೇಳಿದ.

"ನಿಮ್ಮ ಶಹರದಾಗ ಕಾಲಧೂಳಿ ಆಗಲಾಕಿಲ್ಲ. ನಮ್ಮ ಹಳ್ಳ್ಯಾಗ ಎಲ್ಲಾ ಆಗತಾವ ನೋಡು.." ಸ್ವಲ್ಪ ತಡೆದು, "ಅದರಾಗ ನಮ್ಮ ಮನ್ಯಾಗ ಭಾಳ ಲಗೂ ಯಾನ ಐತಿ ಯಾನೋ, ಈ ಮನೀ ಕಾಲಗುಣಾನ" ಅನಂತನ ಕಡೆಗೆ ನೋಡುತ್ತ ನುಡಿದಳು ತಾರಾ.[1] (ಪು. ೧೧೮-೧೧೯)

"ಗ್ರಾಮಾಯಣ ಕಾದಂಬರಿಯಲ್ಲಿನ ರಾವ್‌ಬಹದ್ದೂರರ ಬರವಣಿಗೆಯನ್ನು ಕುರಿತು. ಕೆ.ಡಿ. ಕುರ್ತಕೋಟಿಯವರು. "ಸಾಮಾನ್ಯವಾಗಿ ಲೇಖಕರು ಕಾದಂಬರಿಗೆ ಆದರ್ಶಪ್ರಾಯವಾದ ಸರಳತೆಯನ್ನೇ ಅವಲಂಬಿಸಿದ್ದಾರೆ. ಕ್ಲಿಷ್ಟತೆಗಾಗಲಿ, ಚಮತ್ಕಾರಕ್ಕಾಗಲಿ ಇಲ್ಲಿ ಆಸ್ಪದವಿಲ್ಲ. ಉತ್ಕಟ ಪ್ರಸಂಗಗಳಲ್ಲಿ ಸಹಜವಾಗಿಯೇ ಭಾಷೆ ಕಾವ್ಯಮಯವಾಗುತ್ತದೆ. ಅಲ್ಲಲ್ಲಿ ಸಹಜ ಉಪಮೆ ರೂಪಕಗಳು, ಜಾಣ್ನುಡಿಗಳು ಶೈಲಿಯ ಕಾಂತಿಯನ್ನು ಹೆಚ್ಚಿಸುತ್ತವೆ. ಆದರೆ ಮುಖ್ಯವಾಗಿ ಸಂವಾದ ರಚನೆಯಲ್ಲಿ ಲೇಖಕರ ಕೌಶಲವನ್ನು ಮೆಚ್ಚಲೇಬೇಕು. ಸಂಭಾಷಣೆಗಳೆಲ್ಲ ಬಳಕೆ ಮಾತಿನಲ್ಲಿಯೇ ಬರೆಯಲ್ಪಟ್ಟಿವೆ. ದೇಶಿ ನುಡಿಯ ತಿರುಳು ಶೈಲಿಯ ನೇಯ್ಗೆಯಲ್ಲಿ ಗಟ್ಟಿಯಾದ ಎಳೆಗಳನ್ನು ಕೂಡಿಸುತ್ತದೆ. ಈ ಬಗೆಯ ಬರವಣಿಗೆ ಈಗ ಹೆಚ್ಚು ಲೋಕಪ್ರಿಯವಾಗುತ್ತಿದೆ. ರಾವಬಹದ್ದೂರರು ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ನಾಟಕೀಯವಾದ ಸನ್ನಿವೇಶಗಳಲ್ಲಿ ಲೇಖಕರು ಆಯಾ ಪಾತ್ರಗಳಿಗನುಗುಣವಾಗುವಂತೆ ವಿವಿಧ ಶೈಲಿಯನ್ನುಪಯೋಗಿಸಿದ್ದಾರೆ. ಮೂರನೆಯ ಪ್ರಕರಣದಲ್ಲಿ ನದಿಯ ತೀರದಲ್ಲಿ ಹೆಂಗಳೆಯರಾಡುವ ಮಾತುಗಳು ತಾಯಿ ನೆಲದಿಂದಲೇ ಅರಳಿ ಬಂದಿವೆ" (ಕೆ.ಡಿ. ಕುರ್ತಕೋಟಿ, ಗ್ರಾಮಯಣ ಮುನ್ನುಡಿ) ಎಂಬುದಾಗಿ ಅಭಿಪ್ರಾಯಪಡುತ್ತಾರೆ.

ಲೇಖಕರ ಸಂವಾದ ಶೈಲಿಗೆ ಕಾದಂಬರಿಯಿಂದ ನಿದರ್ಶನವನ್ನು ನೋಡುವುದಾದರೆ,

"ಪಾದಳ್ಳಿಗೆ ಹೋಗಿ ಬರತೀನ ಚಿಮಣಾ. ಏನರೆ ಹೇಳೂದೈತೇನು" ಯಶಂತರಾಯರು ಅಕ್ಕರೆಯಿಂದ ಕೇಳಿದರು. ಯಾರಿಗೇನ ಹೇಳಬೇಕ ಮಾಮಾ!" ಎಂದವಳೇ ಚಿಮಣಾ ಬಿಕ್ಕಿ ಬಿಕ್ಕಿ ಅಳಹತ್ತಿದ್ದಳು. ಇತ್ತೀಚೆಗೆ ಯಾರು ಸಹಾನುಭೂತಿಯಿಂದ ಮಾತನಾಡಿದರೂ ಅವಳಿಗೆ ದುಃಖ ತಡೆಯುತ್ತಿರಲಿಲ್ಲ.

"ಅಳಬ್ಯಾಡ ತಂಗಿ, ಮೊದಲಿನಂಗ ನೀ ಏನು ಪರದೇಶಿ ಅಲ್ಲ. ನಿನ್ನ ಮನೀನ್ಕ ಅಂತ ತಿಳಿಕೋ ಅಂತ ಎಷ್ಟ ಸಾರೆ ಹೇಳಿಲ್ಲ? ದಾದಾಗೇನಾದರೆ ಹೇಳೂದೈತೇನೂ ಅಂತ ಕೇಳಿದೆ" ಯಶವಂತರಾಯರು ಸಾಂತ್ವಾನಗೊಳಿಸಲು ಯತ್ನಿಸಿದರು.

"ದಾದಾನ ಪಾಲಿಗೆ ನಾ ಎಂದೋ ಸತ್ತು ಹೋಗೀನಿ ಮಾಮಾ. ಅವಗಿನ್ನೂ ನನ್ನ ಮ್ಯಾಗಿನ ಸಿಟ್ಟು ಇಳದೇ ಇಲ್ಲ. ಅವಗ ತೋರಸಾಕ ಮಾರಿ ಇಲ್ಲದ ಈ ಪಾಪಿ ಜನಮಾ ಹ್ಯಾಗ ಕಳೀಬೇಕು ಮಾಮಾ. ನಾನಾ ಇನ್ನ ಬದೂಕುದರಾಗ ಅರ್ತ ಉಳದಿಲ್ಲ. ನಾ ಅವನ ಪಾಲಿಗೆ ಸತ್ತರೂ ಈ ಕೂಸೂ ಅವನ ಸ್ವಾದರಳಿಯಾ, ತಾಯಿ ಸತ್ತು ಸ್ವಾದರಮಾವ ಉಳೀಬೇಕಂತ ಹೇಳತಾರು. ಈ ಕೂಸಿನ್ನಂತು ಜ್ವಾಪಾನ ಮಾಡಂತ ಹೇಳ್ರೀ".

"ನಿನ್ನ ಕೂಸಿನ್ನ ಜ್ವಾಪಾನ ಮಾಡಲಿಕ್ಕೆ ದಾದ್ಯಾನ ಯಾಕ ಬೇಕು ಚಿಮಣಾ ಕೂಸಿನ ತಂದಿ ಜ್ವಾಕಿ ಮಾಡೇ ಮಾಡತಾನು. ನೀ ಯಾರ ಹೆಸರ ಹೇಳತಿ ಅವರ ಹೆಸರೆ ಹಚ್ಚಾಕ ನಂದು ಕಬೂಲಿ ಐತಿ".

"ಕರೇವಂದ್ರೂ ಕೂಸಿನ ತಂದೀ ಹೆಸರು ಹಚ್ಚತೀರ್ಯಾ ಮಾಮಾ?" ಚಿಮಣಾಳ ದನಿಯಲ್ಲಿ ನೂರು ಆಸೆಗಳು ಕುಣಿಯುತ್ತಿದ್ದವು.

"ಹೌದು ತಂಗಿ, ನೀ ಬೇಕಾರ ಬಾಪುಸಾಹೇಬನ ಹೆಸರು ಹೇಳಿದರೂ ಹಚ್ಚಸತೀನಿ ಆತ್ಕ!"

ಯಶವಂತರಾಯರ ಈ ಅಭಯಪೂರ್ಣ ಆಶ್ವಾಸನಕ್ಕೆ ಚಿಮಣಾಳಲ್ಲಿ ದುಃಖ ತಡೆಯದೆ ಉಕ್ಕಿಬಂತು. ....ಚಿಮಣಾಳಿಗೆ ಈ ಮಾನಸಿಕ ತೊಡಕನ್ನು ಬಿಡಿಸುವಷ್ಟು ತ್ರಾಣವಿರಲಿಲ್ಲ. ಪ್ರತಿ ಕ್ಷಣಕ್ಕೂ ಮಾಡಿದ ಪಾಪವೆಲ್ಲ ಇತಿಹಾಸವಾಗಿ ಅವಳ ದುಃಖವನ್ನು ಮೊಗೆಯುತ್ತಿತ್ತು. ಒರತೆಯ ನೀರಿನಂತೆ ಆ ದುಃಖ ಅಕ್ಷಯವಾಗಿತ್ತು. (ಪು. ೧೭೬-೭೭)

"ಗೋಪಾಳರಾವ ಸಹಿ ಸಲುವಾಗಿ ಕಾಗದಪತ್ರ ಇಟ್ಟು ಹೋಗರಿ. ಸಹಿ ಮಾಡಿ ಹಿಂದಾಗಡೆ ಕಳಿಸತ್ತೇನಿ. ಶೇಷಪ್ಪ ನಿಮ್ಮದೇನಾರ ಕೆಲಸ ಉಳದದೇನು?" ಎಂದು ಬೇರೆ ಸಲಿಗೆಗೆ ಆಸ್ಪದವೀಯದಂತೆ ಕೇಳಿ ಎದ್ದು ಹೊರಗೆ ಬಂದರು. ಶೇಷಪ್ಪ ಇನ್ನೂ ಹಲ್ಲುಕಿಯುತ್ತಿದ್ದ; ಕೈ ಹೊಸೆಯುತ್ತಿದ್ದ. ಸಾಹೇಬರನ್ನು ಹಿಂಬಾಲಿಸುತ್ತ ಹೊರಗೆ ಬಂದ, "ಮತ್ತೇನಿಲ್ಲ, ಆ ದಾದಾನ ಜಾಮೀನು ರದ್ದುಪಡಿಸಿ ಜೇಲಿಗೆ ಕಳಿಸೋ ಹುಕುಂ ಮಾಡಿದ್ರು....." ಎಂದು ಪ್ರಸ್ತಾಪವೆತ್ತಿದ್ದ.

"ಕಾಯದೇಶೀರ ಏನ ಹುಕುಮು ಮಾಡಬೇಕೋ ಅದನ್ನೆಲ್ಲ ಮಾಡತದ ನೀವೆಲ್ಲಾ ಹೀಂಗೇ ಸರಕಾರಿ ಕೆಲಸದೊಳಗೆ ಉಪದೇಶ ಮಾಡಲಿಕ್ಕೆ ಬರಬಾರದು ಎಂದು ಗದ್ದರಿಸಿದರು. (ಪು. ೨೬೦)

ಕುಂ. ವೀರಭದ್ರಪ್ಪ, ಮಿರ್ಜಿ ಅಣ್ಣಾರಾಯ, ರಾವಬಹದ್ದೂರರ ಕಾದಂಬರಿಗಳಲ್ಲಿನ ಭಾಷಾ ಬಳಕೆಯಲ್ಲಿ ಬಳ್ಳಾರಿ, ಬೆಳಗಾವಿ ಮತ್ತು ಬಿಜಾಪುರ ಪ್ರದೇಶಗಳಲ್ಲಿ ಕಂಡುಬರುವ ಧ್ವನಿ, ಪದ, ವಾಕ್ಯ ಮತ್ತು ವಿಶಿಷ್ಟ ಪದ ಪ್ರಯೋಗಗಳು ಕಂಡುಬರುತ್ತವೆ. ಇವು ಕಾದಂಬರಿಗಳಿಗೆ ಆಯಾ ಪ್ರದೇಶದ ಪ್ರಾದೇಶಿಕ ಸೊಗಡನ್ನು ತಂದುಕೊಟ್ಟಿವೆಯಲ್ಲದೆ ಮತ್ತೊಂದು ಪ್ರಭೇದದಿಂದ ಪ್ರತ್ಯೇಕಿಸಬಹುದಾದಷ್ಟು ವಿಶಿಷ್ಟತೆಯನ್ನು ಭೌಗೋಳಿಕ ವಾಗಿ ಪ್ರಾದೇಶಿಕವಾಗಿ ಧಾರವಾಡ ಪ್ರದೇಶವನ್ನು ಪ್ರತಿನಿಧಿಸುತ್ತವೆ. ಆದುದರಿಂದ ಅರಮನೆ, ನಿಸರ್ಗ, ಗ್ರಾಮಾಯಣ ಕಾದಂಬರಿಗಳಲ್ಲಿ ಧ್ವನಿ, ಪದ, ವಾಕ್ಯ, ವಿಶಿಷ್ಟಪದ ಹಂತದ ಶೈಲಿಯನ್ನು ವಿಶ್ಲೇಷಿಸುತ್ತ, ನಿದರ್ಶನಕ್ಕೆ ಈ ಮೂರು ಕಾದಂಬರಿಗಳಿಂದಲೇ ಉದಾಹರಣೆಗಳನ್ನು ನೀಡಲಾಗಿದೆ.

ಧ್ವನಿ ಶೈಲಿ

೧. ಕೆಲವು ಶಬ್ದಗಳ ಆದಿ ಮತ್ತು ನಡುವಿನ ಎ ಏ ಕಾರಗಳು ಯ ಕಾರವನ್ನು ಒ, ಓ ಕಾರಗಳು ವ ಕಾರವನ್ನು ಉಚ್ಚಾರದಲ್ಲಿ ಪಡೆಯುತ್ತವೆ.

ಉದಾ : "ಯಾನಾಯ್ತು?" ವ್ಯಗ್ರವಾಗಿ ಕೇಳಿದ ಭರಮ.

"ಆಗ್ತೇತಿ ಯಾನ? ಮನೀ ರೀತಿರಿವಾಜ ಎಲ್ಲಾ ಹೋಯ್ತು ಹಾಳಾಗಿ! ಕುರುಬರ ಹಂಗ ಇರಾವರ ನೀವ... ಬಸ್ತಿಗೆ ರೊಟ್ಟಿ ತಗದ ಇಡಕ ತಿಳೀಬಾರ್ದು ಇಕಿಗಿ?" (ಪು. ೮೯ ನಿಸರ್ಗ)

ಏನಾಯ್ತು - ಯಾನಾಯ್ತು

ಏನು - ಯಾನು

೨. ಕೆಲವು ಶಬ್ದಗಳಲ್ಲಿ ಯ, ವ, ಮ ಎಂಬ ವ್ಯಂಜನಗಳ ಹಿಂದಿನ ಅಥವಾ ಮುಂದಿನ ಸ್ವರಗಳು ಸಾಮಾನ್ಯವಾಗಿ ಅನುನಾಸಿಕತೆಯನ್ನು ಹೊಂದುತ್ತದೆ.

ಉದಾ : "ನನ್ನ ಕಣಕಿ ಬಣವಿ ಸುಟ್ಟರ, ನನ್ನ ನಸೀಬಾನ ಸುಟ್ಟಂಗ ಅಂತ ಪಡದಪ್ಪ ತಿಳಕೊಂಡಿದ್ದರ. ಅಂವಗ ತೆಲೀ ಇಲ್ಲ ಅಂತ ತೋರಿಸಿ ಕೊಡತೀನಿರಿ". (ಪು.೨೦೨, ಗ್ರಾಮಾಯಣ)

೩. ಕೆಲವು ನಾಮಪದಗಳ ಅಂತ್ಯದ ಎ ಕಾರ ಇ ಕಾರವಾಗುತ್ತದೆ.

ಉದಾ : "ಯಪ್ಪಾ, ತಂದೇ ನಾನು ಊರ ತಳವಾರ. ಎಲ್ಲಾರ ಮನಿ ಎಂಜಲಾ ತಿಂದ ಬೆಳದೈತಿ ಈ ದೇಹ. ಅನ್ನ ಹಾಕಿ ಸಲುಹಿದ ಊರ ದೈವದವರ ಮುಂದ ಸುಳ್ಳ ಹೇಳಿದರ ನಾಲಗಿ ಸೀಳರಿ (ಪು. ೨೦೫ ಗ್ರಾಮಾಯಣ)

ನಾಲಗೆ - ನಾಲಗಿ

೪. ಕೆಲವು ಉ ಕಾರಾಂತ್ಯ ಶಬ್ದಗಳು ಅ ಕಾರಾಂತ್ಯವಾಗುತ್ತವೆ. ಇವುಗಳಲ್ಲಿ ನಾಮಪಗಳೇ ಹೆಚ್ಚು.

ಉದಾ : "ಭರಮ ಒಬ್ಬ ಸಕ್ಕರಿ ತಿನದಿರ ಯಾನ ಆಯ್ತು? ನೀವ ಇಲ್ಲ? ನಿಮಗಯಾನ ಬಾಯಿ ಕಟ್ಟೇತು? ತಿನ್ನರಿ, ಅಳ್ಯಾಗ, ನಾಲ್ಕ ಮಂದಿಗಿ ಕೊಡರೀ. ಯಾತಕ ಮಾಡಿ ತಂದ ಆದೇವು? ಇಷ್ಟ ಖರ್ಚು ಮಾಡಿ ಗುದ್ದಾಡಿ, ಮಂದಿ ಬಾಯಾಗ ಬೀಳಲಿ ಅಂತ, ಅಲ್ಲ!"

"ಯಾರ ಮಾಡ ಅಂದಿದದರ ನಿಮಗ ಖರ್ಚ? ಹೀಂಗ ಮನದಾಗ ಮರಗತ ಮಗಳಿಗಿ ಮಾಡಿದ್ದ ನಾ ಎಲ್ಲಿ ನೋಡಿಲ್ಲಪ್ಪ!" (ಪು. ೧೬೨ ನಿಸರ್ಗ)

ನೀವು - ನೀವ

ಖರ್ಚು - ಖರ್ಚ

೫. ಕೆಲವು ಶಬ್ದಗಳ ಮಧ್ಯ ಸ್ವರಲೋಪವಾಗುತ್ತದೆ. ಅಲ್ಲದೆ ವಿಜಾತಿಯ ವ್ಯಂಜನಗಳು ಸಜಾತೀಯ ವ್ಯಂಜನಗಳಾಗುತ್ತವೆ.

ಉದಾ : ಅಯ್ಯಯ್ಯೋ, ಅಲಲಲಾ... ಮುಂದ ಮುಂದ ಕ ಹೋದಂಗ ಮಾಡೋದು... ಹಂಗ ... ಹಿಂದ ಹಿಂದಕ ತಿರುಗಿ ಅರಮನೇನ ಕಣ್ಣೊಳಗ ತುಂಬಿಕೊಳ್ಳೋದು... ತಮ ತೆಪ್ನ ಹೊಟ್ಟೇಲಿ ಹಾಕ್ಕೊಳ್ಳೇ ನಮ್ಮವ್ವಾ ಯಂದು ಸಣು ಮಾಡೋದು ಮಾಡುತ ಮಂದಿ ಮತ ಮತ್ತ ಹೊಳ್ಳೊಳ್ಳಿ ಹೋಗಲಾರಂಭಿಸಿದ ಯ್ಯಾಳ್ಳೆ ಯಾವುದಿತ್ತೆಂದರೆ ಅದೇ ಯಿತ್ತು. (ಪು. ೮೬ ಅರಮನೆ)

ತಪ್ಪನ್ನು - ತೆಪ್ನ

ಉದಾ ೨ "ಯವ್ವಾ, ಐದೂ ಬಟ್ಟು ಹೊಟ್ಯಾಗೆ ಹಾಕಿ ಸಲವೀದಿ; ನಿನ್ನ ಮರ್ಯಾದೀಯನ್ನ ಉಳಸಾಕ ಜೀವ ಕೊಟ್ಟೆನು. ಆದರೆ ಇಂತಾ ಗುಟ್ಟಿನ ಮಾತು ಹೇಳಾಣ ಆಗಾಕಿಲ್ಲ". (ಪು. ೯೨ ಗ್ರಾಮಾಯಣ)

ಬೆರಳು - ಬಟ್ಟು

೬. ಕೆಲವು ಶಬ್ದಗಳ ಆದಿಯ ವ ಕಾರ ಲೋಪವಾಗುತ್ತದೆ.

ಉದಾ : "ಹಾಗೆಲ್ಲ ಸಿಟ್ಟಿನ ಕೈಯಾಗ ಬುದ್ಧಿಯನ್ನು ಕೊಡಬರದು ಲಕ್ಷ್ಮಣಾ. ನೀನ್ನ ಇಚಾರ ಹಾಕಿ

ನೋಡು. ಚಿಮಣಾನ ಮರ್ಯಾದಿ ನಮ್ಮ ದಾರ್‍ಯಾಗ ಅಡ್ಡ ಬಂತು, ಆಕಿ ನಾನಾಗ ಮಗಳಾದರೆ ನಿನಗೂ ಮಗಳಾಗಲಿಲ್ಲ?..... (ಪು. ೩೩ ಗ್ರಾಮಾಯಣ)

ವಿಚಾರ - ಇಚಾರ

ಆದರೆ ಇದು ಬಳ್ಳಾರಿ ಕನ್ನಡದಲ್ಲಿ ವ ಕಾರ ಲೋಪವಾಗಿ ಯ ಕಾರವಾಗಿದೆ.

ಉದಾ : ಬರ್ರೆವ್ವಾ.... ಬರ್‍ರಿ... ನನಕೂಡೆ.. ಮಂದಿ ಸುಖ ದುಕ್ಕ ಯಿಚಾರಿಸೋಣ (ಪು. ೮೮ ಅರಮನೆ)

ವಿಚಾರಿಸೋಣ - ಯಿಚಾರಿಸೋಣ

ಆದರೆ ಬೆಳಗಾಂ ಕನ್ನಡದಲ್ಲಿ ವ ಕಾರವು ಯಾವ ಬದಲಾವಣೆಯನ್ನು ಹೊಂದದೆ ಯಥಾವತ್ತಾಗಿ ಬಳಕೆಯಾಗಿದೆ.

ಉದಾ : "ಹೋಂದ; ನನಗ ಮದವೀನ್ಸ ಮಾಡಕೋಬಾರದ ಅನಸಿತ್ತ. ಹೆಂಗಸರ್‍ಯಾನ ವಿಶ್ವಾಸದವರಲ್ಲ!...." (ಪು. ೨೧೨ ನಿಸರ್ಗ)

ವಿಶ್ವಾಸ - ವಿಶ್ವಾಸ

೭. ಕೆಲವು ಶಬ್ದಗಳಲ್ಲಿ ಷ, ಶ ಕಾರ ಕಾಣಿಸಿಕೊಂಡರೂ ಇದು ಕೆಲವು ವೇಳೆ ಸ ಕಾರದಲ್ಲಿ ಐಕ್ಯವಾಗುತ್ತದೆ.

ಉದಾ : "ಅಲ್ಲ ಕಾಕಾ, ಬರಗಾಲ ದಿನದಾಗ ಮನಸ್ಯಾ ಎಲ್ಲೀದರೆ ಕಾಳತಂದು, ತಿಂದು ಬದಕತಾನ, ಮೂಕ ಜನಾವರ, ಕಣಿಕಿ ಇಲ್ಲದ ಉಪಾಸ ಸಾಯ್ಯಾಕ ಹತ್ಯಾವು. ಅಂತಾ ಹೊತ್ತಿನ್ಯಾಗ ಇದ್ದ ನಾಲ್ಕಾರು ಬಣಿವಿ ಸುಡೂದಂದರ, ಇವಕ ಮನಶ್ಯಾರನ ಬೇಕೋ ಏನ ದನಾ ಅನಬೇಕೋ...." (ಪು. ೨೦೨ ಗ್ರಾಮಾಯಣ)

ಮನುಷ್ಯಾ - ಮನುಶ್ಯಾ - ಮನುಸ್ಯಾ

೮. ಕೆಲವು ಶಬ್ದಗಳಲ್ಲಿ ಉಚ್ಚಾರದ ಒತ್ತಡದಿಂದ ಮಹಾಪ್ರಾಣ ವ್ಯಂಜನಗಳು ಕಾಣಿಸಿಕೊಳ್ಳುತ್ತವೆ.

ಉದಾ : "ಸುಟ್ಟ ಬೂದಿಮಾಡಿ ಬಂದ್ಯಾನಪ್ಪ, ನಿಮ್ಮಪ್ಪನಾ....? ಅಯ್ಯೋ! ನನ್ನ ಅರಸ... ನನ್ನ ಕುಂಕುಮ ಧೋರಿ... ನನ್ನ ಮಂಗಳಸೂತ್ರಾ.... ನನ್ನ ಭಂಗಾರಾ.... ನನ್ನ ಸಡಗರಾ... ನನ್ನ ಸಿಂಗಾರಾ.... ಎಲ್ಲಿ ಅಡಗಿದ್ಯೋ...." (ಪು. ೧೦೭ ನಿಸರ್ಗ)

ಧೋರಿ - ದೊರೆ

೯. ಕೆಲವು ಶಬ್ದಗಲ್ಲಿ ಕಾಣಿಸಿಕೊಳ್ಳುವ ಸ ಕಾರವು ಕೆಲವು ವೇಳೆ ಚ ಕಾರವಾಗುತ್ತದೆ.

ಉದಾ : "....ರೆಟ್ಟೇಲಿ ತಾಕತ್ತಿಲ್ಲದಿದ್ದರೂ ಹೊಟ್ಟೆಲಿ ಯೇಳು ಕೊಪ್ಪರಿಗೆ ಸಿಟ್ಟು ಸೆಡವು ಯಿಟ್ಟುಕೊಂಡಿರೋದು ಯಿದೇ ಅರಮನೆಯಾ.... ಯಿಡೀ ಪಟ್ಟಣವನ್ನು ಅಳಾಗಿ ಮಾಡಿಕೊಂಡು ಚಲಿ ಕಾಯಿಸ್ತಿರೋದು ಯಿದೇ ಅರಮನೇಯಾ ಮುಂಚಾಲಿದ್ದರೂ ಚೆಂಜೀಗಿಲ್ಲದಿದ್ದರೂ, ಚೆಂಜೀಕಿದ್ದರೂ

ಮುಂಜಾನೆಗಿಲ್ಲದಿದ್ದರೂ ಬಡಿವಾರ ಮಾಡುತ್ತಿರೋದು ಯಿದೇ ಅರಮನೆಯಾ....” (ಪು. ೮೪ ಅರಮನೆ)

ಸಂಜೆ - ಚಂಜೀ

೧೦. ಕೆಲವು ಶಬ್ದಗಳ ವ್ಯಂಜನಗಳು ಸಜಾತೀಯ ವ್ಯಂಜನಗಳಾಗುತ್ತವೆ.

ಉದಾ : “ಎಜ್ಜಾ, ಹಂಗ ಊಟ ಮಾಡದ ಪಾದಳ್ಳಿ ಬಿಟ್ಟು ನೀವು ಹೋಗಬಿಡೋದಲ್ಲನಾ. ನಡೀರಿ ಮನೆಗೆ. ನಮ್ಮಲ್ಲೇ ಊಟಾ ಮಾಡಿದ ಆಮ್ಯಾಲೆ ಕೊಳ್ಳ ಕಟ್ಟಿರಿ. (ಪು. ೫೨ ಗ್ರಾಮಾಯಣ)

ಕೊರಳು - ಕೊಳ್ಳ

೧೧. ಕೆಲವು ಶಬ್ದಗಳ ತ ಮತ್ತು ದ ಕಾರಗಳು ಟ ಮತ್ತು ಡ ಕಾರಗಳಾಗುತ್ತವೆ.

ಉದಾ : “ಲೇ ಕರಿಯಾ, ಬಾಳಾರಾಮನ ಅಂಗಡಿಗೆ ಹೋಗಿ ನಾಲ್ಕು ಮಣಾ ಸಕ್ಕರಿ ತತ್ತಾರಲೆ, ಸುತ್ತೂಕಡೆ ದೇವರಿಗೊಂದೊಂದರಂತೆ ಹದನಾರ ಟೆಂಗಿನಕಾಯಿ, ಪೂಜಾರಿಗೋಳಿಗೆ ಕೊಡಲಾಕ ಮೂರು ರುಪಾಯಿ ಚಿಲ್ಲರು, ಗೌಡರು ಹೇಳ್ಯಾರಂತ ಹೇಳಿ ಬರೆಸಿ ತೆಗೊಂಡ ಬಾ”. (ಪು. ೩೨೨, ಗ್ರಾಮಾಯಣ)

ತೆಂಗಿನಕಾಯಿ - ಟೆಂಗಿನಕಾಯಿ

೧೨. ಕೆಲವು ಶಬ್ದಗಳ ಮಧ್ಯ ಸ್ವರ ಲೋಪವಾಗುತ್ತದೆ.

ಉದಾ : “ಅದ್ಯಾಕೋ ಹಾಂಗ ಸಿಟ್ಟಿಗಿ ಬರತಿ? ನಿನ ಹ್ಯಾಂತಿ ನೆರದರ ಹೇಳ್ಕ ಬಂದರ ಬಾಯಾಗ ಸಕ್ಕರೀ ಹಾಕಬೇಕೋ, ಯಾನ ಅದೆಲ್ಲ ಬಿಟ್ಟು ಹೀಂಗ ಸಿಟ್ಟಿಗೆ ಬರಬೇಕು?” ಎಂದಳು. (ಪು.೧೯೭ ನಿಸರ್ಗ)

ಹೇಳಲು - ಹೇಳ್ಕ

೧೩. ಪದಗಳ ನಡುವಿನ ಅಥವಾ ಹ ಕಾರ ಕೆಲವು ವೇಳೆ ಲೋಪವಾಗುತ್ತದೆ.

ಉದಾ : ಅಮ್ಮವ್ವ ಹೊರಗೆ ಎದ್ದು ನಡೆದಳು. ಹೋಗುವಾಗ “ಭಾಳ ದಿನಕ ಬಂದೀದಾಳ ರತ್ನಾ. ಅವ್ವಾ ಮಗಳಾ ಮಾತಾಡಿರವ್ವ ನಾ ಹೊರಗ ಹೋಗತ್ಯಾನು” ಅಂದಳು. (ಪು. ೨೪೦ ನಿಸರ್ಗ)

ಬಹಳ - ಭಾಳ

ಪದ ಶೈಲಿ

ಗ್ರಾಮಾಯಣ, ನಿಸರ್ಗ ಮತ್ತು ಅರಮನೆ ಕಾದಂಬರಿಗಳು ಧಾರವಾಡ ಪ್ರದೇಶವನ್ನು ಪ್ರತಿನಿಧಿಸುತ್ತಿರುವುದರಿಂದ ಪದದ ಹಂತದ ಅನನ್ಯತೆಯನ್ನು ಧಾರವಾಡ ಪ್ರಾದೇಶಿಕ ಭಾಷೆಯ ಹಿನ್ನೆಲೆಯಲ್ಲಿಯೇ ಚರ್ಚಿಸುತ್ತಾ, ನಿದರ್ಶನಕ್ಕಾಗಿ ಗ್ರಾಮಾಯಣ, ನಿಸರ್ಗ ಮತ್ತು ಅರಮನೆ ಕಾದಂಬರಿಗಳಿಂದಲೇ ಉದಾಹರಣೆಗಳನ್ನು ನೀಡಲಾಗಿದೆ.

ವಚನ

ನಾಮಪದಗಳಲ್ಲಿ ಏಕವಚನ ಸೂಚಿಸಲು ಪ್ರತ್ಯೇಕವಾದ ಪ್ರತ್ಯಯ ಬಳಕೆಯಲಿಲ್ಲ. ಬಹುವಚನ ಪ್ರತ್ಯಯಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ಲಿಂಗ

ಧಾರವಾಡ ಕನ್ನಡದಲ್ಲಿ ಗಂಡನ್ನು ಸೂಚಿಸುವುದು ಪುಲ್ಲಿಂಗವಾದರೆ, ಹೆಣ್ಣನ್ನು ಸೂಚಿಸುವುದು ಸ್ತ್ರೀಲಿಂಗವಾಗುತ್ತದೆ. ಗಂಡು-ಹೆಣ್ಣು ಎರಡೂ ಅಲ್ಲದ್ದು ನಪುಂಸಕಲಿಂಗವಾಗುತ್ತದೆ. ಕೆಲವು ವೇಳೆ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕ ಲಿಂಗವೆನ್ನದೆ ಎಲ್ಲವೂ ನಪುಂಸಕ ಲಿಂಗದಲ್ಲಿಯೇ ಬಳಕೆಯಾಗುತ್ತವೆ.

ಉದಾ : ....ಅದೇ ಹೊತ್ತಿಗೆ ಬಂದ ಬಯ್ಯವ್ವ ತಾನು ತನ್ನ ಮನೇಲಿಂದ ಕುಚಿಕೊಂಡು ತಂದಿದ್ದ ನುಚ್ಚಂಬಲಿ ಗಡಿಗೆಯನ್ನು ಮುಂದಿಟ್ಟು ಕೊಂಡಳು. ತನ್ನ ಬೊಟ್ಟುಗಳನ್ನೇ ಬಂಗಾರದ ಬೊಟ್ಟುಗಳೆಂದು ಭಾವಿಸಿ ವಂದೊಂದು ಮುಟಿಗೆ ಕಲೆಸಿ ಅದರ ಬಾಯೊಳಗಿಟ್ಟಳು. ಅದು ಗಬಗಬಾಂತ ತಿಂತು ಸಿವನ್ಯೇ.... ನೋಡು ನೋಡುವಷ್ಟರಲ್ಲಿ ವಂದು ಡಬರಿ ನುಚ್ಚಂಬಲೀನ ತಿಂದು ಮುಗಿಸಿತು ಸಿವನೇ..... (ಪು. ೩೮೮ ಅರಮನೆ)

ವಿಭಕ್ತಿ ಪ್ರತ್ಯಯಗಳು

೧. **ಪ್ರಥಮ ವಿಭಕ್ತಿ** : ಇದಕ್ಕೆ ಪ್ರತ್ಯೇಕವಾದ ಪ್ರತ್ಯಯ ಬಳಕೆಯಲಿಲ್ಲ. ನಾಮ ಪ್ರಕೃತಿಗಳೇ ಆ ಕೆಲಸವನ್ನು ನಿರ್ವಹಿಸುತ್ತವೆ. ಇಲ್ಲಿ ಕೆಲವು ವೇಳೆ ಅಂತ್ಯ ಸ್ವರ ದೀರ್ಘವಾಗುತ್ತದೆ.

೨. **ದ್ವಿತೀಯ ವಿಭಕ್ತಿ** : ನ್ನ - ಅನ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

ನ್ನ - "ನನ್ನ ತಂಗೀನ್ನ ನೀನಾಗಿ ಕದ್ದು ನಿನ್ನ ಉಡ್ಯಾಗ ಬೆಂಕಿ ಕಟಗೊಂಡೀದಿ. ಆಕಿ ಜೀವಕ್ಕ ಏನಾರ ಆದರ..." ದಾದಾನ ಬಾಯಿಂದ ಮಾತೇ ಹೊರಡಲಿಲ್ಲ (ಪು. ೬೨ ಗ್ರಾಮಾಯಣ)

ನ್ನ - ತಂಗಿಯನ್ನು - ತಂಗೀನ್ನ

ನ - "ಕೆಂಚಾ ಮಾದರ ಚನ್ನ್ಯಾ ಫೌಜದಾರರ್ನ ಭೇಟಿಯಾಗಿದ್ನೆನಲೆ?" ಧೂಮ್ರ ವರ್ತಲದಿಂದ ಅಶರೀರವಾಣಿ ಕೇಳಿಬಂತು. (ಪು. ೧೦೨ ಗ್ರಾಮಾಯಣ)

ನ - ಫೌಜದಾರರನ್ನು - ಫೌಜದಾರರ್ನ

೩. **ತೃತೀಯ ವಿಭಕ್ತಿ** : ಲಿಂದ, ಲೆ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ.

ಲಿಂದ - "ಹೂಂ! ಹುಡುಗರ ಆಗ್ತಾವೆ... ಅವನ್ನ ಯಾನ ಹಾದೀ ಮ್ಯಾಲಿಂದ ಹಿಡಕೊಂಡ ತರೋದ ಐತಿ...? ಈ ಹಾಸಿಗಿ ಹಿಡಿದಾವ್ನ ನೋಡಿರಿ ಮೊದಲ.... ಬಣವಿಗಿ ಬೆಂಕಿ ಹತ್ತೇತಿ ಅದ ಬಿಟ್ಟದೀರಿ. ಬಿತ್ತಾಕ ಯಾವಾಗ ಹೋಗೊದು.... ಅಂತ ಕೇಳಾಕ ಹತ್ತಿದ್ದೀರಿ...." (ಪು. ೯೭ ನಿಸರ್ಗ)

ಲಿದ - ಮೇಲಿಂದ - ಮ್ಯಾಲಿಂದ

ಲೆ - "ಎಲ್ಲಾರು ತಮ್ಮ ತಮ್ಮ ಜನ್ಮಕ ಹುಶಾರ.... ಯಾರ ಮುಸರೀ ಕೈಲೆ ತಾಗಿ ಹೊಡೀದುಲ್ಲ. ತಾಯಿ! ತವರಮನ್ಯಾಗ ಅಣ್ಣ ಒಂದ ನಮ್ಮಾವ ಆದರ ಅಣ್ಣನ ಹೆಂಡಿರ ಯಾರವರವ್ವಾ....!

ಎಲ್ಲಾ ಹಂತ್ಯಾಕ ಗಂಟ ಇದ್ದರನ್ನ ಬರಾವರ. ಇಲ್ಲ ಆದರ ಯಾರ ಹಣಿಕಿ ಹಾಕಿ ನೋಡೂದುಲ್ಲ ಸುದ್ದಾ....!" (ಪು. ೫೧ ನಿಸರ್ಗ)

ಲಿ - ಕೈಯಿಂದ - ಕೈಲೆ

೪. ಚತುರ್ಥಿ ವಿಭಕ್ತಿ : ಇದಕ್ಕೆ ಕ್ಕ, ಗ, ಗಿ ಎಂಬ ಪ್ರತ್ಯಯಗಳು ಸೇರುತ್ತವೆ.

ಕ್ಕ - ಈಗ ಗೌಡರ ಹೊಲಕ್ಕ ಹೋಗಿ ನೋಡಿದರ ಎಲ್ಲಾ ತಾನ್ನ ತಿಳೀತತಲ್ಲ" ಎಂದು ನಿಂಗ ಉತ್ತರವಿತ್ತ (ಪು. ೧೫೦ ಗ್ರಾಮಾಯಣ)

ಕ್ಕ - ಹೊಲಕ್ಕೆ - ಹೊಲಕ್ಕ

ಗ - "ಗೌಡ ಮೆತ್ತಗಾಗತಾನ, ಗೌಡನ ಮರ್ಮ ಕಟಿಗೊಂಡ ಪಡದಪ್ಪಗ ನಮ್ಮ ಆಶ್ರಯ ಇಲ್ಲದ್ದ ನಡಿಯೂದುಲ್ಲ. ಬಲಾಬಲಿ ಸಮಾಕಾಯಲಿಕ್ಕೆ ಇದೊಂದು ಹಾದಿ ಆಚಾರ್ರ... ಅಂದರ್ರ ಊರ ಥಣ್ಣಗ ಇರತದ". (ಪು. ೬೬ ಗ್ರಾಮಾಯಣ)

ಗ - ಪಡದಪ್ಪಗ - ಪಡದಪ್ಪನಿಗೆ

ಗಿ - "ಯಾನ ಬ್ಯಾಡ, ನಾಳಿಂದು ಅಲ್ಲಿ ಅತ್ತಿಮನೀಗಿ ಹೋದ ಮ್ಯಾಲ ಬೇಸೋದ ಬೆನ್ನಿಗಿ ಹತ್ತೀದ್ದ ಏತೆಲ್ಲ. ಇಲ್ಲಿರ ನಾಲ್ಕ ದಿನಾ ಹೊತ್ತ ಉದೀ ಆಗೂತನಕ ಮಲಕೋ" ಎಂದು ಮಗಳಿಗೆ ಹೇಳಿ, ಊರಿಗೆ ಹೋದಳು. (ಪು. ೧೪೯ ನಿಸರ್ಗ)

ಗಿ - ಬೆನ್ನಿಗೆ - ಬೆನ್ನಿಗಿ

೫. ಪಂಚಮಿ ವಿಭಕ್ತಿ : ದೆಸ್ಸೆಯಿಂದ ಎಂಬ ಪ್ರತ್ಯಯ ಹತ್ತುತ್ತದೆ.

ದೆಸೆಯಿಂದ ಚಿಮಣಾ.... ನಿನ್ನದಶಿಯಿಂದ..... ಇಗಾ.... ಸೀರಿ ತಂದೀನಿ ತೋಗೋ ಎಂದು ಲಿಂಗಪ್ಪ ಹುಚ್ಚು ನಗೆಯನ್ನು ಬೀರುತ್ತ ನಾಲಿಗೆಯನ್ನು ಸವರ್‍ಯಾಡುತ್ತ ಉಗುಳು ನುಂಗಿ ಹೇಳಿದ (ಪು. ೩೫೫ ಗ್ರಾಮಾಯಣ)

ದೆಸೆಯಿಂದ - ನಿನ್ನದಶಿಂದ

೬. ಷಷ್ಠಿ ವಿಭಕ್ತಿ : ಆನ, ಇನ ಎಂಬ ಪ್ರತ್ಯಯಗಳು ಸೇರುತ್ತವೆ.

ಆನ - "ಎಲೇ ನಿಂಗಾ, ಇದು ನೋಡಲೇ ಒಳ್ಳೇ ದೊಡ್ಡ ಮಾನಶ್ಯಾನ ತಲೆ ಬುರುಡಿ ಕಾಣತೈತಿ" ಎಂದು ಒದರಿಕೊಂಡ. (ಪು. ೧೪೨ ಗ್ರಾಮಾಯಣ)

ಅನ - ಮನುಷ್ಯನ - ಮನಶ್ಯಾನ

ಇನ - "ವಾಸ್ಯಾಡದ ಯಾನ ಮಾಡ್ಯಾನು? ಮಗನಾ ಸೊಸೀನಾ ಅಂದರ ಮುಳ್ಳ ಮ್ಯಾಲ್ಕ ಹಿಡಿದಂಗ ಮಾಡಿದಾಳು. ತಾನೂ ಅತ್ತೀ ಕೈಯಾಗ ನಂದೋಸಿದಕ್ಕೆ ಇದಾಳ. ತಿಳಿಬಾರದು ಇಕಿಗಿ? ಮುದುಕಿ ಆದಳಲ್ಲ!" ಮತ್ತೊಬ್ಬಳು ಹೇಳಿದಳು. (ಪು. ೧೨೪ ನಿಸರ್ಗ)

ಇನ - ಸೊಸಿನ - ಸೊಸೀನಾ

೭. ಸಪ್ತಮಿ ವಿಭಕ್ತಿ : ಆಗ, ವಳಗೆ ಎಂಬ ಪ್ರತ್ಯಯಗಳು

ಆಗ - ಸುಂದರಾಬಾಯಿ "ಸಂತಿ ಬ್ಯಾಡಾ, ಯಾನ ಬ್ಯಾಡಾ... ನಾಳಿನ ನಸೀಕಿನಾಗ್ಯ ನಾವ ಹೋಗಿ ಬಿಡಿತೇವ... ಈಗ್ಯ ಮಾಡಬೇಕಂತ ಯಾನ ನೇಮ ಐತಿ....? ಮತ್ತು ಯಾವಾಗರ ಬಂದಾಗ ಮಾಡಕೊಂಡ ಹೋದ್ಯಾನಂತ...." ಕಳಿಸುವದಿಲ್ಲೆಂದರಿತೇ. ಈ ಮಾತನಾಡಿದಳು. (ಪು. ೨೭ ನಿಸರ್ಗ)

ಆಗ - ನಸುಕಿನಲ್ಲಿ - ಸನೀಕಿನಾಗ

ವಳಗ - "ಅಲ್ಲೋ, ಗೌಡ ಬಂದು ಬಾಯಿ ಹಾಕಿದ್ದರಿಂದ ಪಡದಪ್ಪ ಮಠದೊಳಗ ಇನ್ನೂ ಜೀವಂತ್ಯ ಇದ್ದಾನ. ಇದನ್ಯಾಕ ನೀ ಅವಗ ತಿಳಿಸಿ ಹೇಳೂದುಲ್ಲ (ಪು. ೬೬ ಗ್ರಾಮಾಯಣ)

ವಳಗ - ಮಠದೊಳಗೆ - ಮಠದೊಳಗ

ಸಂಬೋಧನಾ ವಿಭಕ್ತಿ : ಸಂಬೋಧನಾ ವಿಭಕ್ತಿಗೆ ಪ್ರತ್ಯಯಗಳ ಅಂತ್ಯ ಸ್ವರ ದೀರ್ಘವಾಗಿರುತ್ತದೆ. ಸಂಬಂಧ ವಾಚಕಗಳು ಸಂಬೋಧನೆಯಲ್ಲಿ ಯ ಕಾರವನ್ನು ಪಡೆಯುತ್ತವೆ.

ಉದಾ : "ಲೇ ಕಂಟ್ಯಾ ಏನ ನೋಡ್ತೀಲೆ ಮಗನ್ಯ ಪಾದಳ್ಳಿ ಆರೋಪಿನ್ನ ತಂದು ಹೊರಗ ಹಾಕು" ಎಂದು ಹವಾಲ್ದಾರರು ಆಜ್ಞಾಪಿಸಿದರು. (ಪು. ೧೭೧ ಗ್ರಾಮಾಯಣ)

ದೀರ್ಘಕರಣ ಮತ್ತು ಯ ಕಾರ - ಕಂಟ್ಯಾ

ಕಾಲಸೂಚಕ ಪ್ರತ್ಯಯಗಳು

ಭೂತ ಮತ್ತು ಭೂತೇತರ ಕಾಲಕ್ಕೆ ಬೇರೆ ಬೇರೆ ಕಾಲ ಸೂಚಕ ಪ್ರತ್ಯಯಗಳಿವೆ.

ಭೂತಕಾಲಕ್ಕೆ ದ್, ಇದ್, ತ್, ನ್ದ್, ಟ್ ಎಂಬ ಪ್ರತ್ಯಯಗಳು ಬಳಕೆಗೊಂಡಿದೆ.

ದ್ - "ತಾರಾ ದೊಡ್ಡಕಿ ಆದಳು, ಮದವಿ ಆಗುಲಕಿಂತ ಮುಂಚಿ ಸಣ್ಣದ ಇತ್ತು; ಕಳಸನೀರ ಬಿದ್ದ ಮ್ಯಾಲ ಕಣ್ಣಕಿತ್ತೀತಿ...." (ಪು. ೭೩ ನಿಸರ್ಗ)

ದ - ಆದಳು

ತ - "ಎಲ್ಲಾರಂತ ಮರಣ ಅಲ್ಲ ರಾವಸಾಹೇಬ ಇದು, ಹೊಟ್ಟೆಗೆ ಅನ್ನ ಇಲ್ಲದ ಬಡಮಂದಿ ಕೆಟ್ಟ ಕಾಳ ತಿನ್ನೋದನ್ನ ನೋಡಲಾರದೇ ತಾನು ಕೆಟ್ಟಕಾಳು ತಿಂದು ಪುತಳಾಬಾಯಿ ಸತ್ತಳರೀ..." (ಪು. ೧೧೪ ಗ್ರಾಮಾಯಣ)

ತ - ಸತ್ತಳರೀ

ನ್ದ - "ಆಕಿಗಿ ಜನ್ಮಾನ್ಮ ಮಾಡೋದ್ಯ ಮನಸಿನ್ಯಾಗ ಇಲ್ಲ; ಇಲ್ಲಾದರ ಹೀಂಗ ನಿತ್ತರಾಟಿಗೆ ಬೀಳತೀಳ ಯಾನ? ಎಲ್ಲಿ ಸೋದರ ಮಾವನ ಮಗಾ, ಯಾನ ಸುದ್ದಿ, ಎಲ್ಲೇದ ಆ ಖೋಡಿ ಮುದುಕ

ಹೇಳಕ ಬಂತು, ಈಕಿ ಸುದ್ದಿ ಹಾರಿಬಿದ್ದಳು..." (ಪು. ೨೯೧ ನಿಸರ್ಗ)

ನ್ದ್ - ಬಂತು - ಬಂದ

ಟ್ - "ಇಗಾ ಚಿಮಣಾ ಪಿರ್ಯಾದಿ ಕೊಟ್ಟಾಳು. ತನ್ನ ತಂದಿಗೆ ಯಾರೋ ವಿಷ ಹಾಕ್ಯಾರಂತ ಸಂಶೇ ಬಂದೈತೀ ಅಂತ ಹೇಳಿ ಬಟ್ಟ ಒತ್ತ್ಯಾಳ..." ಎಂದು ದರ್ಪದಿಂದ ನುಡಿದರು. (ಪು. ೨೪೨೫ ಗ್ರಾಮಾಯಣ)

ಟ್ - ಕೊಟ್ಟಾಳು

ಭೂತೇತರ ಕಾಲಕ್ಕೆ (ವರ್ತಮಾನ ಮತ್ತು ಭವಿಷ್ಯತ್‌ಕಾಲಕ್ಕೆ) ತ್ ಪ್ರತ್ಯಯ ಹತ್ತುತ್ತದೆ.

ತ್ - "ಭರಮಾ, ಕುಡೀತಿದ್ದರ ಕುಡೀಯಪ್ಪ ಹಾಲ, ನಾ ಮನೀಗಿ ಹೋಗ್ತ್ಯಾನು. ಪೋರಿಯಾನ ಮಾಡಿಕೊಂಡ ಬಂದಾಳೋ ಯಾನೋ.....? ಎಲ್ಲಾ ನಿನ್ನ ಜನ್ಮಕ ನಾವ್ವ ಚಿಂತೀ ಮಾಡಬೇಕ.... ಆಕೀಗೀ ನಿನಗ ಯಾವ ಕಾಳಜಿ ಐತಿ.....? ನಾಳಿ ನಾವ ಸತ್ತಮ್ಯಾಲ ಹ್ಯಾಂಗ ಜನ್ಮಾ ಮಾಡತೀರೋ ಯಾನೋ!" (ಪು. ೮೭ ನಿಸರ್ಗ)

ತ್ - ಹೋಗ್ತ್ಯಾನ (ಹೋಗುತ್ತಾನೆ)

ವಿಧ್ಯರ್ಥಕ ಪ್ರತ್ಯಯ : ಲಿ ಮತ್ತು ಳಿ ಪ್ರತ್ಯಯಗಳು ಸೇರುತ್ತವೆ.

ಳಿ - "ಯಪ್ಪಾ... ಯಿಲ್ಲೆಬಿದ್ದು ಹ್ವಾದರೂ ನಾನು ಯಸನ ಮಾಡುವಾಕಿ ನಾನಲ್ಲ... ಬೇಕಾದರೆ ದಯವ ನನ್ನ ಬಲಿ ತಗಳ್ಳಲಿ. ಆದರೆ ನಾನು ನನ್ನ ಸೂರನನ್ನು ಬಲಿ ಕಳುವಾಕಿಯಲ್ಲ". (ಪು. ೨೮೦ ಅರಮನೆ)

ಳಿ - ತೆಗೆದುಕೊಳ್ಳಲಿ - ತಗಳ್ಳಲಿ

ಲಿ - "ನಿನ್ನಣೇಲಿ ಬರಧಾಂಗಾಗಲಿ ತಾಯಿಾ... ನನ್ನಂಥ ನರಮನುಸ ಮಾಡೋದನಯ್ಯಿ....." (ಪು. ೨೮೦ ಅರಮನೆ)

ಲಿ - ಬರದಂಗಾಗಲೀ

ನಿಷೇದಾರ್ಥಕ ಪ್ರತ್ಯಯ

ಬ್ಯಾಡ - "ಸೋದರರ್ರ್ಯಾ... ನಿವ್ಯಾರೂ ಘಾಬರಿ ಆಗಬ್ಯಾಡರಿ... ಯೀ ಸುದ್ದಿ ನಿಜ ಯಿರಲಾರದು. (ಪು. ೨೨೭ ಅರಮನೆ)

ಬ್ಯಾಡ - ಆಗಬೇಡ - ಆಗಬ್ಯಾಡರಿ

ಕಿಲ್ಲ - ಹವಾಲ್ದಾರರು "ಅಂವಾ ಇಲ್ಲಿಗೆ ಬಂದ ಸುದ್ದಿ ಹತ್ತೈತಿ ಗೌಡರ! ಅವನ್ನ ಪಾರ ಮಾಡಾಕ ಸುಳ್ಳ ಹೇಳಿದರ ನಡಿಯಾಕಿಲ್ಲ" ಎಂದು ಎಲ್ಲ ಗೊತ್ತಿದ್ದವರಂತೆ ಗಹಗಹಿಸುತ್ತಲೇ ಹೇಳಿದರು. (ಪು. ೧೬೮ ಗ್ರಾಮಾಯಣ)

ಕಿಲ್ಲ - ನಡೆಯುವುದಿಲ್ಲ - ನಡಿಯಾಕಿಲ್ಲ

ಣಿಲ್ಲ - "ಇದೇನ ಮಾತ ಆಡತೀರೀ ಯಪ್ಪಾ? ನೀವು ಹಾಕಿದ ಉಗುಳ ದಾಟಿ ನಾವು ಎಂದಾರ ಮುಂದೆ ಹೋದೇವೆ? ಊರ ಧನಿ, ಎಲ್ಲಾರ ಮರ್ಯಾದಿ ನಿನ್ನ ಉಡ್ಯಾಗ ಎಪ್ಪಾ! ನಿನ್ನ ಮನೆತನದ ಮರ್ಯಾದಿಗೆ, ಹಿರ್ಯಾರ ಪುಣ್ಯೇದಿಂದ ಎಂದೂ ಧಕ್ಕಿ ಬರಾಣಿಲ್ಲ...." (ಪು. ೧೨೧ ಗ್ರಾಮಾಯಣ)

ಣಿಲ್ಲ - ಬರುವುದಿಲ್ಲ - ಬರಾಣಿಲ್ಲ

ವಾಕ್ಯ ಶೈಲಿ

"ಪಾಡದಿರೇನವ್ವಾ" ಅಂತ ರಾಜಪರಿವಾರದ ಹೆಣ್ಣು ಮಂದಿಯ ಕ್ಷೇಮಲಾಭ ಯಿಚಾರಿಸಿದಳು. ಪಲ್ಲಂಗದ ಮ್ಯಾಲ ವುಸುರು ಬಿಡುತ ಕೂಕಂಡಿದ್ದ ರಾಜಮಾತೆಯ ಸನೀಕ ಹೋಗಿ "ಭೇ ಯವ್ವಾ... ನೀನೇ ಹಿಂಗ ಯದೆ ಹೊಡಕೊಂಡು ಕೂಕಂಡಿದ್ದರೆಂಗಭೇ? ಯಿದ್ದೊಬ್ಬ ಗಂಡ ದೂರ ಆಗಿದ್ರೂ ಹೆಂಗ ಕಲ್ಲುಗುಂಡಿನಂಗದೀನಿ ನೋಡು? ರಾಜಮಾತೆಯಾಗಿ ನೀನ್ಯಾಕೆ ಅಳ್ಳೀಗಿಯವ್ವಾ.... ಧಯರ್ಯ ತಂದುಕೊಂಡು ಬಂದದ್ನ ಯದುರಿಸಬೇಕಭೇ.... ನೀನ್ನವ್ರುನ... ಅದಿರ್‍ಲಿ ಯಲ್ಲಯ್ತೆ ನಿನ್ನೆಲಡಿಕಿ ಚೀಲ ಅಂತಂದು ಆಕಿ ಮಗ್ಗುಲಿದ್ದ ತೊಂಬಲದ ಸಂಚೀನ ತಗಂಡು ವಂದು ಹಿಡಿ ಅಡಿಕೇನ ಬಾಯೊಳಗೆಸೆದುಕೊಂಡು ಕಡದು ಕಟುಂಕಟುಂ ಯಂದು ಸಬುಧ ಮಾಡಲದು ರಣದುಂದುಭಿ ಬಾರಿಸಿದಂತೆ ಕೇಳಿಸಿತು. (ಪು. ೮೭-೮೮ ಅರಮನೆ)

"ಯೀವಕೇನು ಬಂದಯ್ತೆಪ್ಪಾ.... ಮಾತಾಯೀನ ತಡುವಿ ಕೇರು ಬಿಡಿಸಿಕೊಳ್ಳಲಕ ಹೊಂಟಿರುವವಲ್ಲಾ... ಕೂಳು ಹೆಚಾ ್ಚದರ ಕುವ್ಯಾಡ ಹೆಚ್ಚಾಯ್ತುದಮುತಾರಲ್ಲ... ಯಿದಕ ನೋಡು..." (ಪು. ೬೩ ಅರಮನೆ)

"ಎಲ್ಲಿ ಹೋಗೋದ ಇಲ್ಲ ಯಾಕ? ಮಸ್ತಗೌಡರ ಕರೀತಾರೆ... ಸಮಾಜದವರ ಕರೀತಾರ, ನಾವೇ ಇನ್ನ ಎಲ್ಲಿ ಹಚಕೊಟ್ಟಿಲ್ಲ... ಮೊನ್ನಿ ಗೌಡರ ಜಬ್ರಿ ಮಾಡಿರೂ... ಹೋಗುಲ್ಲ ಆಗಾನಾ... ತುಂಬಿ ಕಳಸಿರ ಮನೀಗಿ... ಆದರ ಅದೂ ನಾವ ತಿನ್ನಾಕ ಕೊಡಲಿಲ್ಲ". (ಪು. ೧೦೧ ನಿಸರ್ಗ)

"ಹ್ಯಾಂಗ ಹೋಗತಾಳು? ಗಾಡಿಗೋಳ ಬಂದರ್‍ರ್ಯ ಅಲ್ಲಾ ಹೋಗೋದ ಮಗಳು ಸಂಜೀತನಕ ಗುಬ್ಬಿ ಮರೀ ಹಾಂಗ ಹಾದಿ ನೋಡಿನೋಡಿ ದಣೀತ. ಈಗ ಹೊತ್ತ ತಾಯಿ ಹೊಟ್ಯಾಗ ಹೋಗಾನ ಸಿದ್ದ್ಯಾನ ಕೈಯಾಗ ಆಯಾರ ಕೊಟ್ಟ ಹಚಿಕೊಟ್ಟಾಳು. (ಪು. ೨೩೬ ನಿಸರ್ಗ)

"ಮತ್ತೇನೂ ಇಲ್ಲ; ಮನ್ನೆ ನೀವು ಸಹಿ ಮಾಡಿಸಿದ ಅರ್ಜಿ ಮಜಕೂರು ಆಚಾರೆಪ್ಪಗ ಯಾರೊ ಹೇಳಿ ಬಿಟ್ಟಾರ. ಹಾಗ ಮಾಡಿದ್ದು ನೆಟ್ಟಗಾಲಿಲ್ಲ ಅಂತ, ಇಲ್ಲೀ ಮಟಾ ಬಂದು ಅವರು ಒದರ್‍ಯಾಡಿ ಹೋದರು. ನನಗೇನೂ ಗೊತ್ತಿಲ್ಲ, ನನಗೇನು ಓದಾಕ ಬರ್‍ಯಾಕ ಬರತೈತೇ? ಅವರು ಹೇಳಿದ್ಯಟು ಮಾಡಿದೆ, ಅಂತ ನಿಮ್ಮ ಮೈಮ್ಯಾಗ್ಯ... ಎಲ್ಲಾ ಹಾಕಿ ಪಾರಾದೆ ಎಂದು ಅಂಜುತ್ತಲೇ ಹೇಳಿದರು. (ಪು. ೨೪೨ ಗ್ರಾಮಾಯಣ)

ಕಚ್ಚಾ ಮಾಹಿತಿ ಕೊಡೂದು ಬಿಡೂದು ಅಷ್ಟು ಮಹತ್ವದಲ್ಲ ಕುಲಕರ್ಣಿ. ಆದರ ವಾರಸಾ ಯಾರಿಗೆ ಬರಬೇಕೋ ಅವರ ಹೆಸರ ಹಚ್ಚಲಿಕ್ಕೆಬೇಕು. ಬೇಕಾದ್ಹಾಂಗ ಬರೀಲಿಕ್ಕೆ ಇದೇನು ನಿಮ್ಮ ಮನೀ ಲೆಕ್ಕದ ಪುಸ್ತಕೇನು ಎಂದು ಸಿಟ್ಟಿನಿಂದಲೇ ಕೇಳಿದ. (ಪು. ೨೪೩ ಗ್ರಾಮಾಯಣ)

ಪದಕೋಶ ಶೈಲಿ

ಅರಮನೆ

ಮದಕನ - ಕೆಲಸ

ಲಟಕ್ಕನ - ಬೇಗನೆ

ಕಾಲ್ಮರಿ - ಚಪ್ಪಲಿ

ಪರಪಾಟು - ಮರೆವು

ಅಪೂಟ - ಸ್ವಲ್ಪವೂ

ಕುವ್ವಾಡ - ತಮಾಷೆ

ಸುಮ್ಮಕ - ಸುಮ್ಮನೆ

ರಗಡ - ಬಹಳ

ಅಯ್ಲು - ಹುಚ್ಚು

ಕಲೆಬಿದ್ದರು - ಪೀಡಿಸಿದರು

ನಿಸರ್ಗ

ಆಯಾರ - ಉಡುಗೊರೆ

ಆಚಿ - ಅವ್ವನ ಅಕ್ಕ ಅಥವಾ ತಂಗಿ

ಉಡುಗೋಲ - ಕಸಬರಗಿ

ಪಾವಣೇರು - ಆಪ್ತರು

ಹುಜುರು - ಕಿವಿಯಳಗಿನ ಚಿಕ್ಕ ಆಭರಣ

ಧಾಬೆ - ಕೊಟ್ಟಿಗೆ

ಜುರ - ಪ್ರತಿಯೊಂದು

ಸಂಗಾಟ - ಜೊತೆಗೆ

ಸಮಜೂತಿ - ಬುದ್ಧಿ, ತಿಳುವಳಿಕೆ

ಸೂಟಿ - ರಜೆ

ಗ್ರಾಮಾಯಣ

ತಾಬಡತೋಬ - ಕೂಡಲೆ

ಧಡೇದ ಬ್ಯಾನಿ - ಹೃದಯವಿಕಾರ

ಅಪೇಶಿ - ಕೈಲಾಗದವ

ಗೋರ್‍ಯಾಳ - ಸ್ಮಶಾನ

ಟೋಳಿಕಟ್ಟಿ - ಗುಂಪುಕಟ್ಟಿ

ಪ್ಯಾಲಿ - ಮೂರ್ಖ

ಜಂಪಲಿಕ್ಕು - ಮಳೆಹನಿಹನಿಯಾಗಿ ಬೀಳು

ಪೋತಿ ಆಗು - ಸಾಯು

ರಾಸ್ತ - ಉಚಿತ

ವಲ್ಲಿ - ಧೋತರ

'ಬದುಕು' ಕಾದಂಬರಿಯಲ್ಲಿನ ಗೀತಾನಾಗಭೂಷಣರವರ ಬರವಣಿಗೆಯನ್ನು ಕುರಿತು ಡಾ. ಚೆನ್ನಣ್ಣ ವಾಲೀಕಾರರವರು. "ಹೈದರಾಬಾದ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಆಡುಮಾತನ್ನು ಸಮರ್ಥವಾಗಿ ಬಳಸುವುದರಲ್ಲಿ ಗೀತಾ ನಾಗಭೂಷಣರನ್ನು ಬಿಟ್ಟರೆ ಇನ್ನೊಬ್ಬರಿಲ್ಲ. ಜನಪದ ನುಡಿಗಟ್ಟು ವಾಕ್ಯ, ಗಾದೆ, ಒಗಟು, ಹಾಡು, ಉರ್ದು ಭಾಷೆಯ ಪದಪುಂಜಗಳು, ಬಳಸುವುದರ ಮೂಲಕ ಈ ಕಾದಂಬರಿಯ ಸತ್ವ, ಶಕ್ತಿ, ಸೊಬಗು ಹೆಚ್ಚಾಗಿದೆ" ಎಂದು ಭಾಷೆಯ ಬಗ್ಗೆ ಅಭಿಪ್ರಾಯ ಪಡುತ್ತಾ ಗೀತಾ ನಾಗಭೂಷಣರ ಬದುಕು ಕಾದಂಬರಿಯ ಬರವಣಿಗೆಯ ಓಟ ನದಿ ಹರಿದಂತೆ ಸರಾಗವಾಗಿ ಒಂದಕ್ಕೊಂದು ಸಾವಯವ ಸಂಬಂಧ ಹೊಂದಿ ಯಾವ ಸಿದ್ಧಾಂತಕ್ಕೂ ಕಟ್ಟುಬೀಳದೆ. ಕಾರ್ಡುಬೋರ್ಡಾಗದೆ ಬದುಕು ತಾನೇ ತಾನಾಗಿ ಸಾಗುವಂತೆ ಅವರ ಶೈಲಿ ಮಗು, ಹುಟ್ಟು, ಬಾಲ್ಯ, ಯೌವ್ವನ, ಪ್ರೌಢತ್ವ ಹೊಂದುವಂತೆ ಬೆಳೆದು ಬಂದದ್ದು ಇಲ್ಲಿ ಕಾಣಬಹುದು. ಶೀಲವೆ ಶೈಲಿ "Style is the man" ಎಂಬ ಮಾತು ಇಲ್ಲಿ ನೋಡಬಹುದು. ಗೀತಾ ನಾಗಭೂಷಣರ ಕಥನ ಶೈಲಿ ಬದುಕಿನೊಂದಿಗೆ ಹರಿದು ಬಂದದ್ದು ಇಲ್ಲಿ ಅರಿಯಬಹುದು. ಇಡೀ ಕಾದಂಬರಿ ಲಿಂಗರಾಜ ಕಾಶಿಯ ಸಂಬಂಧದಿಂದ ಕೂಡಿದ್ದು ಇದರ ಸುತ್ತಮುತ್ತ ಉಳಿದೆಲ್ಲ ಪಾತ್ರಗಳು

ಕೆಲಸ ಮಾಡುವವು. ಅವು ಸಮಯಕ್ಕೆ ತಕ್ಕಂತೆ ಪ್ರತಿಕ್ರಿಯೆ ನೀಡುವುದು ಗೀತಾ ನಾಗಭೂಷಣರ ಕಥನ ಶೈಲಿಯಾಗಿದೆ" (ಡಾ. ಚೆನ್ನಣ್ಣವಾಲೀಕರ, ಗೀತಾನಾಗಭೂಷಣ, ಕಲಬುರ್ಗಿಯ ಸ್ಪಂದನ, ಪು. ೮-೯)ಎಂದು ಗೀತಾ ನಾಗಭೂಷಣರ ಬರವಣಿಗೆಯ ಶೈಲಿಯ ಬಗ್ಗೆ ಅಭಿಪ್ರಾಯಪಡುತ್ತಾರೆ. ಇದಕ್ಕೆ ಕಾದಂಬರಿಯಿಂದಲೇ ನಿದರ್ಶನಗಳನ್ನು ನೋಡವುದಾದರೆ

ಕಲಾತ್ಮಕ ಭಾಷೆಗೆ

* "ಹೊಯಿಂದು ವಾಗಾ.. ನಿನ್ನಪ್ಪನ ಹೊಲಗೋಳ ಮಣ್ಣಿನ ಗುಣಾನೇ ಹಿಂತಾದದಾ ಕರ್ರಗ ಕಾಡಗಿ ಬಣ್ಣದ ಎರಿಭೂಮಿ ಏನೇ ಬಿತ್ತಿದರೂ ತನ್ನ ಹೊಟ್ಟ್ಯಾಗ ಇಟ್ಗೊಂಡು ಕುಡಿಯೊಡೆಸಿ ಬೆಳಸ್ತಾದ ಬಿತ್ತಿದ ಬೀಜಕ್ಕ ಈ ಭೂಮಿ ಎಂದೂ ಧೋಕಾ ಮಾಡಿಲ್ಲ. ಜಮಾದಾರನ ನಸೀಬೇ ನಸೀಬು! ವರ್ಸಿಗೀ ಚಾಳೀಸು ಚೀಲ ಜ್ವಾಳಾ ಬೆಳ್ದು ರಾಶಿ ಮಾಡ್ತಾನೆ ಮಲ್ಲೂ... ನಮ್ ತೆಳಗೇರ‍್ಯಾಗ ಬ್ಯಾರೆ ಯಾರ ಹೊಲಾನೂ ಈಟು ಛಂದ ಬೆಳಿ ಬೆಳೆಂಗಿಲ್ಲ...." ನಾಗವ್ವಾಯಿ ಬಾಯಿ ತುಂಬ ಮಾತಾಡಿದಳು (ಪು. ೬೯).

* "ಭಾಳ ಛಲೋ.... ಭಾಳ ಛಲೋ... ಬೇಸಾಯ್ತು ಮಗಾ... ನಿಮ್ಮಪ್ಪಗನೂ ವಯಸ್ಸಾಯ್ತು. ಇರ್ಲಕ್ಕ ನೀ ಒಬ್ಬಾಂವನೇ ಮಗಾ... ಮೂರು ಮೂರು ತೆಲಿಮಾರನೂ ಕುಂತು ಉಂಡರ ಸವಿಲಾರ‍್ದೋಟು ಜಾಜತ್ತು ಗಳಿಸಿಟ್ಟಾನ ನಿಮ್ಮಪ್ಪ, ನಿಮ್ಮವ್ವ ಶಿವಮ್ಮ ಸಾವ್ಕರ‍್ತೆಂತೂ ಕುಂತಾಗ ನಿಂತಾಗೆಲ್ಲ ನಿನಗೇ ನೆನಸ್ತಿದ್ದಳು. ಇನ್ನ ಮ್ಯಾಲ ನೀ ಇಲ್ಲೇ ಇರೋ ಫೈಸಲಾ ಮಾಡಿದ್ದು ಬೇಸ್ಯಾಯ್ತು ಬಿಡಪ್ಪ.." ಅಂದನು (ಪು-೯೧ ಬದುಕು).

ವಿಶಿಷ್ಟವಾದ ಪ್ರಾದೇಶಿಕ ಪದಗಳಿಂದ ಉರ್ದು ಭಾಷೆಯ ಎರಕದಿಂದ ಜನಪದ ನುಡಿಗಟ್ಟುಗಳಿಂದ ಮಾತಾಡಿದಂತೆ ಬರುವ ಸಹಜ ಮೂಡಿದಂತೆ ಬರುವ ರೀತಿಯಿಂದ ಗೀತಾ ನಾಗಭೂಷಣರ ಬದುಕು ಕಾದಂಬರಿ ಜೀವಂತವಾಗಿರಲು ಕಾರಣವಾಗಿದೆ.

ಶೈಲಿಯ ಕಲಾತ್ಮಕತೆ

* ಮಣ್ಣು ಮಾಡಲು ಹೊತ್ತುಯ್ಯುವ ಹೆಣದ ಹಿಂದೆ ಕಾಲೆಳೆದುಕೊಂಡು ಹೋಗುವ ಸಂಬಂಧಿಕರಂತೆ ಅಲ್ಲಲ್ಲಿ ತೆವಳುತ್ತ ನಡೆದ ಬೂದು ಬಿಳುಪಿನ ಮೋಡಗಳು; ಗುದ್ದಲಿಯಿಂದ ಕುಣಿ ತೋಡಿ ತೋಡಿ ಸುಸ್ತಾಗಿ ಉಸ್ಸಪ್ಪಾ ಅಂತ ಉಸಿರುಬಿಡುತ್ತಿರುವ, ಎತ್ತಿನ ಕೋಡಿನಂಥ ಡೊಂಕು ಚಂದ್ರಾಮ... (ಪು.೨೮೯)

* ಕೇರಿಯ ಕೊನೆಯಲ್ಲಿದ್ದ ಗುಡಿಸಲಿನಿಂದ ಅಮಲವ್ವ ಮುದುಕಿಯ ಹುಂಜ ಕೂಗಿತು. ಮೂಡಲ ಆಕಾಸದ ಕುತ್ತಿಗೆಗೆ ಚೂರಿ ಹಾಕಿದಂಗಾಗಿ ಈಟೀಟೀ ನೆತ್ತರು ಸೋರುತ್ತ ಚುಮು ಚಮು ಬೆಳಗಾಯಿತು. ಹಕ್ಕಿಪಕ್ಕಿಗಳು ಬಾಯಿ ಬಾಯಿ ಬಡ್ಕೊಂಡು ಲಬೋ ಲಬೋ ಅಂತ ಹೋಯ್ಕೋಳ್ಳುತ್ತ ಎದ್ದುಬಿದ್ದು ಹಾರಿ ಹೋಗತೊಡಗಿದವು (ಪು. ೨೮೫).

ಗೀತನಾಗಭೂಷಣರವರ ಕಾದಂಬರಿಯಲ್ಲಿನ ಭಾಷಾ ಬಳಕೆಯು ಗುಲಬರ್ಗಾ ಪ್ರದೇಶದಲ್ಲಿ

ಕಂಡುಬರುವ ಧ್ವನಿ, ಪದ, ವಾಕ್ಯ ಮತ್ತು ವಿಶಿಷ್ಟ ಪದ ಪ್ರಯೋಗಗಳಿಂದ ಕಂಡುಬರುತ್ತದೆ. ಇಂತಹ ಭಾಷಾ ಪ್ರಯೋಗ ಕಾದಂಬರಿಗೆ ಮೆರುಗನ್ನು ತಂದಿದೆಯಲ್ಲದೆ ತನ್ನದೇ ಆದ ವಿಶಿಷ್ಟತೆಯನ್ನು ಅನನ್ಯತೆಯನ್ನು ಉಳಿಸಿಕೊಂಡಿದೆ. ಭೌಗೋಳಿಕವಾಗಿ ಗುಲಬರ್ಗಾ ಪ್ರದೇಶವನ್ನು ಪ್ರತಿನಿಧಿಸುವ ಬದುಕು ಕಾದಂಬರಿಯಲ್ಲಿ ಧ್ವನಿ ಹಂತದ ಶೈಲಿಯನ್ನು ವಿಶ್ಲೇಷಿಸುತ್ತ ನಿದರ್ಶನಕ್ಕೆ ಕಾದಂಬರಿಯಿಂದಲೇ ಉದಾಹರಣೆಗಳನ್ನು ನೀಡಲಾಗಿದೆ.

ಧ್ವನಿ ಶೈಲಿ

೧. ಕೆಲವು ನಾಮಪದಗಳ ಎ ಕಾರಾಂತ್ಯ ಶಬ್ದಗಳು ಕೆಲವು ವೇಳೆ ಇ ಕಾರಾಂತ್ಯವಾಗುತ್ತದೆ.

ಉದಾ: "......ಈ ಸಾವ್ಕಾರಗೋಳಿಗಿ ನಂಬಬ್ಯಾಡೇ ಗೆಳತೀ... ಅವರು ಎಡ್ಡು ತೆಲಿ ಹಾಂವಿದ್ದಂಗಿ ರ್‍ಯಾರವ್ವ ಅದೂನೂ ಇಸದ ಹಾಂವ". (ಪು. ೧೨೯)

ತಲೆ - ತೆಲಿ

೨.ಕೆಲವು ಉ ಕಾರಾಂತ್ಯ ಶಬ್ದಗಳು ಅ ಕಾರಾಂತ್ಯವಾಗುತ್ತವೆ.

ಉದಾ : "ಆಟು ದೊಡ್ಡ ಮಾತ ಯಾಕಾಡ್ತಿ ತಾಯೀ.... ಸಂಜಿ ತನಕಾ ಹುಡುಕ್ಯಾಡಿ ತಂದು ಕುಡ್ತಿನಂತ...." (ಪು. ೩೦೩)

ಮಾತು - ಮಾತ

೩. ಕೆಲವು ಶಬ್ದಗಳ ಆದಿ ಮತ್ತು ನಡುವಿನ ಎ ಏ ಕಾರಗಳು ಯ ಕಾರವನ್ನು ಪಡೆಯುತ್ತವೆ.

ಉದಾ : ".....ಬೆಳ್ಳಿ ಭಾಳ ಕಸ್ಟಾ ಗಳಗಾಳಪೋ... ಕೂಲಿ ಕಬಟಿ ಮಾಡಿ, ಬ್ಯಾಸಗ್ಯಾಗ ಬನದಿಂದ ಸಿಂದಿ ಫರಕಿ ಹಕ್ಕೊಂಡು ಬಂದು ಚಾಪಿ, ಬುಟ್ಟಿ, ಹೆಣ್ದು ಈರವ್ವನ ಕೈಲಿ ಸಂತ್ಯಾಗ ಮಾರ್ಸಿ..... ಒಂದೊಂದು ಹೇಳ್ಕೊತ ಹ್ವಾದರ ರಾಮಾಣದಕ್ಕಿಂತಾ ದೊಡ್ಡ ಕತಿಯಾಗ್ತದೆ ಬಿಡು...." (ಪು. ೪೬೩)

ಬೇಸಗೆ - ಬ್ಯಾಸಗಿ

೪. ಕೆಲವು ಶಬ್ದಗಳ ಆದಿ ಮತ್ತು ನಡುವಿನ ಒ ಓ ಕಾರಗಳು ವ ಕಾರವನ್ನು ಪಡೆಯುತ್ತದೆ.

ಉದಾ : "ತ್ವಾಟದ ಮ್ಯಾಲ ನನಗ ಆಸಿಯಿಲ್ಲಪ್ಪ.... ನನ್ ಗಂಡನ ರಟ್ಟ್ಯಾಗ ಸಗತಿ ಅದಾ.... ಅಂವಾ ಒಮ್ಮಿ ಆ ಜೇಲಖಾನಿಲಿಂದ ಹೊರಗ ಬಂದರ ಸಾಕು ಹಿಂತಾ ತ್ವಾಟ ಮತ್ತ ಖರೀದಿ ಮಾಡ್ತೇವಿ. ನನ್ ಗಂಡನ ಮುಂದ ಈ ತ್ವಾಟದ ಕಿಮ್ಮತೇನು ಕೋಡಿ. (ಪು. ೪೦೦)

ತೋಟ - ತ್ವಾಟ

೫. ಉ ಕಾರಾಂತ್ಯ ಕ್ರಿಯಪದಗಳಲ್ಲಿ ಹೆಚ್ಚು ಬದಲಾವಣೆಯು ಆಗುವುದಿಲ್ಲ. ಕೆಲವು ವೇಳೆ ಉ ಕಾರ ಹೋಗಿ ವ್ಯಂಜನ ಉಳಿಯಬಹುದು.

ಉದಾ : "ಯಣ್ಣಾ ನಾ ಈಸು ದಿನಾ ನನ್ನ ಪಗಾರದಾಗ ಉಳಿಸಿಟ್ಟ ರುಪೈ ಇವು. ಇದೀಟೇ ಈಗ

ನನ್ನ ಬಲ್ಲಿರಾದೂ... ಇದರಾಗ ಕಾಶೀಗಿ ಅಕಿನ ಪಸಂದಿನ ವಡಿ ವಸ್ತಾ, ಸೀರಿ ಕುಬಸಾ ತಗೋರಿ. ನಾ ಬಡೂ ಮನಶ್ಯಾ. ನೀನೇ ನನಗ ಅಣ್ಣ ಇದ್ದಂಗಿದ್ದಿ. ಹೆಣ್ಣಿನ ಕಡಿ ಗಂಡಿನ ಕಡಿ ಎಡ್ದೂ ಕಡಿಲಿಂದ ನೀನೇ ಇದ್ದಿ. ನಿನಗ ಸರಿಕಂಡಂಗ ಮಾಡೆಣ್ಣಾ.... ಇನ್ನಾ ಬೇಕಂದ್ರ ನಾ ಸಾಲಾ ಮಾಡಿ ಕುಡ್ತೀನಿ". (ಪು. ೧೩೮)

ಕೊಡುತ್ತೇನೆ - ಕುಡ್ತೀನಿ

೬. ಉಚ್ಚಾರದ ಒತ್ತಡದಿಂದ ಕೆಲವು ವೇಳ ಮಹಾಪ್ರಾಣ ವ್ಯಂಜನಗಳು ಕಾಣಿಸಿಕೊಳ್ಳುತ್ತವೆ.

ಉದಾ : "ಏ ಸುಮ್ಮಿರು. ಅದೆಲ್ಲಾ ಏನೂ ಇಲ್ಲ. ಅಂವಾ ಬರ್ತಾನಂತ ನಾಯಾಕ ಸಿಂಗಾರಾಗ್ಲಿ? ಅಪ್ಪನ ಥೇರದಾ ಇವತ್ತ. ಕೇರ್‍ಯಾಗಿನ ಮಂದೆಲ್ಲಾ ಹೊಸ ಹೊಸ ಸೀರಿ ಉಟ್ಗೊಂಡ ಗುಡೀಗಿ ಹೋಗ್ತಾರಂತ ನಾನೂ ಉಟ್ಕೊಂತೀನಿ ಆಟೀ...." (ಪು. ೨೩೦)

ತೇರು - ಥೇರು

೭. ಕೆಲವು ವೇಳೆ ಉಚ್ಚಾರದಲ್ಲಿ ಇಲ್ಲದ ಹ ಕಾರ ಕಾಣಿಸಿಕೊಳ್ಳುವುದು ಉಂಟು.

ಉದಾ : ಯಪ್ಪ ಗೋಡ.... ನೀ ನೋಡ್ದರ ನಮ್ಮಪ್ಪ ಇದ್ದಂಗಿದ್ದೀ ನಿನ್ನಂಥವನ ಬಾಯಿಲಿಂದ ಹಿಂತಾ ಮಾತು ಬರಬಾರ್ದು. (ಪು.೪೨೯)

ಇಂತಹ - ಹಿಂತಾ

೮. ಕೆಲವರು ಆಡುವ ಮಾತಿನಲ್ಲಿ ಸ ಕಾರ ಚ ಕಾರವಾಗುತ್ತದೆ.

ಉದಾ : "ಯಾಕೇ ತುಳಸವ್ವ ಪಾರಗ ಹೊಡೀತೀ? ಥೇರ ಭೊಲೋ ಚಾಗತೇನೇ?" ಭಾಗವ್ವ ಕೇಳಿದಳು,

ಹೂಂ ಯವ್ವ.... ಭೆಲೊ ಚಾಗತು. ಒಂದೀಟೂನೂ ಒಂಕಾ ವಾಸಿ ಆಗಿಲ್ಲವ್ವ.... (ಪು. ೨೩೪)

ಸಾಗೀತೇನೆ - ಚಾಗಿತೇನೆ

ಸಾಗಿತು - ಚಾಗಿತು

೯. ಕೆಲವು ಶಬ್ದಗಳ ನಡುವಿನ ಸ್ವರಲೋಪವಾಗುತ್ತವೆ.

ಉದಾ : "ದೀಪಾ ಮುಡಸೋ ಹೊತ್ತಾಯ್ತಲ್ಲೇ ಮಗಾ... ಇನ್ನಾ ಇವರ ಕೆಲ್ಸಾ ಮುಗೀಲಿಲ್ಲೇನು? ಏ್ಸ ಗಿನ್ಯಾನೀ... ಸುಕ್ಕವ್ವಾ.... ಆಯ್ತಿಲ್ಲ....?" (ಪು. ೪೬೮)

ಕೆಲಸ - ಕೆಲ್ಸಾ

೧೦. ಕೆಲವು ಶಬ್ದಗಳ ಆದಿಯ ವ ಕಾರ ಲೋಪವಾಗುತ್ತದೆ.

ಉದಾ : ನಾಳಂವಾ ಇಲ್ಲೇ ಇರ್ತಾನ. ನಿಮ್ಮನಿದೆಲ್ಲಾ ಜುಮ್ಮೇದಾರಿ ತಗೋತಾನ. ನಿಮ್ಮ ತ್ವಾಟದ ಜತಿ ಮತ್ತೀಸು ಹೊಲಾ ಪಾಲಕ್ಕ ಮಾಡ್ತಾನ. ದುಡೀಲಕ್ಕ ಮಾತ್ರ ಭಾಳ ಮುಂದ ನೋಡ್ರಿ... ಇಚಾರ ಮಾಡಿ ಹೇಳು..." ಅಂದನು. (ಪು. ೪೬೮)

ವಿಚಾರ - ಇಚಾರ

೧೧. ಉಚ್ಚಾರಣೆಯಲ್ಲಿ ಜ ಕಾರ ಕಾಣಿಸಿಕೊಳ್ಳುತ್ತದೆ.

ಉದಾ : "...ಒಂದೀಟು ಮಟನ್ ಬಾಜರ ತನಕಾ ಹೋಗಿ ಒಂದು ಕಿಲೋ ಮಟನ್ನು ಹಂಗೇ ಹಣ್ಣು ಟಮಾಟ್ಯಾ, ಕೊತ್ತಂಬರಿ, ಪುದೀನಾ, ಅಲ್ಲಾ, ಕೊಬ್ಬರಿ ಮತ್ತು ಒಂದು ಚಟಾಕ ಗರಂ ಮಸಾಲಿ ತರ್ಬೇಕಾಗಿತ್ತಪ್ಪಾ ನಿನಗ ಸೈಕಲಕ್ಕ ರೊಕ್ಕ ಕುಡ್ತಿನೋ" ಅಂದಳು. (ಪು. ೧೨೦)

ಬಜಾರ್

೧೨. ಫ ಮತ್ತು ಖ ಎಂಬ ಮಹಾಪ್ರಾಣ ಧ್ವನಿಗಳು ಬಳಕೆಯಲ್ಲಿವೆ.

ಉದಾ : "ಯವ್ವಾ... ನಾವೊಂದು ಹೇಳ್ತೀನಿ. ನೀನೂ ಬೆಳ್ಳಿ ಇಬ್ಬರೂ ಈಗ ನಮ್ಮ ಜತಿ ಕಲಬುರ್ಗಿ ನಡೀರಿ... ನಿನಗನೂ ಅಲ್ಲಿ ದವಾಖಾನ್ಯಾಗ ತೋರ್ಸಿ ಇಲಾಜ ಮಾಡಿಸ್ತಿವೆಂತ... ಹಂಗೇ ಬೆಳ್ಳಿ ಬಾಣತ ನಾನೂ ಅಲ್ಲೇ ದವಾಖಾನ್ಯಗ ಮಾಡ್ಸಾಮೆಂತ....." (ಪು. ೩೩೬)

ಆಸ್ಪತ್ರೆ - ದವಾಖಾನೆ

೧೩. ಕೆಲವು ಶಬ್ದಗಳ ಅಂತ್ಯಾಕ್ಷರ ಲೋಪವಾಗುತ್ತವೆ.

ಉದಾ : "ನಾಯೇನೂ ಹಾದರಗಿತ್ತಿಯಲ್ಲ! ಲಿಂಗರಾಜಾ ನನಗೆ ಮದಿಮಾಡ್ಕೋತಿನೆಂತ ಭಾಷಾ ಕೊಟ್ಟಾನ.... ನಾವಿಬ್ಬರೂ ಮದಿ ಮಾಡ್ಕೊಂಡು ದೂರ ದೇಶಾಂತ್ರ ಹೊಂಟೋಗ್ತಿವೆಂತ. ನೀವೆಲ್ಲರೂ ಇಲ್ಲಿ ಸುಕವಾಗಿರ್ರಿ....." (ಪು. ೧೧೦)

ಮದುವೆ - ಮದಿ

೧೪. ವಿಜಾತೀಯ ಒತ್ತಕ್ಷರಗಳು ಸಜಾತೀಯ ಒತ್ತಕ್ಷರಗಳಾಗುತ್ತವೆ.

ಉದಾ : ಸುಮ್ಮನ ಕೂಡಬ್ಯಾಡೋ ಹಾಲಪ್ಪ..... ಏನೆರೆ ಮಾತಾಡೂ... ನಿಮ್ದು ಎಡ್ಡು ಮನಿ ಸಂಬಂಧ ಹಿಂಗೇ ಮುಂದೊರಿಬೇಕಂತ ನಮಗೂ ಆಸ್ಯಾ ಅದಾ ನೋಡಪಾ..... ಮಗಳಿಗಿ ಆ ಮನೀಗಿ ಕೊಟ್ಟರ ಮತ್ತ ಎಡ್ಡೂ ಮನಿಗೋಳು ಭಾಳಸಮೀಪಾಗ್ತಾವ. ಹೂಂ ಅಂತ್ಹೇಳು ಮಗಾ..." ನಾಗವ್ವಾಯಿ ಮಾತಾಡಿದಳು. (ಪು. ೧೫೫)

ಎರಡು - ಎಡ್ಡು

೧೫. ಅ ಕಾರಾದಿ ಸಂಬಂಧ ವಾಚಕಗಳು ಯ ಕಾರದಿಂದ ಕೆಲವು ವೇಳೆ ಉಚ್ಚಾರವಾಗುತ್ತವೆ.

ಉದಾ : "ಹೋಯಿಂದೇನೂ ಯಣ್ಣಾ? ಹರ್‍ಯಾದಂವ ನೀನು. ಐದು ಹರದಾರಿ ದಾರಿ ನಡೆಟಗೆ ಹೈರಾಣದರ ಹ್ಯಾಂಗೋ ಯಣ್ಣಾ... ಮುಂದ ದೂರದ ಊರಿಂದ ಹೆಣ್ತಿ ಬಂದಳಂದ್ರ ಹ್ಯಾಂಗ ನಡೀತೋ ಯಣ್ಣಾ...." ಕಾಶಮ್ಮ ನಗೆಚಾಟಿಗೆ ಮಾಡಿದಳು. (ಪು. ೨೩)

ಅಣ್ಣಾ - ಯಣ್ಣಾ

೧೬. ಕೆಲವು ಶಬ್ದಗಳಲ್ಲಿ ಯ, ವ, ಮ ಎಂಬ ವ್ಯಂಜನಗಳ ಹಿಂದಿನ ಅಥವಾ ಮುಂದಿನ ಸ್ವರಗಳು ಸಾಮಾನ್ಯವಾಗಿ ಅನುನಾಸಿಕತೆಯನ್ನು ಹೊಂದುತ್ತವೆ.

ಉದಾ : "ನೀಲಮ್ಮನ ದನಿ ಗಡುಸಾಗಿತ್ತು. "ನನ್ನ ಗುಮಾನಿ ಕರೇ ಆದಂಗಾಯ್ತನ್ನು..... ಯಾವಕ್ಕೀಗಿ

ಕರ್ಕೊಂಡು ಬಂದಾನ ತ್ಯಾಟದ ಮನೀಗಿ ನಿನ್ ಸಾವ್ಕಾರಾ? ಎಂದಿಲ್ಲದ ಇಂದ್ಯಾಕ ಅಂವಗ ಹಿಂತಾ ಮನಿ ಹಾಳ ಬುದ್ಧಿ ಬಂತೂ....?" (ಪು. ೨೯೭)

ಆವ - ಆವನಿಗೆ - ಅಂವಗ

ಪದ ಶೈಲಿ

ಬದುಕು ಕಾದಂಬರಿಯು ಗುಲಬರ್ಗಾ ಪ್ರದೇಶವನ್ನು ಪ್ರತಿನಿಧಿಸುತ್ತಿರುವುದರಿಂದ ಪದದ ಹಂತದ ಅನನ್ಯತೆಯನ್ನು ಗುಲಬರ್ಗಾ ಪ್ರಾದೇಶಿಕ ಭಾಷೆಯ ಹಿನ್ನೆಲೆಯಲ್ಲಿಯೇ ಚರ್ಚಿಸುತ್ತಾ ನಿದರ್ಶನಕ್ಕಾಗಿ ಬದುಕು ಕಾದಂಬರಿಯಿಂದ ಉದಾಹರಣೆಗಳನ್ನು ಕೊಡಲಾಗಿದೆ.

೧. ವಚನ

ಏಕವಚನ ಸೂಚಿಸಲು ಪ್ರತ್ಯೇಕವಾದ ಪ್ರತ್ಯಯಗಳಿಲ್ಲ. ನಾಮ ಪ್ರಕೃತಿಗಳೇ ಆ ಕೆಲಸ ನಿರ್ವಹಿಸುತ್ತವೆ. ಬಹುವಚನ ಸೂಚಿಸಲು ಬೇರೆ ಬೇರೆ ಪ್ರತ್ಯಯಗಳು ಗುಲಬರ್ಗಾ ಕನ್ನಡದಲ್ಲಿದ್ದು ಅವು ಹೀಗಿವೆ.

ರು - "ಹಾಲಪ್ಪ ಮಾಮಾ... ನೆಂಟ್ರು ಬಂದಂಗದಾ ಅಲ್ಲೋ ಮಾಮಾ.. ಮೂರು ಪಿಲೇಟು ಮಿರಚಿ ಭಜಿ ಕಳಸಲೇನು? ಗರಂ. ಗಂ ಅವಾ... ಇದೇ ಈಗ ಕರ್ದು ತಂದಿದ್ದೂ..." (ಪು. ೧೨೩ ಬದುಕು)

ರ - ನೆಂಟರು - ನೆಂಟ್ರು

ದೇರು - "....ಗೊಳ್ಳಾದ ನೆಂಟಸ್ತನ ಬ್ಯಾಡಂದ್ರ ಬಿಡು ದೊಡ್ಡ ಮನಿ, ಮೂರು ಮಂದಿ ಅಣ್ಣ ತಮ್ಮದೇರು ಅಂದರ ಕೆಲ್ಸಾ ಬಗ್ಸಿ ಅಂತ ಭಾಳೋಟು ದುಡಿ ಬೇಕಾಗ್ತದ ಮನ್ಯಾಗ. ಅದು ಬ್ಯಾಡ ಕಾಶಮ್ಮಗ ಒಂಟ ಒಗತನ ನೋಡು...." (ಪು. ೧೦೦ ಬದುಕು)

ದೇರು - ಅಣ್ಣತಮ್ಮಂದಿರು - ಅಣ್ಣತಮ್ಮದೇರು

ಏರು - "ಹೋಯಿಂದಗ್ಯ ಮಳ್ಳೀ .... ಏಟಾದರೂನೂ ನೀವಿಬ್ಬರೂ ಅಕ್ಕತಂಗೇರು ಒಂದೇ ನೋಡು. ನಮಗೆಲ್ಲಿ ಅಟಾಪ ಕುಡ್ತೀರಿ ಬಿಡು..." (ಪು. ೨೬೯ ಬದುಕು)

ಏರು - ಅಕ್ಕತಂಗಿಯರು - ಅಕ್ಕತಂಗೇರು

ಕ್ಕಳು - "ಬೇಸ್ಯಾಯ್ತಾ ಬಿಡವ್ವಾ.... ಎಲ್ಲಾ ನಿಮ್ಮಕ್ಕಂದೂ, ಅಕಿ ಮಕ್ಕಳ ಪಸಂದೇ ನೋಡ್ತಿರೆಲ್ಲ. ನಿಮ್ಮಕ್ಕನ ಗಂಡ, ನಿನ್ನ ಮಾಮಾ ಹಾಲಪ್ಪನ ಪಸಂದನೂ ನೋಡ್ರಿ" (ಪು. ೧೨ ಬದುಕು)

ಕ್ಕಳು - ಮಕ್ಕಳು

ಗೋಳು - "ಏ ಮಾಮಾ... ನಿನಗ್ಯಾರು ಮಾಡ್ಕೋತಾರೋ? ನನಗ 'ವರಾ' ಗೋಳು ಬಂದು ನಮ್ಮಪ್ಪನ ಮನಿಮುಂದೆ ಪಾಳಿ ಹಚ್ಚಿನಿಂದರತಾರ". (ಪು. ೪೫ ಬದುಕು)

ಗೋಳು - ವರಗಳು - ವರಾಗೋಳು

ಲಿಂಗ

ಗುಲಬರ್ಗಾ ಕನ್ನಡದಲ್ಲಿ ಮೂರು ಬಗೆಯ ಲಿಂಗಗಳಿರುವುದು ಕಾಣಿಸಿಕೊಳ್ಳುತ್ತದೆ. ಹೆಣ್ಣು ಗಂಡು ಅಲ್ಲದ್ದನ್ನು ನಪುಂಸಕದಲ್ಲಿ ಹೇಳುವುದು ಹೆಚ್ಚು ರೂಢಿಯಲ್ಲಿದೆ. ಕೆಲವು ವೇಳೆ ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳೆರಡೂ ಒಂದೇ ಆಗಿ ಕಾಣಿಸಿಕೊಳ್ಳುತ್ತವೆ.

ಉದಾ : "ಏ ಬ್ಯಾಡೇ.... ನಮ್ಮ ಜೀತದಾಳಿನ ಮಗಳು ನಮ್ಮ ಕಾಶಮ್ಮನ ವಾರಿಗಿ ಪೋರಿ ನಮಗ ಮಗಳಿದ್ದಂಗೇ ಇತ್ತು. ಭರಮ್ಯಾನ ಜೋಡಿ ಬರ್ತಿತ್ತಲ್ಲ. ಆಗಾಗ ನಮ್ಮನೀಗಿ ನಮ್ಮ ಕಾಶೀದೇ ಹಳ ಪರಕಾರ, ಪೋಲಕಾ ತೊಟಕೊಂಡು ಚಿಪ್ಪರಿನೆತ್ತಿ ಬಿಡ್ಕೊಂಡು ತಲಿ ತುರಸ್ಗೋತ ನಿಂದಿರ್ತಿತ್ತಲ್ಲ ಅಂಗಳಾದಗ! ಈಗೀಗ ಮೈನರದ ಮ್ಯಾಲೇ ಬರಾದು ಬಿಟ್ಟಿತ್ತು. ಖರೇ ಅಂದ್ರ ಅದಕ್ಕ ಜೋಗಣಿ ಮಾಡಾದು ನನಗನೂ ಮನಸ್ಸಿರಲಿಲ್ಲ...." (ಪು. ೬೦ ಬದುಕು)

ಭರಮ್ಯಾನ ಮಗಳು ನೀಲವ್ವ ಸ್ತ್ರೀಯಾದರೂ ನಪುಂಸಕಲಿಂಗದಲ್ಲಿ ಬಳಕೆಯಾಗಿರುವುದನ್ನು ನೋಡಬಹುದು.

ವಿಭಕ್ತಿ ಪ್ರತ್ಯಯಗಳು

ಗುಲ್ಬರ್ಗಾ ಕನ್ನಡದಲ್ಲಿ ಆರು ಬಗೆಯ ವಿಭಕ್ತಿ ಪ್ರತ್ಯಯಗಳಿವೆ. ಇದರಲ್ಲಿ ಪ್ರಥಮ ಮತ್ತು ಪಂಚಮಿ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯಗಳಿಲ್ಲ.

ಪ್ರಥಮ ವಿಭಕ್ತಿ : ಇದಕ್ಕೆ ಪ್ರತ್ಯೇಕವಾದ ವಿಭಕ್ತಿ ಪ್ರತ್ಯಯವಿಲ್ಲ. ನಾಮ ಪ್ರಕೃತಿಯೇ ಇದರ ಕೆಲಸವನ್ನು ನಿರ್ವಹಿಸುತ್ತದೆ. ಕೆಲವು ವೇಳೆ ಕೆಲವರ ಉಚ್ಚಾರದಲ್ಲಿ ನಾಮಪ್ರಕೃತಿಗಳು ದೀರ್ಘ ವಾಗುವುದು ಉಂಟು.

ದ್ವಿತೀಯ ವಿಭಕ್ತಿಗೆ ಗ, ಗಿ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ. ಇವು ಕೆಲವು ವೇಳೆ ವಿಕಲ್ಪವಾಗಿಯೂ ಬಳಕೆಯಾಗುವುದುಂಟು. ದ್ವಿತೀಯವಿಭಕ್ತಿ ಪ್ರತ್ಯಯ ಅನ್ನುವಿಗೆ ಬದಲಾಗಿ ಚತುರ್ಥಿ ವಿಭಕ್ತಿ ಇದರ ಕೆಲಸವನ್ನು ನಿರ್ವಹಿಸುತ್ತದೆ.

ಗ - "ಅಲ್ಲಗ್ಯ ಮರಗೀ... ನೀಲವ್ವಗ ಜೋಗಣಿ ಮಾಡ್ಬೇಕಂತ ಯಾಕ ಹರಕಿ ಹೊತ್ತೀರೇ?" (ಪು. ೩೩ ಬದುಕು)

ಗ - ನೀಲವ್ವನನ್ನು - ನೀಲವ್ವಗ

ಗಿ - .....ಅಂದೆಲ್ಲಾ ಆ ಬೆಕ್ಕಿಗಿ ಕಾಯಾದೆ ಆಗಿತ್ತು ಅದರ ಕಣ್ಣಾಗ ಮಣ್ಣ ಹಾಕಲೀ... ಇಂದ ಮತ್ತ ಅದೇ ಬಾವುಗಬೆಕ್ಕು ಬಂದಿತ್ತಾ ಏನು ಮಣ್ಣಾ ಅಂತೀನೀ...." (ಪು. ೧೫ ಬದುಕು)

ಗಿ - ಬೆಕ್ಕನ್ನು - ಬೆಕ್ಕಿಗಿ

ತೃತೀಯ ವಿಭಕ್ತಿಗೆ - ಲಿಂದ ಎಂಬ ಪ್ರತ್ಯಯಗಳು ಬಳಕೆಯಲ್ಲಿವೆ. ಪಂಚಮೀ ವಿಭಕ್ತಿ ಕೆಲಸವನ್ನು ತೃತೀಯ ವಿಭಕ್ತಿಯೇ ನಿರ್ವಹಿಸುತ್ತದೆ.

ಲಿಂದ - "ಅಬ್ಬಾ! ಅಂತೂ ಮಾತುದುರುದುವಲ್ಲ ನೀನ್ ಬಾಯಿಲಿಂದ! ನೋಡಪಾ... ಆ ಎಡ್ಡು ಡಬ್ಬ್ಯಾಗಿಂದು ದೀಡು ದೀಡು ಡಜನ್ ಕೊಟ್ಟು ಬಿಡು". (ಪು. ೨೩೬ ಬದುಕು)

ಲಿಂದ - ಬಾಯಿಯಿಂದ - ಬಾಯಿಲಿಂದ

ಚತುರ್ಥಿ ವಿಭಕ್ತಿ ಕೆ, ಗೆ ಎಂಬ ಪ್ರತ್ಯಯಗಳಿವೆ. ಇವು ಕೆಲವು ವೇಳೆ ಸ್ವಚ್ಛಂದವಾಗಿಯೂ ಬಳಕೆಯಾಗುತ್ತವೆ. ಇವು ಕೆಲವು ವೇಳೆ ದ್ವಿತೀಯ ವಿಭಕ್ತಿಯ ಕೆಲಸವನ್ನು ನಿರ್ವಹಿಸುತ್ತವೆ.

ಗೆ - "ಬ್ಯಾಡಂದ್ರ ಬಿಡು ತಾ ಇಕಾಡಿ ಆ ಗಿಲಾಸ. ಅವ್ವಗ ಕೊಟ್ಟು ಬರ್ತಿನೆಂತ. ಒಳಗೆ ಅಡಗಿ ಮನ್ಯಾಗ ಒಲಿಮುಂದ ಕುಂತು ಬೆವರಿಗ್ನೋಗತ ರೊಟ್ಟಿ ಬಡೀಲಕತ್ತಾಳಲ್ಲ". (ಪು. ೨೯ ಬದುಕು)

ಗಿ - ಒಳಗೆ

ಕ್ಕೆ - "ಇಲ್ಲೆಕ್ಕ ರೊಕ್ಕ ರೊಪೈ ಕೊಟ್ಟು ಹಾಡಲಿಕ್ಕೆ ಕರಸೋಟು ತಾಕತ್ತಿಲ್ಲೆಪ್ಪ ನಂಬಲ್ಲಿ.... ನಮ್ಮ ಕೇರ್‍ಯಾಗೇ ನೀವೆಲ್ಲಾ ಇದ್ದೀರಲ್ಲ ಹಾಡ ಹಾಡವ್ರು.... ಕೇರಿ ಮಂದಿನೇ ಹಾಡ್ತಾರ..." (ಪು. ೧೫೧ ಬದುಕು)

ಕ್ಕೆ - ಹಾಡಲಿಕ್ಕೆ

ಷಷ್ಠಿ ವಿಭಕ್ತಿ : ಅ ಪ್ರತ್ಯಯ ಬಳಕೆಯಲ್ಲಿದೆ

ಅ - "ನಾ ಗವಿಸಿದ್ದನ ಗುಡ್ಡದ ಕಡಿ ಅಡವಿಗಿ ಹೋಗ್ತೀನೋ ಯಪ್ಪಾ... ನಿನ್ನಿ ಆ ಗುಡ್ಡದ ಸಂದ್ಯಾಗಿನ ಕಂಟ್ಯಾಗ ಮಲದ ಬಲಿ ಕೊಟ್ಟಿ ಬಂದೀನಿ. ಮಲ ಬಿದ್ದಿರ್ಬೇಕು. ನೋಡ್ಕಂಡು ಬರ್ತಿನಿಪ್ಪ...." (ಪು. ೫೦ ಬದುಕು)

ಅ - ಮಲದ

ಸಪ್ತಮಿ ವಿಭಕ್ತಿ 'ಆಗ' ಎಂಬ ಪ್ರತ್ಯಯ ಬಳಕೆಯಲ್ಲಿದೆ ಇದು ಕೆಲವು ವೇಳೆ ವಿಕಲ್ಪವಾಗಿಯೂ ಬಳಕೆಯಾಗುತ್ತದೆ.

ಆಗ - "ಜ್ಯಾಕಿ ಮಗಾ... ದಾರ್‍ಯಾಗ ಮಕ್ಕಳಿಗಿ ಸಂಭಾಳಿಸ್ಗೊಂಡೋಗ್ರಿ...." (ಪು. ೫೪ ಬದುಕು)

ಆಗ - ದಾರಿಯಲ್ಲಿ - ದಾರ್‍ಯಾಗ

ಕಾಲಸೂಚಕ ಪ್ರತ್ಯಯಗಳು

ಕಾಲವಾಚಕ ಪ್ರತ್ಯಯಗಳಲ್ಲಿ ಭೂತಕಾಲ ಮತ್ತು ಭೂತೇತರ ಕಾಲ ಎಂಬ ಎರಡು ಬಗೆಯ ಕಾಲಗಳಿವೆ. ಇವುಗಳಲ್ಲಿ ವರ್ತಮಾನಕಾಲ ಮತ್ತು ಭವಿಷ್ಯತ್‌ಕಾಲಗಳು ಭೂತೇತರ ಕಾಲದಲ್ಲಿ ಸೇರುತ್ತವೆ. ಭವಿಷ್ಯತ್ ಕಾಲದ ಕೆಲಸವನ್ನು ವರ್ತಮಾನ ಕಾಲವೇ ನಿರ್ವಹಿಸುತ್ತದೆ.

೧. **ಭೂತಕಾಲಕ್ಕೆ** ದ್, ಡ್, ಟ್, ತ್ ಎಂಬ ಪ್ರತ್ಯಯಗಳು ಇವೆ.

ದ್ - "ನಮ್ಮ ಆ ಸಾಲಿನ ಕೆಲಸಾ ನೋಡೇ ಪೋರೀ... ಏಟುನುಣ್ಣಗ ಬಂದ ಎಳಿಹುಲ್ಲ. ಕರಕೀ ಬಿಡಲಾರದಂಗ ಸದಿ ತಗಿದೀವಿ....." (ಪು. ೬೯ ಬದುಕು)

ದ್ - ತೆಗೆದಿದ್ದೇವೆ - ತಗಿದೀವಿ

ಡ್ - "ಸುಮ್ಮನ ಬಾರೇ ಅಂದ್ರ... ಒಂದು ಮುಂಜಾನಿ ಉಂಡಕ್ಕಿದ್ದಿ. ಹಸುಹ್ಯಾಂಗ ಆಗಂಗಿಲ್ಲ? ಜಿಂಗಿ ಮಿನಾ ಹುರ್ದು, ಮಸಾಲಿ ಹಾಕಿ ಪಲ್ಯಾ ಮಾಡೀನಿ. ಹಂಚನ್ಯಾಗ ತತ್ತಿ ಹುರ್ದು ಆಂಬಲೆಟ ಮಾಡೀನಿ. ಬಿಸಿ ಬಿಸಿ ರೊಟ್ಟಿ, ಅದಾ... ಏಳು. ಹ್ವಾದೋಟು ಉಂಡು ಮಕ್ಕೋ... ಇಲ್ಲಂದ್ರ ನಿಮ್ಮಪ್ಪನೇ ಬರ್ರ್ತಾನ ನೋಡು..." (ಪು. ೮೭ ಬದುಕು)

ಡ್ - ಮಾಡಿದ್ದೇನೆ - ಮಾಡೀನಿ

ಟ್ - "ತ್ವಾಟದ ಹುಚ್ಚು ಭಾಳದ ಇಕೀಗೀ... ಭರ್ರ ಭರ್ರಂತೆ ಗಾಳಿ ಬೀಸ್ತದ. ಹೊಲಕ್ಕ ತ್ವಾಟಕ್ಕ ಹೋಗಬ್ಯಾಡ ಮಗಾ ಅಂತೇಳದ್ರ ಕೇಳಂಗಿಲ್ಲ ಇಕಿ. ಚಾ ಕಾಸಿ ಕೊಟ್ಟಾಳಾ ಇಲ್ಲಾ ನಿಮ್ಮವ್ವಾ?" "ಕೊಟ್ಟಾಳ ಬಿಡೋ ಯಪ್ಪ...." ಪತರೂ ಅಲ್ಲಿಂದ ಎದ್ದು ನಡೆದನು. (ಪು. ೯೯ ಬದುಕು)

ಟ್ - ಕೊಟ್ಟಿದ್ದಾಳೆ - ಕೊಟ್ಟಾಳ

ತ್ - "ಭರಮ್ಯಾನ ಹಿಂದಿಂದೇ ನಿಮ್ಮನಿಗಿ ಬಂದು ಅಂಗಳದಾಗ ನಿಂದರ್ತಿತ್ತು ಪೋರಿ. ನಮ್ಮ ಕಾಳಿ ವಾರಗೆಕ್ಕಿ. ಅದು ಬಂದಾಗೆಲ್ಲಾ ಕಾಶಮ್ಮನ ಉಟ್ಟು ಬಿಟ್ಟ ಸೀರಿ, ಅಂಗಿ, ಲಂಗಾ ಅಂತ ಕುಡುತ್ತಿದ್ದಳು. ರೊಟ್ಟಿಮ್ಯಾಲ ಪಲ್ಯಾ ಹಚ್ಚಿ ಕೊಟ್ಟರ ಅಂಗ್ಯೆಯಾಗಿಟ್ಗೊಂಡು ಅಂಗಳದಾಗ ಕೊಟಗಿ ಬಾಜು ಕುಂತು ಉಣುತ್ತಿತ್ತು ಪಾಪ". (ಪು. ೭೫ ಬದುಕು)

ತ್ - ಊಟಮಾಡುತ್ತಿದ್ದಳು - ಉಣುತ್ತಿತ್ತು

೨. **ಭೂತೇತರ ಕಾಲಕ್ಕೆ** - ತ್ ಎಂಬ ಪ್ರತ್ಯಯ ಬಳಕೆಯಲ್ಲಿದೆ.

ತ್ - "ಇವತ್ತ್ಯಾಕ ಮಟನ್ನೇ ಶಾಣಮ್ಮ? ಸಂಡೇ ಅಲ್ಲ ಏನಲ್ಲ?" ಅಂತ ಕೇಳಿದಳು. "ಊರಿಂದ ನಮ್ಮಪ್ಪ ನಮ್ ತಂಗಿ ಬಂದಾರೇ ಅತ್ತೀ....." "ಹೋಯಿಂದೇನು ತರ್ರ್ತಾನ ಬಿಡು. ರೊಕ್ಕ, ಡಬ್ಬಿ, ಚೀಲಾ ಕುಡುಮತ್ತ..... ಅಂದಳು" (ಪು. ೧೨೦ ಬದುಕು)

ತ್ - ತರುತ್ತಾನೆ - ತರ್ರ್ತಾನ

ವಿಧ್ಯರ್ಥಕ ರೂಪಗಳು - ಲಿ ಮತ್ತು ಳಿ ಎಂಬ ಪ್ರತ್ಯಯಗಳು ಸೇರುವುದರಿಂದ ದೊರೆಯುತ್ತವೆ.

ಲಿ - "ಮತ್ತ್ಯಾಕ ಹಿಂದಾಮುಂದಾ ನೋಡ್ತಿ? ಹೇಳಿಕಳ್ಳು ಬರ್ಲಿ. ಹೆಣ್ಣು ನೋಡಲಿ. ನಮ್ಮ ಮಗಳನೂ ಆ ಪಾರಗ ನೋಡ್ಲಿ ಇಬ್ಬರಿಗೀ ಪಸಂದ ಬಿದ್ದರ ಮುಂದಿನ ಮಾತು....." (ಪು. ೧೦೧ ಬದುಕು)

ಲಿ - ನೋಡಲಿ - ನೋಡ್ಲಿ

ಳಿ - "...ತಗೋಪ್ಪ ....ನಿಮ್ ಕೇರಿಗೊಯ್ದು ಬೇಕಾದವ್ರಿಗೆಲ್ಲಾ ಹಂಚಿ ಬಿಡು. ಅವರ ಬಾಯಾಗರೆ ಬೀಳಲಿ.... ಇಲ್ಲಂದ್ರ ಸುಮ್ಮನ ಹಳಸಿ ಹಾಳಾಗ್ತಾವ, ಅನ್ನಾ ಅಂದ್ರ ದೇವರಿದ್ದಂಗ... ಅದಕ್ಕ ಹಾಳು ಮಾಡಬಾರ್ದು ನೋಡು ಒಯ್ಯಿ...." ಅಂತಂದು ಕಳುಹಿಸಿದಳು. (ಪು. ೪೬೪ ಬದುಕು)

ಳಿ - ಬೀಳಲಿ

ನಿಷೇದಾರ್ಥಕ ಕ್ರಿಯಾರೂಪಗಳು - ಒಲ್ಲೆ, ಬ್ಯಾಡ ಎಂಬ ರೂಪಗಳು ಸಿಗುತ್ತವೆ.

ಒಲ್ಲೆ - "ಯವ್ವಾ! ಹಳದಿ ಸೀರಿ? ನಾ ಒಲ್ಲೆವ್ವ... ನನ್ ಕರಿಮಾರೀಗಿ ಆ ಅರಿಶಿಣ ಬಣ್ಣಾ ಉಟ್ಟರ ಮರಗವ್ವ ಕಂಡಂಗ ಕಾಣಸ್ತದ ಆಟೀ...." ಕಾಶಮ್ಮ ಮಾರಿ ಕೆಡಿಸಿದಳು. (ಪು. ೩೭ ಬದುಕು)

ಒಲ್ಲೆ - ಒಲ್ಲೆವ್ವ

ಬ್ಯಾಡ - "ಬ್ಯಾಡವ್ವ ....ನನಗ ಈ ಗಿಣಿ ಹಸರ ಬಣ್ಣದ ಕೆಂಪಂಚಿನ ಇರಕಲ್ ಸೀರಿನೇ ಸಾಕು. ಕೆಂಪು ಬಣ್ಣದ್ದು ಕುಬಸಾನೂ ಅದಾ ನನಬಲ್ಲಿ...." (ಪು. ೩೭ ಬದುಕು)

ಬೇಡ - ಬ್ಯಾಡ

ವಾಕ್ಯ ಶೈಲಿ

"ಯಾಕೋ ತಿಪ್ಪ್ಯಾ .... ನೀರಿಗೆ ಹೊಂಟ ಹೆಣ್ಣಿನ ಕೂನಾ, ಪತ್ತಾ ಕೇಳಲಕತ್ತಿದ್ದೆಲ್ಲ? ಹ್ಯಾಂಗಧಾನೋ ಅಳ್ಯಾ ನಿನ್ನ ಮೈಯಾಗ...?" ಅಂತಂದು ಹಿಂದೆ ಹೊಂಟಿದ್ದ ಪೇರವ್ವ ನಗೆ ಚಾಟಿಕೆ ಮಾಡಿದಾಗ ಹೊಳ್ಳಿ ನೋಡಿದ ತಿಪ್ಪ್ಯಾ ಗೊಳ್ಳಂತ ನಕ್ಕನು. (ಪು. ೭೩ ಬದುಕು)

"ಯಾಕಪ್ಪ... ಉಂಡು ಬಂದಿಲ್ಲಾ ಡಬ್ಬಲರೊಟ್ಟಿ ಯಾಕ ತರಸ್ತಿ ರೊಟ್ಟಿಪಲ್ಲ್ಯಾ ಅದಾ. ಊಟಾನೇ ಮಾಡ್ರೆಲ್ಲಾ..." ಅಂದಳು. (ಪು. ೧೧೭ ಬದುಕು)

ಪದಕೋಶ ಶೈಲಿ

<u>ಬದುಕು</u>

ಪಾರಗೋಳು - ಹುಡುಗರು

ಉರಿಚಳಿ - ಚಳಿಜ್ವರ

ಬಣ್ಣದ ನೀರು - ಔಷಧ

ಹೊಂಟಾನ - ಬರುತ್ತಾನೆ

ಬೇಡಬಾರ್ದು - ಕೇಳಬಾರ್ದು

ಸಣಮಾಡು - ನಮಸ್ಕರಿಸು

ಕಡಿದು - ಬಿಡಿಸಿಕೊಂಡು

ಕಿಮ್ಮತ್ತ - ಬೆಲೆ

ಅಸ್ಪೃಶ್ಯರು ಕಾದಂಬರಿಯಲ್ಲಿನ ವೈದೇಹಿಯವರ ಬರವಣಿಗೆಯನ್ನು ಕುರಿತು ಹೇಳುವುದಾದರೆ, "ವೈದೇಹಿಯವರ ಭಾಷೆ ನೇರವೂ ನಿರ್ದಿಷ್ಟವೂ ಹಾಗೂ ಸಂಕ್ಷಿಪ್ತವೂ ಆದುದಾಗಿದೆ. ಕಾದಂಬರಿಯಲ್ಲಿ ಬಳಕೆಗೊಂಡಿರುವ ಕುಂದಾಪುರದ ಭಾಷೆ, ಕುಂದಾಪುರದ ಜನರಲ್ಲೇ ಇರುವಂಥ ಭಾಷಾವೈಶಿಷ್ಟ್ಯದಿಂದಾಗಿ ಕಾದಂಬರಿಯು ವಿಶಿಷ್ಟವಾಗಿಯೂ ಭಿನ್ನವಾಗಿಯೂ ಮೂಡಿಬಂದಿದೆ. ಅಲ್ಲದೆ ಸರಳ ಮಾತುಗಳಿಂದ ತೀವ್ರತೆಯನ್ನು, ಸಂಕೀರ್ಣತೆಯನ್ನು ಪೂರ್ಣ ಅರ್ಥವನ್ನು ತರಬಲ್ಲ ಶೈಲಿ ಇವರದಾಗಿದೆ. ಗಾದೆ, ನಾಣ್ನುಡಿಗಳನ್ನು ಸಂದರ್ಭೋಚಿತವಾಗಿ ಬಳಸಿ ಸನ್ನಿವೇಶವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುವಲ್ಲಿ ವೈದೇಹಿಯವರು ಯಶಸ್ವಿಯಾಗಿದ್ದಾರೆ. ಜೊತೆಗೆ ಗಾದೆ, ನಾಣ್ನುಡಿಗಳನ್ನು ಸನ್ನಿವೇಶದ ಪೂರ್ಣ ಚಿತ್ರಕ್ಕೆ ಪೂರಕವಾಗಿ ಬರುವಂತೆ ದುಡಿಸಿಕೊಂಡಿದ್ದಾರೆ. ಹೀಗೆ ಭಾಷೆಯ ಹದವರಿತ ಬಳಕೆ ಹಲವೆಡೆ ಸೊಗಸಾಗಿ ಬಂದು ಕಾದಂಬರಿ ವಿಶೇಷವಾಗಿ ಪರಿಣಮಿಸಿರುವುದನ್ನು ಇವರ ಬರವಣಿಗೆಯಲ್ಲಿ ಕಾಣಬಹುದು. ಇದಕ್ಕೆ ಕಾದಂಬರಿಯಿಂದಲೇ ನಿದರ್ಶನಗಳನ್ನು ನೋಡಬಹುದು.

ಪುಟ್ಟಿ "ನರಪಟೆ" ಎಂದು ಕೂಗಿದ್ದೇ ಬಾಣಂತಿ ಕೋಣೆಯ ಕಿಟಕಿ ಬಾಗಿಲು ಅರ್ಧ ಸಾಂಚಿ ಇದ್ದದ್ದನ್ನು ಪೂರ್ತಿ ಹಾಕಿದರು ಪಾರ್ತಕ್ಕ. ಆದರೂ ಅವಳು "ಚಣ್ಣಮ್ಮ ಹೆತ್ತಿದ್ದಾರಂತೇ... ಹೆಣ್ಣು ಮಗುವಂತೇ ಹಾಂದರೆ ನಮಗೊಂದು ಪಾಯಸ ಉಂಟು" ಎನ್ನುತ್ತ ಗೆಲುವಿಗೆ ಗೆಲುವಾಗಿ ನಿಂತಿದ್ದಳು.

"ಮಗು ಚಂದ ಉಂಟು" - ಎಂದ ಪುಟ್ಟ

"ಹೌದು ಚಂದ ಉಂಟು" - ಎಂದಳು ಅವಳು.

"ಕೆಂಪು-ಕೆಂಪು" - ಎಂದು ಜಯ ಹೇಳಿದಾಗ

"ಹೌದು ಒಡತಿ, ಕೆಂಪು ಕೆಂಪು" - ಎಂದಳು. ಯಾರೇನು ಹೇಳಿದರೂ ಹೂಂಗುಡುತ್ತ ಅರೆಪಚ್ಚೆ ನಗುವಿನಲ್ಲಿ ಅದನ್ನೇ ಪುನಃ ಹೇಳಿದರೆ ಅದು ನರಪಟೆಯೇ.

ಪಾರ್ತಕ್ಕ ಪುಟ್ಟ ಜಯರನ್ನು ಕರೆದು "ಹಾಗೆಲ್ಲ ಹೇಳಿ ಮಗುವಿಗೆ ದೃಷ್ಟಿ ಬೀಳುತ್ತದೆ ಅಷ್ಟೆ. ಅವುಗಳ ಹತ್ತಿರ ಏನು ಹೋಕಿಲ್ಲದ ಪಂಚಾತಿಕೆ?... ಗೌರಿ, ಎಣ್ಣೆ ಬೇಗ ಕೊಡಬಾರದ? ಅದರ ಗಾಡಿ ಒಮ್ಮೆ ಹೋಗಲಿ ಮಾರಾಯ್ತಿ".

"ಅದು ಬಂದ ಕೂಡಲೇ ಇಲ್ಲೇನು ಜನ ಉಂಟ? ತಯಾರು ಮಾಡಿಕೊಡಲಿಕ್ಕೆ? ನಿಲ್ಲಲಿ ಸ್ವಲ್ಪ" - ಎಂದರು ಗೌರಮ್ಮ. ಜಯ ಮತ್ತೆ ಹೊರಗೋಡಿದಳು.

"ಚಣ್ಣಮ್ಮ"- ಎಂದಳು ನರಪಟೆ ಪಾಂಚು ಪಾಂಚಾಗಿ.

"ಏಯ್, ನೀನೆಲ್ಲಿರುವುದು?"

"ನಾನು ಓ ಅಲ್ಲಿ, ನರಿಬೇಣದ ಆಚೆ".

"ನಾ ಬರುವುದ ಒಂದು ಸಲ"

"ಶ್ಯ... ನೀವು ಬರುವ ಜಾಗವಲ್ಲ ಒಡತಿಯರೆ ಅದು"

“ಹೋಗು ಅವಳೊಟ್ಟಿಗೇ. ಅವಳ ಮಗನಿಗೇ ನಿನ್ನನ್ನು ಮದುವೆ ಮಾಡಿಕೊಡುವ..... ಯಾರು ಬಂದರೂ ಅವರ ಹತ್ತಿರ ಅವಡೆಸೊಪ್ಪಿಗೆ ಉಪ್ಪಿಲ್ಲದ ಮಾತಿಗೆ ಕೂತಾಯಿತು. ನಡಿ ಒಳಗೆ”- ಎಂದು ಗದರಿಸಿದರು. ಗೌರಮ್ಮ ಎಣ್ಣೆ ತಂದು ದೂರದಲ್ಲಿ ಇಡುತ್ತ.

“ಬೈಯಬೇಡಿ. ಪಾಪ, ಮಗು. ಅಮ್ಮ ಪಾಯಸ ಯಾವಾಗ?” ಉತ್ತರ ಸಿಗದೆ ನರಪಟೆ ಅದೇ ಸಹಜವೆಂಬಂತೆ ಎಣ್ಣೆಯ ಗೆರಟೆ ಎತ್ತಿಕೊಂಡು ನಗುವಿನ ಗೆಜ್ಜೆಯೊಂದಿಗೆ ಹೊರಟು ಹೋದಳು. ಅಂಗಳ ಗುಡಿಸುತ್ತ ಇದ್ದ ಚಂದು “ಅಗಣಿ ಅಮ್ಮ, ಈ ನರಪಟೆಗೆ ಇದ್ದ ಖುಶಿ ಯಾರಿಗಿಲ್ಲ. ಸುಳ್ಳ? ಒಂದಕ್ಕೆ ಕಾಣಿ. ಏನಿಲ್ಲದವರು ಗಮ್ಮತ್ತಿನಲ್ಲಿರುತ್ತಾರೆ, ನಮ್ಮಂತವರಿಗೆ ಮೂರು ಹೊತ್ತೂ ಚಿಂತೆ”.

ಗೌರಮ್ಮ ಅವಳಿಗೆ ನೇರ ಉತ್ತರ ಕೊಡಲಿಲ್ಲ. ನಮ್ಮಂತಹವರಿಗೆ ಅಂತ ಹೇಳಿ ತಾವೂ ಅವಳೂ ಸರಿಸಮವೆನ್ನುವಂತೆ ಮಾತಾಡಲು ಇವಳು ಯಾವ ದೊಡ್ಡ ಪುಳುಕಿ? ಎಂದು ಚಂದುವಿಗೆ ಕೇಳಿಸುವಂತೆಯೇ ಹೇಳುತ್ತ ಒಳಗೆ ಬಂದಳು (ಪು. ೮-೯).

ವೈದೇಹಿಯವರ ಕಾದಂಬರಿಯಲ್ಲಿನ ಭಾಷಾ ಬಳಕೆಯು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಕಂಡುಬರುವ ಧ್ವನಿ, ಪದ, ವಾಕ್ಯ ಮತ್ತು ವಿಶಿಷ್ಟ ಪದಪ್ರಯೋಗಗಳಿಂದ ಕೂಡಿದುದಾಗಿದೆ. ಇವು ಕಾದಂಬರಿಗೆ ಪ್ರಾದೇಶಿಕ ಸೊಬಗನ್ನು ತಂದಿವೆಯಲ್ಲದೆ. ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಭೌಗೋಳಿಕವಾಗಿ ಮಂಗಳೂರು ಪ್ರದೇಶವನ್ನು ಪ್ರತಿನಿಧಿಸುವ ಅಸ್ಪೃಶ್ಯರು ಕಾದಂಬರಿಯಲ್ಲಿನ ಧ್ವನಿ, ಪದ, ವಾಕ್ಯ, ವಿಶಿಷ್ಟಪದ ಶೈಲಿ, ಹಂತದ ಶೈಲಿಯನ್ನು ವಿಶ್ಲೇಷಿಸುತ್ತ ನಿದರ್ಶನಕ್ಕೆ ಕಾದಂಬರಿಯಿಂದಲೇ ಉದಾಹರಣೆ ಗಳನ್ನು ನೀಡಲಾಗಿದೆ.

ಧ್ವನಿ ಶೈಲಿ

೧. ಶಬ್ದದ ಆದಿಯ ಇ ಕಾರ ಎ ಕಾರವಾಗಿ ಬದಲಾಗುತ್ತದೆ.

“ನಿನಗೆ ಅರ್ಥವಾಗುತ್ತದೆ, ಮಣ್ಣು. ಮೀಸೆ ಹುಟ್ಟಿದ ಕೂಡಲೆ ಬ್ರಹ್ಮಾಂಡ ಅರ್ಥವಾಗುತ್ತದೆ ಎಂತ ಮಾಡಿದೆಯ?... ಇಗಾ ಗೌರಿ, ನಾನು ಇರುವ ಒಬ್ಬ ಮಗನನ್ನು ಕಳೆದುಕೊಂಡೆ. ನಿನ್ನ ಮಗನನ್ನೂ ಕಳೆಯಿಸಿಕೊಡುತ್ತೇನೆ ಎಂದು ಹೆದರಿಕೆಯಾಗುತ್ತದೆ ಈಗ. ಈಗಿನನಿಂದಲೇ ಕೆಮಿ ತಿಪ್ಪಿ ಬುದ್ಧಿ ಹೇಳು”. (ಪು. ೬೯ ಅಸ್ಪೃಶ್ಯರು)

ಕೆಮಿ - ಕಿವಿ

೨. ಆದಿಯ ವ ಕಾರ ಇ ಕಾರವಾಗುತ್ತದೆ.

“ಇಸ್ವಾಸ ಅಂದರೆ ಅದೇ ಅಲ್ಲವ ಅಮ್ಮ? ನನ್ನಿಂದೇನಾಗಬೇಕು ಹೇಳಿ” ಎಂದು ಹೆಗಲು ಮೇಲಿನ ವಸ್ತ್ರವನ್ನು ಕೊಡಕಿ ತಲೆಗೆ ಸುತ್ತಿಕೊಂಡು ಸೊಂಟಕ್ಕೆ ಕೈಕೊಟ್ಟು ನಿಂತ ಮಂಜ. (ಪು. ೨೩)

ವಿಶ್ವಾಸ - ಇಸ್ವಾಸ

೩. ಅಘೋಷ ವ್ಯಂಜನಗಳು ಘೋಷ ವ್ಯಂಜನಗಳಾಗುತ್ತವೆ.

"ಯಂತದು? ಗೆಂಡಕ್ಕ? ಮತ್ತೆಲ್ಲಿಗೆ ಬೇಡವ? ಅಲ್ಲಿಗೆ ಹೋಗುವುದು ಶೂದ್ರರು ಮಾತ್ರ. ಹಾಗೆ ನೀವೆಲ್ಲ ಹೋಗಬಾರದು" ಪಾರ್ತಕ್ಕನ ಸ್ವರ ಬರುತ್ತಲೇ...." (ಪು. ೧೦೧ ಅಸ್ಪೃಶ್ಯರು).

ಕೆಡ - ಗೆಂಡ

೪. ಕೆಲವು ಪದಗಳ ಒ ಕಾರ ಉ ಕಾರವಾಗುತ್ತದೆ.

".....ಯಾರ ಮನೆಯಲ್ಲಿತ್ತು ಈ ಕ್ರಮ? ಹೋದಲ್ಲಿಯವರೆಗೂ ತನಗೆ ಎಲ್ಲರ ಕುಯಿಂಕು ಮಾತು. (ಪು. ೮೯)

ಕೊಙು - ಕುಯಿಂಕು

೫. ಕೆಲವು ವೇಳೆ ಸ ಕಾರ ಚ ಕಾರವಾಗುತ್ತದೆ.

"ನರಪಟೆ! ನೀನಿಲ್ಲಿ ಉಣ್ಣುವುದು!"

"ಹೌದು ಚಣ್ಣೊಡೆಯರೇ ಅಡಿಗೆ ಬಾರಿ ರುಚಿಯುಂಟು". (ಪು. ೭೫)

ಸಣ್ಣೊಡೆಯ - ಚಣ್ಣೊಡೆಯ

೬. ಆದಿಯ ಚ ಕಾರ ತ ಕಾರವಾಗುತ್ತದೆ.

"ಓ! ಅದು ಶಾಮಿ ಹಾಕಿದ್ದು. ತಾಮ್ರದ ಹೂವಿನ ಚೊಂಬು. ಶಾಮಿ, ನೆನಪಿದೆಯನ? ನೀರು ಎತ್ತಲು ಹೋಗಿ ಬಾವಿಗೆ ಬೀಳಿಸಿದ್ದು!" ಶಾಮಿ ನಿಂತಲ್ಲೇ ಕುಣಿದಳು. ಚೊಂಬನ್ನು ಕೈಗೆತ್ತಿಕೊಂಡಳು. (ಪು. ೪೬)

ತುಂಬಿಗೆ - ಚೆಂಬು

೭. ಆದಿಯ ಉ ಕಾರ ಒ ಕಾರವಾಗುತ್ತದೆ.

"ಅಮ್ಮಿಗೆ ಅವುಗಳ ಪೊಕ್ಕಟೆ ನಾಟಕ ಖುಶಿಯಾಯ್ತು ಅಂತ ಕಾಣುತ್ತದೆ. ಅಮ್ಮ ಅಲ್ಲಿ ಸೂ ಸಾ ಅನ್ನಲಿಲ್ಲ. ಈಗ ನೋಡು!" ಎಂದಳು ರತ್ನ. (ಪು. ೫೮)

ಪುಕ್ಕಟೆ - ಪೊಕ್ಕಟೆ

೮. ಕೆಲವು ಶಬ್ದಗಳಲ್ಲಿ ವ ಕಾರ ಮ ಕಾರವಾಗುತ್ತದೆ.

......ಆ ದಿನ ಶಾಮಿಗೆ ಮಾಡಲೇಬೇಕು. ಶಾಮಿಗೆ ನೂಲಿನಿಂದ ಹೊಸಲಜ್ಜಿಯನ್ನು ಕಟ್ಟಿಹಾಕುವುದರ ಸಂಕೇತವಾಗಿ, ಸಿಂಹ ಸಂಕ್ರಾಂತಿಯಂದು ಹೀಗೆ ಕಟ್ಟಿ ಹಾಕಿ ಕೂರಿಸಿದ ಅಜ್ಜಿಯನ್ನು ಮುಂದಿನ ಸಂಕ್ರಾಂತಿಯ ದಿನ ದೋಸೆ ಮಾಡಿ ಎಬ್ಬಿಸಿ ಕಳಿಸುವುದು ಅಂತೆಲ್ಲ ರಿವಾಜಿದೆ. (ಪು. ೮೦)

ಶಾವಿಗೆ - ಶಾಮಿಗೆ

೯. ಶಬ್ದಗಳ ನಡುವೆ ಅನುನಾಸಿಕ ವ್ಯಂಜನವು ಬಂದು ಸೇರುತ್ತದೆ.

"....ಪಾರ್ತಕ್ಕ, ತಲೆವರೆಸಲೂ ಬಿಡದೆ ದೊಡ್ಡಗೆ ಒಳಗೆ ಓಡಿದ ಮಾಣಿಯ ಹಿಂದೆಯೇ ವಾತದ ನೋವಿನ ಕಷ್ಟದಲ್ಲಿ ದಾಂಟುಗಾಲಿನ ಹೆಜ್ಜೆ ಹಾಕಿದರು". (ಪು. ೧೦೭)

ದಾಟುಗಾಲಿನ - ದಾಂಟುಗಾಲಿನ

ಪದ ಶೈಲಿ

ಅಸ್ಪೃಶ್ಯರು ಕಾದಂಬರಿಯು ಮಂಗಳೂರು ಪ್ರದೇಶವನ್ನು ಪ್ರತಿನಿಧಿಸುತ್ತಿದ್ದುರುವುದರಿಂದ ಪದದ ಹಂತದ ಅನನ್ಯತೆಯನ್ನು ಮಂಗಳೂರು ಪ್ರಾದೇಶಿಕ ಭಾಷೆಯ ಹಿನ್ನೆಲೆಯಲ್ಲಿಯೆ ಚರ್ಚಿಸುತ್ತಿದ್ದು. ನಿದರ್ಶನಕ್ಕಾಗಿ ಅಸ್ಪೃಶ್ಯರು ಕಾದಂಬರಿಯಿಂದಲೇ ಉದಾಹರಣೆಗಳನ್ನು ನೀಡಲಾಗಿದೆ.

ವಚನ

ನಾಮಪದಗಳಲ್ಲಿ ಏಕವಚನ ಪ್ರತ್ಯಯವನ್ನು ಸೂಚಿಸಲು ಪ್ರತ್ಯೇಕವಾದ ಪ್ರತ್ಯಯ ಬಳಕೆಯಲ್ಲಿಲ್ಲ. ಬಹುವಚನ ಪ್ರತ್ಯಯಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ರು - ಮಗು ಈಗ ಭೂಮಿಗೆ ಬಂತಲ್ಲ. ಬೆಳಕು ಕಂಡಿತಲ್ಲ. "ನಂಗೆ ಯಂತದೂ ಮಾಡಲಿಲ್ಲ ನೀನು ಅಂತ ಅವಾಗಾವಾಗ ಬಂದು ದೇವರು ಮಾತಾಡಿಸುತ್ತ ಹೇಳುತ್ತಾನಂತೆ. ನಿದ್ದೆಯಲ್ಲಿ ಮಗು ನಗುತ್ತದೆಯಲ್ಲ. ಅದಕ್ಕೆ ಆಯಿತು". (ಪು. ೩೫ ಅಸ್ಪೃಶ್ಯರು).

ರು - ದೇವರು

ಅರು - ಪ್ರಪಂಚದಲ್ಲಿ ಎಲ್ಲ ಅಕ್ಕತಂಗಿಯರು ಹೀಗೆಯೇ ಇರುತ್ತಾರ ಎಂದು ಗೊಣಗದರು ಗೌರಮ್ಮ (ಪು. ೫೬ ಅಸ್ಪೃಶ್ಯರು)

ಅರು - ಅಕ್ಕ ತಂಗಿಯರು

ಕ್ಕಳು - "ಮಕ್ಕಳೇ ಬಾಯಿ ಮುಚ್ಚಿ ಒಂದು ಮಂಗ ಮಾಡಿದ ಹಾಗೆ ಎಲ್ಲ ಮಂಗಗಳೂ ಮಾಡುವುದೇ ಅಲ್ಲವೇ?" ಎಂದ ಗದರಿಸಿ.... (ಪು. ೨೭ ಅಸ್ಪೃಶ್ಯರು)

ಕ್ಕಳು - ಮಕ್ಕಳು

ಲಿಂಗ

ಮಂಗಳೂರು ಕನ್ನಡದಲ್ಲಿ ಗಂಡನ್ನು ಸೂಚಿಸುವುದು ಪುಲ್ಲಿಂಗವಾದರೆ ಹೆಣ್ಣನ್ನು ಸೂಚಿಸುವುದು ಸ್ತ್ರೀಲಿಂಗವಾಗುತ್ತದೆ. ಗಂಡು-ಹೆಣ್ಣು ಎರಡೂ ಅಲ್ಲದ್ದು ನಪುಂಸಕಲಿಂಗವಾಗಿದೆ. ಅಲ್ಲದೆ ಕೆಲವು ವೇಳೆ ಸ್ತ್ರೀಲಿಂಗ ಪುಲ್ಲಿಂಗವೆನ್ನದೆ ಎರಡೂ ಲಿಂಗಗಳು ನಪುಂಸಕಲಿಂಗದಲ್ಲಿಯೇ ಕಾಣಿಸಿಕೊಂಡಿವೆ ಇದಕ್ಕೆ ಮಹತ್ ಮತ್ತು ಅಮಹತ್ ಲಿಂಗ ಎಂಬಂತೆ ವರ್ಗೀಕರಣಗೊಂಡರೆ. ಇನ್ನೂ ಕೆಲವು ವೇಳೆ ಮೇಲ್ವರ್ಗ ಕೆಳವರ್ಗವನ್ನಾಧರಿಸಿ ಲಿಂಗ ವ್ಯವಸ್ಥೆ ಕಾಣಿಸಿಕೊಳ್ಳುತ್ತದೆ.

ಉದಾ : ಕೊಯ್ಯಲಿಕ್ಕೆ ಜನ ಸಿಗಬೇಕಲ್ಲ. ಈಗೇನು ಮುಂಚಿನಂತೆ ಶೂದ್ರರು ಮನೆ ಬಾಗಿಲಿಗೆ ಬರುತ್ತವೆಯೆ? ಅವಕ್ಕೆ ಇರುವ ದೊಡ್ಡಸ್ತಿಕೆ ತಮಗಿಲ್ಲ.... (ಪು. ೨೩ ಅಸ್ಪೃಶ್ಯರು)

ಕೊಟ್ಟಿರುವ ಉದಾಹರಣೆಯಲ್ಲಿ ಶೂದ್ರರು ಕೆಳವರ್ಗದವರಾದುದರಿಂದ ಅವರನ್ನು ನಪುಂಸಕ ಲಿಂಗದಲ್ಲಿ ಬಳಸಿರುವುದನ್ನು ನೋಡಬಹುದು.

"ಅದು ಪ್ರತೀ ದಿವಸ ಶಾಲೆಯಿಂದ ಬರುವಾಗಲೂ ನಂಗೆ ಜೀವದಲ್ಲಿ ಜೀವ ಇರುತ್ತಿರಲಿಲ್ಲ. ಈಚೀಚೆಗಂತೂ ಎಷ್ಟು ಹಸಿಯಾಗಿತ್ತು ಹೆಣ್ಣು!.... ಅಂತೂ ಶಾಲೆಗೆ ಹೋಗುವುದರೊಳಗೆ ಆಯಿತಲ್ಲ. ಇನ್ನೂ ಒಂದಿದೆ. ಅದರದಿನ್ನು ಹೇಗೋ!" (ಪು. ೧೧೩ ಅಸ್ಪೃಶ್ಯರು)

ಕೊಟ್ಟಿರುವ ಉದಾಹರಣೆಯಲ್ಲಿ ಸ್ತ್ರೀಯನ್ನು ಅಮಹತ್ ಲಿಂಗದಲ್ಲಿ ಬಳಸಿರುವುದನ್ನು ಕಾಣಬಹುದು.

ವಿಭಕ್ತಿ ಪ್ರತ್ಯಯಗಳು

೧. **ಪ್ರಥಮಾ ವಿಭಕ್ತಿ** ಇದಕ್ಕೆ ಪ್ರತ್ಯೇಕವಾದ ಪ್ರತ್ಯಯವಿಲ್ಲ. ಇಲ್ಲಿನ ಕನ್ನಡದಲ್ಲಿ ನಾಮಪದಗಳೇ ಸ್ವತಂತ್ರವಾಗಿ ಆ ಕೆಲಸವನ್ನು ನಿರ್ವಹಿಸುತ್ತವೆ.

೨. **ದ್ವಿತೀಯ ವಿಭಕ್ತಿ** ನ್ನ ಅನ್ನು ಪ್ರತ್ಯಯಗಳು ಬಳಕೆಯಲ್ಲಿವೆ.

ನ್ನ - "ಬಾಣಂತಿ ಹೆಚ್ಚು ಮಾತಾಡಬಾರದು. ಮಲಕೋ ಸುಮ್ಮನೆ. ಆ ಹೆಣ್ಣಿನ ಮಾತನ್ನ ಇನ್ನು ಮನಸ್ಸಿನೊಳಗೆ ಜಗಿಯುತ್ತ ಇರಬೇಡ" ಎಂದರು. (ಪು. ೧೪ ಅಸ್ಪೃಶ್ಯರು).

ನ್ನ - ಮಾತನ್ನು - ಮಾತನ್ನ

ಅನ್ನು - ಯಂತದಕ್ಕೆ ನಂಗೆ ಮಿಡ್‌ಬಾಯಿ? ನಾನು ಮಿಡ್‌ಬಾಯನ್ನೇ ಹೆರಿಸಿ ಕಳಿಸಿಯೇನು. ಭಾಸ್ಕರನನ್ನು ಹೇಗೆ ಹೆತ್ತೆ ನಾನು ಗೊತ್ತುಂಟ ಮಣಿ ನಿಂಗೆ?" (ಪು. ೧೧ ಅಸ್ಪೃಶ್ಯರು)

ಅನ್ನು - ಭಾಸ್ಕರನನ್ನು

೩. **ತೃತೀಯ ವಿಭಕ್ತಿ** ಇಂದ, ಲಿಂದ ಎಂಬ ಪ್ರತ್ಯಯಗಳನ್ನು ಬಳಕೆಯಲ್ಲಿವೆ.

ಇಂದ - ಥೂ "ನನಗೊಂದು ಚಮಚ ಬೇಕು. ಬರಿಗೈಯಿಂದ ಸೊಳೆ ಬಿಡಿಸಲಿಕ್ಕೆ ಆಗುವುದಿಲ್ಲ" ಎಂದ (ಪು.೨೫ ಅಸ್ಪೃಶ್ಯರು)

ಇಂದ - ಬರಿಗೈಯಿಂದ

ಲಿಂದ - ....ತಾನು ಅವುಚಿಕೊಂಡು ಮಲಗಿದ ರವಿಕೂಡ ಅಂತಹ ಭಾವನೊಳಗಿಂದ ಬಂದವನು ಎಂಬ ಯೋಚನೆ ಬಂದು ರವಿಯೂ ಬೇಡವೆನಿಸಿ ಅವನ ಮೇಲಿಂದ ಕೈತೆಗೆದು ಮಗ್ಗಲು ಬದಲಿಸಿದಳು. (ಪು. ೬೩ ಅಸ್ಪೃಶ್ಯರು)

ಲಿಂದ - ಮೇಲಿಂದ

೪. ಚತುರ್ಥಿ ವಿಭಕ್ತಿ ಕ್ಕೆ ಗೆ, ಂಗೆ, ಇಗೆ ಎಂಬ ಪ್ರತ್ಯಯಗಳು ಹತ್ತುತ್ತವೆ.

ಕ್ಕೆ - **ಶಿವ** ಎಂದ "ಅವನಿಗೆ ಚಮಚ ಕೊಡಲಿಕ್ಕೆ ನನ್ನ ಕಡೆಯಿಂದ ಯಾವ ಆಕ್ಷೇಪ ಇಲ್ಲ. ಬೆಟ್ಟು ಬೀರನ ಎಂಜಲು ಹಪ್ಪಳದಲ್ಲಿ ಸೇರಿ ಮಳೆಗಾಲವಿಡೀ ನಾವು ತಿನ್ನಬೇಕಾಗುವುದಲ್ಲ!" (ಪು. ೨೫ ಅಸ್ಪೃಶ್ಯರು)

ಕ್ಕೆ - ಕೊಡುವುದಿಕ್ಕೆ - ಕೊಡಲಿಕ್ಕೆ

ಗೆ - "ಹೂಂ ಅನ್ನುತ್ತಿ. ಅನ್ನದೆ? ಬೆನ್ನಿಗೆ ಬಿದ್ದ ತಂಗಿಯರಿಗೆ ಮದುವೆಯಾಗಬೇಕು ಎಂಬ ಜಾನ ಇದೆಯ ನಿಂಗೆ? ಸದರ ಬಿಟ್ಟದ್ದು ಜಾಸ್ತಿಯಾಯಿತು. (ಪು. ೧೨೫ ಅಸ್ಪೃಶ್ಯರು)

ಗಿ - ಬೆನ್ನಿಗೆ

ಂಗೆ - "ಅಮ್ಮ, ನೀನು ಅಕ್ಕಂಗೆ ಮತ್ತು ನಂಗೆ ಮಾಡಿದ್ದು ನೆನಪಿದೆ. ಊಟವೂ ಆ ಕತ್ತಲೆ ಕೋಣೆಯೊಳಗೆ ಕೈ ತೊಳೆಯುವುದೂ ಅಲ್ಲಿಯೇ ಮೂರು ದಿನವಿಡೀ ಸ್ನಾನ ಸಹ ಇಲ್ಲದೆ, ತಲೆ ಬಾಚದೆ..... ಶಿ... ಶಿ......" (ಪು. ೧೧೩ ಅಸ್ಪೃಶ್ಯರು)

ಂಗೆ ಅಕ್ಕನಿಗೆ - ಅಕ್ಕಂಗೆ

ಇಗೆ - "ಪಾರ್ತಕ್ಕನಿಗೆ ಹೊಟ್ಟೆನೋವು ಸುರುವಾದರೆ ಮಿಡ್‌ಬಾಯಿಯನ್ನು ಕರೆದುಕೊಂಡು ಬರಲು ಹೋಗುವವ ನಾನೇ...." ಎಂದ ಶಿವ (ಪು. ೧೧ ಅಸ್ಪೃಶ್ಯರು).

ಇಗೆ - ಪಾರ್ತಕ್ಕನಿಗೆ

೫. ಪಂಚಮಿ ವಿಭಕ್ತಿ ಇಲ್ಲಿ ಪಂಚಮಿ ವಿಭಕ್ತಿಯ ಕೆಲಸವನ್ನು ತೃತೀಯ ವಿಭಕ್ತಿಯೇ ಮಾಡುತ್ತದೆ.

೬. ಷಷ್ಠಿ ವಿಭಕ್ತಿ ಅ ಪ್ರತ್ಯಯ ಹತ್ತುತ್ತದೆ.

ಅ - "ಹಚ್ಚೆ ಚುಚ್ಚಿಸಿಕೊಳ್ಳದೆ ಇದ್ದರೆ ಸತ್ತ ಮೇಲೆ ಯಮಧರ್ಮ ಹಾವಿನ ಬಾಲದ ತುದಿಯಿಂದ ಚುಚ್ಚುತ್ತಾನೆ". (ಪು. ೦೭ ಅಸ್ಪೃಶ್ಯರು)

ಅ - ಹಾವಿನ

೭. ಸಪ್ತಮಿ ವಿಭಕ್ತಿ ಲ್ಲಿ, ಅಲ್ಲಿ ಪ್ರತ್ಯಯಗಳು ಬಳಕೆಗೊಂಡಿವೆ.

ಲ್ಲಿ - "ಗಂಟೆ ನೋಡಿದ್ದೀರ?"

"ಹೂಂ. ಹನ್ನೆರಡು ಗಂಟೆ ಮೂವತ್ತೆರಡು ನಿಮಿಷ. ಆದರೆ ಮಿಡ್ ಬಾಯಿಯ ವಾಚಲ್ಲಿ ಹನ್ನೆರಡು ಗಂಟೆ ಮೂವತ್ತೈದು ನಿಮಿಷವಂತೆ". (ಪು. ೫ ಅಸ್ಪೃಶ್ಯರು)

ಲ್ಲಿ - ವಾಚಿನಲ್ಲಿ - ವಾಚಲ್ಲಿ

ಅಲ್ಲಿ - "ಕೆಂಪಿ ದನ ಹಾಲು ಯಾಕೆ ಕೊಡುವುದಿಲ್ಲವೆಂತ ಆದಿತ್ಯವಾರ ಗೆಂಡದಲ್ಲಿ ಕೇಳುತ್ತಾಳಂತೆ

ಒಂದು ಸಲ ನಮ್ಮೆನ್ನೆಲ್ಲ ಕರೆದುಕೊಂಡು ಹೋಗುತ್ತೇನೆ. ಗೆಂಡಕ್ಕೆ ಎಂದಿದ್ದಾಳೆ". ಬರುವುದಾದರೆ ಬಾ.... (ಪು. ೪ ಅಸ್ಪೃಶ್ಯರು)

ಅಲ್ಲಿ - ಗೆಂಡದಲ್ಲಿ

ಕಾಲಸೂಚಕ ಪ್ರತ್ಯಯಗಳು

ಅಸ್ಪೃಶ್ಯರೂ ಕಾದಂಬರಿಯಲ್ಲಿ ಭೂತ, ವರ್ತಮಾನ, ಭವಿಷ್ಯಕಾಲಗಳೆವೂ ಬಳಕೆಗೊಂಡಿವೆ. ಅವುಗಳನ್ನು ಹೀಗೆ ನೋಡಬಹುದು.

ಭೂತಕಾಲ - "ಚಂದಕ್ಕನಿಗೆ ಮಂಡೆಯಿಲ್ಲ. ಇಂಥ ಚಿನ್ನದಂತಹ ಮನೆ ಬಿಟ್ಟಳಲ್ಲ. ಯಾಕೆ ಬಿಟ್ಟೆ ಎಂತ ಆಗಲಿಕ್ಕೆ ಹೆಚ್ಚು ದಿನ ಹೋಗಲಿಕ್ಕಿಲ್ಲ" ಎಂದನು. (ಪು. ೧೯ ಅಸ್ಪೃಶ್ಯರು)

ವರ್ತಮಾನ ಕಾಲ - "ನೀವು ತಿಂಡಿ ಮಾಡಲಿಕ್ಕೆ ಹೋಗಬೇಡಿ ಅತ್ತಿಗೆ, ಅಪ್ಪಯ್ಯ ಏಳುವುದರೊಳಗೆ ನಾನು ಹೋಟೆಲಿಂದ ತಿಂಡಿ ತರುತ್ತೇನೆ" ಎಂದ (ಪು. ೧೩೪ ಅಸ್ಪೃಶ್ಯರು)

ಭವಿಷ್ಯತ್ ಕಾಲ - "ನೀನು ಹೇಳಿದರೆ ಮಾಡಿಸಿಕೊಂಡೇ ಬಿಟ್ಟಾನ ಅವನು? ತನ್ನ ಬುದ್ಧಿಗೆ ಹೌದು ಎಂದು ಕಂಡರೆ ಮಾಡಿಸಿಕೊಂಡಾನು" ಎಂದರು ಗೌರಮ್ಮ (ಪು. ೧೦ ಅಸ್ಪೃಶ್ಯರು).

ವಿಧ್ಯಾರ್ಥಕ ಪ್ರತ್ಯಯ ಲಿ ಮತ್ತು ಳಿ ಎಂಬ ಪ್ರತ್ಯಯಗಳು ಹತ್ತುತ್ತವೆ.

ಲಿ - ಪಾರ್ತಕ್ಕ ಪುಟ್ಟ ಜಯರನ್ನು ಕರೆದು "ಹಾಗೆಲ್ಲ ಹೇಳಿ ಮಗುವಿಗೆ ದೃಷ್ಟಿ ಬೀಳುತ್ತದೆ ಅಷ್ಟೇ. ಅವುಗಳ ಹತ್ತಿರ ಏನು ಹೋಕಿಲ್ಲದ ಪಂಚಾತಿಕೆ?... ಗೌರಿ, ಎಣ್ಣೆ ಬೇಗ ಕೊಡಬಾರದ ಅದರ ಗಾಡಿ ಒಮ್ಮೆ ಹೋಗಲಿ ಮಾರಾಯ್ತಿ". (ಪು. ೧೯ ಅಸ್ಪೃಶ್ಯರು)

ಲಿ - ಹೋಗಲಿ

ಳ - ತಾನೆಂತಹ ಕೆಲಸ ಮಾಡಿದೆ! ಅವರು ಗಂಡ ಹೆಂಡತಿ. ಏನೇ ಮಾಡಿಕೊಳ್ಳಲಿ. ತಾನು ಯಾಕೆ ಬಾಯಿ ಹಾಕಬೇಕಿತ್ತು. ನಾಳೆ ಅವರವರೇ ಒಂದು. (ಪು. ೬೨ ಅಸ್ಪೃಶ್ಯರು)

ಳಿ - ಕೊಳ್ಳಲಿ

ನಿಷೇದಾರ್ಥಕ ಪ್ರತ್ಯಯ

ಇಲ್ಲ - "ನಾ ಬಸುರಿಯಾಪುದಿಲ್ಲೆ" (ಪು. ೦೨ ಅಸ್ಪೃಶ್ಯರು)

ಕ್ಕಿಲ್ಲ - "ಯಂತ ಮಾರಾಯ್ತಿ. ಹೊಡೆಯದೆ ಚಂದದಿಂದ ನೋಡಿಕೊಂಡಳು ಎಂಬಂಥ ಮಾತು ನಿನ್ನ ಬಾಯಲ್ಲಿ ಬರಲಿಕ್ಕಿಲ್ಲ ಸುಳ್ಳ?.... (ಪು. ೧೪ ಅಸ್ಪೃಶ್ಯರು)

ಕ್ಕಿಲ್ಲ ಬರುವುದಿಲ್ಲ - ಬರಲಿಕ್ಕಿಲ್ಲ

ಬೇಡ - "ಥೂ ನಿಮ್ಮ ಹೆಂಗಸರ ಹೆರಿಗೆ ಪುರಾಣ! ನಂಗೆ ಬೇಡಪ್ಪ. ಕೊಳಕು ಹೆಂಗಸರು" ಎನ್ನುತ್ತ ಊಟ ಮುಗಿಸಿ ಎದ್ದ ಶಿವ. (ಪು. ೧೧ ಅಸ್ಪೃಶ್ಯರು)

ಬೇಡ - ಬೇಡಪ್ಪ

ವಾಕ್ಯ ಶೈಲಿ

"ಅಯ್ಯಬ್ಬ ಹಾಗಾದರೆ ಮೊದಲೆಂದರೆ ಎಲ್ಲ ಮೊದಲಿಗಿಂತಲೂ ಮೊದಲು ಹಾಗಾದರೆ ದೇವರ ಕಾಲಿನ ಬೆರಳು ಎಷ್ಟು ತೋರ ಇದ್ದಿರಬೇಕು. (ಪು. ೧೧೦ ಅಸ್ಪೃಶ್ಯರು)

"ಚಣ್ಣಮ್ಮ, ಬೇರೆ ಕೆಲಸ ಇಲ್ಲವ ಎಲ್ಲ ಬಿಟ್ಟು ಜಗಳ ಮಾಡಲಿಕ್ಕೆ? ನನ್ನನ್ನು ಮುಟ್ಟಿದರೇನಾಯಿತು? ನಾನೇನು ಮನುಷ್ಯಳಲ್ಲವ? ನೀವು ಮುಟ್ಟಿದರೂ ಮುಟ್ಟದಿದ್ದರೂ ಪಾರ್ತಮ್ಮ ಸೆಗಣಿ ನೀರನ್ನು ನಿಮ್ಮ ತಲೆಯ ಮೇಲೆ ಸುರಿದೇ ಶುದ್ಧ".... ಎಂದು ನಕ್ಕಳು. (ಪು. ೧೧೪ ಅಸ್ಪೃಶ್ಯರು)

ಕೊಟ್ಟಿರುವ ಎಲ್ಲಾ ನಿದರ್ಶನಗಳಲ್ಲಿಯೂ ಲೇಖಕರು ಆಯಾ ಪ್ರದೇಶಕ್ಕೆ ಸೀಮಿತವಾದ ಹಾಗೂ ಬಳಕೆಯಲ್ಲಿರುವ ಧ್ವನಿ ಮತ್ತು ಪದಗಳನ್ನು ಉಪಯೋಗಿಸಿಕೊಂಡು ವಾಕ್ಯ ರಚನೆ ಮಾಡಿರುವುದನ್ನು ಕಾಣಬಹುದು.

ಪದಕೋಶ ಶೈಲಿ

<u>**ಅಸ್ಪೃಶ್ಯರು**</u>

ಬೈಸರಿ - ಸಂಜೆ

ಚುಯ್ಯಾಲಜ್ಜಿ - ಅಳುಬುರುಕಿ

ಚಾಳಿಸು - ಅಣಕಿಸು

ಕೊಯ್ಯಾರ - ಕೊಂಡಾಟ

ಬಾಸಾಯಿ - ರಸ್ತೆ ಬದಿಯ ತಿಂಡಿ

ಒಡೆ - ಸಪೂರ, ತೆಳ್ಳಗಿನ

ಪಾಂಚು - ಆತ್ಮಗೌರವವಿಲ್ಲದ ಆಸೆ ಬುರುಕತನ

ಗೆರಸಿ - ಮೊರ

ಬೊಂಡ - ಎಳೆನೀರು

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ೭

ಸಮಾರೋಪ

"ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು" (ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯುಳ್ಳ ಈ ಮಹಾಪ್ರಬಂಧವು, ಕಾದಂಬರಿಗಳಲ್ಲಿನ ಶೈಲಿಯನ್ನು ಸಮಗ್ರವಾಗಿ ವಿಶ್ಲೇಷಿಸುವ ಒಂದು ಪ್ರಯತ್ನವಾಗಿದೆ. ಒಬ್ಬ ಸೃಜನಶೀಲ ಲೇಖಕ ಕಾದಂಬರಿಯಲ್ಲಿ, ಪ್ರದೇಶವಾರು ಹಾಗೂ ಸಾಮಾಜಿಕ ವರ್ಗಕ್ಕೆ ಅನುಸಾರವಾಗಿ ಬಳಸಿರುವ ವಿಶಿಷ್ಟ ಭಾಷಾ ಬಳಕೆಯನ್ನು ಗುರುತಿಸಲಾಗಿದ್ದು, ಶೈಲಿ ಹಾಗೂ ಭಾಷಾ ಬಳಕೆಯ ಬಗ್ಗೆ ಕೆಲವು ವಿಶಿಷ್ಟ ಅಂಶಗಳಿಂದ ಕೂಡಿದ ಸಂಗತಿಗಳನ್ನು ಒಳಗೊಂಡಿರುವುದು ಈ ಅಧ್ಯಯನದ ಒಳನೋಟ ಗಳಿಂದ ಗ್ರಹಿಸಬಹುದಾಗಿದೆ.

ಶೈಲಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಪಾಶ್ಚಾತ್ಯ ಮತ್ತು ಭಾರತೀಯ ಸಂದರ್ಭದಲ್ಲಿ ಶೈಲಿಯು ಮೊದಲು ಹೊಂದಿದ್ದ ಸ್ವರೂಪ ಯಾವುದು, ನಂತರ ಅದು ಶೈಲಿಯಾಗಿ ಹೇಗೆ ರೂಪು ತಳೆಯಿತು ಎಂಬುದನ್ನು ವಿವರಿಸುತ್ತ, ಶೈಲಿಯ ಬಗೆಗಿನ ವಿದ್ವಾಂಸರ ವ್ಯಾಖ್ಯಾನಗಳನ್ನೂ ಹಾಗೂ ಇಲ್ಲಿಯವರೆಗೆ ರಚನೆಗೊಂಡಿರುವ ಗ್ರಂಥಗಳನ್ನು ದಾಖಲಿಸಲಾಗಿದೆ. ಈ ಮೂಲಕ ಶೈಲಿಯ ಹುಟ್ಟಿನಿಂದ ಇಲ್ಲಿಯವರೆಗೆ ಬೆಳವಣಿಗೆಯನ್ನು ಅವಲೋಕಿಸಲಾಗಿದ್ದು ಅದಕ್ಕೊಂದು ಸ್ಪಷ್ಟ ರೂಪವನ್ನು ಕಟ್ಟಿಕೊಡಲಾಗಿದೆ.

ಸೃಜನಶೀಲ ಲೇಖಕರು ಕಾದಂಬರಿಗಳ ಅಭಿವ್ಯಕ್ತಿಗಾಗಿ ಬಳಸಿಕೊಂಡಿರುವ ವಸ್ತು, ಭಾಷೆ ಮತ್ತು ತಂತ್ರಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ಪ್ರದೇಶವನ್ನೇ ಮೂಲ ಕೇಂದ್ರವಾಗಿರಿಸಿಕೊಂಡು ವರ್ಗ, ಜಾತಿ, ಧರ್ಮ, ಅಧಿಕಾರ, ಲಿಂಗ ವ್ಯವಸ್ಥೆಗೆ ಸಂಬಂಧಿಸಿದಂತೆ ಒಂದನ್ನು ಮುಖ್ಯ ಘಟನೆ ಅಥವಾ ಸಮಸ್ಯೆಯನ್ನಾಗಿಸಿಕೊಂಡು ಅದಕ್ಕೆ ಪೂರಕವಾಗಿ ಹಸಿವು, ಬಡತನ, ಧಾರ್ಮಿಕ ಸಮಸ್ಯೆ, ಜಾತೀಯ

ಸಮಸ್ಯೆ, ಆರ್ಥಿಕ ಸಮಸ್ಯೆ, ಉಳ್ಳವರ ದೌರ್ಜನ್ಯ, ಇಲ್ಲದವರ ಅಸಹಾಯಕತೆಯಂತಹ ಹಲವು ಸಮಸ್ಯೆಗಳನ್ನು ಮತ್ತು ಆ ಸಮಸ್ಯೆಗಳ ಪರಿಹಾರಕ್ಕಾಗಿ ಕೆಳವರ್ಗಗಳ ಬದುಕನ್ನು ಸಚಿತ್ರವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಲೇಖಕರು ತೀರಾ ಸ್ಥಳೀಯ ಹಾಗೂ ಜಾತೀಯವಾದ ಕನ್ನಡ ಪ್ರಭೇದಗಳನ್ನು ಉಪಯೋಗಿಸಿಕೊಂಡು, ಭಾಷೆಯನ್ನು ಸಹ ಪ್ರತಿರೋಧದ ಪ್ರತೀಕವಾಗಿ ಬಳಸಿಕೊಂಡು, ಗ್ರಾಮೀಣ ಜನರ ಜೀವನವನ್ನು ನೈಜವಾಗಿ ಎಳೆ ಎಳೆಯಾದ ದಟ್ಟವಿವರಣೆಗಳೊಂದಿಗೆ ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಒಂದು ಭಾಷಾ ಪ್ರಭೇದವು ಒಂದು ಬಗೆಯ ಮೌಲ್ಯವ್ಯವಸ್ಥೆಯನ್ನು ಸಂಕೇತಿಸುತ್ತಲೆ ಅಧಿಕೃತ ಭಾಷೆ ಸಂಕೇತಿಸುವ ಯಜಮಾನ್ಯ ವರ್ಗದ ಮೌಲ್ಯಗಳನ್ನು ಹಾಗೂ ಸಾಮಾಜಿಕ ನೈತಿಕ ನಿಲುವನ್ನು ತಿರಸ್ಕರಿಸುತ್ತದೆ ಎಂಬುದನ್ನು ಕಾದಂಬರಿಗಳಿಂದಾಯ್ದ ನಿದರ್ಶನಗಳಿಂದ ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಇಂತಹ ಭಾಷಾ ಪ್ರಭೇದವನ್ನು ಶಕ್ತಿಯುತವಾಗಿ ತರಲು ಸಶಕ್ತವಾದ ತಂತ್ರಗಾರಿಕೆಯನ್ನು ಬಳಸುವ ಮೂಲಕ ಯಜಮಾನ್ಯ ವರ್ಗದ ಮೌಲ್ಯಗಳನ್ನು ತಿರಸ್ಕರಿಸಿ, ದಲಿತ ಲೋಕದ ಮೌಲ್ಯಗಳನ್ನು ಪುರಸ್ಕರಿಸಲು ಹಿಂದೆಂದಿಗಿಂತಲೂ ಭಿನ್ನವಾದ ಹೊಸದೊಂದು ಮಾರ್ಗವನ್ನು ಕಂಡುಕೊಂಡಿರುವುದು ಗಮನಾರ್ಹ ವಿಚಾರವಾಗಿದೆ, ಹಾಗೂ ಲೇಖಕರು ವಸ್ತು, ಭಾಷೆ ಮತ್ತು ತಂತ್ರಗಳ ನಿರೂಪಣೆಯಲ್ಲಿ ಅನುಸರಿಸಿಕೊಂಡಿರುವ ಸಾದೃಶ್ಯತೆ ಮತ್ತು ವೈದೃಶ್ಯತೆಯ ಅಂಶಗಳನ್ನು ಊಳಿಗಮಾನ್ಯ, ಜೀತಪದ್ಧತಿ ಮತ್ತು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ, ಜಾನಪದೀಯ ಅಂಶಗಳು, ಅನೈತಿಕ ಸಂಬಂಧಗಳು, ಗ್ರಾಮೀಣ ನ್ಯಾಯವ್ಯವಸ್ಥೆ ಎಂಬ ಉಪಶೀರ್ಷಿಕೆಯಡಿಯಲ್ಲಿ ದೀರ್ಘವಾಗಿ ಚರ್ಚಿಸಲಾಗಿದ್ದು, ಲೇಖಕರು ಸಮಾಜದ ಕಟ್ಟುಪಾಡುಗಳಿಗೆ ಅನುಗುಣವಾಗಿ ನಡೆಯುವ ಪಾತ್ರಗಳನ್ನು ಸಾದೃಶ್ಯಾಂಶಗಳಲ್ಲಿಯೂ ಅವುಗಳನ್ನು ವಿರೋಧಿಸಿ ನಡೆಯುವ ಪಾತ್ರಗಳನ್ನು ವೈದೃಶ್ಯಾಂಶಗಳಲ್ಲಿಯೂ ತರವಲ್ಲಿ ಯಶಸ್ವಿಯಾಗಿದ್ದಾರೆ, ಎಂಬುದನ್ನು ಈ ಅಂಶಗಳಿಂದ ಸ್ಪಷ್ಟಪಡಿಸಲಾಗಿದೆ.

ಒಂದು ಸಮಾಜದಲ್ಲಿ ಒಂದೇ ಭಾಷೆಯನ್ನಾಡುವ ಜನರಿದ್ದರೂ ಎಲ್ಲಾ ವ್ಯಕ್ತಿಗಳು ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ ಅಂದರೆ, ಸಮಾಜದಲ್ಲಿ ಸಮುದಾಯಗಳು ಭಿನ್ನವಾದಂತೆಲ್ಲಾ ಅವು ಬಳಸುವ ಭಾಷೆಯೂ ಭಿನ್ನವಾಗುತ್ತಾ ಹೋಗುತ್ತದೆ. ಕ್ರಮೇಣ ಈ ಭಿನ್ನತೆಯೆ ಆಯಾ ಸಮಾಜದ ಭಾಷಿಕ ಚಹರೆಯಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಜಾತಿ, ಲಿಂಗ, ಶಿಕ್ಷಣ, ಅಧಿಕಾರ, ಸಂಭೋದನಾವಾಚಿ, ಗಾದೆಗಳು, ಬೈಗುಳುಗಳು, ವ್ಯಕ್ತಿನಾಮಗಳಂತಹ ಸಾಮಾಜಿಕ ಭಿನ್ನಾಂಶಗಳಲ್ಲಿ ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ.

ವ್ಯಕ್ತಿಯು ಬಳಸುವ ಭಾಷೆಯಿಂದ ಜಾತಿ ಅಥವಾ ಕುಲವನ್ನು ಗುರುತಿಸುವಂತೆ, ಗಂಡು-ಹೆಣ್ಣು ಅಭಿವ್ಯಕ್ತಿಗೊಳಿಸುವ ಭಾಷಾಯನ್ನಾಧರಿಸಿ ನಿರ್ದಿಷ್ಟ ಲಿಂಗವನ್ನು ಗುರುತಿಸಬಹುದು. ಹಾಗೆಯೇ ವ್ಯಕ್ತಿ ಶಿಕ್ಷಿತರೋ, ಅಶಿಕ್ಷಿತರೋ ಎಂಬುದನ್ನೂ ಅವರ ಅಧಿಕಾರ ಸ್ಥಾನಮಾನಗಳನ್ನು ಕಂಡುಕೊಳ್ಳಬಹುದು. ಅಲ್ಲದೆ ಸಾಮಾಜಿಕ ನಡಾವಳಿಗಳನ್ನು ಕಾಲವಾಹಿನಿಗಳಂತೆ ತಲಾತಲಾಂತರಿಂದ ಮುಂದುವರೆಸಿಕೊಂಡು ಬಂದಿರುವ ಗಾದೆಗಳಲ್ಲಿಯೂ ವ್ಯಕ್ತಿಯ ನಡಾವಳಿಗಳನ್ನು ನಿಯಂತ್ರಿಸಬಯಸುವವು ಬೈಗುಳಗಳಲ್ಲಿಯೂ ಹಾಗೂ ವ್ಯಕ್ತಿ ನಾಮಗಳಲ್ಲಿಯೂ ಕೂಡ ಬಳಕೆಯಾಗುವ ಭಾಷೆ ಸಾಮಾಜಿಕ ಚಹರೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ, ಭಾಷಾ ಮಿಶ್ರಣದ ಪ್ರಕ್ರಿಯೆಯನ್ನು ಭಿನ್ನವಾಗಿ ನೋಡುವ ಪ್ರಯತ್ನ ಮಾಡಲಾಗಿದೆ. ಭಾಷಾ ಮಿಶ್ರಣದ ವಿವಿಧ ಆಯಾಮಗಳ ಬಗ್ಗೆ ವಿಶ್ಲೇಷಿಸುತ್ತ, ಯಾವ ಕಾದಂಬರಿಯಲ್ಲಿ ಹೆಚ್ಚಾಗಿ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟದಂತಹ ಪ್ರಕ್ರಿಯೆಗಳು ನಡೆದಿವೆ, ಅದರಲ್ಲೂ ಯಾವ ಸಾಮಾಜಿಕ ವರ್ಗ ಭಾಷಾಮಿಶ್ರಣಕ್ಕೆ ಹೆಚ್ಚಾಗಿ ತೆರೆದುಕೊಳ್ಳುತ್ತದೆ ಹಾಗೂ ಇಂತಹ ಮಿಶ್ರಣಗಳ ಶೈಲಿಯ ಬಳಕೆಯಿಂದ ಕಾದಂಬರಿ ಹೆಚ್ಚು ಸಾಮಾಜಿಕ ಸಂವಹನ ಆಗುತ್ತದೆಯೇ ಎಂಬುದನ್ನು ಕಂಡುಕೊಳ್ಳಲಾಗಿದೆ. ಹಾಗೂ ಭಾಷಾ ಮಿಶ್ರಣದ ಹಲವು ಆಯಾಮಗಳಾದ ಸ್ವೀಕರಣ, ನುಡಿಬೆರಕೆ ಮತ್ತು ನುಡಿಪಲ್ಲಟ ಗಳೆಂದರೇನು? ಎಂಬುದನ್ನೂ, ಭಾಷಾ ಮಿಶ್ರಣದ ರಚನಾತ್ಮಕ ಲಕ್ಷಣಗಳನ್ನು, ಭಾಷಾ ಮಿಶ್ರಣದ ಹಲವು ಆಯಾಮಗಳು ಕಾದಂಬರಿಗಳಲ್ಲಿ ಮೂಡಿಬಂದಿರುವ ಬಗೆಯನ್ನು ಹಾಗೂ ಇನ್ನೊಂದು ಭಾಷೆಯನ್ನು ಬೆರಕೆಯಿಲ್ಲದೆ ಉಪಯೋಗಿಸುವುದರಿಂದ ಸಾಧಿಸಲಾಗದ ಪ್ರಯೋಜನಗಳನ್ನು ನುಡಿಬೆರಕೆಯಿಂದ ಸಾಧಿಸ ಲಾಗುತ್ತದೆಯೇ ಎಂಬುದನ್ನು ಕಾದಂಬರಿಗಳಲ್ಲಿನ ಉದಾಹರಣೆಗಳಿಂದ ಸ್ಪಷ್ಟಪಡಿಸಲಾಗಿದೆ.

